


ಡಾ॥ ಕೃಷ್ಣಾನಂದ ಕಾಮತ್

ಪಶು ಪಕ್ಷಿ ಪ್ರಪಂಚ

ಪ್ರಗತಿ ಪುಸ್ತಕಮಾಲೆ–110

ಪಶು–ಪಕ್ಷಿ ಪ್ರಪಂಚ

ಡಾ. ಕೃಷ್ಣಾನಂದ ಕಾಮತ್

ಪ್ರಗತಿ ಗ್ರಾಫಿಕ್ಸ್–ಬೆಂಗಳೂರು

PASHU-PAKSHI PRAPANCHA-a collection of articles on the life and habits of Animals and Birds in Kannada by **Dr. Krishnananda Kamath,** 110, Shashikirana, 18th Cross, Malleswara, Bangalore-560 055

Publisher: **M. Byregowda** for **Pragati Graphics**, Bangalore, # 119, 3rd cross, 8th main, Hampinagara(RPC Layout- Vijayanagara), Bengaluru-560104, Ph: 080-2340 9512

ISBN	:	978-93-81441-22-0
pages	:	viii + 160
First Impression :		1990
Revised First Edn. :		2012
paper	:	NS Maplitho 80 GSM
price	:	₹ 125/–
size :		1/8 Demy
ಪುಟಗಳು	:	viii + 160
ಮೊದಲ ಆವೃತ್ತಿ	:	1990
ಪರಿಷ್ಕೃತ ಪ್ರಥಮ ಆವೃತ್ತಿ:		2012
ಕಾಗದ	:	ಎನ್.ಎಸ್. ಮ್ಯಾಪ್ಲಿಥೊ 80 ಜಿಎಸ್ಎಂ
ಬೆಲೆ	:	₹ 125/–
©	:	ಡಾ. ಜ್ಯೋತ್ಸ್ನಾ ಕಾಮತ್
ಸೈಜ್	:	1/8 ಡೆಮಿ
ಪ್ರತಿಗಳು	:	1000
ಸಲಹಾ ಸಮಿತಿ	:	ಪ್ರೊ. ಶಿವರಾಮಯ್ಯ ಡಾ. ಕೆ.ವೈ. ನಾರಾಯಣಸ್ವಾಮಿ ಡಾ. ಕೆ. ಪುಟ್ಟಸ್ವಾಮಿ ಡಾ. ಎಚ್.ಬಿ. ರಮೇಶ್
ರಕ್ಷಾಪುಟ ವಿನ್ಯಾಸ	:	ಅಜಿತ್
ಪ್ರಕಾಶಕರು	:	ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್ – ಬೆಂಗಳೂರು ನಂ. 119, 3ನೇ ತಿರುವು, 8ನೇ ಮುಖ್ಯ ರಸ್ತೆ, ಹಂಪಿನಗರ ಬೆಂಗಳೂರು–104. ದೂರವಾಣಿ: 080–23409512
ಮುದ್ರಕರು	:	ಪೂರ್ಣಿಮಾ ಪ್ರಿಂಟರ್ಸ್ ವಿಜಯನಗರ, ಬೆಂಗಳೂರು ಫೋ: 080–2335 9588

ಹಿನ್ನೆಲೆಯಾಗಿ

ಯಾವುದೇ ದೇಶದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಪ್ರಜೆಗಳು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವದು ಅತ್ಯವಶ್ಯ. ಅಂತೆಯೇ ಪಾಶ್ಚಿಮಾತ್ಯರು ಜನಸಾಮಾನ್ಯರೂ ಅರಿಯುವಂತಹ ಸುಲಭ ಭಾಷೆಯಲ್ಲಿ ವೈಜ್ಞಾನಿಕ ಪುಸ್ತಕಗಳನ್ನು ಪ್ರಕಟಿಸುತ್ತಾರೆ. ರೇಡಿಯೋ, ಟೆಲಿವಿಜನ್ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಾರೆ. ನಮ್ಮ ದೇಶದಲ್ಲಿ ಬಹು ಸಂಖ್ಯಾತರಿಗೆ ವಿಜ್ಞಾನ ಕರಗಿಸಿಕೊಳ್ಳಲಾಗದ ಕಡಲೆಕಾಯಿಯಾಗಿಯೇ ಉಳಿದಿದೆ.

ಪ್ರಾಣಿ ಪ್ರಪಂಚದಲ್ಲಿ ಆಸಕ್ತಿ ಹುಟ್ಟಿಸಲೆಂದು **'ಪ್ರಾಣಿ ಪರಿಸರ'** ಗ್ರಂಥ ಪ್ರಕಟಿಸಿದೆ. ಅದು ಅಪಾರ ಜನಪ್ರಿಯವಾಯಿತಲ್ಲದೆ, ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾಯಿತು. ಕರ್ನಾಟಕ ವಿಶ್ವವಿದ್ಯಾಲಯ ಪಠ್ಯ ಪುಸ್ತಕವೆಂದು ಅಂಗೀಕರಿಸಿತು. ಪ್ರಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಮರು ಮುದ್ರಣವಾಗಿ ಸಕಲರಿಗೂ ಎಟಕುವ ಬೆಲೆಗೆ ಮಾರಲಾಯಿತು. ಇದರಿಂದ ಕ್ಲಿಷ್ಟವಾದ ವೈಜ್ಞಾನಿಕ ವಿಚಾರಗಳನ್ನು ಕಥೆ, ಕಾದಂಬರಿಗಳಷ್ಟೇ ಸುಲಭ, ಸರಳವಾಗಿ ಬರೆದರೆ ನಮ್ಮವರೂ ಸ್ವಾಗತಿಸುತ್ತಾರೆಂದು ಅರಿತು, ಹೆಚ್ಚಿನ ಪ್ರಮಾಣದಲ್ಲಿ ಓದುಗರಿಗೆ ತಲುಪುವಂತೆ 'ಕಸ್ತೂರಿ', 'ಕರ್ಮವೀರ', ಸುಧಾ, ತರಂಗ ಪತ್ರಿಕೆಗಳಿಗೆ ಬರೆಯಲಾರಂಭಿಸಿದೆ. ಆಕಾಶವಾಣಿಯವರೂ ಕೆಲವು ಭಾಷಣಗಳನ್ನು ಬಿತ್ತರಿಸಿದರು. ಅವುಗಳಲ್ಲಿ ಪ್ರಾಣಿಗಳನ್ನು ಕುರಿತಾದುವುಗಳನ್ನು ಮಾತ್ರ ಈ ಗ್ರಂಥದಲ್ಲಿ ಸೇರಿಸಲಾಗಿದೆ. ಪತ್ರಿಕೆಗಳ ಬೇಡಿಕೆಗಳಿಗೆ ಅನುಗುಣವಾಗಿ ಬರೆದಿದ್ದುದರಿಂದ ಈ ಲೇಖನಗಳಲ್ಲಿ ಏಕಸೂತ್ರತೆ ಇಲ್ಲದಿರುವುದು ಸಹಜ.

ಪ್ರಕಾಶಕರಾದ ಶ್ರೀ ಕೆ.ಎಸ್. ಗೋಪಾಲ್‌ರವರ ಉತ್ಸಾಹಕ್ಕೆ ಮೇರೆಯೇ ಇಲ್ಲವೇ ಅನಿಸುತ್ತದೆ. ಅವರ ಅಚ್ಚುಕಟ್ಟುತನಕ್ಕೆ ಮಾರುಹೋಗಿದ್ದೇನೆ. ಗ್ರಂಥ ಮುದ್ರಣವೇ ದುಸ್ತರವಾಗಿರುವ ದಿನಗಳಲ್ಲಿ ಛಾಯಾಚಿತ್ರಗಳನ್ನೂ ಸೇರಿಸುತ್ತೇವೆಂದಾಗ ನಂಬುವುದೇ ಕಷ್ಟವಾಯಿತು. ಅಂತೆಯೇ ಈ ಕೃತಿಯನ್ನು ಸರ್ವತೋಮುಖ ಸುಂದರವಾಗಿ ಹೊರ ತಂದ ಶ್ರೇಯಸ್ಸೂ ಅವರಿಗೇ ಸಲ್ಲುತ್ತದೆ. ಈ ಲೇಖನಗಳನ್ನು ಬರೆಯುವಂತೆ ಪ್ರೋತ್ಸಾಹಿಸಿದ ವಿವಿಧ ಪತ್ರಿಕೆಗಳ ಸಂಪಾದಕರಿಗೂ, ಆಕಾಶವಾಣಿಯವರಿಗೂ ಕೃತಜ್ಞನಾಗಿದ್ದಾನೆ.

ವಿಜಯದಶಮಿ
29–9–1990

ಕೃಷ್ಣಾನಂದ ಕಾಮತ್
110, ಶಶಿಕಿರಣ್, 18ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು–560055

ಮೊದಲ ಮುದ್ರಣದ ಮುನ್ನುಡಿ

ಡಾ. ಕೃಷ್ಣಾನಂದ ಕಾಮತ (1934–2002)ರ 'ಪಶು–ಪಕ್ಷಿ ಪ್ರಪಂಚ'ವು 1990ನೆಯ ವರ್ಷದಲ್ಲಿ ಮೈಸೂರಿನ ಪುಸ್ತಕಾಲಯದಿಂದ ಪ್ರಕಟವಾಯಿತು. ಕಾಮತರು, ಕೀಟದಿಂದ ಕಾಡಾನೆವರೆಗೆ ಪ್ರಾಣಿ ಜಗತ್ತಿನ ನೋಟಗಳನ್ನು ಸರಳಗನ್ನಡದಲ್ಲಿ ಹಲವಾರು ಪತ್ರಿಕೆಗಳಿಗೆ ಒದಗಿಸಿ ಅದಾಗಲೇ ಜನಪ್ರಿಯರಾಗಿದ್ದರು. ಪ್ರಾಣಿ ಕೋಟಿಯ ಬಗ್ಗೆ ಅವರು ಅಪರಿಮಿತ ಪ್ರೀತಿಯನ್ನು ತಾಳಿದ್ದರು. ಅದರ ದ್ಯೋತಕವಾಗಿ, ಅವಕಾಶ ಸಿಕ್ಕಾಗಲೆಲ್ಲ ಅವನ್ನು ಕ್ಲಿಕ್ಕಿಸಿದರು. ಕ್ಲಿಕ್ಕಿಸಲಾಗದವನ್ನೂ ಅಮೂಲಾಗ್ರವಾಗಿ ಅಭ್ಯಸಿಸಿ ಅವಕ್ಕೆ ರೇಖಾಚಿತ್ರಗಳ, ಮತ್ತು ಬರಹದ ರೂಪವನ್ನು ಕೊಟ್ಟರು. ಪ್ರಾಣಿಶಾಸ್ತ್ರ ಅವರ ಅಧ್ಯಯನದ ವಿಷಯವೂ ಆಗಿದ್ದರಿಂದ ಆ ಹಿನ್ನೆಲೆ ಮತ್ತು ಪರಿಣತಿಯಿಂದಾಗಿ ಅವರು ಕೊಡಮಾಡಿದ ವೈಜ್ಞಾನಿಕ ಮಾಹಿತಿ, ಅತ್ಯಾಧುನಿಕವೆನಿಸದಿದ್ದರೂ ಮೌಲಿಕವಾಗಿದೆ. ಜೊತೆಗೆ ಹುಟ್ಟು ಕಲಾವಿದನ ಸೂಕ್ಷ್ಮಗ್ರಾಹಕತೆ ಹಾಗೂ ಸಂವೇದನಶೀಲತೆಗಳು ಸೇರಿಕೊಂಡು ಬರವಣಿಗೆ ಅನನ್ಯವಾಗಿದ್ದಿತು. ಪ್ರಾಣಿ ಪ್ರೀತಿಯ ಹದಿನೆಂಟು ಲೇಖಗಳು ಈ ಸಂಗ್ರಹದಲ್ಲಿವೆ.

ಇಲ್ಲಿಯ ಹೆಚ್ಚಿನ ಲೇಖನಗಳೆಲ್ಲ ನಾಡಿನ ಖ್ಯಾತ ಪತ್ರಿಕೆಯಲ್ಲಿ ಬೆಳಕು ಕಂಡವು. 'ಕವಡೆಗಳ ಕತೆ' ರಷ್ಯನ್ ಪತ್ರಿಕೆಯೊಂದರಲ್ಲಿ ಪ್ರಕಟವಾದರೆ, ಕಾಗೆಗೆ ಸಂಬಂಧಿತ ಲೇಖನವೊಂದು ಅಮೇರಿಕೆಯ ಮೂರು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಕನ್ನಡ ಸಾಪ್ತಾಹಿಕವೊಂದರಲ್ಲಿ ಪ್ರಕಟವಾದ ಕಾಗೆ ಕತೆಯಿಂದ, ತಾನು ಕಾಗೆ ಕಾಮತನೆಂದೇ ಪ್ರಸಿದ್ಧನೆಂದು ದೂರದರ್ಶನ ಸಂದರ್ಶನವೊಂದರಲ್ಲಿ ವಿನೋದದಿಂದ ಹೇಳಿದ್ದರು. ಪ್ರಾಣಿ ಪಶುಗಳೆಲ್ಲ ಮಾನವನ ಸಹಜೀವಿಗಳು. ಅವಕ್ಕೂ ಮನುಷ್ಯರಂತೆಯೇ ಈ ಭೂಮಿಯ ಮೇಲೆ ಬದುಕುವ ಹಕ್ಕು ಇದೆ! ಎಂದು ನಂಬಿದ್ದರಿಂದ ಆ ವರ್ಗಗಳಿಗೆಲ್ಲ ಸಹಜವಾಗಿದ್ದ ಸಾಮಾಜಿಕ ಮತ್ತು ಭಾವನಾತ್ಮಕ ಅಂಶಗಳನ್ನು ಮಾನವ ಮಾನದಂಡದಿಂದ ಚಿತ್ರಿಸಲು ಯತ್ನಿಸಿದ್ದಾರೆ. ಯಶಸ್ವಿ ಆಗಿದ್ದಾರೆ. ನಮ್ಮ ಕಾಗೆಯ ಕತೆ, ಅಕ್ಕಾ ಭಾವಾ ಬಂದ್ರು! ಇಂಥ ವರ ಬೇಕು! ಇವು ಇಂಥ ಕೆಲ ಪ್ರಬಂಧಗಳು.

ಭಾರತವೇ ನೆಲೆವೀಡಾಗಿದ್ದ ಕೆಲವು ಪಶು–ಪಕ್ಷಿಗಳು ನಿರ್ನಾಮವಾಗಿ ಹೋಗಿವೆ. ಚಿರ್ಚ್ಚ(Cheeta) ಕೆಲವು ಜಿಂಕೆಯ ಜಾತಿಯವು, ಹಲವು ಹದ್ದಿನ ಜಾತಿಯವು ಕಣ್ಮರೆಯಾಗಿವೆ. ಇತ್ತೀಚೆಗೆ ತೀರ ಅಪರೂಪವಾಗಿದ್ದ ಮಂಗಟ್ಟೆ ಅಥವಾ ಹಾರ್ನಬಿಲ್, ದಾಂಡೇಲಿಯಲ್ಲಿ ಕಾಣಿಸಿಕೊಂಡು ಪಕ್ಷಿ ಪ್ರಿಯರಲ್ಲಿ ಭರವಸೆ ಹುಟ್ಟಿಸಿದೆಯಾದರೂ, ಭರದಿಂದ ಮಾಯವಾಗುತ್ತಿರುವ ನೈಸರ್ಗಿಕ ಭಂಗಿಗಳೆಂದೇ ಪರಿಚಿತವಿರುವ ಹದ್ದುಗಳ

ಸಂಖ್ಯೆ, ಸರಕಾರ ಮತ್ತು ನಿಸರ್ಗಪ್ರಿಯರನ್ನು ಬಡಿದೆಬ್ಬಿಸಿದೆ. ಹುಲಿ ಸಂಖ್ಯೆಯಲ್ಲಿ ಹೆಚ್ಚಳ ಎಂಬ ಮಾತೂ ಶಾಸ್ತ್ರೀಯ ಅಧ್ಯಯನದ ಸಹಾಸ ನಂಬುವಂತಿಲ್ಲ. ಬಳಿಕದ ಅಂಕಿಸಂಖ್ಯೆಗಳ ಕೊರತೆಯಿಂದಾಗಿ ಈ ಸಂಕಲನದ ಕೊನೆಯ ಪ್ರಬಂಧವಾದ ಕಾಡಾನೆಯ ಬಗ್ಗೆ ಒಂದು ಎರಡು ಮಾತು ಹೇಳಲೇಬೇಕು. ಇತ್ತೀಚಿನ ದೈನಿಕಗಳ ವರದಿಯ ಪ್ರಕಾರ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದೆ! ಮೈಸೂರು ನಗರದ ಮಧ್ಯದಲ್ಲೆ ಕಾಣಿಸಿಕೊಂಡ ಆನೆಯೊಂದಕ್ಕೆ ನಾಗರಿಕರೆನಿಸಿಕೊಂಡ ವರ್ಗ ಕೊಟ್ಟ ಕಿರುಕಳ, ಕಳಂಕತರುವಂತಹದಾಗಿತ್ತು. ಅನಧಿಕೃತವಾಗಿ ಹಾಕಿದ ವಿದ್ಯುತ್ ಬೇಲಿಯಿಂದಾಗಿ ದೊಡ್ಡ ಕೋರೆಗಳ ಆನೆಯೊಂದು ಮೃತಪಟ್ಟ ದಾರುಣ ಘಟನೆ, ಹಿಂಡಿನಿಂದ ತಪ್ಪಿಸಿಕೊಂಡ ಮರಿ ಆನೆಯೊಂದು, ಮೇಯಲು ಹೋದ ದನಕರುಗಳ ಹಿಂಡಿನೊಂದಿಗೆ ಬಂದು ಆ ಬಳಿಕ ಚಿಕಿತ್ಸೆಗೆ ಪ್ರತಿಕ್ರಿಯಿಸದೇ ಮೃತವಾದ ವಿಚಾರ ಮನ ಕಲಕುವಂತದ್ದು.

ಮರುಮುದ್ರಣ ಸಂದರ್ಭದಲ್ಲಿ

ಡಾ. ಕೃಷ್ಣಾನಂದ ಕಾಮತರ 'ಪಶು-ಪಕ್ಷಿ ಪ್ರಪಂಚ'ವು 1990ನೇ ವರ್ಷದಲ್ಲಿ ಮೈಸೂರಿನ ಪುಸ್ತಕಾಲಯದಿಂದ ಪ್ರಕಟವಾಯಿತು. ಕೀಟದಿಂದ ಕಾಡಾನೆವರೆಗಿನ ಪ್ರಾಣಿ ಜಗತ್ತಿನ ಕುರಿತು ಸರಳಗನ್ನಡದಲ್ಲಿ ಕರ್ನಾಟಕದ ವಿವಿಧ ಪತ್ರಿಕೆಗಳಲ್ಲಿ ಚಿತ್ರಲೇಖನಗಳನ್ನು ಬರೆದು ಅವರು ಅದಾಗಲೇ ಜನಪ್ರಿಯರಾಗಿದ್ದರು. ಪ್ರಾಣಿ ಪ್ರಪಂಚದ ಕುರಿತ ತಮ್ಮ ಅಪರಿಮಿತ ಪ್ರೀತಿಯ ದ್ಯೋತಕವಾಗಿ ಅವುಗಳನ್ನು ಅವಕಾಶ ದೊರೆತಾಗೆಲ್ಲ ಕ್ಲಿಕ್ಕಿಸಿದರು. ಕ್ಲಿಕ್ಕಿಸಲಾಗದವನ್ನೂ ಅಮೂಲಾಗ್ರವಾಗಿ ಅಭ್ಯಸಿಸಿ, ಅವಕ್ಕೆ ರೇಖಾಚಿತ್ರಗಳ ಮತ್ತು ಬರಹದ ರೂಪ ಕೊಟ್ಟರು. ಆ ವಿಷಯದಲ್ಲಿಯ ಪರಿಣತಿ ಮತ್ತು ವೈಜ್ಞಾನಿಕ ಹಿನ್ನೆಲೆಯಿಂದಾಗಿ ಅವರಿತ್ತ ಮಾಹಿತಿಯನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಕೃಷ್ಣಾನಂದರ ಅಂಥ ಪ್ರಾಣಿ ಪ್ರೀತಿಯ ಹದಿನೆಂಟು ಲೇಖನಗಳು ಈ ಸಂಗ್ರಹದಲ್ಲಿದೆ.

ಈ ಸಂಕಲನದಲ್ಲಿಯ ಹೆಚ್ಚಿನ ಲೇಖನಗಳು ನಾಡಿನ ಖ್ಯಾತ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. 'ತರಂಗ'ದಲ್ಲಿ ಮೂಡಿ ಬಂದ ನಮ್ಮ ಕಾಗೆಯ ಕತೆಯಿಂದಾಗಿ, ತನ್ನನ್ನು ಕಾಗೆ ಕಾಮತನೆಂದೇ ಜನರು ಗುರುತಿಸುತ್ತಾರೆ! ಎಂದು ಕೃಷ್ಣಾನಂದರು ಹಾಸ್ಯವಾಗಿ ಹೇಳುತ್ತಿದ್ದರು. 'ಕವಡೆಗಳ ಕತೆ' ರಶಿಯನ್ ಪತ್ರಿಕೆಯಲ್ಲಿ ಪ್ರಕಟವಾದರೆ, ಕಾಗೆಗೆ ಸಂಬಂಧಿಸಿದ ಲೇಖನವೊಂದು ಅಮೇರಿಕೆಯ ಬೇರೆ ಬೇರೆ ನಾಲ್ಕು ಪತ್ರಿಕೆಗಳಲ್ಲಿ ಪ್ರಕಟವಾಯಿತು. 'ಪ್ರಾಣಿಗಳಲ್ಲಿ ನಗು-ಅಳು' ಹಾಗೂ 'ಲಾಂಗೂಲ ಮಹಾತ್ಮೆ'ಗಳು ಆಕಾಶವಾಣಿಯಲ್ಲಿ ಬಿತ್ತರಗೊಂಡವು. ಕ್ಲಿಷ್ಟವೆನಿಸಬಹುದಾದ ವೈಜ್ಞಾನಿಕ ವಿಚಾರಗಳನ್ನು ಸರಳವಾಗಿ ಆಕರ್ಷಕ ಶೈಲಿಯಲ್ಲಿ ತಿಳಿಯಪಡಿಸುವದು ಕಾಮತರ ವೈಶಿಷ್ಟ್ಯವಾಗಿತ್ತು. ಹೀಗಾಗಿ ಅವರ ಬರವಣಿಗೆ ಸಾರ್ವಕಾಲಿಕ ಆಸಕ್ತಿಯನ್ನು ಉಳಿಸಿಕೊಂಡಿವೆ ಎಂದು ಹೇಳಬಹುದು.

ಕೆಲವು ಪಶು-ಪಕ್ಷಿ ವರ್ಗಗಳು ನಶಿಸಿಹೋಗಿವೆ. ಚಿರ್ಚು ಅಥವಾ ಚೀತಾ, ಕಣ್ಮರೆಯಾಗಿದೆ. ಹರಿಣದ ಕೆಲ ಉಪಜಾತಿಗಳು, ಹದ್ದಿನ ವರ್ಗದ ಮತ್ತು ಪಕ್ಷಿ

ಸಂಕುಲದ ಕೆಲ ಪ್ರಕಾರಗಳು ನಿರ್ನಾಮವಾಗಿವೆ. ಇತ್ತೀಚೆಗೆ ತೀರ ಅಪರೂಪವಾಗಿದ್ದ ಮಂಗಟ್ಟೆ ಅಥವಾ ಹಾರ್ನಬಿಲ್ ಇತ್ತೀಚೆಗೆ ದಾಂಡೇಲಿಯ ಬಳಿ ಗೋಚರಿಸಿ ಪಕ್ಷಿ ಪ್ರಿಯರಲ್ಲಿ ಭರವಸೆ ಹುಟ್ಟಿಸಿದೆ. ಕಾಡಾನೆಗಳ ಸಂಖ್ಯೆ ತೀರ ಕಡಿಮೆಯಾಗುತ್ತಿದ್ದ ದಿನಗಳಲ್ಲಿ ಕಳವಳದಿಂದ ಬರೆದ ಲೇಖನ ಕಣ್ಮರೆಯಾಗುತ್ತಿರುವ ಕಾಡಾನೆಗಳು.

ಕಾಡುಗಳ್ಳ ವೀರಪ್ಪನ್‌ನನ್ನು ಇಲ್ಲವಾಗಿಸಿದ್ದರಿಂದಲೋ, ಅರಣ್ಯ ಖಾತೆಯ ದಕ್ಷತೆಯಿಂದಲೋ, ಅಥವಾ ಈ ಕುರಿತಾದ ಜನಜಾಗೃತಿಯಿಂದಲೋ, ಕಾಡಾನೆಗಳು ಹೆಚ್ಚುತ್ತಿವೆ! ಎಂಬ ವರದಿಯೂ ಆಗೀಗ ಕಾಣಿಸಿಕೊಳ್ಳುವದುಂಟು. ಇತ್ತೀಚಿನ ಬೆಳವಣಿಗೆ ಪ್ರಕಾರ, ಕಾಡುಗಳ ಸಮೀಪದ ಗ್ರಾಮಗಳ ಕೃಷಿ ಭೂಮಿಗೆ ಆನೆಗಳ ದಾಳಿ ಹೆಚ್ಚುತ್ತಿದೆ. ಆದರೆ ಇದಕ್ಕೆ ಆಹಾರದ ಅಭಾವವೂ ಕಾರಣ ಎಂಬ ಅತಿಮುಖ್ಯ ಕಾರಣವನ್ನು, ಅಧಿಕಾರಾರೂಢರು ಮರೆಯುತ್ತಿದ್ದಾರೆ. ಇತ್ತೀಚೆಗೆ ಮೈಸೂರು ನಗರದ ಮಧ್ಯಭಾಗದಲ್ಲಿ ದಾರಿ ತಪ್ಪಿ ಬಂದ ಆನೆಯನ್ನು ನಿಯಂತ್ರಿಸಿ ಕಾಡಿಗೆ ಅಟ್ಟಲು ಸಾಕು ಬೇಕಾದ ಉದಾಹರಣೆಯಿದೆ. ಅದರಂತೆ ಹಿಂಡಿನಿಂದ ತಪ್ಪಿಸಿಕೊಂಡ ಮರಿ ಆನೆಯೊಂದು ಮೇಯ್ದು ಊರಿಗೆ ಹಿಂದಿರುಗುತ್ತಿದ್ದ ದನಕರುಗಳ ಜೊತೆಗೇ ಬಂದದ್ದು, ಆಹಾರ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟ ಘಟನೆ ವರದಿಯಾಗಿದೆ. ಕೇವಲ 34 ದಶಕಗಳ ಹಿಂದಿನ ತನಕವೂ ಅವುಗಳೇ ನಿರ್ಯೋಜನೆಯಿಂದ ಬೇಕಾದ ಆಹಾರ ಪಡೆದು ಸಂಚಾರಿ ಜಾಗವನ್ನು ಗುರುತಿಸಿಕೊಂಡಲ್ಲಿ ಕೃಷಿ ಹೆಚ್ಚುತ್ತಿದ್ದು ಗಜವರ್ಗ ಈಗ ಕಂಗಾಲಾಗಿದೆ. ಅನಧಿಕೃತವಾದ ವಿದ್ಯುತ್ ಬೇಲಿಯಿಂದಾಗಿ ದೊಡ್ಡ ಕೋರೆಗಳ ಗಂಡಾನೆ ಮೃತ ಪಟ್ಟ ವಿಚಾರವು ಪ್ರಾಣಿಪ್ರಿಯರ ಕಳವಳಕ್ಕೆ ಕಾರಣವಾಗಿದೆ.

ಮೇಲಿಂದ ಮೇಲೆ ಅರಣ್ಯ ಸಮೀಪದ ಊರುಗಳಲ್ಲಿ ಅವು ಕಾಣಿಸಿಕೊಳ್ಳುತ್ತಿರುವದು ಅವುಗಳ ಸಂಖ್ಯೆ ಹೆಚ್ಚಿದ್ದರಿಂದ ಅಲ್ಲ ಆಹಾರದ ಅಭಾವದಿಂದ. ಕಟ್ಟು ನಿಟ್ಟಾದ ರಕ್ಷಣಾವ್ಯವಸ್ಥೆ ಜಾರಿಗೆ ಬಾರದೇ ಇದ್ದುದರಿಂದ ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಿಲ್ಲದ್ದರಿಂದ. ಗಟ್ಟಿಯಾಗಿ ನೆಲೆಯೂರಿದು ಸಾಹಿತ್ಯದ ಶಕ್ತಿಯಿಂದಾಗಿ ಕೇವಲ ಮಾಹಿತಿಯ ಅಥವಾ ಸಾಮಾನ್ಯಜ್ಞಾನವಾಗಬಹುದಾದ ಅಂಶವೂ ಸಾಹಿತ್ಯ ರೂಪ ತಳೆಯುತ್ತಿದೆ.

ಮೂಲತಃ ವಿಜ್ಞಾನಿಯಾಗಿದ್ದರೂ ಅವರೊಬ್ಬ ಅಪರೂಪದ ಕಲಾಕಾರ ಸಾಹಿತಿಯಾಗಿದ್ದರು. ಪ್ರಾಣಿಗಳನ್ನು ಮಾನವನ ಸಹಜೀವಿಗಳೆಂದೇ ನಂಬಿದ ಅವರು ಮನುಷ್ಯ ಪ್ರಾಣಿಗೆ ಸಹಜವಾದ ಪ್ರೀತಿ–ಪ್ರೇಮ, ಕೋಪ ತಾಪ, ಮತ್ಸರ, ತ್ಯಾಗ, ಮರುಕ, ಹಗೆಗಳನ್ನೆಲ್ಲ ಪ್ರಾಣಿ ವರ್ಗದಲ್ಲಿ ಗುರುತಿಸಿದ್ದಾರೆ. ಮಾನವನ ಮಾನದಂಡದಿಂದ ಈ ಸಹಜೀವಿಗಳನ್ನು ಕಂಡಿದ್ದಾರೆ. ಹೀಗಾಗಿ ವೈಜ್ಞಾನಿಕ ನೆಲೆಯ ಮೇಲೆ ನಿಂತ ಕಾಮತರ ಸಾಹಿತ್ಯ ವೈಶಿಷ್ಟ್ಯ ಪೂರ್ಣವಾದದ್ದು.

ಈ ಪ್ರಬಂಧಗಳೆಲ್ಲ ಗಟ್ಟಿಯಾದ ವೈಜ್ಞಾನಿಕ ತಳಹದಿಯ ಮೇಲೆ ರಚಿತವಾಗಿದ್ದರೂ, ಪ್ರಾಣಿಗಳಿಗೂ ಸಹಜವಾಗಿರುವ ಸಾಮಾಜಿಕ ಮತ್ತು ಭಾವನಾತ್ಮಕ ಜೀವನವನ್ನು ಕಾಮತರು ಗುರುತಿಸಿದ ಬಗೆ ವಿಶಿಷ್ಟವಾಗಿದೆ. ಈ ದೃಷ್ಟಿಯಿಂದ ಈ ಪ್ರಬಂಧಗಳಲ್ಲಿಯ ಸಾಹಿತ್ಯಿಕ ಅಂಶಗಳು ಎದ್ದು ನಿಲ್ಲುತ್ತವೆ. ಅವಕ್ಕೂ ಮನುಷ್ಯನಂತೆಯೇ ಈ ಭೂಮಿಯಲ್ಲಿ

ಬದುಕಿ ನಲಿಯುವ ಹಕ್ಕು ಇದೆಯೆಂದು ಪ್ರತಿಪಾದಿಸಿದ್ದಾರೆ. ಅಕ್ಕಾ ಭಾವಾ ಬಂದ್ರು!, ಇಂಥ ವರ ಬೇಕು, ಶೀರ್ಷಿಕೆಗಳೇ ಇದನ್ನು ಸಾರುತ್ತವೆ. ಒಂಟಿಯಾಗಿಯೇ ಬದುಕಿ ಇಲ್ಲವಾದ ಸುಮತಿಯ ಕೊರಗು, ಮನಸ್ಸನ್ನು ತಟ್ಟುತ್ತದೆ.

ಮೂರು ದಶಕಗಳ ಹಿಂದೆ ಬರೆದ ಲೇಖನಗಳ ಪ್ರಸ್ತುತತೆ ಎಳ್ಳಷ್ಟು ಕುಗ್ಗಿಲ್ಲ. ಮೊದಲಿಗಿಂತ ಪರಿಸ್ಥಿತಿ ಹದಗೆಟ್ಟಿದೆ. ಅರಣ್ಯ ನಾಶ, ಪ್ರಾಣಿಗಳ ಹಕ್ಕಿನ ನೆಲದಲ್ಲಿ ಕೃಷಿ ಹಾಗೂ ಅರಣ್ಯ ಖಾತೆಯ ನಿರ್ಲಕ್ಷ, ನಾಗರಿಕರ ನಿರ್ಭಾವುಕತೆ ಇದರ ಹಿಂದಿನ ಕಾರಣಗಳು. ಪ್ರಾಣಿ ಜೀವನದ ಸಾರ್ವಕಾಲಿಕ ಮೌಲ್ಯಗಳನ್ನು ಎತ್ತಿ ಹಿಡಿದ ಕಾಮತರ ಈ ಎರಡನೆಯ ಮುದ್ರಣವು ಹೆಚ್ಚೆಚ್ಚು ಜನರಿಗೆ ತಲುಪುವಂತಾಗಲಿ ಎಂಬ ಭರವಸೆ!

ಡಾ. ಜ್ಯೋತ್ಸ್ನಾ ಕಾಮತ್

ಡಾ. ಕೃಷ್ಣಾನಂದ ಕಾಮತ್ (1932–2002) ಕನ್ನಡ ನಾಡು ಕಂಡ ಅಪೂರ್ವ ಪ್ರತಿಭೆ. ಅಪ್ಪಟ ಮನುಷ್ಯರು. ಸಂಶೋಧಕರು, ಕಾಲುಗಳಿಗೆ ಚಕ್ರ ಕಟ್ಟಿಕೊಂಡು ಸುತ್ತಿದ ಅಪರೂಪದ ಕ್ಷೇತ್ರಕಾರ್ಯಕರ್ತರು, ಸೃಜನಶೀಲ ಬರಹಗಾರರು, ಕುಂಚ ಕಲಾವಿದರು, ಛಾಯಾಗ್ರಾಹಕರು, ಪ್ರಾಣಿ–ಪಕ್ಷಿಗಳ ತಜ್ಞರು, ಒಬ್ಬ ವಿಜ್ಞಾನಿ, ಪಾಕಪ್ರವೀಣರು... ಹೀಗೆ ಬಹು ಆಯಾಮಗಳಲ್ಲಿ ತಮ್ಮ ಜೀವಿತಾವಧಿಯನ್ನು ಸವೆಸಿದ ಅನರ್ಘ್ಯ ರತ್ನ. ಕಾಮತರ ಯಾವುದೇ ಬರವಣಿಗೆಯಲ್ಲೂ ಒಬ್ಬ ಸಂಶೋಧಕನಿರುತ್ತಾನೆ. ಬರಹದ ವಿಷಯ ವಸ್ತು ವಿಚಾರದಲ್ಲಿ ತರ್ಕಬದ್ಧವಾದ, ವೈಜ್ಞಾನಿಕ ದೃಷ್ಟಿಕೋನ ಎದ್ದು ಕಾಣುವ ಅಂಶ. ಲಘು ಹರಟೆಯ ಅವರ ಧಾಟಿ ಓದುಗಸ್ನೇಹಿಯಾಗಿರುತ್ತದೆ. ತುಂಬಾ ಗಹನವಾದ ವಿಚಾರಗಳನ್ನು ಸಾಮಾನ್ಯರಿಗೂ ಅರ್ಥವಾಗುವ ಹಾಗೆ ಸರಳ ನಿರೂಪಣೆಯನ್ನು ಇವರ ಬರೆಹದಲ್ಲಿ ಕಾಣಬಹುದು. ಹಾಸ್ಯದ ಮೂಲಕವೇ ಗಂಭೀರ ವಿಚಾರಗಳನ್ನು ತಿಳಿಹೇಳುವ ಛಾತಿ ಕೃಷ್ಣಾನಂದ ಕಾಮತರ ಲೇಖನಿ, ಕುಂಚ, ಕ್ಯಾಮೆರಾಗಳಿಗೆ ಇತ್ತು ಎಂಬುದನ್ನು ಅವರನ್ನು ಓದಿಕೊಂಡ ಯಾರಿಗಾದರೂ ಅನಿಸದಿರದು. ಭಾರತದ ಆದಿವಾಸಿ ಬದುಕಿನ ಅನೇಕ ಮಜಲುಗಳನ್ನು ಕಣ್ಣಾರೆ ಕಂಡು ಕಾಮತರು ಬಿಡಿಸಿಟ್ಟಿದ್ದಾರೆ. ಕನ್ನಡ ನಾಡು ಇಂತಹ ಮಹನೀಯರನ್ನು ಪಡೆದು ನಿಜಕ್ಕೂ ಧನ್ಯವಾಗಿದೆ. ಅವರ ಕೃತಿಗಳ ಮರುಮುದ್ರಣದ ಮೂಲಕ ನಮ್ಮನ್ನು ನಾವು ಗೌರವಿಸಿಕೊಳ್ಳುತ್ತಿದ್ದೇವೆ. ಕೃತಿಗೆ ಒಪ್ಪುವ ಅಂದವಾದ ರಕ್ಷಾಪುಟ ವಿನ್ಯಾಸ ಮಾಡಿದ ಕಲಾವಿದ ಅಜಿತ್ ಅವರಿಗೆ, ಈ ಕೃತಿ ಪ್ರಕಟಣೆಗೆ ಅನುಮತಿ ನೀಡಿದ ಡಾ. ಜ್ಯೋತ್ಸ್ನಾ ಕಾಮತರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಪೂರ್ಣಿಮಾ ಪ್ರಿಂಟರ್ಸ್ ಮಾಲೀಕರು ಮತ್ತು ಸಿಬ್ಬಂದಿವರ್ಗಕ್ಕೆ ಆಭಾರಿಯಾಗಿರುತ್ತೇನೆ.

ಡಾ. ಎಂ. ಬೈರೇಗೌಡ

ಪರಿವಿಡಿ

1. ಕಣ್ತೆರೆದು ನೋಡಿದಾಗ

ದೈನಂದಿನ ಬೇಡಿಕೆಗಳನ್ನು ಪೂರೈಸಿಕೊಳ್ಳುವದರಲ್ಲಿಯೇ ನಮ್ಮೆಲ್ಲರ ಕಾಲ ಕಳೆದು ಹೋಗುತ್ತದೆ. ಇದ್ದು ಬಿದ್ದ ವೇಳೆ ಇನ್ನಿತರ ಕರ್ತವ್ಯ ನಿರ್ವಹಣೆಯಲ್ಲಿ ಹೋಗುತ್ತದೆ. ಈ ದಿನಂಪ್ರತಿ ಕಾರ್ಯಕ್ರಮಕ್ಕೆ ಯಾಂತ್ರಿಕವಾಗಿ ಹೊಂದಿಕೊಂಡು ಬಿಡುವುದರಿಂದ ಬೇರಾವ ಹವ್ಯಾಸದತ್ತ ಲಕ್ಷ್ಯ ಹಾಕುವ ಗೋಜಿಗೇ ಹೋಗುವುದಿಲ್ಲ. ಸರ್ವರೂ ಇದಕ್ಕೆ ಕೊಡುವ ಕಾರಣವೆಂದರೆ ವೇಳೆಯ ಅಭಾವ. ಇಂಥ ಯಾಂತ್ರಿಕ ಜೀವನಕ್ಕೆ ಒಗ್ಗಿಕೊಂಡವರಿಗೆ ರಜಾದಿನಗಳಲ್ಲಿ, ಕಾಯಿಲೆ–ವಿರಾಮಕ್ಕೆ ರಜೆ ಪಡೆದಲ್ಲಿ, ಪರ ಊರಿಗೆ ಹೋದಲ್ಲಿ, ಇಲ್ಲವೇ ನಿವೃತ್ತರಾದಲ್ಲಿ, ಸಮಯ ಕಳೆಯುವುದೇ ಮಹಾ ಸಮಸ್ಯೆಯಾಗಿಬಿಡುತ್ತದೆ. ಅಂಥ ಸಂದರ್ಭಗಳಲ್ಲಿ ಇಸ್ಪೀಟಾಟ, ಹೋಟೆಲ್, ಚಲನಚಿತ್ರ ಮಂದಿರಗಳ ಭೇಟಿ, ಇಲ್ಲವೇ ನಿದ್ರಿಸುವದು ಸಾಮಾನ್ಯ. ಕಣ್ತೆರೆದು ನೋಡಿದರೆ, ಆಸಕ್ತಿಯಿಂದ ಕಂಡರೆ ಪರಿಸರದ ಪ್ರಾಣಿಗಳು, ಪಕ್ಷಿಗಳು ಅದೆಂತಹ ಆನಂದ ನೀಡಬಲ್ಲವು ಎಂದು ಅದನ್ನು ಅನುಭವಿಸಿಯೇ ತಿಳಿಯಬೇಕು.

ನಿಸರ್ಗ–ನೋಟ, ನಾಯಿ, ಬೆಕ್ಕು, ಗಿಳಿಗಳನ್ನು ಸಾಕುವುದಕ್ಕಿಂತ ಸುಲಭ, ರಂಜಕ ಮತ್ತು ಖರ್ಚಿಲ್ಲದ್ದು. ಇದಕ್ಕಾಗಿ ನಾಗರಹೊಳೆಗೆ ಹೋಗಬೇಕೆಂದಿಲ್ಲ. ಬಂಡಿಪುರಕ್ಕೆ ಓಡಬೇಕೆಂದಿಲ್ಲ. ಯಾವ ವಾಹನ ಖರ್ಚೂ ಇಲ್ಲ, ಟಿಕೇಟುಗಳನ್ನು ಕೊಳ್ಳಬೇಕಾಗಿಲ್ಲ. ವಾಸಸ್ಥಾನದಲ್ಲಿ, ಗಿಡ–ಮರ ಪೊದೆಗಳಲ್ಲಿ ಲಕ್ಷ್ಯವಿಟ್ಟು ನೋಡಿದಾಗ ಅಲ್ಲಿ ನಡೆದಿರುವ ವ್ಯಾಪಾರ ವಿಸ್ಮಯ ಹುಟ್ಟಿಸುವಂಥಾದ್ದು. ಆದರೆ ಇದಕ್ಕೆಲ್ಲ ಒಳ್ಳೆಯ ತಾಳ್ಮೆ ಬೇಕು. ಪಶು–ಪಕ್ಷಿ ವೀಕ್ಷಣೆಗಲ್ಲ; ಸಹ ಬಾಂಧವರ ಕೊಂಕು ನುಡಿಗಳನ್ನು ಕೇಳಿಸಿಕೊಳ್ಳುವುದಕ್ಕೆ! ಬೆಂಗಳೂರಿನಂತಹ ಶಹರಗಳಲ್ಲಿ ಮಾವು, ತೆಂಗು, ಹಲಸು, ಬೇವು, ಸಂಪಿಗೆಯಂತಹ ಒಂಟಿ ಮರಗಳ ಮೇಲೂ ಪ್ರಕೃತಿ ನಾಟಕ ಬೇಕಾದಷ್ಟು ನೋಡಲು ಸಿಗುತ್ತದೆ. ರಸ್ತೆಯಂಚಿನಲ್ಲಿ ಹೂ–ಕಾಯಿ, ಹಣ್ಣುಗಳನ್ನು ಬಿಟ್ಟು ನಿಂತ ಅಶ್ವತ್ಥ, ಆಲದ ಮರಗಳು, ಹನಿಮಳೆ ಬಿದ್ದೊಡನೆ ಮರವೆಲ್ಲ ಹೂತಾಳಿ ನಿಲ್ಲುವ ಗುಲ್ ಮೊಹರಗಳನ್ನು ನಿರೀಕ್ಷೆಗೆ ಆಯ್ದುಕೊಳ್ಳಬಹುದು. ಆದರೆ ಎರಡು ನಿಮಿಷ ಮರದತ್ತ ಲಕ್ಷ್ಯವಿಟ್ಟು ನೋಡಿದಾಗ ದಾರಿಹೋಕರು, "ಏನು ಸಾರ್, ಏನು ನೋಡ್ತಾ ಇದ್ದೀರಾ?" ಎನ್ನುವರು.... ಏಕಾಗ್ರತೆಗೆ ಭಂಗ ಬಂತೇ! ಕೈಯಲ್ಲಿ ದೂರದರ್ಶಕವಿದ್ದರೆ.. ನಿಂತವರಿಗೆ ಹೊರಡಲು ಮನಸ್ಸೇ ಬರುವದಿಲ್ಲ. ಅರೆ ಮೈಲು ದೂರವಿರುವ ಕಾಣದ ಹಕ್ಕಿಯನ್ನು ನೋಡಲು ಸೂಚಿಸುತ್ತಾರೆ. ಬಾಯ್‌ನೋಕ್ಯುಲರ್ ಮುಟ್ಟಿ ನೋಡಿ, ಅದರೊಳಗಿಂದ ವೀಕ್ಷಿಸಿ ಆನಂದಿಸುತ್ತಾರೆ. ಅವರ ಆಸಕ್ತಿಗೆ ಕೊಂಚ ಪ್ರೋತ್ಸಾಹ ಕೊಟ್ಟರೆ, ದೂರದರ್ಶಕದ ವಿಚಾರಣೆ ತಾವೇ

ವಹಿಸಿಕೊಂಡು. ಮಾಲಕನನ್ನು ಮಂಗ್ಯಾ ಮಾಡುವುದರಲ್ಲಿ ಹಿಂದೆ ಮುಂದೆ ನೋಡುವುದಿಲ್ಲ.

ಕ್ಯಾಮರಾ ಕಂಡರೆ

ಕಂಡು ಅನುಭವಿಸಿದ್ದನ್ನು ಸ್ಥಾಯಿಯಾಗಿ ಇಡುವುದಕ್ಕೆ ಕ್ಯಾಮರಾದೊಂದಿಗೆ ಅಲೆದರೆ, ಹತ್ತಾರು ಜನ ಕಲೆಯುತ್ತಾರೆ. ಪಶು-ಪಕ್ಷಿಗಳ ಬದಲಾಗಿ ಕ್ಯಾಮರಾವನ್ನೇ ಪರೀಕ್ಷಿಸುತ್ತಾರೆ; ಸಾಧ್ಯವಾದರೆ ಛಾಯಾಚಿತ್ರದಲ್ಲಿ ತಮ್ಮನ್ನೂ ಸೇರಿಸಿಕೊಳ್ಳಲು ಹವಣಿಸುತ್ತಾರೆ. ಛಾಯಾಕಾರ ಮೂಕಪ್ರಾಣಿಯಂತೆ ವರ್ತಿಸಿದರೆ ಬದುಕಿಕೊಂಡ. ಇಲ್ಲದಿದ್ದರೆ ನೆರೆದ ಹತ್ತಾರು ಜನ, ನೂರಾರು ಪ್ರಶ್ನೆ ಕೇಳಲಾರಂಭಿಸಿ ಅವರೊಂದಿಗೆ ಇನ್ನೈವತ್ತು ಜನ ಸೇರಿಕೊಳ್ಳುವರು. ಚಲನಚಿತ್ರಗಳಿಂದಲೇ ಛಾಯಾಚಿತ್ರ ಜನಪ್ರಿಯವಾದ ಯುಗದಲ್ಲಿ-ಪ್ರಾಣಿಗಳೆ ನಟ-ನಟಿಯರೆಂಬ ಅರಿವಾಗದವರಲ್ಲಿ, ತಮ್ಮ ಜನಪ್ರಿಯ ನಾಯಕ, ಡಾ॥ ರಾಜಕುಮಾರ ಬರಲಿದ್ದಾರೆಯೇ? ಎಂದು ಕನ್ನಡ ಪ್ರೇಮಿ ವಿಚಾರಿಸಿದರೆ, ಎಮ್.ಜಿ.ಆರ್. ಬರಲಿದ್ದಾರೆಂದು ತಮಿಳು ರಸಿಕ ತೀರ್ಪು ಕೊಟ್ಟೇ ಬಿಡುವ. ಇಷ್ಟಾದರೂ ಖಳನಾಯಕನ ದರ್ಶನವಾಗದಿದ್ದರೆ, "ಇಲ್ಲಿಯ ಶೂಟಿಂಗ್ ಹೀಗೆಯೇ... ನಂತರ ಸ್ಟುಡಿಯೋದಲ್ಲಿ ಇದೇ ಹಿನ್ನೆಲೆಯಲ್ಲಿ ಮುಖ್ಯ ನಟನು ದ್ವಿಪಾತ್ರದಲ್ಲಿ ಅಭಿನಯಿಸುತ್ತಾನೆ" ಎಂದು ಚಲನಚಿತ್ರ ಎಕ್ಸ್‌ಪರ್ಟ್ ನಿರ್ಧರಿಸುತ್ತಾನೆ. ಕಣ್ಣು ಸೌಂದರ್ಯ ಸವಿಯುವಾಗ, ಕೈ ಕ್ಯಾಮರಾ ಬಳಸುವಾಗ ಇಂಥ ಮಾತುಗಳು ಕಿವಿಗೆ ಒಳ್ಳೆಯ ಮನರಂಜನೆ ಕೊಡಬಲ್ಲವು. ಆದರ ಇದರಿಂದ ಇತರರ ಓಡಾಟಕ್ಕೆ ವ್ಯತ್ಯಯ ಬರುವುದಲ್ಲದೇ ಹರಟೆ, ಹಕ್ಕಿಗಳನ್ನು ಓಡಿಹೋಗುವಂತೆ ಮಾಡಬಹುದು.

ಪಕ್ಷಿಗಳ ಉಡ್ಡಾಣಕ್ಕೆ ಹೆಚ್ಚಿನ ಶಕ್ತಿಯ ಅವಶ್ಯಕತೆ ಇರುವುದರಿಂದ ಅವು ತಿಂದ ಆಹಾರ ಬೇಗ ಧ್ವಂಸವಾಗಿ ಬಿಡುತ್ತದೆ. ರಾತ್ರಿಯೆಲ್ಲಾ ಹಸಿದಿರುವುದರಿಂದ, ರವಿಯೊಂದಿಗೆ ಸ್ಪರ್ಧಿಸಿ ನಸುಕಿನಲ್ಲಿಯೇ ಎದ್ದುಬಿಡುವವು. ಮುಂಚಿತವಾಗಿ ಎದ್ದ ಹಿರಿಯ ಹಕ್ಕಿಗಳು ಗಾನ ಶುರು ಮಾಡಿ ಕಿರಿಯವನ್ನು ಎಚ್ಚರಿಸುವವು. ಕೋಳಿಯ ಕೂಗು ಕೇಳಸಿಗದ ನಗರದವರು, ವರ್ಷದುದ್ದಕ್ಕೂ ಕೂಗುವ ಕೋಗಿಲೆ ಕರೆಗೆ ಎದ್ದುಬಿಡುವ ಅಭ್ಯಾಸ ಮಾಡಿಕೊಳ್ಳುವುದು ಒಳ್ಳೆಯದು. ವಸಂತಕಾಲದಲ್ಲಿ ಹಲವಾರು ಕೋಗಿಲೆಗಳು ಒಂದೇ ಪ್ರೇಯಸಿಗಾಗಿ ವಿಶಿಷ್ಟ ರೀತಿಯಿಂದ ಹಾಡುವದರಿಂದ ಜನಸಾಮಾನ್ಯರಿಗೂ ಈ ಕರೆಯ ಪರಿಚಯವಿರುತ್ತದೆ. ಇನ್ನಿತರ ಮಾಸಗಳ ಒಂಟಿ ಕರೆ ಕೇಳಲು ಕಿವಿಗಳು ಹೆಚ್ಚಿನ ತೊಂದರೆ ವಹಿಸಿಕೊಳ್ಳಬೇಕಾಗುತ್ತದೆ. ಅತಿ ದೂರದ ಕರೆಗೆ ಎಲ್ಲಿಂದಲೋ ಹೆಣ್ಣು ಕೋಗಿಲೆ ಪ್ರತಿಕ್ರಿಯಿಸಿತು-ಕಿರ್ ಕಿರ್ ಎಂದು. ಸನಿಹದಲ್ಲೇ 'ಕುಹೂ ಕುಹೂ' ಎಂದು ಏಕಪ್ರಕಾರವಾಗಿ ಹಾಡುವ ಗಂಡನ್ನು ಕಾಣಲು ಹೆಣ್ಣು, ಕುಳಿತಲ್ಲಿಂದಲೇ ಕೊರಳು ಬಗ್ಗಿಸಿ ಪ್ರತಿ ಟೊಂಗೆಯನ್ನು ಇಣಿಕಿ ಪರೀಕ್ಷಿಸುತ್ತದೆ. ಹೆಣ್ಣು ಕಂದು ಬಣ್ಣದ್ದಾಗಿದ್ದು ಚಿಕ್ಕೆಯಿಂದ ಕೂಡಿದ್ದರಿಂದ ಅದು ಕೋಗಿಲೆಯ ವರ್ಗಕ್ಕೆ ಸೇರಿದ್ದು ಎಂದು ಕೂಡಲೇ ಗುರುತಿಸಲಾಗುವುದಿಲ್ಲ. ಗಂಡು ತನ್ನ ಹಸಿವು ನೀಗಿಕೊಂಡ ನಂತರ ಪ್ರಣಯದಲ್ಲಿ ಮನಸ್ಸು ತೊಡಗಿಸುತ್ತದೆ. ಹೆಣ್ಣು ಪ್ರೇಮ ವ್ಯಾಪಾರ ಮಾಡುತ್ತ, ಕತ್ತನ್ನು ಬಗ್ಗಿಸುತ್ತ

















ಕುಳಿತಾಗ, ಗಂಡು ಕೊಕ್ಕಿನಲ್ಲಿ ಹಣ್ಣು ತಂದು ನೀಡಿದಾಗ, ಅಲಕ್ಷ್ಯಭಾವದಿಂದ ಅದನ್ನು ಸ್ವೀಕರಿಸಿ, ಕೂಡಲೇ ಚೆನ್ನಾಗಿಲ್ಲ ಎಂಬ ಭಾವದಿಂದ ಬಿಸುಡಿ ಬಿಡುವುದು. ಹೀಗೆ ಅವುಗಳ ಶೃಂಗಾರ, ಚೇಷ್ಟೆ ನಡೆದಿರುವಾಗ, ಇನ್ನೂ ಕಾಫಿ-ತಿಂಡಿ ಆಗದ ಕಾಗೆಯ ಪಡೆ ರೇಗಿ ದಾಳಿ ಮಾಡಿ ಪ್ರೇಮಿಗಳನ್ನು ಓಡಿಸಿಬಿಡುವುದು. ಪಾರಿವಾಳದ ಜೋಡಿ ಹಲ್ಲುಜ್ಜುವುದು, ನಾಸ್ತಾ ಇತ್ಯಾದಿಗಳ ಗೊಡವೆಗೇ ಹೋಗದೇ "ಕೊಟರ್ ಕೊಟರ್" ಪ್ರೇಮ ಗೀತ ಹಾಡುತ್ತಾ ಗಗನದತ್ತ ಹಾರುವವು.

ಕಣ್ಣಿಗೆ ಕಾಣುವುದು ಅಪರೂಪ

ಗುಟರ್! ಗುಟರ್! ಎಂಬ ಹಾಡುಗಾರಿಕೆ ವಸಂತ ಕಾಲದಲ್ಲಿ ಇನ್ನಿತರ ಋತುಗಳಲ್ಲಿಯೂ ಸುಲಭವಾಗಿ ಕೇಳಬಹುದು. ಆದರೆ ಆ ಹಾಡುಗಾರ ಕುಟಿಕ ಪಕ್ಷಿಯ ದರ್ಶನ ತೀರ ಕಷ್ಟದ ಮಾತು. ಆಕಾರದಲ್ಲಿ ಗುಬ್ಬಚ್ಚಿಯಷ್ಟು ಇರುವ ಈ ಪಕ್ಷಿಗೆ ಸುಂದರವಾದ ಹಸಿರು ರೆಕ್ಕೆಯ ಬಣ್ಣವಿದ್ದು, ಪೊದೆಗಳ ಮರೆಯಲ್ಲಿ ಸದಾ ಅಡಗಿರುವದರಿಂದ ಕಣ್ಣಿಗೆ ಕಾಣುವುದು ಅಪರೂಪ. ಅದೇ ತನ್ನ ಪ್ರಿಯತಮೆಗೋಸುಗ ಕರೆಕೊಡುವಾಗ ಮರದ ತುತ್ತತುದಿಯಲ್ಲಿ ನಿರಾಯಾಸವಾಗಿ ಕುಳಿತು ಐದು ನಿಮಿಷಗಳವರೆಗೆ ನಾದ ಹೊರಡಿಸುತ್ತದೆ. ಹಣ್ಣು ಇದ್ದಲ್ಲಿಯೇ ಕುಳಿತು ತಿನ್ನದೇ ಅದನ್ನು ಚುಂಚಿನಲ್ಲಿ ಹಿಡಿದು ಬೇರೊಂದು ಗುಪ್ತ ಸ್ಥಳಕ್ಕೆ ಹಾರಿ ಅದನ್ನು ಭಕ್ಷಿಸುವುದು ಈ ಪಕ್ಷಿ ವರ್ಗದ ಚಟ. ಮರಿಗೆ ಗುಟುಕು ಕೊಡುವ ದಿನಗಳಲ್ಲಂತೂ ಹತ್ತು ಚುಂಚುಗಳಲ್ಲಿ ಹಿಡಿಯವಷ್ಟು ಹಣ್ಣುಗಳನ್ನು ಒಂದರಲ್ಲೇ ಹಿಡಿದು ಹಾರುವದನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಇಷ್ಟಾಗಿ ಒಯ್ದು ಎಲ್ಲ ಆಹಾರ ಸೇವಿಸುತ್ತವೆ ಎಂಬ ನೇಮವಿಲ್ಲ. ಚೆಲ್ಲಿ ಹಾಳು ಮಾಡುವದೇ ಹೆಚ್ಚು. ಅವಕ್ಕೆ ಪಡಿತರದ ಪ್ರತಿಬಂಧವಿಲ್ಲವಲ್ಲ! ಮರಕುಟಿಗಕ್ಕೆ ಹತ್ತಿರದ ನೆಂಟಾದ ಈ ಪಕ್ಷಿ ಹಣ್ಣು ಇಲ್ಲದ ದಿನಗಳಲ್ಲಿ ಕೊಳೆಯುವ ಕೊರಡಿನಿಂದ ಇಲ್ಲವೇ ಮೃದು ನೆಲದಿಂದ ಹುಳು-ಹುಪ್ಪಡಿಗಳನ್ನು ಆರಿಸಿ ಭಕ್ಷಿಸುತ್ತದೆ.

ಉದ್ದ ಚುಂಚಿನ ಪುಟ್ಟ ಟುವ್ವಿ ಹಕ್ಕಿ, ಚಿಪ್ ಚಿಪ್, ಚಿಷ್ ಎಂದು ಹಾಡುತ್ತ, ಹಾರುತ್ತ, ಕುಣಿಯುತ್ತ ಮಧುಪಾನಕ್ಕಾಗಿ ರೆಂಬೆಯಿಂದ ರೆಂಬೆಗೆ ಜಿಗಿಯುತ್ತ ನೋಡುತ್ತಿದ್ದಂತೆ, ಎಲ್ಲಿಗೋ ಮಾಯವಾಗಿ ಬಿಟ್ಟಿತು. ಕಳಿಂದ ಹಕ್ಕಿಯೊಂದು ವೇಗವಾಗಿ ಹಾರಿಬಂದು ಕಹಿ ಬೇವಿನ ಮರದ ಆಶ್ರಯ ಪಡೆಯಿತು. ಹಾರುತ್ತಿರುವಾಗಿನ ಅದರ ಅಂದಚೆಂದಗಳು ವಿಶ್ರಮಿಸುವಾಗ ಗೋಚರಿಸದ್ದರಿಂದ ರೆಂಬೆಗಳ ಮರೆಯಲ್ಲಿ ಅದನ್ನು ಗುರುತಿಸುವದೇ ಕಷ್ಟದ ಮಾತು. ಕಳೆದುಕೊಂಡದ್ದನ್ನು ಹುಡುಕುವಂತೆ ಅತ್ತ ಇತ್ತ ಪರೀಕ್ಷಿಸುತ್ತ ಟೊಂಗೆಯಿಂದ ಟೊಂಗೆಗೆ ಏನೋ ಅಪೂರ್ವ ನಿಧಿ ಸಿಕ್ಕಂತೆ ಕಹಿಬೇವಿನ ಎಲೆಯೊಂದನ್ನು ಚುಂಚಿನಲ್ಲಿ ಹಿಡಿದು ಇನ್ನೊಂದು ಕಡೆ ಹಾರಿತು. ಎಲೆಗಳನ್ನು ಜೊಡ್ಡೆಗೆ ಏರಿಸಿ, ಸ್ವಚ್ಛ ಮಾಡಿ, ಸ್ವಾಹಾ ಮಾಡಿದಾಗ ಆಗುವ ಅಚ್ಚರಿ ಅಷ್ಟಿಷ್ಟಲ್ಲ. ಸಾಧು-ಸಂತರು, ತಪಸ್ವಿಗಳು ಮಾತ್ರ ಸೇವಿಸುವ ಕಹಿ ಎಲೆಗಳನ್ನು ಈ ಹಕ್ಕಿ, ಯಾಕೆ ಸೇವಿಸಿತು? ಎಂದು ತಿಳಿಯಲಿಲ್ಲ. ಹೊಟ್ಟೆ ನೋವಿಗೆ ಔಷಧಿ ಬಳಸಿತೋ ಅಥವಾ ಕಾಡು ಭರದಿಂದ ನಾಶವಾಗುತ್ತಿರುವ ದಿನಗಳಲ್ಲಿ ಕಹಿ ಎಲೆಗಳೇ ಪರಮ ಭೋಜನವಾಗುವ ಸ್ಥಿತಿ ಬಂದಿತೇ ಎಂದು ಸೂಚಿಸಿರಬೇಕು!



ಆಹಾರಕ್ಕಾಗಿ ಮಡುವಿಂದ ಹೊರಬಂದ ಆಮೆ



ಓತಿಕಾಟ ಇಣಜಿಗಳ ಮುಟ್ಟಾಟ



ಫಲಾಹಾರಿ ಮೈನಾ



ಮಾಂಸಾಹಾರಿ ಪಕ್ಷಿ

ಓಟದಲ್ಲಿ ಪಳಗಿದ ಓತೀಕಾಟ

ತನಗೆ ಹಾರಲು ಬಾರದಿದ್ದರೂ ಓಟದಲ್ಲಿ ಹಿಂದೆ ಬೀಳಲಾರೆ! ಎಂದು ಸಿದ್ಧಮಾಡುವುದಕ್ಕಾಗಿ, ರಾತ್ರಿ ವಿಶ್ರಾಂತಿಸಲು ಹೊಕ್ಕ ಪೊದೆಯಿಂದ ಓತಿಕಾಟವೊಂದು ವೇಗವಾಗಿ ಮರವೇರಿತು. ಇನ್ನಿತರ ಪ್ರಾಣಿ ಇಲ್ಲವೇ ಮಾನವನಿಂದ ಗಂಡಾಂತರ ನಿರೀಕ್ಷಿಸಿದಾಗ ಅದು ಒಣ ಟೊಂಗೆಯ ತುದಿಯೊಂದರಲ್ಲಿ ಮಿಸುಕಾಡದೇ ಕುಳಿತಿರುತ್ತದೆ. ಆದರೆ ತನ್ನ ತೀಕ್ಷ್ಣ ಕಣ್ಣುಗಳಿಂದ ಸದಾ ವೈರಿಗಳತ್ತ ಗಮನವಿಟ್ಟಿರುತ್ತದೆ. ಜೀವನದ ಉಲ್ಲಾಸ ಸೂರೆಗೊಳ್ಳುತ್ತ ಹಾರಿ ಹಾರಿ ದಣಿದ ಪಾತರಗಿತ್ತಿಯೊಂದು ಪರ್ಣಸಮೂಹದಲ್ಲಿ ವಿಶ್ರಾಂತಿಗೆಂದು ಬಂದು ಇಳಿಯಿತು. ಈ ರೀತಿ ರೆಕ್ಕೆ ಮಡಚಿ ತಟಸ್ಥವಾಗಿ ಕುಳಿತಾಗ ಅದು ಅಬ್ಬರದ ಗಾಳಿಗೂ ಹೆದರುವುದಿಲ್ಲ. ಮಾನವನ ಕಣ್ಣಿಗೆ ಗೋಚರಿಸುವ ಈ ಜೀವಿಗೆ ಓತಿಕಾಟದ ತೀಕ್ಷ್ಣದೃಷ್ಟಿಯಿಂದ ತಪ್ಪಿಸಿಕೊಳ್ಳುವುದು ಸುಲಭ ಸಾಧ್ಯವಲ್ಲ. ಈ ಪತಂಗದ ಛಾಯಾಚಿತ್ರ ಮುಗಿಸುತ್ತಿದ್ದಂತೆ ಓತಿಕಾಟವೊಂದು ಕಳ್ಳ ಓಟದಿಂದ ಬಂದು ಉದ್ದ ನಾಲಿಗೆಯನ್ನು ಇನ್ನಷ್ಟು ಉದ್ದಮಾಡಿ ಅದನ್ನು ನೇರವಾಗಿ ಸ್ವರ್ಗಕ್ಕೆ ಕಳಿಸಿತು. ಪತಂಗದ ವೈಭವಪೂರ್ಣ ಜೀವನ ಈ ರೀತಿ ಕೊನೆಗೊಳ್ಳಬೇಕೇ? ಎಂದು ಮರುಗುವಂತೆ ಆಯಿತು. ಕೆಲವೊಮ್ಮೆ ಓತಿಕಾಟ ತಪ್ಪು ಶಿಕಾರಿಗೆ ಕೈಚಾಚಿ ಮರುಗುವಂತೆ ಆಗುತ್ತದೆ. ಭಕ್ಷಿಸಲಿದ್ದ ಕೀಟ ಬಾಯಲ್ಲಿ ಹೆಚ್ಚಿನ ಗಲಾಟೆ ಮಾಡಿದರೆ, ರಕ್ಷಣಾ ರಸಾಯನಗಳನ್ನು ಹೊರಗೆಡವಿದರೆ, ಇಲ್ಲವೇ ಕೀಟ ವಿಷಕಾರಿಯಿದ್ದರೆ ಓತಿಕಾಟ ಕೂಡಲೇ ಬಾಯ್ತೆರೆದು ಹೋಗಗೊಡುತ್ತದೆ.

ಎಲ್ಲ ಕಡೆಯೂ ಕಾಣಸಿಗುವ ಇಣಚಿಯನ್ನೇ ಕಣ್ತೆರೆದು ನೋಡಿದಾಗ ಎಷ್ಟೋ ಹೊಸ ವಿಷಯಗಳು ಗೋಚರಿಸದೇ ಇರಲಾರವು. ಒಂದೆಡೆಯಿಂದ ಇನ್ನೊಂದೆಡೆ ಓಡುತ್ತ ಟೊಂಗೆಗಳ ನಡುವೆ ಅದು ಹೆದ್ದಾರಿಯನ್ನು ನಿರ್ಮಿಸುತ್ತದೆ. ಆಹಾರಾನ್ವೇಷಣೆಯ ಹೊತ್ತು ಬಿಟ್ಟು, ಉಳಿದೆಲ್ಲ ವೇಳೆ ಇಣಚಿ ಇದೇ ಮಾರ್ಗದಿಂದ ಓಡುತ್ತದೆ. ತನ್ನ ಅಂಗಾಂಗಗಳ ಸ್ವಚ್ಛತೆ ಕಾಯ್ದುಕೊಳ್ಳುವದರಲ್ಲಿ ಇಣಚಿ ಹೆಸರಾದ ಪ್ರಾಣಿ. ನಸುಕಿನಲ್ಲಿ ಕೈ-ಕಾಲು, ಕಿವಿ, ಬಾಯಿಗಳನ್ನು ಕೈಗಳಿಂದ ಉಜ್ಜಿ ಉಜ್ಜಿ ಸ್ವಚ್ಛ ಮಾಡಿಕೊಳ್ಳುತ್ತದೆ. ಅಲ್ಲದೇ ಮೈ ತುರಿಕೆ ಹೆಚ್ಚಾದ್ದರಿಂದ ಆಗಾಗ ಟೊಂಗೆಗಳ ನಡುವೆ ಕುಳಿತು ತೀಟೆ ತೀರಿಸಿಯೇ ಹೊರಡುತ್ತದೆ. ಆಹಾರವನ್ನು ಶೋಧಿಸಿ, ಪರೀಕ್ಷಿಸಿ ಎರಡೂ ಕೈಯಲ್ಲಿ ಹಿಡಿದು ಅದು ಮೆದ್ದು ತಿನ್ನುವದನ್ನು ನೋಡುವದೇ ಸೊಗಸು. ಆಹಾರ ಸ್ವಲ್ಪವಾದರೂ ಹೀಚಲು ಎನಿಸಿದರೆ, ಅದನ್ನು ತ್ಯಜಿಸಲು ಹಿಂದೆ ಮುಂದೆ ನೋಡುವದಿಲ್ಲ. ಹೊಟ್ಟೆ ತುಂಬಿತೆಂದರೆ ಆಟ, ವಿನೋದಗಳತ್ತ ಲಕ್ಷ್ಯ ಹಾಕುತ್ತವೆ. ಅವುಗಳ ಮುಟ್ಟಾಟ ನೋಡುವದೇ ಕಣ್ಣಿಗೊಂದು ಹಬ್ಬ. ಬೇಜಾರಾದಾಗ ಗಟ್ಟಿಯಾಗಿ ತೊಗಟೆಗೆ ಹಿಡಿದುಕೊಂಡು, ಆಕಳಿಸಿ, ಮೈಮುರಿದು, ನೆಟಿಕೆ ತೆಗೆದು ಮುಟ್ಟಾಟ ಆಡೋಣವೇ ಎಂದು ಸಹಚರಿಗೆ ಸೂಚಿಸುತ್ತದೆ. ಅದು ಒಪ್ಪಿದರೆ ಟೊಂಗೆಯಿಂದ ಟೊಂಗೆಗೆ ಮರದಿಂದ ಮರಕ್ಕೆ ಓಡುವಾಗ, ಜಿಗಿಯುವಾಗ ಅವಕ್ಕೆ ಪ್ರಜ್ಞೆಯೇ ಇರುವದಿಲ್ಲ ಅನಿಸಿಬಿಡುತ್ತದೆ. ಇಂಥ ಪ್ರಸಂಗದಲ್ಲಿ ಎತ್ತರದ ಮರದಿಂದ ಜಾರಿ ಅವು ಕೆಳಕ್ಕೆ ಬೀಳುವುದೂ ಇದೆ. ಆದರೆ ಅರೆ ಕ್ಷಣದಲ್ಲಿ ಏನೂ ಆಗಿಲ್ಲವೆಂಬಂತೆ ತಿರುಗಿ ಆಟದಲ್ಲಿ ತೊಡಗುತ್ತವೆ. ಇನ್ನೊಂದು, ಮತ್ತೊಂದು, ಮಗದೊಂದು ಇಣಚಿಗಳೆಲ್ಲ ಈ

ಮುಟ್ಟಾಟದಲ್ಲಿ ಪಾಲುಗೊಳ್ಳುತ್ತವೆ. ಅವುಗಳ ಚುಕ್ ಚುಕ್ ಕೂಗು, ಕಿಲಿ ಕಿಲಿ ನಗು ಚೀರಾಟಗಳೆಲ್ಲ ಹುಡುಗಿಯರ ಹಿಂಡನ್ನು ನಾಚಿಸುವಂಥಾದ್ದು. ಮುಟ್ಟುವ ಇಣಚಿ ಕೂಹುಯ್ ಹಾಕಿದಾಗ, ಇನ್ನಿತರವು ಚುಕ್ ಚುಕ್ ಎನ್ನುತ್ತ ನಾಲ್ಕೂ ದಿಕ್ಕಿನಲ್ಲಿ ಓಡುವುವು. ಟೊಂಗೆಯ ಬಾಗು, ಟಿಸಿಲಗಳಲ್ಲಿ, ಒಂದಾಗಿ ಅವಿತುಕೊಂಡಾಗ ಎಂಥ ತೀಕ್ಷ್ಣ ಕಣ್ಣುಗಳ್ಳವರಿಗೂ ಇಣಚಿಯನ್ನು ಮರದ ರಚನೆಯೊಂದಿಗೆ ಪ್ರತ್ಯೇಕಿಸುವದು ಕಷ್ಟದ್ದಾಗುತ್ತದೆ ಮುಟ್ಟ ಬಂದ ಇಣಚಿಗೆ ಲಕ್ಷಕ್ಕೆ ಬಾರದೇ ಅದು ಮುಂದೋಡಿದಾಗ, ತಾನು ಇಲ್ಲಿಯೇ ಇದ್ದೇನೆಂದು ಚುಕ್‌ಚುಕ್ ಹಾಕಿ, ಅದು ಹಿಂತಿರುಗಿದಾಗ, ತಾನು ನಾಗಾಲೋಟ ಹಾಕಿದಾಗ, ಭಾರೀ ತಮಾಷೆಯೆನಿಸುವುದು. ಅವು ದಣಿಯದೇ ಗಂಟೆಗಟ್ಟಲೆ ಈ ಆಟದಲ್ಲಿ ತೊಡಗಿರುತ್ತವೆ. ಮರವನ್ನು ಆವರಿಸುತ್ತಿರುವ ಗಿಡ್ಡಲು ಈ ಮುಟ್ಟಾಟದಿಂದ ನಾಶವಾಗುವುದರಿಂದ 'ಇದರ ಮನೆ ಹಾಳಾಗ'! ಎಂದು ಅದು ಶಪಿಸುತ್ತಿರಬೇಕು.

ಮೈನಾ ಹಕ್ಕಿಯ ಸೌಂದರ್ಯ ಅದು ಹಾರುವಾಗ ಹೆಚ್ಚು ಸ್ಫುಟವಾಗಿ ಕಾಣುತ್ತದೆ. ಅವು ಜೋಡಿಯಾಗಿ 'ಚಕರೀ ಪ್ಯಾಕ್‌ಪಿಕರೀ ಚಾಕ್" ಎಂದು ಸರಸ ಸಂಭಾಷಣೆಯಲ್ಲಿ ತೊಡಗಿದಾಗ ಕೇಳುವುದೇ ಒಂದು ಸೊಗಸು. ಇದರ ಮಾತುಗಾರಿಕೆ ಆದಿವಾಸಿಗಳಿಗೆ ಇಷ್ಟವಾದ್ದರಿಂದ ಅದನ್ನು ಪಂಜರದಲ್ಲಿ ಇಟ್ಟು ಗಿಳಿಯಂತೆ ಮಾತಾಡಲು ಕಲಿಸುತ್ತಾರೆ. ಅದರ ನುಡಿ ಕೇಳಿಸಿಕೊಳ್ಳುವುದು ಶುಭಸೂಚಕವೆಂದು ಹಲವರು ನಂಬುತ್ತಾರೆ. ಬಂಧನಕ್ಕೆ ಒಳಪಡದವು, ಹಣ್ಣು, ಹುಳ-ಹುಪ್ಪಡಿಗಳಿಂದ ಹಸಿವು ನಿವಾರಿಸಿಕೊಂಡು, ಕಂಬ, ಕಟ್ಟಡ, ಟೆಲಿಫೋನ್ ತಂತಿಗಳ ಆಶ್ರಯ ಪಡೆದು, ಗರಿಗಳನ್ನು ಹಿಕ್ಕಿಕೊಂಡು ಪುರಾಣ ಶ್ರವಣದಿಂದ ಆಧ್ಯಾತ್ಮಿಕ ಜೀವನ ನಡೆಸುವವು.

ಕಬ್ಬಾರೆಗಳು ವಲಸೆ ಬಂದು ರಾಜ್ಯ ಸ್ಥಾಪಿಸಲು ಯತ್ನಿಸಿದಾಗ ಕಾಗೆಯ ಬಳಗದೊಂದಿಗೆ ಕಾದಾಟ ಕಟ್ಟಿಟ್ಟದ್ದೇ! ಸೇಬರ್ ಜೆಟ್‌ಗಳಂತೆ ಕಾಗೆಗಳು ಆಕ್ರಮಣ ನಡೆಸಿದಾಗ, ಕಬ್ಬಾರೆಗಳು ಪೆರಾಚೂಟ್ ಧಾರಿಗಳಂತೆ ತೇಲಿ ಬಂದು ಎಲೆಗಳ ರಾಶಿಯಲ್ಲಿ ಕಣ್ಮರೆಯಾಗಿಬಿಡುತ್ತವೆ. 'ಬದುಕಿದೆಯ ಬಡ ಜೀವ' ಎಂದು ಉಸಿರು ಬಿಡುತ್ತವೆ. 'ಕಾಲಿಗೆ ಬುದ್ಧಿ ಹೇಗೆ ಹೇಳಿಸಿದೆವು?' ಎಂದು ಬೆನ್ನು ಚಪ್ಪರಿಸಿಕೊಳ್ಳುತ್ತ ಕಾಗೆಗಳು ತಮ್ಮ ಸ್ಥಾನದಲ್ಲಿ ತಿರುಗಿ ಭದ್ರವಾಗುತ್ತದೆ. ಒಂಟಿ ಕಾಗೆಯೊಂದು 'ಇಲ್ಲಿ ಬೇಕಾದಷ್ಟು ತಿಂಡಿ ಇದೆ ಬರ್‍ರ್ರೋ! ಎಂದು ಕೂಗಿ ಹೇಳಿದಾಗ ಭರ್ ಎಂದು ಎಲ್ಲವೂ ಅತ್ತ ಜಿಗಿಯುತ್ತವೆ. ಬಂದ ಗಂಡಾಂತರ ಜಾರಿಕೊಂಡಿತು ಎಂದು ಖಚಿತಮಾಡಿಕೊಂಡು ಕಬ್ಬಾರೆಗಳು ತಮ್ಮ ಚಟುವಟಿಕೆ ಮುಂದುವರಿಸುತ್ತವೆ. ರಸಿಕ ಹಕ್ಕಿ, ಸಂಧಿ ಸಾಧಿಸಿ ಹೆಣ್ಣು ಕಬ್ಬಾರೆಯೊಂದನ್ನು ಒಲಿಸಿಕೊಳ್ಳಲೆತ್ನಿಸಿದಾಗ ಪ್ರತಿಸ್ಪರ್ಧಿ ಅದರ ಮೇಲೆ ಎರಗಿ, "ಮಗನೇ, ನಿನಗೇಕೋ ಅವಳ ಮೇಲೆ ಕಣ್ಣು?" ಎಂದು ಕಾದಾಟಕ್ಕೆ ಇಳಿಯುತ್ತದೆ. ಎರಡೂ ಬಣದ ಹಿತೈಷಿಗಳೂ ಕಾಳಗಕ್ಕೆ ಸೇರಿ ಗಗನಮಂಡಲವೆಲ್ಲ ವ್ಯಾಪಿಸಿ ಚೀರಿಡುತ್ತಿದ್ದರೂ ಪ್ರತ್ಯಕ್ಷ ಕದನ ನಡೆಯುವುದಿಲ್ಲ. ಬಂಗಾಲಿಗಳಂತೆಯೇ ಈ ಹಕ್ಕಿಗಳು "ಕಚಕ್ ಕಚಕ್" ಎಂದು ವಾಗ್ಯುದ್ಧದಲ್ಲಿ ಪ್ರವೀಣತೆ ಪಡೆದಂತಿದೆ. ಪಂಜಾಬಿಗಳಂತೆ ಹೋರಾಟಗಾರರಾಗಿದ್ದರೆ ಎಷ್ಟು ಹೆಣ ಬೀಳುತ್ತಿದ್ದವೋ! ರೆಕ್ಕೆ ಬಿಡಿಸಿ ಒಂದು ಕಬ್ಬಾರೆ ಇನ್ನೊಂದನ್ನು ಆಕ್ರಮಿಸಲು ಹೊರಟಾಗ ಅದರ ಸೌಂದರ್ಯ ರಮ್ಯವಾಗಿರುತ್ತದೆ.

ಜೀವರಕ್ಷಣೆಗೆ ಪಲಾಯನ

ಪ್ರಾಣಿ ಪ್ರಪಂಚದ ವ್ಯಾಪಾರ ಕಂಡು ವಿಸ್ಮಯಪಡುತ್ತಿರುವಂತೆ, ಯಾರೋ ಒಬ್ಬಾತ ಬಂದು ಕಹಿ ಬೇವಿನ ತೊಗಟೆ ಕೀಳಲಾರಂಭಿಸಿದ. ಇನ್ನೊಬ್ಬಾತ ಕುರಿಗಳ ಮೇವಿಗೆ ಪಕ್ಕದ ಮರದ ಸೊಪ್ಪಿದ್ದ ಟೊಂಗೆಗಳನ್ನೇ ಕಡಿಯಲಾರಂಭಿಸಿದ. ಪ್ರಾಣಿ-ಪಕ್ಷಿಗಳೆಲ್ಲ ಜೀವ ರಕ್ಷಣೆಗೆ ನಾಲ್ಕೂ ನಿಟ್ಟಿನಲ್ಲಿ ಪಲಾಯನ ಮಾಡಿದವು. ಗೂಡಿನಲ್ಲಿದ್ದ ಪುಟ್ಟ ಮರಿಗಳು ಹಸಿವಿನಿಂದ ಬಳಲಿ ಹದ್ದುಗಳ ಆಕ್ರಮಣಕ್ಕೆ ಬಲಿಯಾದವು. "ಮಾನವನ ಸ್ವಾರ್ಥಕ್ಕೆ ಕೊನೆ ಮೊದಲೇ ಇಲ್ಲವೇ?" ಎಂದು ಛಾಯಾಚಿತ್ರಕಾರನು ನೊಂದುಕೊಳ್ಳುವುದಲ್ಲದೇ ಹೆಚ್ಚಿನದನ್ನು ಮಾಡುವಂತಿರಲಿಲ್ಲ.

2. ನಮ್ಮ ಕಾಗೆಯ ಕತೆ

ನಮ್ಮ ಈ ರಾಜಧಾನಿಯಲ್ಲಿ ಕಾಕರಾಜನೇ ಪಕ್ಷಿರಾಜ. ಜನಜಂಗುಳಿ, ವಾಹನಗಳ ಓಡಾಟ, ಕಾರಖಾನೆಗಳ ಜಂಜಾಟಗಳಿಂದ ಅವನ ನೆಮ್ಮದಿಯ ಬಾಳಿಗೆ ಎಳ್ಳಷ್ಟೂ ಆತಂಕ ಬಾರದಿದ್ದರಿಂದ ತನ್ನ ಸಂತತಿಯ ಅಭಿವೃದ್ಧಿ ಮಾಡುತ್ತಲೇ ನಡೆದಿದ್ದಾನೆ- ಕಾಗಣ್ಣ. ಪಕ್ಷಿಗಳನ್ನು ಹುಡುಕಿಕೊಂಡು, ರಂಗನತಿಟ್ಟು, ಕಾನ್ಹಾ, ಭರತಪುರ್‌ಗಳ ಪಕ್ಷಿಧಾಮಕ್ಕೆ ಧಾವಿಸಿ ಕಾಲ-ಕಾಸುಗಳನ್ನು ವ್ಯಯಿಸುವದಕ್ಕಿಂತ, ಕಾಕರಾಜನನ್ನೇ ಪ್ರೀತಿಸಿ ನಿರೀಕ್ಷಿಸಿದರೆ ಹೇಗೆ? ಎಂಬ ವಿಚಾರ ನೆಮ್ಮದಿ ತಂದಿತು. ಬಿಡುವಿನ ಸಮಯವನ್ನೆಲ್ಲ ಕಳೆಯುತ್ತಿದ್ದ ಬಾಲ್ಕನಿಯ ಎದುರಿಗೆ ನೆರೆಮನೆಯವರ ಬೃಹದಾಕಾರದ ಹಲಸಿನ ಮರವಿತ್ತು. ಅದು ಕಾಗೆಗಳ ತಂಡವೊಂದರ ಆಶ್ರಯಸ್ಥಾನ. ಕಾಕ ಪಂಗಡದಲ್ಲಿ ಒಂದನ್ನು ಇನ್ನೊಂದರಿಂದ ಬೇರ್ಪಡಿಸುವದು ಇರುವೆಯೊಂದನ್ನು ಇನ್ನೊಂದರಿಂದ ಗುರುತಿಸುವಷ್ಟೇ ಕಷ್ಟ! ಅಂತೆಯೇ ಕಾಳಗವೊಂದರಲ್ಲಿ ಚುಂಚನ್ನು ವೊಂಡು ಮಾಡಿಕೊಂಡ ಕರಿಯಪ್ಪನನ್ನೇ ನಮ್ಮ ಪಕ್ಷಿಯೆಂದು ಗುರುತಿಸಿಕೊಂಡೆವು.


ಪಲ್ಲಕ್ಕಿಯಂತೆ ಅರೆವರ್ತುಲವಾಗಿ ಬಾಗಿ ನಂತರ ಗಗನದತ್ತ ಮುಖ ಮಾಡಿದ ಟೊಂಗೆ ನಮ್ಮ ಕರಿಯಪ್ಪನಿಗೆ ತುಂಬಾ ಇಷ್ಟ. ಆಕಾಶವಾಣಿಯಂತೆ ಸರಿಯಾಗಿ ಆರು ಗಂಟೆಗೆ ಎಲ್ಲಿಂದಲೋ ಪ್ರತ್ಯಕ್ಷವಾಗಿ ದನಿಯೇರಿಸಿ, "ಕಾ ಕಾ ಆದಾಗಲೇ ದೊಡ್ಡ ಮುಂಜಾವು ಆಗಿದೆ ಎಲ್ಲರೂ ಎದ್ದೇಳಿ" ಎಂದು ಅಧಿಕಾರವಾಣಿಯಿಂದ ಕೂಗಿ ಹೇಳುವ. ನಮಾಜಿಗೆ ಕರೆಕೊಟ್ಟವನ ಗೆಲುವಿನಿಂದ ಪ್ರಾತರ್ವಿಧಿಗಳನ್ನು ಪೂರೈಸಿಕೊಳ್ಳುವ. ಕಾಲಿನ ಪಂಜುಗಳಿಂದ ಕಪೋಲಗಳನ್ನು ಕೆರೆದುಕೊಂಡು, ಅಲ್ಲಿ ಬೀಡು ಮಾಡಿದ ಒಂದೆರಡು ಹೇನುಗಳನ್ನು ಮೋಕ್ಷಕ್ಕೆ ಕಳಿಸಿ ಬಿಡುವ. ಹಿಂದಿನ ಊಟದ ಮುಸುರೆ ಕೊಕ್ಕಿಗೆ ಸೇರಿಕೊಂಡಿರಬಹುದೆಂಬ ಅನುಮಾನದಿಂದಲೇ ತೊಗಟೆ ಸಹಾಯದಿಂದ ಶುಭ್ರಗೊಳಿಸುವ. ಅಷ್ಟರಲ್ಲಿ ಬೆನ್ನು ತುರಿಕೆ ಕಾಣಿಸಿಕೊಂಡಿದ್ದರಿಂದ ಕಷ್ಟೆಗಿದ್ದಂತಹ ಗಿಡ್ಡ ಗೋಣನ್ನು ಜಿರಾಫೆಯಂತೆ ಉದ್ದ ಮಾಡಿ ಹಿಂದಿನ ಪುಕ್ಕಗಳನ್ನು ಕಟಕಟ ಕಡಿದು, ಒಂದೆರಡು ಕಿರುಗರಿಗಳನ್ನು ನೆಲಕ್ಕೆ ಉರುಳಿಸುವ. ಗೂಡು ಬಿಡುವಾಗ ಕಕ್ಕಸು ಸರಿಯಾಗಿರಲಿಲ್ಲವೆಂದು ನೆನೆದು ಇನ್ನೊಮ್ಮೆ ಯತ್ನಿಸಿ ಇಷ್ಟು 'ಪಿಷ್ಟ' ಹೊರಹಾಕುವ. ಈಗ ಮೈ ಹಗುರಾಗಿ, ಹೊಸ ಚೈತನ್ಯ ಪಡೆದು ಒಂದೊಂದಾಗಿ ರೆಕ್ಕೆ ಪಸರಿಸಿ ಐದಾರು ಸಲ ಬೀಸಿ, ಮುಂಜಾವಿನ ಫರಾಳಕ್ಕಾಗಿ ಗಸ್ತೀ ಪ್ರಾರಂಭಿಸುವನು.











PARCEL OFFICE







































ಬ್ರೆಡ್ ಮಾಯ

ಕರಿಯಪ್ಪನಿಗೆ ಪರರ ಮನೆಯ ತಂಗಳ, ತಿಪ್ಪೆಯ ಮುಸುರೆಗೆ ಎಡತಾಕುವುದು ಒಪ್ಪಿಗೆಯಾಗದು. ಆದ್ದರಿಂದ ಆತನ ಸಕಲ ಆಹಾರದ ಅವಶ್ಯಕತೆಯನ್ನು ನಾವೇ ಪೂರೈಸುವುದೆಂದು ನಿರ್ಧರಿಸಿದೆವು. ನಾಸ್ತಾಕ್ಕೆ ಬ್ರೆಡ್ ಚೂರುಗಳನ್ನು ಹಾಕಿದಾಗ ಅನುಮಾನಿಸುತ್ತ, ಹತ್ತಿರ ಸುಳಿದು ಸ್ವಸ್ಥಾನಕ್ಕೆ ಮರಳಿದ. ತಾನೊಬ್ಬನೇ ಸ್ವಾಹಾ ಮಾಡುವುದು ಕ್ಷೇಮಕರವಲ್ಲವೆಂದು ತನ್ನ ಬಳಗದವರನ್ನೆಲ್ಲ ಕರೆಸಿಕೊಂಡ. ಆಮಂತ್ರಿತರು ಸಭಾ ಮರ್ಯಾದೆ ಪಾಲಿಸದೆ ತಿನ್ನಲು ಸ್ಪರ್ಧೆಗೆ ಇಳಿದಿದ್ದರಿಂದ, ರೇಗಿ ಅವರನ್ನು ಕುಕ್ಕಿದ. ಇನ್ನಿತರರಿಗೆ ಬುದ್ಧಿ ಕಲಿಸಲು ಬ್ರೆಡ್ ತುಣುಕು ನೆಲಕ್ಕುರುಳುವ ಮೊದಲೇ ಗಗನ ವಿಹಾರಿಯಾಗಿ ತನ್ನದನ್ನಾಗಿ ಮಾಡಿಕೊಂಡ. ಮಿತವಾದ ವೇಗದಲ್ಲಿ ಹಾರುತ್ತ ಗುರಿ ಇಟ್ಟು ತುಣುಕನ್ನು ಬಾಯಲ್ಲಿ ಸೇರಿಸುವ ಚಮತ್ಕಾರವನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಇಷ್ಟರಲ್ಲಿ "ಒಂದು ಪೌಂಡ್ ಅಯ್ಯಂಗಾರಿ ಬ್ರೆಡ್, ಕಾಗೆಗಳ ಪಾಲಾಯಿತು!" ಎಂದು ಒಳಗೆ ಮನೆಯಿಂದ ಎಚ್ಚರಿಕೆ ಬಂದಿತು. ಕೈಯಿಂದಲೇ ತಿನ್ನಿಸಬೇಕೆಂಬ ಚಪಲದಿಂದ ಚಕ್ಕುಲಿಯೊಂದು ಹೊರತಂದದ್ದಾಯಿತು. ಕಾಗೆಗಳ ತಂಡವಿದ್ದಲ್ಲಿ ತೂರಿದ ಚೂರುಗಳು ಕ್ಷಣದಲ್ಲಿ ಮಾಯವಾಗಿ ಕೈಯಲ್ಲಿದ್ದ ಚಕ್ಕುಲಿಗೇ ಎರಗಿದವು. ಅವು ಹಾರಿ ಬಂದ ರಭಸಕ್ಕೆ ಪಂಜುಗಳ ನಖಗಳು ಚೆನ್ನಾಗಿ ಕೈಯನ್ನು ಪರಚಿದವು. ಕಾಗೆಯ ಚುಂಚು ಇಷ್ಟೊಂದು ಗಟ್ಟಿಯಾಗಿರುತ್ತದೆಂದು ಕುಕ್ಕಿಸಿಕೊಂಡಾಗಲೇ ಅರಿಯುವಂತಾಯಿತು. ಒಂದು ಚಕ್ಕುಲಿಯಿಂದ ಕರಿಯಪ್ಪನ ಬಳಗಕ್ಕೆ ತೃಪ್ತಿ ಹೇಗಾದೀತು? ಇನ್ನಷ್ಟು ತರಬಾರದೇ! ಎಂದು ಗೋಣನ್ನು ಅತ್ತ ಇತ್ತ ತಿರುಗಿಸಿ, ಅಂಗಲಾಚಿದವು. ಬ್ರೆಡ್ಡಿಗೆ ಆಗಲೇ ಎಚ್ಚರಿಕೆ ಬಂದದ್ದರಿಂದ ಚಕ್ಕುಲಿ ಡಬ್ಬಕ್ಕೆ ಇನ್ನೊಮ್ಮೆ ಕೈಹಚ್ಚುವ ಧೈರ್ಯವಾಗಲಿಲ್ಲ!

ಹಸಿರಾದ ಟೊಂಗೆಯ ಮೇಲೆ ಕುಳಿತು ಗಾಳಿ ಬೀಸಿದಾಗೊಮ್ಮೆ ತೂಗಿಕೊಳ್ಳುವುದು ಕರಿಯಪ್ಪನಿಗೆ ತುಂಬ ಇಷ್ಟವಾದ ಆಟ. ಗಾಳಿ ಅಬ್ಬರಿಸಿ ಬೀಸಿದಾಗಲೂ ಒಂದಿಷ್ಟೂ ಅಳುಕದೆ ಸಮತೋಲ ತಪ್ಪದಂತೆ ಗರಿಬಿಚ್ಚಿ, ರೆಂಬೆ ಅವಚಿಕೊಂಡು, ಅಲ್ಲಿಯೇ ಸ್ಥಾಯಿಯಾಗಿರುವಂತೆ, ಮುನ್ನೆಚ್ಚರಿಕೆ ವಹಿಸುವುದು. ಸಾಕಾಗುವಷ್ಟು ಆಹಾರ ಸೇವನೆ ಆಯಿತೆಂದರೆ, ಇನ್ನಿತರರು ಎಷ್ಟು ಕೂಗಿ ಕರೆದರೂ, ಹೋಗುವದಿಲ್ಲ. ಕುಳಿತು, ಕುಳಿತು ಬೇಸರವಾದಾಗ, ಕಣ್ಣು ಕೂರಿ ಬಂದಾಗ ಕೆಲ ನಿಮಿಷ ನಿದ್ದೆ ಹೋಗುವುದು. ಒಮ್ಮೆ ಎದ್ದು ನೆನಪಾದಂತೆ ಕಾಲು ನಡಿಗೆಯಲ್ಲಿ ಮರದ ಬೇರೆ ಬೇರೆ ಅಂಗಗಳ ಮೇಲೆ ಓಡಾಡಲಾರಂಭಿಸಿದ. ಅಲ್ಲೊಂದು ಇಲ್ಲೊಂದು ಸೀಳಿ ನಿಂತ ಒಣ ತೊಗಟೆ ಕಿತ್ತು ನೆಲಕ್ಕುರುಳಿಸುವ. ಮರಳೆಯ (ಗೆದ್ದಲಿನ) ಮಣ್ಣು ಗೂಡನ್ನು ಒಡೆದು ಒಳಗಿರುವ ಪ್ರೋಟೀನ್ ಭರಿತ ಕೀಟಗಳನ್ನು ಭಕ್ಷಿಸುವ. ಹತ್ತಿರಲ್ಲೇ ಅಡಗಿದ ಓತಿಕಾಟವನ್ನು ಕಂಡು ಬೆಚ್ಚಿ ಬೀಳುವ. ನಂತರ ಅರೇ! ಇದಕ್ಕೆ ಅಂಜಿದೆನಲ್ಲ! ಎಂದು ಮರುಗಿ ಅದನ್ನು ಶಿಕ್ಷಿಸಲು ಅಟ್ಟಿಸಿಕೊಂಡು ಹೋಗುವಾಗ, ಓತಿಕಾಟ ಹೆದರಿ ಮರವನ್ನೆಲ್ಲ ಸುತ್ತುತ್ತ ಮೇಲೆ ಕೆಳಗೆ ಓಡುವಾಗ ಕರಿಯಪ್ಪ ಅದನ್ನು ಹಿಂಬಾಲಿಸುವುದನ್ನು ನೋಡುವುದೇ ಮೋಜು. ಈ ಕಾಕ ರಾಜ ಸುಲಭದಲ್ಲಿ ಸೋಲುವವನಲ್ಲ! ಎಂದು ಅರಿತ ಓತಿಕಾಟ,

ನೆಲದ ಮೇಲೆ ಹಬ್ಬಿದ ಮುಳ್ಳು ಪೊದೆಯಲ್ಲಿ ಸೇರಿದಾಗಲೇ ಕರಿಯಪ್ಪ ಸ್ವಸ್ಥಾನಕ್ಕೆ ಹಿಂದಿರುಗುವ. ಕೆಲವೊಮ್ಮೆ ಮುಟ್ಟಾಟದಲ್ಲಿ ಮೈಮರೆತ ಇಣಚಿಗಳು ಕರಿಯಣ್ಣನ ಅಸ್ತಿತ್ವವನ್ನು ಅಷ್ಟಾಗಿ ಲಕ್ಷ್ಯಕ್ಕೆ ತಂದುಕೊಳ್ಳದೇ ಅವನನ್ನು ಡಿಕ್ಕಿ ಹೊಡೆದು ಬಿಡುತ್ತವೆ. ಒಮ್ಮೆ ಇದರಿಂದ ಮುನಿದು ಒಂದನ್ನು ಶಿಕ್ಷಿಸಲು ಹೊರಟಾಗ ಕಂಗಾಲಾದ ಶ್ರೀರಾಮನ ಪುಟ್ಟ ಅನುಯಾಯಿ, ದಿಕ್ಕೆಟ್ಟು ಓಡಾಡಲಾರಂಭಿಸಿತು. ಕೊನೆಗೊಮ್ಮೆ ತೊಗಟೆಯ ಪೊಳ್ಳಿನಲ್ಲಿ ಸೇರಿಕೊಂಡು ಮಿಸುಕಾಡದೇ ಕುಳಿತಾಗಲೇ, ಅದರ ಇರವನ್ನು ಗುರುತಿಸಲಾಗದೇ ಕರಿಯಪ್ಪ ಸ್ವಸ್ಥಾನಕ್ಕೆ ಮರಳಿದ್ದು. ನಂತರ ಇಣಚಿಗಳ ಆಟ ಮುಂದರಿದರೂ ಅವು ಬಳಸು ದಾರಿಯನ್ನು ಆರಿಸಿದವು.

ಕಪ್ಪೆ ಪ್ರಿಯ

ಬೇಟೆಯಾಡುವದೆಂದರೆ ಕರಿಯನಿಗೆ ಬಲು ಜೀವ. ಕಪ್ಪೆಯೊಂದು ಕೀಟಕ್ಕೆ ಆಸೆ ಪಟ್ಟು ಜಿಗಿದಾಕ್ಷಣ, ವಾಯು ವೇಗದಿಂದ ಭೂಮಿಗಿಳಿದು, ಬೇಟೆಯೊಡನೆ ಮರಕ್ಕೆ ಹಿಂದಿರುಗಿದ. ಮಂಡೂಕ ರಾಜ, "ಜೀವದಾನ ಮಾಡಯ್ಯ, ಮಕ್ಕಳು, ಮರಿಮಕ್ಕಳೆಲ್ಲ ನಿನ್ನ ಹೆಸರಿನಿಂದ ಬದುಕೋತವೆ" ಎಂದು ಚೀತ್ಕಾರ ಮಾಡುತ್ತಿದ್ದರೂ ಕೇಳದೇ ಕಲ್ಲೆದೆಯವನಾದ. ಎರಡೂ ಪಂಜುಗಳಿಂದ ಮರವನ್ನು ಕಪ್ಪೆಯೊಂದಿಗೆ ಗಟ್ಟಿಯಾಗಿ ಹಿಡಿದು, ಕಪ್ಪೆಯ ಒದ್ದಾಟಕ್ಕೆ ಆಸ್ಪದ ಕೊಡದೇ ಕುಕ್ಕಲಾರಂಭಿಸಿತು. ಇನ್ನೇನು ಊಟ ಪ್ರಾರಂಭಿಸಬೇಕೆನ್ನುವುದರೊಳಗೆ ಕಪಟಣ್ಣ, ತನಗೂ ಅದರಲ್ಲಿ ಪಾಲು ಬೇಕೆಂದು ಏರಿ ಬಂದ. ಎರಡಕ್ಕೂ ಕೊಕ್ಕಿನ ಯುದ್ಧ ಪ್ರಾರಂಭವಾಗಿ ಜೊತೆಗೇ ನೆಲಕ್ಕುರುಳಿದವು. ಕರಿಯಪ್ಪ ತನ್ನ ಮೊಂಡಾದ ಚುಂಚುವಿನಿಂದಲೇ ಕಪಟಣ್ಣನ ಎರಡು ಗರಿಗಳನ್ನು ಕಿತ್ತ. ಹೀಗಾಗಿ ಆತ ಪಲಾಯನ ಮಾಡಿದ. ನಂತರ ಯಾವ ಅಡ್ಡಿ ಆತಂಕಗಳೂ ಇಲ್ಲದ್ದರಿಂದ ಭೋಜನ ಸರಾಗವಾಯಿತು. ಇಲಿ ಕಂಡಾಗಲೆಲ್ಲ ಕರಿಯ, ಬಾಯಿ ಚಪ್ಪರಿಸುವದುಂಟು. ಶೆಟ್ಟರ ಪತ್ನಿ ಆಗಾಗ ಪಂಜರದಲ್ಲಿ ಸಿಕ್ಕಿಕೊಂಡಿದ್ದ ಇಲಿ ಮರಿಯನ್ನು ಕರಿಯನಿಗಾಗಿ ಮೀಸಲಿಡುತ್ತಾಳೆ. ಪಂಜರದಿಂದ ಹೊರ ಬಿದ್ದೊಡನೆ ಮರಿ, ಆಸರೆ ಹುಡುಕಿ ಧಾವಿಸುತ್ತಿದ್ದಾಗ ಕರಿಯ ಅದರ ಬಾಲವನ್ನು ಚೊಂಚಿನಲ್ಲಿ ಹಿಡಿದು ಸುಲಭವಾಗಿ ತಪ್ಪಿಸಿಕೊಳ್ಳದ ಸ್ಥಳದಲ್ಲಿ ಇಡುತ್ತಾನೆ. ತನಗೆ ಕೊಲ್ಲುವುದರಲ್ಲಿ ಆಸಕ್ತಿ ಇಲ್ಲವೇನೋ ಎಂಬ ಭಾವ ತಳೆದು ಮರದ ಮೇಲೆ ಕೂತಿರುತ್ತಾನೆ. ಇಲಿ ಬದುಕಿ ಉಳಿಯುವ ಯತ್ನವನ್ನು ಇನ್ನೊಮ್ಮೆ ಮಾಡಿದಾಗ, ತಿರುಗಿ ಅದೇ ನಾಟಕ. ಅರ್ಧ ತಾಸಾದರೂ ಈ ಬಗೆಯ ನಾಟಕ ಮುಂದರಿಯುತ್ತಿದ್ದರೇ ಆತನಿಗೆ ನೆಮ್ಮದಿ. ಇದರಿಂದ ನಿತ್ರಾಣದಿಂದ ಮರಿ ಮಿಸುಕಾಡದೇ ಬಿದ್ದುಕೊಂಡಾಗ, ಅದನ್ನು ಮರದ ಮೇಲೆ ಎತ್ತಿಕೊಂಡು ಹೋಗಿ ಭೋಜನ ಪ್ರಾರಂಭಿಸುವ.

ಕರಿಯಪ್ಪನ ಲಯಬದ್ಧ ತಾಳಬದ್ಧ ಸಂಗೀತವನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಪ್ರಬಂಧವೊಂದನ್ನು ಬರೆದರೆ ಅದೊಂದು ಉತ್ತಮ ಸಂಶೋಧನಾ ಗ್ರಂಥವಾಗುವುದರಲ್ಲಿ ಸಂದೇಹವಿಲ್ಲ. ಆಹಾರ ಸಂಪಾದನೆಯಲ್ಲಿ, ಮಾನವನಿಂದ ಗಂಡಾಂತರದ ಶಂಕೆಯಿದ್ದಾಗ ಸಂಗಡಿಗನಿಗೆ ಕೊಡುವ ಕರೆ ಶಂಖನಾದದಂತೆ ಇದ್ದರೆ, ತಾನು ಸಂಪಾದಿಸಿದ ಭೋಜನವನ್ನು ಇನ್ನಿತರರು ಪಾಲುಗೊಳ್ಳದಂತೆ ಕೊಡುವ ಎಚ್ಚರಿಕೆ ಕಹಳೆಯಂತೆ

ಇರುತ್ತದೆ. ತಮ್ಮ ಸಮಾಜದ ಕಾನೂನು, ಕಟ್ಟಳೆ ಉಲ್ಲಂಘಿಸಿದವನ ಬಗ್ಗೆ ದೂರುಕೊಳ್ಳುವಾಗ ಗಗನ ವಿಹಾರಿಯಾಗಿ ಮಾಡುವ ಘಂಟಾಘೋಷವೇ ಬೇರೆ. ನವ ಯುವತಿಯನ್ನು ಬರಮಾಡಿಕೊಳ್ಳುವುದಕ್ಕೆ ಪುಕ್ಕ ರೆಕ್ಕೆಗಳನ್ನು ಬೀಸುತ್ತ, ಗೋಣು ಹಾಕುತ್ತ, ತೀರ ಮೆಲುವಾಗಿ ಕರ್, ಕಕ್! ಕಕ್ ಕರ್! ಎಂದು ಕರೆದಾಗ ಕಾಳಮ್ಮ ಈ ಕರೆಯಿಂದ ಮುಗ್ಧಳಾಗಿ ಬಂದೇಬಿಡುತ್ತಾಳೆ. ಕರಿಯ ಅವಳ ಮೈದಡವುತ್ತಾನೆ. ಹೇನು ಹೆಕ್ಕುತ್ತಾನೆ. ಪುಸಲಾಯಿಸಿ ದಟ್ಟ ಎಲೆಗಳ ಮರೆಯ ಏಕಾಂತಕ್ಕೆ ಕರೆದೊಯ್ಯುತ್ತಾನೆ. ಕೆಲವೇ ನಿಮಿಷಗಳಲ್ಲಿ ಆಹಾರದ ಅನ್ವೇಷಣೆಗೆ ಸತಿಯೊಂದಿಗೆ ಹೊರಡುತ್ತಾನೆ.

ಕರಿಯ ಎಂದೂ ರಾತ್ರಿಯನ್ನು ಅದೇ ಮರದ ಮೇಲೆ ಕಳೆಯುವುದಿಲ್ಲ. ಸೂರ್ಯಾಸ್ತದ ಪೂರ್ವದಲ್ಲಿಯೇ ಉತ್ತರ ದಿಕ್ಕಿಗೆ ಹಾರಿ ಹೋಗಿ ಬಿಡುವ. ಮಲ್ಲೇಶ್ವರದಿಂದ ಎರಡು ಕಿಲೋಮೀಟರ್ ದೂರದ ಯಶವಂತಪುರದ ಕೆಲವು ಮರಗಳು ನೂರಾರು ಕಾಗೆಗಳಿಗೆ ಇರುಳಲ್ಲಿ ಆಶ್ರಯ ಕೊಡುತ್ತವೆ. ಅವುಗಳಲ್ಲಿ ಕರಿಯನೂ ಒಬ್ಬನಿರಬಹುದು. ಅವುಗಳಿಗೆ ಶಾಶ್ವತ ಸ್ಥಾನವೊಂದು ಇರದಿದ್ದರಿಂದ ಪ್ರತಿ ದಿನವೂ ಯಾರೂ ಎಲ್ಲಿ ವಿರಮಿಸಬೇಕೆಂಬುದರ ಬಗ್ಗೆ ಕೂಗಾಟ, ಚೀರಾಟ, ಕಾದಾಟಗಳಾದ ನಂತರವೇ ಅವು ನಿದ್ದೆ ಹೋಗುವುವು. ತಂದೆಯಾಗಲಿರುವ ಕರಿಯ ತನ್ನ ಪ್ರೀತಿಯ ತೂಗುಮರದಲ್ಲೇ ಗೂಡು ಕಟ್ಟಲು ನಿರ್ಧರಿಸಿ ಕಾರ್ಯೋನ್ಮುಖಿಯಾದ. ಭಾವಿ ಪೀಳಿಗೆಗೂ ತನ್ನಂತೆ ತೂಗಿಕೊಳ್ಳುವದು ಇಷ್ಟವಾಗಿರಬಹುದೆಂಬ ಗ್ರಹಿಕೆಯಲ್ಲಿ, ಗಾಳಿ ಬೀಸಿದಾಗೊಮ್ಮೆ ತಲೆದೂಗುವ ರೆಂಬೆಯೊಂದರ ಮೇಲೆ ಪತ್ನಿಯ ಸಹಾಯದಿಂದ ಗೂಡು ಕಟ್ಟಲಾರಂಭಿಸಿದ. ಮೂರು ಸಲ, ಅರ್ಧ ನಿರ್ಮಾಣವಾಗಿದ್ದ ಗೂಡು ಉರುಳಿ ನೆಲ ಸೇರಿತು. ನಂತರ ಪತ್ನಿಯ ಸಲಹೆಗೆ ಕಿವಿಗೊಟ್ಟು, ಸುರಕ್ಷಿತ ಸ್ಥಳದಲ್ಲಿ ಬೇರೊಂದು ಗೂಡು ಕಟ್ಟಿದ. ಗೃಹಪ್ರವೇಶ ಮಾಡಿದ ನಂತರ, ಗೃಹಸ್ಥನಿಗೆ ವಿರಾಮವಾಗಿ ಕುಳಿತು ತೂಕಡಿಸಿ ಹಗಲುಗನಸು ಕಾಣುವಾಗ ಪ್ರಪಂಚವೇ ಮರೆತುಬಿಡುತ್ತದೆ. ನಾಲ್ಕು ಮೊಟ್ಟೆಗಳನ್ನಿಟ್ಟು ಕಾವು ಕೊಡಲು ಪತ್ನಿ ಕುಳಿತಾಗ ಸರ್ಪಕಾವಲಿಡುವ ದಿನಗಳಲ್ಲಂತೂ ಅನ್ನ, ನೀರು, ಕ್ರೀಡೆ ಮನೋರಂಜನೆಗಳನ್ನು ಅಲಕ್ಷಿಸಿದ. ರಣಹದ್ದು, ಕೋತಿ, ಹಾವುಗಳನ್ನು ಸನಿಹದಲ್ಲಿ ಕಂಡಾಗೊಮ್ಮೆ ತನ್ನ ವಂಶಜರೊಂದಿಗೆ ಅವುಗಳ ಮೇಲೆ ಎರಗಿ ಪಲಾಯನ ಮಾಡುವ ತನಕ ಹಿಂಬಾಲಿಸುತ್ತಿದ್ದ. ಓತಿಕಾಟ, ಇಣಚಿಗಳು ಆ ದಾರಿಯಿಂದ ಹೊರಟಿದ್ದರೆ, ಅವುಗಳನ್ನು ಮೋಕ್ಷಕ್ಕೆ ಕಳಿಸುವೆ ಎಂದು ಬೆದರಿಸುತ್ತಿದ್ದ. ಇಷ್ಟಾದರೂ ಎರಡು ಮೊಟ್ಟೆಗಳನ್ನು ಮಾರುತನು ನೆಲಕ್ಕುರುಳಿಸಿದಾಗ ಕರಿಯನಿಂದ ಏನೂ ಮಾಡಲಾಗಲಿಲ್ಲ. ಮೊದಲ ಮರಿ ಹೊರ ಬಂದಾಗ, ಕರ್! ಕರ್! ಎಂದು ಅಪ್ಪನನ್ನು ಗುರುತಿಸಿದಾಗ ಕರಿಯಪ್ಪನ ಆನಂದಕ್ಕೆ ಕೊನೆ ಮೊದಲಿಲ್ಲ.

ಕಷ್ಟ ಪರಂಪರೆ

ಬೆಳೆಯುತ್ತಿರುವ ಕುಟುಂಬಕ್ಕೆ ಆಹಾರ ಪೂರೈಕೆಯ ಜವಾಬ್ದಾರಿ ಕರಿಯನಿಗೆ ಕಷ್ಟಕ್ಕಿಟ್ಟುಕೊಂಡಿತು. ಶುಚಿ ರುಚಿಗಳಿದ್ದ ತಿಂಡಿ ತಿನಿಸುಗಳನ್ನು ಮರೆತು, ಸುಲಭವಾಗಿ ಸಿಗುವಂತಹ ಕಡೆಗೆ ಹಾರಬೇಕಾಯಿತು. ಜೀನಸು ಅಂಗಡಿಯ ಶೆಟ್ಟರು ಆದಾಯಕರ ಖಾತೆಗಾಗಿ ಖೋಟಾ ಲೆಕ್ಕಾಚಾರ ಬರೆಯುವುದರಲ್ಲಿ ಮೈ ಮರೆತಾಗ ಕಾಳುಕಡಿಗಳಿಗೆ

ಬಾಯಿ ಹಾಕುವುದನ್ನು ರೂಢಿಸಿಕೊಂಡಿತು. ಹೆದರಿಸಲು ಇಟ್ಟ ದೊಣ್ಣೆ, ನೇತುಹಾಕಿದ ಕರಿ ಗೊಂಬೆಗಳು ನಿಷ್ಪ್ರಯೋಜಕವೆಂದು ಕಟ್ಟ ಬಲು ಬೇಗ ಅರಿಯುವಂತಾಯಿತು. ಒಂದು ಮುಂಜಾನೆ ಟೇಬಲ್ಲಿನ ಅಂಚಿನಲ್ಲಿಟ್ಟ ಭಜಿಯೊಂದರ ಮೇಲೆ ಕಾಕದೃಷ್ಟಿ ಬಿತ್ತು. ಬೆಳೆಯುವ ಮರಿಗಳು ಈ ತಿಂಡಿಯಿಂದ ಖುಷಿಪಟ್ಟಾವೆಂದು ಪಿತೃ ವಾತ್ಸಲ್ಯದಿಂದ, ಶೆಟ್ಟರು ನೋಟಿನ ಕಂತೆ ಎಣಿಸುವದರಲ್ಲಿ ತಲ್ಲೀನರಾದಾಗ, ಕರಿಯ ಮಿಂಚಿನ ವೇಗದಿಂದ ಅಂಗಡಿಗೆ ನುಗ್ಗಿ ಭಜಿ ಕಚ್ಚಿಕೊಳ್ಳಬೇಕೆಂದಿರುವಲ್ಲಿ ಏನೋ 'ಛಟಲ್' ಎಂದು ಶಬ್ದವಾಯಿತು. ಮರುಕ್ಷಣದಲ್ಲಿ ಶೆಟ್ಟರು ಬೇಕಾಗಿಯೇ ಇಟ್ಟಿದ್ದ ಇಲಿಕತ್ತರಿಯಲ್ಲಿ ಕರಿಯಪ್ಪನ ಕಾಲು ಸಿಕ್ಕಿಕೊಂಡಿತ್ತು. ಈ ಕ್ಷಣಕ್ಕಾಗಿ ಹೊಂಚು ಹಾಕಿದ ಅಂಗಡಿಕಾರ ಶಿಕ್ಷಿಸಲು ನಾಗಬೆತ್ತದೊಂದಿಗೆ ಹೊರಬಂದ. ಬದುಕಿಕೊಳ್ಳಲು, ಸರ್ವ ಶಕ್ತಿ ಬಳಸಿ, ಕತ್ತರಿಯೊಂದಿಗೇ ಜಿಗಿಯಲು ಯತ್ನಿಸಿದಾಗ ಅದನ್ನು ಮೊಳೆಯೊಂದಕ್ಕೆ ದಾರದಿಂದ ಬಿಗಿದಿದ್ದರಿಂದ ಅರೆ ಕಾಲು ಅದರಲ್ಲಿಯೇ ಉಳಿದುಕೊಂಡಿತು. ಶೆಟ್ಟಿಯ ಕಪಟಕ್ಕೆ ಬಲಿಯಾದ. ಕಾಲು ಕಳೆದುಕೊಂಡ, ಅವಮಾನದಿಂದ ಇಡೀ ದಿನ ಕರಿಯ ಗೂಡು ಬಿಟ್ಟು ಈಚೆಗೆ ಬರಲೇ ಇಲ್ಲ.

ಕರಿಯ ಅವಿತುಕೊಂಡ ನಿಜವಾದ ಕಾರಣ ಅಂದು ಸಂಜೆ ಅರಿಯುವಂತಾಯಿತು. ಅದು ಹೇಗೋ ಅವನು ಸಿಕ್ಕಿಕೊಂಡ ವಾರ್ತೆ ಕಾಕ ಸಮಾಜದಲ್ಲಿ ಹರಡಿಕೊಂಡು ಬಿಟ್ಟಿತು. ಮುಖಂಡರೂ, ಕಾ, ಕಾ ಕರೆಕೊಟ್ಟು ಮಹಾಸಭೆ ಕರೆದರು. ಚಿಟ್ಟೂರರ ಬಂಗಲೆಯ ಪಾರ್ಶ್ವದಲ್ಲಿದ್ದ ಮಾವು, ಹಲಸು, ಬೇವಿನ ಮರಗಳಲ್ಲಿ ಸದಸ್ಯರು ಸೇರಿದಾಗ, ನ್ಯಾಯ ವಿಚಾರಣೆ ಪ್ರಾರಂಭವಾಯಿತು. ಕರಿಯ, ಯಾವುದೇ ವಿವರಣೆ ಕೊಡದೇ ತಲೆತಗ್ಗಿಸಿ ಕುಳಿತಿದ್ದರಿಂದ ಅವನು ಕಾಗೆಯ ಸಮಾಜಕ್ಕೆ ತಂದ ಕಳಂಕಕ್ಕಾಗಿ ರೆಕ್ಕೆಗಳಿಂದ ಎರಡು ಗರಿಗಳನ್ನು ಕೀಳಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಕ್ಷಣಾರ್ಧದಲ್ಲಿ ನಾಲ್ಕೈದು ಕಾಗೆಗಳು ಅವನ ಮೇಲೆ ಎರಗಿ ಶಿಕ್ಷಿಸಿಯೇ ಬಿಟ್ಟವು. ಇದರಿಂದ ಅವನ ಸ್ಥಿತಿ ಶೋಚನೀಯವಾಗಿ ಆಹಾರ ದೊರಕಿಸುವುದರಲ್ಲಿ ಇನ್ನಿತರರೊಂದಿಗೆ ಸ್ಪರ್ಧಿಸುವುದು ತೀರ ದುಸ್ತರವಾಯಿತು. ಹಾರುವುದು ಕಷ್ಟವೆಂದರೆ, ಒಂಟಿ ಕಾಲಿನಲ್ಲಿ ಸಮತೋಲನದಲ್ಲಿ ಆಹಾರಕ್ಕಾಗಿ ಕಾದು ಕೂಡ್ರುವದು ಇನ್ನೂ ಕಠಿಣವಾಯಿತು. ಕಾಕ ಸಮಾಜದಲ್ಲಿ ಅಂಗವಿಕಲರಿಗೆ ವಿಶೇಷ ಸವಲತ್ತುಗಳು ಇಲ್ಲವಾದ್ದರಿಂದ, ಕರಿಯ ಅತ್ಯಂತ ಜಾಣಾಕ್ಷತನದಿಂದ ಸುತ್ತಮುತ್ತಲಿನ ಮನೆಗಳಲ್ಲಿಯ ಜನರ ಓಡಾಟಗಳನ್ನು ಅಭ್ಯಸಿಸಲಾರಂಭಿಸಿದ. ಇದರಿಂದಾಗಿ ತಿಂಡಿ ತಿನಿಸುಗಳನ್ನು ದೊರಕಿಸುವುದರಲ್ಲಿ ಹೆಚ್ಚಿನ ಸಹಾಯವಾಗಲಾರಂಭಿಸಿತು. ಡಿಸೋಜನು ರವಿವಾರ ತಂದ ಮಟನ್ ತುಂಡುಗಳನ್ನು ಮುಚ್ಚಿಡಲು ಮಡದಿ ಒಂದು ಕ್ಷಣ ಮರೆತರೆ ಕರಿಯ, ಕಳ್ಳ ಹೆಜ್ಜೆಯಿಂದ ಮನೆಯನ್ನು ಪ್ರವೇಶಿಸಿ ಒಂದು ತುಂಡು ಕಚ್ಚಿಕೊಂಡು ಹಾರಿದಾಗಲೇ ಮೇರಿಗೆ ತನ್ನ ಅಜಾಗ್ರತೆ ಲಕ್ಷ್ಯಕ್ಕೆ ಬಂದಿತು. ಮರುದಿನ ಪ್ರಭುಗಳ ಮನೆಯಿಂದ ಅರೆತೆಂಗಿನ ಹೋಳನ್ನು ಕಚ್ಚಿಕೊಂಡೇ ಹಾರಿತು. ಈ ಕಳ್ಳತನ ತಪ್ಪಿಸುವುದಕ್ಕಾಗಿ ನೆರೆಹೊರೆಯವರು ಸುಲಭವಾಗಿ ಎಟುಕದ ಸ್ಥಳದಲ್ಲಿ ಆಮಿಷವಾಗಿ ಆಹಾರವಸ್ತುಗಳನ್ನು ಇಡಲಾರಂಭಿಸಿದಾಗ ಅವು ಇರುವೆಗಳ ಸೊತ್ತಾದವೆ ವಿನಾ ಕರಿಯ ಅವುಗಳಲ್ಲಿ ಇಷ್ಟೂ ಆಸಕ್ತಿ ತೋರಿಸಲಿಲ್ಲ.

ಒಂದೇ ತಿಂಗಳು ಕಳೆಯುವುದರೊಳಗೆ ಕರಿಯ ತನ್ನ ವಿಕಲತೆಗೆ ಹೊಂದಿಕೊಂಡು ಜೀವಿಸುವುದನ್ನು ರೂಢಿ ಮಾಡಿಕೊಂಡುಬಿಟ್ಟ. ಹಿಂದಿನ ಸಂಗೀತ ಸಭೆ. ಕಪ್ಪೆ, ಇಲಿಗಳ ಬೇಟೆ, ಮೃಗಗಳೊಂದಿಗೆ ಕಾದಾಟ, ಗಾಳಿ ಬೀಸಿದಾಗ ರೆಂಬೆಯ ಜೋಕಾಲಿಯಾಟಗಳನ್ನು ತಿರುಗಿ ಪ್ರಾರಂಭಿಸಿದ. ನಲ್ಲೆಯೊಂದಿಗಿರಲಿ, ಸ್ನಾನಕ್ಕೆ ಇಳಿದಿರಲಿ, ಜೊತೆಯವರು ಅವನನ್ನು ಕಡೆಗಾಣಿಸಲಿಲ್ಲ; ಪರಿಹಾಸ್ಯ ಮಾಡಲಿಲ್ಲ. ಆದ್ದರಿಂದ ಮಾನವ, 'ಪಾಪ! ಕುಂಟು ಕಾಗೆ' ಎಂದು ತೋರಿಕೆಯ ಮರುಕ ತೋರಿದಾಗ ಅವನಿಗೆ ರೇಗುತ್ತಿತ್ತು. ನಾಲ್ಕು ಕಾಳು ತಾನು ತಿಂದರೆ ಕೆಟ್ಟ ಬಡವನಾಗುವದು ಅಷ್ಟರಲ್ಲಿಯೇ ಇತ್ತು ಎಂಬ ತರ್ಕ ಅಲ್ಲಗಳೆಯುವಂತಿರಲಿಲ್ಲ. ಅಂದು ಸ್ನಾನ ಮುಗಿಸಿ ಸ್ವಸ್ಥಾನಕ್ಕೆ ಮರಳುತ್ತಿದ್ದ ಕರಿಯ, ಶಾಲೆ ತಪ್ಪಿಸಿ ಬರುತ್ತಿದ್ದ ಪೋಲಿ ಹುಡುಗರ ಲಕ್ಷ್ಯ ಸೆಳೆದ. ಒಬ್ಬ ಛೂಹಾಯಿಸಿದ. ಇನ್ನೊಬ್ಬ ಕಲ್ಲು ತೂರಿದ. ಮಗದೊಬ್ಬ ಕೈಚೀಲದಲ್ಲಿ ಅಡಗಿಸಿಟ್ಟ ಚಿಟ್‌ಬಿಲ್ಲನ್ನು ಹೊರಗೆಳೆದು ಗುರಿಯಿಟ್ಟು ಕಲ್ಲು ಹೊಡೆದ ರಭಸಕ್ಕೆ ಕರಿಯ ಜ್ಞಾನ ತಪ್ಪಿ ಕೆಳಗುರುಳಿದ. ಅದಕ್ಕೆ ಒಂದಿಷ್ಟು ಗಾಳಿ, ನೀರು ಪೂರೈಸುವ ಬದಲಾಗಿ ಪಡ್ಡೆ ಹುಡುಗರು ಅವನ ಕೊಲೆ ಮಾಡಿಯೇಬಿಟ್ಟರು. ಅಂದು ಮನೆಗೆ ಹಿಂದಿರುಗಿದಾಗ, ಕಾಕ-ಕೋಟಿಯ ಚೀತ್ಕಾರದಿಂದ ಏನೋ ಅನಾಹುತ ನಡೆದಿರಬೇಕೆಂದು ವಿಚಾರಿಸಿದೆ. ಮಡದಿಯಿಂದ ವಿವರ ತಿಳಿದು ಕಳವಳವಾಯಿತು. ಧಾವಿಸಿ ಕರಿಯನ ಕಳೇವರವೆತ್ತಿದಾಗ ತಣ್ಣಗೆ ಕೊರೆಯುತ್ತಿತ್ತು. ಸತ್ತ ಕರಿಯನಿಗೆ ಈ ಕರುಣೆ ಬೇಕಿಲ್ಲವೆಂಬ ಪ್ರತಿಭಟನೆಯಿಂದ ಕಾಗೆಗಳು ಆಕ್ರಮಿಸಲು ಬಂದವು. ಅಂತೆಂತೋ ಹಾಗೇ ಅದನ್ನು ಬಿಟ್ಟು ಹಿಂದಿರುಗಬೇಕಾಯಿತು. ಮರುದಿನ ಬೆಳಗ್ಗೆ ಕರಿ ಇರುವೆಗಳು ಕರಿಯನ ಕಳೇಬರದ ಮೇಲೆ ಭೋಜನ ಕೂಟ ನಡೆಸಿದ್ದವು. ಇದು ಮನಸ್ಸಿಗೆ ಬಾರದೆ ಒಂದಡಿ ಹೊಂಡ ತೋಡಿ, ಕರಿಯನ ಅಂತ್ಯಸಂಸ್ಕಾರ ಮಾಡಿದಾಗ ಏನೋ ಕರ್ತವ್ಯ ನೆರವೇರಿಸಿದ ನೆಮ್ಮದಿಯೆನಿಸಿತು. ಕರಿಯ ತೂಗಿಕೊಳ್ಳುತ್ತಿದ್ದ ರೆಂಬೆ, ಮಣ್ಣಾಗಿ ಹೋದ ನೆಲ ನೋಡಿದಾಗೊಮ್ಮೆ ಆತನ ನೆನಪಾಗಿ ಕಸಿವಿಸಿಯಾಗುವುದು.

3. ಹಕ್ಕಿಯಾಗಿ ಹಾರಿದರೂ ಬುದ್ಧಿಜೀವಿಯಾಗಲಿಲ್ಲ

ನಾವು ಸಣ್ಣ ಹಳ್ಳಿಗಳಲ್ಲಿಯೇ ಇರಲಿ, ದೊಡ್ಡ ಪಟ್ಟಣಗಳಲ್ಲಿಯೇ ವಾಸಿಸಲಿ, ನಮ್ಮ ಮನೆಯಲ್ಲಿ ಅಥವಾ ಪರಿಸರದಲ್ಲಿರುವ ಪ್ರಾಣಿಗಳನ್ನು ಅರಿಯಲು ಯತ್ನಿಸಬೇಕು. ಇವುಗಳಲ್ಲಿ ಎಷ್ಟೋ ನಿರುಪದ್ರವಿಯಾಗಿರುತ್ತವೆ. ಆದರೆ ಅವಕ್ಕೆ ಹೆದರುವವರಿದ್ದಾರೆ, ದ್ವೇಷಿಸುವವರಿದ್ದಾರೆ. ಅಂತೆಯೇ ಅಂಥವರ ಕಣ್ಣುಗಳಿಗೆ ಇವು ಗೋಚರಿಸುವುದಿಲ್ಲ. ಈ ಕರ್ಮಯೋಗಿಗಳು ತಮ್ಮ ದಿನಚರಿಯಲ್ಲಿ ಮೈಮರೆತಾಗ ನಿರೀಕ್ಷಿಸಿದರೆ ಅವುಗಳ ಜೀವನದ ಗುಟ್ಟು ತಿಳಿದು ನಮ್ಮ ಜೀವನಕ್ಕೂ ಹೆಚ್ಚಿನ ಅರ್ಥ ಬರುವುದು. ನಮ್ಮನ್ನು ಬಿಟ್ಟು ಉಳಿದ ಜೀವಿಗಳಿಗೆ ಶಾಂತಿಯುತ ಜೀವನ ನಡೆಸಲು ಅಧಿಕಾರವಿಲ್ಲ! ಎಂಬ ಭ್ರಮೆಯಿಂದ ಅವುಗಳನ್ನು ಕೊಲ್ಲದೆ ಸ್ನೇಹದ ದೃಷ್ಟಿಯಿಂದ ನೋಡಲು ಕಲಿಯಬೇಕು.

ಜೀವಿಗಳಲ್ಲಿ ಎರಡು ವಿಧ

ಜಗತ್ತಿನ ಜೀವಕೋಟಿಯಲ್ಲಿ ಬೆನ್ನೆಲುಬು ಇದ್ದವು ಮತ್ತು ಬೆನ್ನೆಲುಬು ಇಲ್ಲದವು ಹೀಗೆ ಎರಡು ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ. ಪೆರಮೇಶಿಯಮ್, ಸ್ಪಂಜ್, ಕೋರಲ್, choral–ಹವಳ?) ಜಂತು, ಎರೆಹುಳ, ಕೀಟ, ಏಡಿ, ಚೇಳು ಮುಂತಾದವುಗಳು ಪ್ರಥಮ ವರ್ಗಕ್ಕೆ ಸೇರಿದವು. ಜೇಡ ನಮ್ಮ ಮನೆಯಲ್ಲೇ ವಾಸಿಸುವ ಒಂದು ಅಷ್ಟಪಾದಿ. ಜೇಡ ತನ್ನ ಉದರದಿಂದ ಹೊರಬೀಳುವ ರೇಶಿಮೆ ಎಳೆಯಂತಹ ಪದಾರ್ಥದಿಂದ ಬಲೆಯನ್ನು ನಿರ್ಮಿಸುವುದು. ಎಷ್ಟೋ ಸಲ ಅದರ ಬಲೆಯನ್ನು ಕಿತ್ತೊಗೆದರೂ ಅದು ಎಳ್ಳಷ್ಟೂ ಹಿಂಜರಿಯದೇ ಮತ್ತೆ ಮತ್ತೆ ಬಲೆಯನ್ನು ಹೆಣೆಯುವುದು. ತಾನು ಸುರಕ್ಷಿತವಾಗಿದ್ದುಕೊಂಡು ಸುಲಭವಾಗಿ ಆಹಾರ ದೊರೆಯುವ ಸ್ಥಳವನ್ನು ಗೊತ್ತುಪಡಿಸಿಕೊಂಡು ಒಂದು ವಸ್ತುವಿನಿಂದ ಇನ್ನೊಂದಕ್ಕೆ ಜಿಗಿದು ತನ್ನ ನಿವಾಸದ ಮೊದಲನೇ ಎಳೆಯನ್ನು ಜೋಡಿಸುವುದು. ನಂತರ ಈ ಎಳೆಯ ಆಧಾರದಿಂದ ಉಳಿದ ಎಳೆಗಳನ್ನು ಹರಡಿ ಅಷ್ಟಕೋನ, ದಶ ಕೋನಗಳುಳ್ಳ ಗೂಡನ್ನು ನಿರ್ಮಿಸಿ ಮಧ್ಯದಲ್ಲಿ ಕುಳಿತು, ತನ್ನ ಬೇಟೆ ನಡೆಸುವುದು. ಹಾರಾಡುವ ಕೀಟಗಳು ಹಾರುತ್ತ ಬರುವಾಗ, ಕಣ್ಣಿಗೆ ಕಾಣದ ಬಲೆಯಲ್ಲಿ ಸಿಕ್ಕಿಕೊಂಡು ಒದ್ದಾಡುವಾಗ ಜೇಡ ಧಾವಿಸಿ ಬಂದು ಇನ್ನಷ್ಟು ಎಳೆಗಳನ್ನು ಅದಕ್ಕೆ ಸುತ್ತಿ ಕೈಕಾಲು–ರೆಕ್ಕೆಗಳನ್ನು ಅಲ್ಲಾಡಿಸಲು ಬಾರದಂತೆ ಮಾಡುವುದು. ನಂತರ ಕೀಟದ ಸತ್ವವನ್ನೆಲ್ಲ ಹೀರಿಕೊಂಡು ಹೊರಕವಚವನ್ನು ಒಗೆದು ಬಿಡುವುದು. ಆಧುನಿಕ ಮನೆಗಳಲ್ಲಿ ಜೇಡನ ಬಲೆ ಅಸಹ್ಯವಾಗಿ ಕಂಡರೂ ಅವುಗಳು ಅಸಂಖ್ಯ ಕೀಟಗಳನ್ನು ನಾಶಮಾಡುವವು ಎನ್ನುವುದನ್ನು ಮರೆಯಬಾರದು.

ಎಲ್ಲ ಜೀವಿಗಳ ಪೂರ್ವಜರು(?) ಮೊದಲು ನೀರಿನಲ್ಲಿ ಜನ್ಮ ತಳೆದು ನಂತರ ಭೂಮಿಯ ಮೇಲೆ ಬಾಳಲು ಕಲಿತವು, ಎಂದು ಈಗ ಎಲ್ಲ ವಿಜ್ಞಾನಿಗಳು ಒಪ್ಪುತ್ತಾರೆ. ಆ ದೃಷ್ಟಿಯಿಂದ ನೋಡಿದರೆ ಮೀನುಗಳು ತಮ್ಮ ಪೂರ್ವಜರ ವಾಸಸ್ಥಾನ ಬಿಟ್ಟು ಬಹು ದೂರ ಹೋದಂತಿಲ್ಲ. ಇದಕ್ಕೆ ಪುಪ್ಪುಸವಿಲ್ಲದ್ದರಿಂದ ನೀರಿನ ಹೊರಗೆ ಉಸಿರಾಡಲಾರವು. ಸದಾ ತೆರೆದಿರುವ ಕಣ್ಣು, ಸಿಂಪು (Scale)ಗಳಿಂದ ಕೂಡಿದ ಚರ್ಮ, ಕೈ ಕಾಲುಗಳ ಬದಲಾಗಿ ಪಕ್ಕಗಳು (Fins) ಮತ್ತು ಬಾಲವೇ ಮುಖ್ಯವಾದ ಚಲನವಲನೆಯ ಸಾಧನ. ಎರಡೇ ಕೊಠಡಿಗಳುಳ್ಳ ಹೃದಯ ಇದರ ಶರೀರದ ಪ್ರಮುಖ ಅಂಗವಾಗಿದೆ. ಮಹಾಸಾಗರದಿಂದ ಮಳೆಯ ಹೊಂಡದವರೆಗೆ ವಿವಿಧ ಆಕಾರ, ಬಣ್ಣ ಮತ್ತು ಉದ್ದಳತೆಯ ಮೀನುಗಳು ಕಂಡುಬರುವುವು. ಇವುಗಳಿಗೆ ಕಿವಿಗಳಿಲ್ಲದಿದ್ದರೂ ಮೈಮೇಲೆ ಸ್ಪರ್ಶರೇಖೆಯಿಂದಾಗಿ ಎಲ್ಲ ತರದ ಸದ್ದನ್ನೂ ಗುರುತಿಸಬಲ್ಲವು. ಅಂತೆಯೇ ಸ್ವಲ್ಪವೇ ಸಪ್ಪಳವಾದರೂ ಮೀನು ನೀರಿನಾಳಕ್ಕೆ ಹೋಗಿಬಿಡುವುದು. ಒಂದೆಡೆ ಕಾದು ನಿಂತು ಅದನ್ನು ನಿರೀಕ್ಷಿಸುತ್ತ ಇದ್ದರೆ ಅದು ತನ್ನ ಸಂಗಡಿಗರೊಂದಿಗೆ ಮೇಲಕ್ಕೆ ಬಂದು ಮನಸ್ವೀ ವಿಹಾರ ಮಾಡಿ ಸಿಕ್ಕ ಕ್ರಿಮಿಕೀಟಗಳನ್ನಾಗಲಿ ಸಸ್ಯಗಳನ್ನಾಗಲಿ ಭಕ್ಷಿಸಿ ಸುಖವಾಗಿ ಬಾಳಿ ಬದುಕುವುದು. ಮೀನುಗಳಲ್ಲಿ ಗಂಡು ಹೆಣ್ಣಿನ ಮಿಲನ ಬಹಳ ವಿರಳ. ಹೆಣ್ಣು ತನ್ನ ಸಾವಿರಾರು ತತ್ತಿಗಳನ್ನು ನೀರಿನಲ್ಲಿ ಬಿಟ್ಟರೂ ಅವುಗಳಲ್ಲಿ ಬದುಕುವುವು ತೀರ ಕಡಿಮೆ. ಗಾಜಿನ ಮನೆಗಳಲ್ಲಿ ಸಾಕಿದ ಸಣ್ಣ ಮೀನುಗಳು ಮಕ್ಕಳಿಗೂ ಹಿರಿಯರಿಗೂ ಜ್ಞಾನ ಹಾಗೂ ಮನೋರಂಜನೆಯ ಸಾಧನವಾಗ ಬಲ್ಲವು.

ಕಪ್ಪೆಯ ರೂಪಧಾರಣ

ಮೀನಿನಂತಹ ಆದಿ ಜೀವಿಗಳಿಗೆ ನೀರಿನ ಹೊರತಾಗಿ ಜಗತ್ತು ಹೇಗಿದೆ? ಎಂದು ತಿಳಿಯುವ ಅಭಿಲಾಷೆಯಾಗಿರಬೇಕು. ಆದರೆ ಅವುಗಳ ಅವಯವಗಳು ಭೂಮಿಯ ಮೇಲೆ ಒಮ್ಮೆಲೇ ಜೀವನ ಸಾಗಿಸಲು ಆತಂಕ ಒಡ್ಡಿದ್ದರಿಂದ ಬಾಲ್ಯವನ್ನು ನೀರಿನಲ್ಲಿ ಮೀನಿನಂತೆ ಪ್ರೌಢಾವಸ್ಥೆಯನ್ನು ಭೂಮಿಯ ಮೇಲೆ ಕಳೆಯಬಹುದಾದ ಜೀವ, ಕಪ್ಪೆಯ ರೂಪ ತಾಳಿ ಧರೆಗೆ ಬಂದಿತು. ಕಪ್ಪೆಗೆ ಪುಪ್ಪುಸದಿಂದ ಶ್ವಾಸೋಚ್ಛ್ವಾಸ ಮಾಡಲು ಮೂಗಿನ ಹೊಳ್ಳೆಗಳಿವೆ. ಕಣ್ಣುಗಳನ್ನು ಕಸಕಡ್ಡಿಗಳಿಂದ ಸಂರಕ್ಷಿಸಿಕೊಳ್ಳಲು ರೆಪ್ಪೆಗಳಿವೆ. ಸಪ್ಪಳವನ್ನು ಕೇಳಲು ಅಂತರ್ಗತ ಕಿವಿಗಳಿವೆ. ಸಿಂಪು (Scales) ಮಾತ್ರ ಇಲ್ಲ. ಈಗ ಅದು ಚತುಷ್ಪಾದಿಯ ರೂಪ ತಾಳಿದ್ದು ಕೈಕಾಲುಗಳೇ ಅದರ ಚಲನವಲನದ ಅವಯವಗಳಾಗಿವೆ. ಹೃದಯದಲ್ಲಿ ಮೂರು ಕೊಠಡಿಗಳಿರುವುದರಿಂದ ಶುದ್ಧ-ಅಶುದ್ಧ ರಕ್ತಗಳು ಮೀನಿನಂತೆ ಮಿಶ್ರವಾಗುವುದಿಲ್ಲ. ಮನೆಯ ಅಂಗಳದಲ್ಲಿ ಕಪ್ಪೆ ಎಷ್ಟು ದಿನ ವಾಸಿಸಿದರೂ ತತ್ತಿಯಿಡಲಿಕ್ಕೆ ನೀರಿಗೇನೇ ಧಾವಿಸಿ ಬರಬೇಕಾಗಬಹುದು. ಮಳೆಗಾಲದ ಆರಂಭದಲ್ಲಿ ಸುಸ್ವರದಿಂದ ಧ್ವನಿ ಮಾಡುತ್ತ ಗಂಡುಕಪ್ಪೆ, ಹೆಣ್ಣು ಕಪ್ಪೆಯನ್ನು ಕರೆಯುವುದು. ಅವು ಕೂಡುತ್ತಿದ್ದಂತೆ ತಾಯಿ, ಮೊಟ್ಟೆಗಳನ್ನು ಹೊರಗೆ ಹಾಕುವುದು. ಈ ಕಾರಣದಿಂದ ಮೊಟ್ಟೆಗಳ ಉತ್ಪಾದನೆ ಮೀನಿಗಿಂತ ಕಡಿಮೆ ಇರುವುದು. ವೃಕ್ಷಗಳ ಜೀವನವನ್ನು ಅಳವಡಿಸಿಕೊಂಡು 'ಮರಗಪ್ಪೆ'ಗಳೂ ಇರುವವು. ಇಂಥವುಗಳ ಮೈಮೇಲೆ

ಈಸಲು ಬೇಕಾಗುವ ಪರೆಯ ಬದಲಾಗಿ ಜಿಗಟು ಪದಾರ್ಥಗಳ ಗಂಟು ಇರುವದರಿಂದ ಎಂತಹ ನುಣುಪಾದ ಮರಗಳನ್ನೂ ಏರಬಲ್ಲವು. ಇಷ್ಟಾದರೂ ಈ ಕಪ್ಪೆಗಳು ಸಂತತಿ ನಿರ್ಮಾಣಕ್ಕಾಗಿ ಮರಳಿ ನೀರ ಕಡೆಗೇ ಧಾವಿಸಬೇಕಾಗುವುದು. ಕಪ್ಪೆಗಳನ್ನು ಮೀನುಗಳಿಗಿಂತ ಸುಲಭವಾಗಿ ಸಾಕಬಹುದು. ಒಂದು ಪಾತ್ರೆಯಲ್ಲಿ ನೀರನ್ನಿಟ್ಟು ಕೆಲವು ಕಲ್ಲುಗಳನ್ನಿಟ್ಟರೆ ಕಪ್ಪೆಗಳು ಸುಖವಾಗಿ ಬಾಳುವವು. ಯಾವ ಹುಳುಹುಪ್ಪಡಿಗಳನ್ನೂ ಅವು ತಿಂದು ತೇಗುವವು. ಆಹಾರವಿಲ್ಲದೆ ಬಹು ಕಾಲ ಬದುಕಬಲ್ಲವು. ಕಪ್ಪೆಗಳಲ್ಲಿ ನಿಶಾಚರ ಜಾತಿಯವೂ (Toad) ಉಂಟು. ಕಪ್ಪೆ-ಟೋಡ್‌ಗಳೂ ಕೂಡಿ ದಿನದ ವಿವಿಧ ಕಾಲಗಳಲ್ಲಿ ಸಾವಿರಾರು ವಿನಾಶಕಾರಿ ಹುಳುಹುಪ್ಪಡಿಗಳನ್ನು ಕೊಂದು ನಮ್ಮನ್ನು, ನಮ್ಮ ಬೆಳೆಗಳನ್ನು ಸಂರಕ್ಷಿಸುವದರಿಂದ ಇವುಗಳನ್ನು ಕೊಲ್ಲುವ ಬದಲಾಗಿ ಸಾಕಬೇಕು.

ಹಲ್ಲಿ_ಓತಿಕಾಟ

ಕೆಲ ಸಮಯ ನೀರು, ಮತ್ತೆ ಕೆಲ ಸಮಯ ಭೂಮಿಯ ಮೇಲೆ ಜೀವಿಸುವದು ಈ ಆದಿ ಜೀವಿಗಳಿಗೆ ಸೇರಲಿಲ್ಲ. ಅಂತೆಯೇ ಓತಿಕಾಟದ ರೂಪದಲ್ಲಿ ನೀರಿನ ಸಹವಾಸವನ್ನು ಸಂಪೂರ್ಣವಾಗಿ ತ್ಯಜಿಸಿ ಭೂಮಿಯ ಮೇಲೆಯೇ ವಾಸಿಸಲು ಪ್ರಾರಂಭಿಸಿದವು. ಹಾಗೆಯೇ ಚತುಷ್ಪಾದಗಳಿಂದ ತಮ್ಮ ಶರೀರವನ್ನು ಸೂರ್ಯನ ಪ್ರಖರ ಕಿರಣಗಳಿಂದ, ಕಾದ ಭೂಮಿಯಿಂದ ಮೇಲಕ್ಕೆ ಎತ್ತಿದವು. ಘ್ರಾಣೇಂದ್ರಿಯ ಮತ್ತು ಪುಪ್ಪುಸಗಳು ಭೂಮಿಯ ಮೇಲಿಣ ಜೀವನಕ್ಕಾಗಿಯೇ ಬೆಳೆದವು. ಕಣ್ಣುಗಳು ಆಹಾರ ಮತ್ತು ವೈರಿ ಯಾವ ದಿಕ್ಕಿನಿಂದ ಬಂದರೂ ಕಾಣುವಂತೆ ಚಲಿಸಲಾರಂಭಿಸಿದವು. ಹೊರದೊಗಲು ಆರ್ದ್ರತೆಯಿಂದ ಮುಕ್ತವಾಯಿತು. ಭೂಮಿಯ ವಸ್ತುಗಳನ್ನು ಹಿಡಿಯಲು ಉಗುರುಗಳು ಬಂದವು. ಚಲನವಲನದಲ್ಲಿಯೂ ಶೀಘ್ರತೆ ಬಂದಿತು. ವೈರಿಗಳಿಂದ ತೀವ್ರವಾಗಿ ಓಡಿ ತನ್ನನ್ನು ಬದುಕಿಸಿಕೊಳ್ಳಲು ಕಲಿಯಿತು. ಅಂತೆಯೇ ಜನಸಾಮಾನ್ಯರಿಗೆ ಓತಿಕಾಟ ತೀರ ಹತ್ತಿರದಿಂದ ಸರ್ರನೆ ಹಾದುಹೋದರೂ ಒಮ್ಮೆಲೇ ಗೊತ್ತಾಗದು. ಹಲ್ಲಿ-ಓತಿಕಾಟಗಳು ಒಂದೇ ಗುಂಪಿಗೆ ಸೇರಿದವು. ಗಂಡು-ಹೆಣ್ಣು ಕೂಡಿದಾಗಲೇ ಈ ವರ್ಗಗಳಲ್ಲಿ ತತ್ತಿಗಳನ್ನಿಡುವುದು ಸಾಮಾನ್ಯ. ಮೊಟ್ಟೆಗಳಲ್ಲಿ ಬೆಳೆಯುವ ಮರಿಗಾಗಿ ಆಹಾರ ಸಂಗ್ರಹ ಇರುವುದಲ್ಲದೇ ಅವನ್ನು ಚಳಿ-ಮಳೆಯಿಂದ ಕಾಯಲಿಕ್ಕೆ ಗಟ್ಟಿಯಾದ ಕವಚ ಇರುವುದು. ಇವುಗಳ ತತ್ತಿಗಳು ಮೀನು-ಕಪ್ಪೆಗಳ ತತ್ತಿಗಳಿಗಿಂತ ದೊಡ್ಡವಿದ್ದು, ಉತ್ಪಾದನಾ ಪ್ರಮಾಣ ಕಡಿಮೆ ಇರುವುದು. ಮೊಸಳೆ, ಆಮೆಗಳು ನೀರಿನಲ್ಲಿ ವಾಸಿಸಿದರೂ ಅವು ಇದೇ ಗುಂಪಿಗೆ ಸೇರಿದ್ದರಿಂದ ಶ್ವಾಸೋಚ್ಛ್ವಾಸಕ್ಕೆ ನೀರ ಮೇಲೆ ಬರಬೇಕಲ್ಲದೆ ತಮ್ಮ ತತ್ತಿಗಳನ್ನು ಭೂಮಿಯ ಮೇಲೆಯೇ ಇಡಬೇಕಾಗುವದು.

ಭೂಮಿಯ ಮೇಲಿನ ಚಲನವಲನದಿಂದಲೂ ಈ ಆದಿಭೂಚರ ಪ್ರಾಣಿಗಳಿಗೆ ಸಮಾಧಾನವಾಗಲಿಲ್ಲ. ವಾಯುಮಂಡಲದಲ್ಲಿಯೂ ಅವು ಹಾರಲೆತ್ನಿಸಿದವು. ಅವುಗಳ ಕೈಗಳು ರೆಕ್ಕೆಗಳಾಗಿ ಪರಿಣಮಿಸಿದವು. ಆಕಾಶದಲ್ಲಿ ಹಾರಾಡಲು ಹೆಚ್ಚಿನ ಶಕ್ತಿ ಬೇಕಾದ್ದರಿಂದ ಬಿಸಿರಕ್ತ ಸಂಚಾರವನ್ನು ಹೆಚ್ಚಿಸಿಕೊಂಡವು. ಮೈಯನ್ನು ಆದಷ್ಟು ಹಗುರವಾಗಿಸಿತು ನಿಸರ್ಗ. ಉಷ್ಣತೆ ಹೀರುವ ಗರಿಗಳು ಮೈಗೆ ಬಂದವು. ಹವೆಯ ಚೀಲ (Air sacs)ಗಳು ಕಾಣಿಸಿಕೊಂಡವು. ದೃಷ್ಟಿ ತೀಕ್ಷ್ಣವಾಯಿತು. ಎಲ್ಲ ಕಡೆ ಮಣಿಯುವ

ಹಕ್ಕಿಯಾಗಿ ಹಾರಿದರೂ ಬುದ್ಧಿಜೀವಿಯಾಗಲಿಲ್ಲ







ಹಾರಲು ಯತ್ನಿಸುತ್ತಿರುವ ಬಾತುಕೋಳಿ



ಮೀನಿಗಾಗಿ ಹಾತೊರೆಯುವ ಮಿಂಚುಳ್ಳಿ



ಇರುಳಲ್ಲಿ ಕಾಣುವ ಗೂಗೆ

ಗೋಣು. ದ್ವಿಪಾದಗಳೂ ಮೂಡಿಬಂದವು. ಗೂಡುಗಳನ್ನು ಕಟ್ಟಿಕೊಳ್ಳುವ ಪ್ರವೃತ್ತಿ ಬೆಳೆಯಿತು. ಪ್ರಣಯ, ಸರಸಗಳಿಗೆ ಅವಕಾಶ ಒದಗಿತು. ಗೂಡಿನ ರಕ್ಷಣೆಯಲ್ಲಿ ಮೊಟ್ಟೆಗಳಿಗೆ ಕಾವು ಕೊಡಲಾರಂಭಿಸಿದ್ದರಿಂದ ಬಹುಸಂಖ್ಯಾತ ತತ್ತಿಗಳಿಂದ ಮರಿಗಳು ತಪ್ಪದೇ ಬರಲಾರಂಭಿಸಿದವು. ಅಸಹಾಯಕ ಮರಿಗಳಿಗೆ ತಾಯಿ ಗುಟುಕು ಕೊಟ್ಟಿತು. ಸಮಾಜ ಜೀವನ ಹಕ್ಕಿಗಳಲ್ಲಿ ಹೆಚ್ಚು ಎದ್ದು ಕಾಣುತ್ತದೆ. ಹಕ್ಕಿಗಳನ್ನು ಪಂಜರದಲ್ಲಿ ಇಟ್ಟು ಸಾಕುವದಕ್ಕಿಂತ ಅವುಗಳಿಗೆ ಆಹಾರವನ್ನು, ನೀರನ್ನು ಅಂಗಳದಲ್ಲಿಯೇ ಪೂರೈಸಿದರೆ ಅವು ತಪ್ಪದೇ ಬಂದು ಅವನ್ನು ಸ್ವೀಕರಿಸಿ ಹಾಡಿ ಹರಸುವವು.

ಸಸ್ತನಿಗಳು

ಹಕ್ಕಿಗಳು ಗಗನ ವಿಹಾರಿಗಳಾದರೂ ಬುದ್ಧಿಜೀವಿಗಳಾಗಲಿಲ್ಲ. ಸಸ್ತನಿ ಪ್ರಾಣಿಗಳು ಭೂಮಿಯಲ್ಲಿ ಉಳಿದುಕೊಂಡವು. ಇವುಗಳ ಮೈಮೇಲೆ ರೋಮ ಕಾಣಿಸಿಕೊಂಡಿತು. ತತ್ತಿಗಳ ಬದಲಾಗಿ ಮರಿಗಳು ಬೆಳಕು ಕಂಡವು. ಅವುಗಳ ಪಾಲನೆ ಪೋಷಣೆಯನ್ನು ತಾಯಿ ನೋಡಿಕೊಳ್ಳಲಾರಂಭಿಸಿತು. ಸಮಾಜ ಜೀವನ, ಈ ಗುಂಪಿನಲ್ಲಿ ಪರಮಾವಧಿಗೆ ತಲುಪಿದೆ. ಕಣ್ಣುಕಪ್ಪಡಿ ಹಕ್ಕಿಯಂತೆ ಆಕಾಶದಲ್ಲಿ ಹಾರಿದರೂ ಅದಕ್ಕೆ ನಿಜವಾದ ರೆಕ್ಕೆಗಳಿಲ್ಲದೆ ಕೈ ಬೆರಳುಗಳ ನಡುವೆ ಇರುವ ಚರ್ಮದ ತೆಳುವಾದ ಪೊರೆಯನ್ನೇ, ಹಾರಾಟಕ್ಕೆ ಬಳಸಿಕೊಳ್ಳುತ್ತದೆ. ಮೈಮೇಲೆ ಇರುವ ಕೂದಲು, ಸ್ತನಗಳು, ಹೊರ ಕಿವಿ, ಹಲ್ಲುಗಳು ಇದೊಂದು ಸಸ್ತನಿ ಪ್ರಾಣಿ ಎಂದು ಸಾರಿ ಹೇಳುವವು. ಇತರ ಸಸ್ತನಿ ಪ್ರಾಣಿಗಳಂತೆ ಇದೂ ಮರಿಗೇ ಜನ್ಮ ನೀಡುವುದು. ಇವು ನಿಶಾಚರವಿದ್ದದ್ದರಿಂದ ಕಣ್ಣಿಗಿಂತ ಕಿವಿಗಳೇ ಹೆಚ್ಚು ಸೂಕ್ಷ್ಮ. ಹೀಗಾಗಿ ಎಂಥ ಅಡೆತಡೆಗಳಲ್ಲಿಯೂ ಕಣ್ಣುಕಪ್ಪಡಿಗಳು ಹಾರಬಲ್ಲವು. ಇದರಂತೆ ನೀರಿನಲ್ಲಿ ಜೀವಿಸುವ ತಿಮಿಂಗಿಲವೂ ಸಸ್ತನಿ ಪ್ರಾಣಿಯಾಗಿರುವದರಿಂದ ಅದಕ್ಕೂ ಮೇಲೆ ಹೇಳಿದ ಎಲ್ಲ ಗುಣಧರ್ಮಗಳಿರುವವು. ಈ ಎಲ್ಲ ಪರಿಸರದ ಪ್ರಾಣಿಗಳನ್ನೂ ನಾವು ತಿಳಿದುಕೊಳ್ಳಲು ಯತ್ನಿಸಬೇಕು. ಮಕ್ಕಳಿಗೂ ಅವುಗಳಲ್ಲಿ ಆದರ-ಆಸಕ್ತಿಗಳು ಬರುವಂತೆ ಪ್ರೋತ್ಸಾಹಿಸಬೇಕು.

4. ಪ್ರಾಣಿಗಳಲ್ಲಿ ನಗು-ಅಳು

ತಮ್ಮ ಭಾವೀ ಪೀಳಿಗೆಯ ಪರಿಪಾಲನೆ ಹೆಚ್ಚಾದಂತೆ ಪ್ರಾಣಿಗಳಲ್ಲಿ ಸಂತಾನೋತ್ಪತ್ತಿ ಕಡಿಮೆಯಾದದ್ದು ಕಂಡುಬರುತ್ತದೆ. ಪ್ರಾಣಿ ವಿಕಾಸದ ಆದಿಹಂತದಲ್ಲಿದ್ದ ಮತ್ಸ್ಯವರ್ಗ ಲಕ್ಷಾವಧಿ, ನಂತರ ಬರುವ ಮಂಡೂಕ ಕುಟುಂಬ ಸಹಸ್ರ ಸಂಖ್ಯೆಯಲ್ಲಿ ಮೊಟ್ಟೆಗಳನ್ನು ನೀರಿನಲ್ಲಿ ತೇಲಿಬಿಟ್ಟರೆ ಪಾಲಕ ಜೀವಿಗಳ ಕರ್ತವ್ಯ ಮುಗಿದಂತೆ. ಇದರಿಂದಾಗಿ ಹೆಚ್ಚಿನ ತತ್ತಿಗಳು ಪರಿಸರದ ಪ್ರಕೋಪಕ್ಕೆ, ವೈರಿಗಳಿಗೆ ಆಹುತಿಯಾಗಿಬಿಡುವವು. ಕೂರ್ಮ ವರ್ಗ ಪ್ರಥಮ ಬಾರಿಗೆ ಸಂತಾನದ ಸಂರಕ್ಷಣೆಯ ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಕೇವಲ ನಾಲ್ಕೈದು ಮೊಟ್ಟೆಗಳನ್ನು ಗೂಡಿನಲ್ಲಿಟ್ಟು, ಕಾವು ಕೊಟ್ಟು ಮರಿಗಳಿಗೆ ಜೀವನದ ವಿವಿಧ ಚಟುವಟಿಕೆಗಳಲ್ಲಿ ಪರಿಣತರಾಗುವಂತೆ ತರಬೇತಿ ಕೊಡುವವು. ಕುಟುಂಬದ ಸದಸ್ಯರಲ್ಲಿ ಸಂಪರ್ಕ ಅನಿವಾರ್ಯ. ಅಂತೆಯೇ ಪಕ್ಷಿಗಳಲ್ಲಿ ಪ್ರಥಮ ಬಾರಿಗೆ 'ಭಾಷೆ' ಬೆಳೆದುಕೊಂಡಿತು. ಸಸ್ತನಿ ವರ್ಗದವು ಇವನ್ನೂ ಮೀರಿಸಿ ಮೊಟ್ಟೆಗಳನ್ನು ತಮ್ಮ ಗರ್ಭಕೋಶದಲ್ಲಿಯೇ ಬಿಟ್ಟು ಬೆಳೆಸಿ, ಕೇವಲ ಎರಡು-ಮೂರು ಮರಿಗಳನ್ನು ಮಾತ್ರ ಹೆರುವುವು. ನಂತರವೂ ಮರಿಗಳನ್ನು ಸಂರಕ್ಷಿಸಲು ಲಾಲನೆ-ಪಾಲನೆ ಮಾಡುವವು. ಇವಕ್ಕೆ ಕಲಶವಿಟ್ಟಂತೆ ಮಾನವ ಪ್ರಾಣಿ, ತನ್ನ ಮಕ್ಕಳು ಮುದಿಯಾದರೂ ಅವರ ಮೇಲ್ವಿಚಾರಣೆಯಲ್ಲಿ ತೊಡಗಿರುತ್ತಾನೆ! ಅಂತೆಯೇ ಅವನಲ್ಲಿ ಭಾವನೆಗಳ ಸಂಪರ್ಕ ಅತ್ಯುನ್ನತ ಮಟ್ಟಕ್ಕೆ ತಲುಪಿದೆ.

ಕುಟುಂಬ ವತ್ಸಲ ಪ್ರಾಣಿಗಳು ಶಾರೀರಿಕ ಸಂಪರ್ಕ, ಸಂಜ್ಞೆ, ಹಾಡು, ಕೂಗು ಗರ್ಜನೆಗಳಿಂದ ತಮ್ಮನ್ನು ಸಂರಕ್ಷಿಸಿಕೊಳ್ಳುತ್ತವೆ. ಈ ಮೂಲಕ ಅವು ತಮ್ಮ ಸಂತೋಷ, ದುಃಖ, ಕಳವಳ, ಹಸಿವು, ಭಯ ಮುಂತಾದ ಭಾವನೆಗಳನ್ನು ಕುಟುಂಬದ ಇನ್ನಿತರ ಸದಸ್ಯರೊಂದಿಗೆ ಪಾಲುಗೊಳ್ಳಲು ಕಲಿತವು. ನಗು ಮತ್ತು ಅಳು ಅತಿ ಸುಲಭವಾಗಿ ಗುರುತಿಸಬಲ್ಲ ಭಾವನೆಗಳು. ಹುಟ್ಟಿದ ಮಗು ಆರನೇ ವಾರದಿಂದಲೇ ಹೊಸದೇನಾದರೂ ಕಂಡರೆ ನಗಲಾರಂಭಿಸುವುದು. ಈ ನಗು ನೇರ ಮತ್ತು ಅತ್ಯಂತ ನೈಜವಾದದ್ದು. ನಗುವ ಪ್ರಾಣಿಗಳಲ್ಲಿ ಈ ಭಾವವನ್ನೇ ಗುರುತಿಸಬಹುದು. ಆದರೆ ಮಾನವ ತನ್ನ ಕಾರ್ಯಬಾಹುಳ್ಯಕ್ಕನುಗುಣವಾಗಿ ಸುಮಾರು ಮೂವತ್ತು ಬಗೆಯಲ್ಲಿ ನಗಬಲ್ಲನು ಎಂದು ತೀರ್ಮಾನಿಸಲಾಗಿದೆ. ನಗುವಿನ ವಿಧವೂ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಉತ್ತೇಜಕ ಮನಃಸ್ಥಿತಿಯಲ್ಲಿರುವಾಗ ಮಾತ್ರ ನಗಲು ಸಾಧ್ಯವಾದ್ದರಿಂದ, ವ್ಯಕ್ತಿಯ ಹಿನ್ನೆಲೆ, ಶಾರೀರಿಕ, ಮಾನಸಿಕ ಆರೋಗ್ಯ, ಆಸಕ್ತಿ, ಓದು ಸಂಸ್ಕಾರ, ಸಂಸ್ಕೃತಿಗಳನ್ನು ನಗುವಿನ ಪರಿಮಿತಿಗಳು ನಿರ್ಧರಿಸುತ್ತವೆ. ಸಂತೋಷ ನಗುವನ್ನು ತರದೆಯೂ

ಇರಬಹುದು. ಒಂದೇ ಹಾಸ್ಯದ ಸಂದರ್ಭಕ್ಕೆ ವಿವಿಧ ವ್ಯಕ್ತಿಗಳು ಭಿನ್ನವಾಗಿ ಪ್ರತಿಕ್ರಿಯಿಸುತ್ತಾರೆ. ನಸುನಗೆ, ಮುಗುಳ್ನಗೆ, ಕಿರುನಗೆ, ಕುಲುಕು ನಗೆ, ಗಹಗಹಿಸುವ ನಗೆ, ಸ್ಫೋಟಕ ನಗೆ, ಹೊಟ್ಟೆ ಬಿರಿಯುವ ನಗೆಗಳನ್ನು ಏಕಕಾಲಕ್ಕೆ ಕಾಣಬಹುದು. ಕೆಲವರು ಮುಖಕ್ಕೆ ಗಂಟು ಹಾಕಿಕೊಂಡೇ ಇರಬಹುದು. ವ್ಯಾಪಾರಿ ಬುದ್ಧಿಯವರು ಕೃತಕ ನಗೆಯನ್ನು ರೂಢಿಸಿಕೊಂಡಿರುತ್ತಾರೆ. ಅರಿವಿನಿಂದ ಉದಯಿಸಿ ಬರುವ ನಗು ಅತಿ ಉನ್ನತ ಮಟ್ಟದ್ದಾಗಿದ್ದು ಸ್ವಜ್ಞಾನಕ್ಕೆ ಅತ್ಯಂತ ಸಹಾಯಕಾರಿ.

ಸಂಸಾರ ಹೂಡುವ ಎಲ್ಲ ಪ್ರಾಣಿಗಳೂ ಒಂದಿಲ್ಲೊಂದು ರೀತಿಯಲ್ಲಿ ತಮ್ಮ ನಗುವನ್ನು ವ್ಯಕ್ತಪಡಿಸುವುವು. ಆದರೆ ಇವೆಲ್ಲ ನಮ್ಮ ನಗುವಿನ ಅಳತೆಗೋಲಿಗೆ ನಿಲುಕದ್ದರಿಂದ ಸುಲಭವಾಗಿ ಗುರುತಿಸುವುದು ಸಾಧ್ಯವಿಲ್ಲ. ಪ್ರಾಣಿಗಳ ನಗುವೆಂದು ನಾವು ಗುರುತಿಸುವ ಭಾವ, ಅವುಗಳ ಸಮಾಜದಲ್ಲಿ ಅದು ಅಲ್ಲದೇ ಇರಬಹುದು. ಈ ಲೇಖನಕ್ಕಾಗಿ ಜನಸಾಮಾನ್ಯರ ಅಳತೆಗೋಲನ್ನೇ ಬಳಸಲಾಗಿದೆ. ಆಸ್ಟ್ರೇಲಿಯದ ಕ್ವೀನ್ಸ್‌ಲಂಡ್‌ನ ಕಾಡುಗಳಲ್ಲಿ 'ಕೊಕಾಬುರಾ' ಎಂಬ ಪಕ್ಷಿ ಬೀಡುಬಿಟ್ಟಿದೆ. ಇದು ಮಿಂಚುಳ್ಳಿಯ ಗುಂಪಿನದೇ ಬೃಹತ್ ಪ್ರಮಾಣದ ಸದಸ್ಯನಾದರೂ ತನ್ನ ಕುಲದ ಕಸಬಾದ ಮೀನುಗಾರಿಕೆಯನ್ನೇ ಮರೆತುಬಿಟ್ಟಿದೆ! ಆದ್ದರಿಂದ ಇಲಿ ಮತ್ತಿತರ ಉಪದ್ರವಿ ಪ್ರಾಣಿಗಳ ಭಕ್ಷಣ ಮಾಡುತ್ತದೆ. ಉದರ ನಿರ್ವಹಣೆಯ ನಂತರ, ಸಾಮೂಹಿಕವಾಗಿ ಕಲೆತು, ಕೇಕೆಹಾಕುತ್ತ ಇವು ಕಿಲಿಕಿಲಿ ನಗುತ್ತವೆ. ಈ ನಗುವನ್ನು ಕೇಳುವ ಪರಿಸರದ ಆದಿವಾಸಿಗಳೂ ಆನಂದಿಸುವುದರಿಂದ ಅವರು ಈ ಹಕ್ಕಿಗಳನ್ನು ಸ್ನೇಹಿತನೆಂದು ಭಾವಿಸುತ್ತಾರೆ. ಅವುಗಳ ನಗುವಿಲ್ಲದಿದ್ದರೆ ತಮಗೆ ಸುಖ-ಶಾಂತಿ ಲಭಿಸುವುದಿಲ್ಲವೆಂದು ದೃಢವಾಗಿ ನಂಬಿದ್ದರಿಂದ ಅವರು ಎಂದೂ ಕೊಕಾಬುರಾಗಳನ್ನು ಕೊಲ್ಲುವುದಿಲ್ಲ, ತಿನ್ನುವುದಿಲ್ಲ. ಈ ಕಾನೂನು ಯಾರಾದರೂ ಮುರಿದರೆ ಅವರು ಮೂರು ತಿಂಗಳು ಬೇಟೆಯಾಡದಂತೆ, ಮಾಂಸಾಹಾರ ಮಾಡದಂತೆ ಶಿಕ್ಷೆ ವಿಧಿಸಲಾಗುತ್ತದೆ.

ಹೆಸರುವಾಸಿ

ನ್ಯೂಗಿನಿ (ಆಸ್ಟ್ರೇಲಿಯ)ಯಲ್ಲಿ ಮಾತ್ರ ವಾಸವಾಗಿರುವ ಸ್ವರ್ಗದ ಹಕ್ಕಿ (ಬರ್ಡ್ಸ್ ಆಫ್ ಪ್ಯಾರಾಡಾಯ್‌ಜ್)ಗಳು ವರ್ಣರಂಜಿತ, ಸೌಂದರ್ಯಭರಿತ ಗರಿಗಳಿಗೆ ಹೆಸರುವಾಸಿಯಾಗಿವೆ. ಅವುಗಳಿಗೆ ಸ್ವಜಾತೀಯ ಬಂಧುಗಳ ಒಡನಾಟ ಬಲು ಖುಷಿಕೊಡುತ್ತದೆ. ವಿರಾಮದ ವೇಳೆಯಲ್ಲಿ ದಟ್ಟ ಕಾಡಿನ ಎತ್ತರದ ಮರಗಳಲ್ಲಿ ಕಲೆತು ಪರೆಯದ ಹುಡುಗಿಯರ ಹಾಗೆ ಹಿರಿಹಿರಿ ಹಿಗ್ಗಿ ನಗುತ್ತಿರುತ್ತವೆ. ಈ ಹಕ್ಕಿಗಳಿಗೂ ನಗಲು ಯಾವುದಾದರೂ ಪ್ರಬಲವಾದ ಕಾರಣ ಬೇಕೆಂದೇ ಇಲ್ಲ. ತಮ್ಮ ಗರಿಗಳಿಗಾಗಿ ಆಸೆಪಟ್ಟು, ನಿರಾಶನಾದ ಮಾನವನನ್ನು ಕಂಡರೂ ಅವುಗಳಿಗೆ ನಗು ಬರುತ್ತಿರಬೇಕು! ವಿವಿಧ ಮಹಾಸಾಗರ ದಂಡೆಗಳ ಮೇಲೆ 'ಗಲ್' (ಸೀಗಲ್) ಹಕ್ಕಿಗಳು ಅಲೆಯುತ್ತ ಮೀನುಗಾರಿಕೆಯಲ್ಲಿ ತೊಡಗಿರುತ್ತವೆ. 'ನಗುವ ಗಲ್'ಗಳು ಮೀನು ಕಂಡೊಡನೆ ಭರದಿಂದ ನೀರಿಗೆ ಧುಮುಕಿ ಅವನ್ನು ಕೊಕ್ಕಿನಲ್ಲಿ ಹಿಡಿದು ಪಲಾಯನ ಮಾಡುವುವು. ಆದರೆ ಕೆಲವೊಮ್ಮೆ ಇವುಗಳಿಗೆ ಆಲಸ್ಯ ಬಂದುಬಿಡುತ್ತದೆ. ಒಂದೆಡೆ ಒಂಗಿಲೆ ಹಕ್ಕಿ ಜುಂಬು ಜೀಲದ ತುಂಬ ಮೀನಿನ ಶಿಕಾರಿ ಮಾಡಿ ನೀರನ್ನು ಸೋಸುತ್ತಿರುವಾಗ,

ಇವು ತಕ್ರಮುಣ ನಡೆಸಿ ಕೆಲ ಮೀನು ಕದ್ದು ಮಾಯವಾಗಿಬಿಡುತ್ತವೆ. ಸಂತೃಪ್ತ ಭೋಜನದ ನಂತರ, ಅವು ಧ್ವನಿ ತೆಗೆದು ನಗುವುದರಿಂದ ಅವಕ್ಕೆ "ನಗುವ ಗಲ್" ಎಂದು ಹೆಸರು ಬಂದಿದೆ. ಕಾಗೆಗಳೂ ಇಂಥ ನಾಟಕ ಹೂಡುತ್ತವೆ. ಹೆಚ್ಚಿನ ಆಹಾರ ದೊರೆಯದಿದ್ದಾಗ ಮೋಸದಿಂದ ಹದ್ದಿನ ಬೇಟೆಯನ್ನು ತಮ್ಮದನ್ನಾಗಿ ಮಾಡಿಕೊಳ್ಳುತ್ತವೆ. ಇಲಿ, ಕಪ್ಪೆ, ಮೀನಿನ ಭೋಜನದ ನಂತರ ಮರದ ಟೊಂಗೆಯಲ್ಲಿ ಕುಳಿತು ತಾವೆಲ್ಲ ಸೇರಿ ಹದ್ದಿಗೆ ಹೇಗೆ ಬುದ್ಧಿ ಕಲಿಸಿದೆವು? ಎಂದು ನಗು ಮುಖ ಅರಳಿಸಿ, ಗೋಣು ಹಾಕುತ್ತ, ಧ್ವನಿ ತೆಗೆಯದೇ ನಗಲಾರಂಭಿಸುವವು. ಅನುಕರಣೆಗೆ ಹೆಸರುವಾಸಿಯಾದ ಗಿಳಿ ಮತ್ತು ಮೈನಾಗಳಿಗೆ ಮಾನವನಂತೆ ನಗಲು ಸುಲಭವಾಗಿ ಕಲಿಸಬಹುದು.

ಮಾನವನ ಹತ್ತಿರದ ಸಂಬಂಧಿಗಳಾದ ಕೋತಿಗಳಲ್ಲಿ ನಗುವನ್ನು ಸುಲಭವಾಗಿ ಗುರುತಿಸಬಹುದು. ಅವು ಗೆಲುವಿನಿಂದ ನಗುವವಲ್ಲದೇ ಗೇಲಿಮಾಡಿ ಅಣಕಕ್ಕಾಗಿ ನಗುವುದೂ ಉಂಟು. ಇವುಗಳ ಮರಿಗಳಂತೂ ಮುಚ್ಚಾಟವಾಡುತ್ತ ರೆಂಬೆಗಳಿಂದ ತೂಗಿಕೊಳ್ಳುತ್ತ ತುಂಟಾಟವಾಡುತ್ತ ದಿನವಿಡೀ ಕಿಲಿಕಿಲಿ ನಗುತ್ತಲೇ ಇರುತ್ತವೆ. ತಂದೆ-ತಾಯಿಗಳೂ ಅವುಗಳ ಚಟುವಟಿಕೆ ಕಂಡು ಅಭಿಮಾನದಿಂದ ಹಲ್ಲು ಕಿರಿಯುತ್ತವೆ. ಗಂಡಾಂತರದ ಸೂಚನೆ ಸಿಕ್ಕಾಗ ಮರಿಗಳನ್ನೆತ್ತಿಕೊಂಡು ನಾಗಾಲೋಟ ಹಾಕುವವು. ಚಿಂಪಾಂಝಿ ನಗು-ಕುಚೇಷ್ಟೆಗಳಿಗೆ ಹೆಸರುವಾಸಿ. ಅಂತೆಯೇ ಸರ್ಕಸ್ಸಿನವರು ಅವುಗಳನ್ನು ಪಳಗಿಸಿ ಕೋಡಂಗಿಗಳಂತೆ ಬಳಸುವರು. ಮಾನವನ ಸಹವಾಸದಲ್ಲಿ ಅವು ಎಲ್ಲ ದುಶ್ಚಟಗಳನ್ನೂ ಕಲಿಯುವುದುಂಟು. ಧೂಮಪಾನ, ಮದ್ಯಪಾನಗಳೆಂದರೆ ಅವಕ್ಕೆ ಪಂಚಪ್ರಾಣ. ಒಡೆಯನ ಅಜಾಗರೂಕತೆಯಿಂದ ಚಿಂಪಾಜಿಯ ಕೈಗೆ ಮದ್ಯದ ಬಾಟ್ಲಿ ಸಿಕ್ಕರೆ ಕಂಠ ಪೂರ್ತಿ ಕುಡಿದು, ಎಲ್ಲರನ್ನೂ ನಗೆಗಡಲಲ್ಲಿ ತೇಲಿಸುವ ವ್ಯಕ್ತಿತ್ವ ಅದರದು. ಶೀರ ಅಪರೂಪಕ್ಕೆ ಗೋರಿಲ್ಲಾಗಳು ಗೋಣುಹಾಕಿ ಮಂದನಗು ಬೀರುವುವು.

ಮಾನವ ಬಾಹ್ಯಾಕಾಶದಲ್ಲಿ ಮೊಟ್ಟಮೊದಲಿಗೆ ಉಡ್ಡಾಣವನ್ನು ಪ್ರಾರಂಭಿಸಿದಾಗ, ಮಾನವರು ಸುರಕ್ಷಿತವಾಗಿ ಮರಳುವ ಬಗ್ಗೆ ವಿಜ್ಞಾನಿಗಳಿಗೆ ಅಷ್ಟೊಂದು ಆತ್ಮವಿಶ್ವಾಸವಿರದ್ದರಿಂದ ನಮ್ಮ ಕೆಂಪು ಮೂತಿಯ ರ್ಹಿಸಸ್ ಕೋತಿಗೆ ಚಾಲಕನ ತರಬೇತಿ ಕೊಡಮಾಡಿದ್ದರು. ಸಕಲ ಚಟುವಟಿಕೆಗಳನ್ನೂ ಚಾಚೂತಪ್ಪದೇ ಕಲಿಯುವವನಲ್ಲದೇ ಎಲ್ಲವನ್ನೂ ನೆನಪಿಟ್ಟು ಕ್ರಮಬದ್ಧವಾಗಿ ಮಾಡುವುದರಲ್ಲಿ ಈ ಕೋತಿಗಳದು ಎತ್ತಿದ ಕೈ. ಪರಲೋಕಕ್ಕೆ ಹೊರಟಾಗ ಕೂಡ ತಮ್ಮ ತರಬೇತಿಗಾರ ವಿಜ್ಞಾನಿಗಳೊಂದಿಗೆ ಗಹಗಹಿಸಿ ನಗುತ್ತ ಬೀಳ್ಕೊಂಡು ಸಕಲ ಚಟುವಟಿಕೆಗಳನ್ನು ನಗುಮುಖದಿಂದ ನೆರವೇರಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾದವು. ಆಫ್ರಿಕದ 'ಆಜಾಯಿಲ್ ಮಂಗಾಬೆ' ಕೋತಿ ಕೂಡ ದಿನವಿಡೀ ಹಾಸ್ಯಗಾರನಂತೆ ತಾನೂ ನಕ್ಕು ಇತರರನ್ನೂ ನಗಿಸುತ್ತಿರುತ್ತದೆ. 'ಓರಂಗ್‌ಓಟಾನ್' ಮಂಗ, ತನ್ನ ಬಿಡುವಿನ ವೇಳೆಯಲ್ಲಿ ಬೆನ್ನು ಚಾಚಿ ಮಲಗಿ ನಗೆಚಾಟಿಕೆ ಮಾಡುತ್ತಿರುತ್ತದೆ. ಗೋಲ್ಡ್‌ಕೋಸ್ಟ್‌ನ (ಆಫ್ರಿಕ) 'ರೋಲೋವೇ' ಕೋತಿ ನಟನಂತೆ ಕ್ಷಣಾರ್ಧದಲ್ಲಿ ವಿವಿಧ ಪ್ರಕಾರದ ನಗುವನ್ನು ಹೊರಹೊಮ್ಮಿಸಬಲ್ಲದು. ಫಿಲಿಪ್ಪೈನ್ಸ 'ಮೆಕೆಕ' ಮಂಗ ಹಾಸ್ಯ ಚಟಾಕಿ ಹಾರಿಸುವ ಮಾತುಗಾರನಂತೆ ನಗುಬೀರುವುದು. ಮಲೇಶಿಯದಲ್ಲಿರುವ ಹಂದಿಬಾಲದ 'ಮೆಕೆಕ'ಗಳಿಗೆ ಬಲಿತ ತೆಂಗಿನಕಾಯಿಗಳನ್ನು ಕೀಳಲು ತರಬೇತಿ ಕೊಡಲಾಗುತ್ತದೆ. ಅವುಗಳ ಕೊರಳಿಗೆ ಉದ್ದ



ಕುಲು ಕುಲು ನಗುವ ಕೋಕಾಬರಾ



ಅಳುವ ಪೆಲಿಕನ್



ಬಾಹ್ಯಾಕಾಶಕ್ಕೆ ಹೋದರೂ
ನಗು ಬಿಡದು



ಒಂಟೆಯ ನಗು ಅಳು





ತಾನು ನಕ್ಕು ಇತರರನ್ನು ನಗಿಸುವ ಮಂಗ

ಸರಪಳಿ ಕಟ್ಟಿ, ಮಾಲಿಕರು ಅವನ್ನು ಸೈಕಲ್ ಮೇಲೆ ಕೂಡ್ರಿಸಿ ಬೀದಿಗಳಲ್ಲಿ ಹೊರಡುತ್ತಾರೆ. ಯಾರೇ ಹಣ ಕೊಟ್ಟು ಅವುಗಳ ಸೇವೆ ಪಡೆಯಬಹುದು. ಕ್ಷಣಾರ್ಧದಲ್ಲಿ ಎತ್ತರದ ಮರ ಹತ್ತಿ ಬೆರಳಿನಿಂದ ಚಿಟಿಕೆ ಹೊಡೆದು ಬಲಿತ ಕಾಯಿಗಳನ್ನು ನೆಲಕ್ಕೆ ಉರುಳಿಸುವುವು. ಅಪ್ಪಿತಪ್ಪಿ ಒಂದಾದರೂ ಎಳನೀರು ಹರಿದರೆ, ನೆಲಕ್ಕೆ ಬಂದು ಕೋತಿ ತಪ್ಪಿತಸ್ಥನಂತೆ ಒಡೆಯನ ಮುಂದೆ ಮುಖ ತಿರುವಿಕೊಂಡು ನಿಲ್ಲುವುದು. ಅವನು ಒಂದು ಏಟುಹಾಕಿ "ಎಷ್ಟೆಂದರೂ ಕೋತಿ ಮುಂಡೇದು!" ಎಂದು ನಗು ಬೀರಿದಾಗ, ಅದೂ ನಗುವುದು.

ಸಸ್ತನಿಗಳು ಮಾತ್ರ

ಮಾನವ ಮಗುವಿಗೆ ನಗಲು ಕಲಿಸಿದಂತೆ ಇನ್ನಿತರ ಪ್ರಾಣಿಗಳಿಗೂ ಕಲಿಸಲು ಯತ್ನಿಸಿದರೂ, ಸಸ್ತನಿಗಳು ಮಾತ್ರ ಆವನ ಯತ್ನಕ್ಕೆ ಯಶಸ್ಸು ತಂದಿವೆ. ಅಮೇರಿಕೆಯ ಮಾಯಾಮಿಯಲ್ಲಿರುವ ಕಡಲ ಮತ್ಸ್ಯಾಗಾರದಲ್ಲಿ ವಿವಿಧ ಪ್ರಾಣಿಗಳಿಂದ ಕಸರತ್ತುಗಳನ್ನು ಮಾಡಿಸಿ, ಪ್ರೇಕ್ಷಕರಿಗೆ ಮನರಂಜನೆ ಉಂಟುಮಾಡುವರು. ಅಲ್ಲಿ 'ಓಂಗಿಲ್', ನೀರನಾಯಿ, ಕಡಲಸಿಂಹ ಮೊದಲಾದವುಗಳನ್ನು ನಟ-ನಟಿಯರನ್ನಾಗಿ ರಂಗದ ಮೇಲೆ ತಂದರೂ ಕಡಲಹಂದಿ (ಪೋರ್‌ಪೊಯ್‌ಸ್) ಎಲ್ಲರ ಲಕ್ಷ ಸೆಳೆದುಕೊಳ್ಳುವುದು. ಎತ್ತರದ ಜಿಗಿತ, ಚಕ್ರದೊಳಗಿಂದ ಹಾದುಹೋಗುವುದು, ಮುಂತಾದವನ್ನು ಯಶಸ್ವಿಯಾಗಿ ಮಾಡಿ ತೋರಿಸಿದಾಗೊಮ್ಮೆ ಮೇಲ್ವಿಚಾರಕನು, ಅದಕ್ಕೊಂದು ಮೀನು ಎಸೆಯುತ್ತಾನೆ. ಮತ್ಸ್ಯಾಹಾರವೆಂದರೆ ಪಂಚಪ್ರಾಣವಾಗಿರುವ ಕಡಲ ಹಂದಿ ನೀರಿನಿಂದ ಹೊರಗೆ ಜಿಗಿದು ನಗುಮುಖದಿಂದ ಮೀನನ್ನು ತನ್ನದನ್ನಾಗಿ ಮಾಡಿಕೊಳ್ಳುತ್ತದೆ. ಅಮೇರಿಕದ ದೂರದರ್ಶನ ನಟನೊರ್ವ ಪ್ರೇಕ್ಷಕರನ್ನು ರಂಜಿಸಲೆಂದೇ ಅಶ್ವವೊಂದನ್ನು ತನ್ನ ಪ್ರೇಯಸಿ ಎಂದ. ಈ ಅಪರೂಪದ 'ದಂಪತಿ'ಗಳ ಸರಸಸಲ್ಲಾಪ, ಹಾವ-ಭಾವ ನಗೆ ಚಟಾಕಿಗಳು ಅತ್ಯಂತ ಮೋಜಿನದಾಗಿದ್ದವು. ಇದಕ್ಕೆ ಪಾರ್ಶ್ವ ಧ್ವನಿಮುದ್ರಿಕೆ ಬಳಸಿಕೊಳ್ಳಲಾಗುತ್ತದೆ ಎಂದು ಒಪ್ಪಿಕೊಂಡರೂ ಆ ಕುದುರೆಯ ನಗುಮುಖದ ಅಭಿನಯ ಅತ್ಯಂತ ಆಕರ್ಷಕ.

ಹಲವು ಪ್ರಾಣಿಗಳ ಮುಖಭಾವದಿಂದ ಅವು ನಗುತ್ತವೆಯೋ ಅಳುತ್ತವೆಯೋ, ಇಲ್ಲವೇ ಹೆದರಿಸುತ್ತವೆಯೋ ಎಂದು ನಿರ್ಧರಿಸುವುದು ಕಷ್ಟದ್ದು. ಮಾನವರಲ್ಲಿಯೂ ಕೆಲವರು, ಅಳುವಂತೆ ನಗುತ್ತಾರೆ. ನಗುವಂತೆ ಅಳುವುದಿಲ್ಲವೇ? ಮಕ್ಕಳು ನಗಬೇಕಾದ ಸಂದರ್ಭದಲ್ಲಿ ಅಳುವುದನ್ನು, ಅಳಬೇಕಾದಾಗ ನಗುವುದನ್ನು ಮಾಡುವುದುಂಟು. ಆಫ್ರಿಕದ 'ಬಬೂನ್' ಕೋತಿ ಬಾಯಿ ತೆರೆದು, ಹಲ್ಲು ಕಿರಿದು ವೈರಿಗಳನ್ನ ಬೆದರಿಸುತ್ತದೆ. ನಗುವಾಗಲೂ ಅಂಥದೇ ಮುಖ ಮುದ್ರೆ ತಳೆಯುತ್ತದೆ. ಒಂಟೆ ತನ್ನ ಎರಡು ತುಟಿಗಳನ್ನು ಬೇರ್ಪಡಿಸಿ ಹಲ್ಲು ಕಿರಿದು, ನಾಲಗೆ ಹೊರಚಾಚಿದ ಮುಖ ಮುದ್ರೆ ಹೊತ್ತಾಗ ಅದು ಎಂತಹದೆಂದು ನಿರ್ಧರಿಸಲು ಸಂದರ್ಭವನ್ನು ಅವಲೋಕಿಸಬೇಕಾಗುತ್ತದೆ. ನರಿಗಳು ಗಗನದತ್ತ ಮುಖಮಾಡಿ, "ಹುಕ್ಕೊ! ಹುಯ್ಕೊ!" ಎಂದು ಧ್ವನಿ ತೆಗೆದಾಗ ಅವು ಅಳುತ್ತವೆ, ಎಂದು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ. ಆದರೆ ಅದು ಸಂಗಾತಿಯನ್ನು ಬರಮಾಡಿಕೊಳ್ಳುವ ಪ್ರಣಯದ ಕರೆ ಇದ್ದಂತೆ. ಅಮೇರಿಕೆಯ 'ಕ್ಯಾಯೋಟಾ' ಕೂಡ ಬಾಯಿಗಲಿಸಿ ಕೂಗುತ್ತದೆ.

ಹಕ್ಕಿ ಮತ್ತು ಸಸ್ತನಿಗಳು ಕಣ್ಣಿಂದ ಕಲ್ಮಶಗಳನ್ನು ಹೊರ ಹಾಕಲು ಕಣ್ಣಂಚಿನಲ್ಲಿ 'ಲೆಕ್ರಿಮಲ್' ಗ್ರಂಥಿಗಳಿರುತ್ತವೆ. ಅವು ನೀರಿನಂತಹ ಪಾರದರ್ಶಕ ದ್ರವ್ಯವನ್ನು ಉತ್ಪಾದಿಸಿ ಬೇಕಾದಾಗ ಅದನ್ನು ಹೊರಚಿಮ್ಮಿಸುತ್ತಿರುತ್ತವೆ. ಪ್ರತಿನಿತ್ಯ ಕಣ್ಣುಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳದಿದ್ದರೆ ಅದು ಹಿಂಜಳದಂತೆ ಗಟ್ಟಿಯಾಗಿ ಕಣ್ಣಿನ ಸುತ್ತಲೂ ಸಂಚಯವಾಗಿರುತ್ತದೆ. ಮಗುವಿಗೆ ಹಸಿವಾದಾಗ, ಬೆದರಿದಾಗ, ಚೀರಿಕೊಂಡಾಗ ಈ ದ್ರವ್ಯ ಹೆಚ್ಚಿನ ಪ್ರಮಾಣದಲ್ಲಿ ಹೊರಬಂದು 'ಕಣ್ಣೀರು" ಅನಿಸಿಕೊಳ್ಳುತ್ತದೆ. ಇದಕ್ಕೆ ಸಾಮಾನ್ಯವಾಗಿ ಅಳುವುದು ಎಂದು ಕರೆಯುವರು. ನಗುವಿನಂತೆ ಅಳುವಿನಲ್ಲಿಯೂ ಅನೇಕ ಪ್ರಕಾರಗಳನ್ನು ಗುರುತಿಸಬಹುದು. ಸುಸಂಸ್ಕೃತರು ಅತಿ ದುಃಖವಾದಾಗಲೂ ಕಣ್ಣೀರು ಹಾಕದೇ ಇರಬಹುದು. ಕೆಲವೊಮ್ಮೆ ಮಾತುಮಾತಿಗೂ ಕಣ್ಣೀರು ಹಾಕುವವರೂ ಸಿಗುತ್ತಾರೆ. ಮೂಕರೋದನ ಮಾಡುವುದು. ಬಿಕ್ಕುವುದು, ಸಂಗೀತದಂತೆ ರಾಗವಾಗಿ ಹಾಡುತ್ತ ಅಳುವವರೂ ಇದ್ದಾರೆ. ಮೃತಪಟ್ಟವರಿಗಾಗಿ ಆದ ದುಃಖ ಸೂಚಿಸಲು ವೃತ್ತಿಯಿಂದ ಅಳುವವರನ್ನೂ ಬರಮಾಡಿಕೊಳ್ಳುವವರಿದ್ದಾರೆ. ಅವರೆಲ್ಲ ಕಣ್ಣೀರು ಹಾಕದೇ ಅಳುವವರು. ನಟ-ನಟಿಯರು ಅಳುವ ಅಭಿನಯಕ್ಕಾಗಿ ಗ್ಲಿಸರಿನ್‌ನ ಆಶ್ರಯ ಪಡೆಯುತ್ತಾರೆ.

ಮೊಸಳೆಯ ವರ್ಗದಲ್ಲಿ ಕಣ್ಣೀರಿನ ಗ್ರಂಥಿಗಳೇ ಇರುವುದಿಲ್ಲ. ಅಂತೆಯೇ ಯಾರಾದರೂ ತೋರಿಕೆಗೆ ಅತ್ತರೆ ಮೊಸಳೆಕಣ್ಣೀರು! ಎಂದು ಕರೆಯುವ ಪರಿಪಾಠವಿದೆ. ಅಮೇರಿಕೆಯ ಫ್ಲಾರಿಡಾದಲ್ಲಿ ಜವಳು ಮರುಭೂಮಿಯ ಕಾಡಿನಲ್ಲಿ ದಿನಂಪ್ರತಿ ನಡುರಾತ್ರಿಯಲ್ಲಿ ಎತ್ತರಿಸಿದ ಧ್ವನಿಯಲ್ಲಿ ಮಕ್ಕಳು ಅಳುವುದು ಕೇಳಿಸುತ್ತಿತ್ತು. ದಾರಿ ತಪ್ಪಿ ಕಾಡಿನ ಪಾಲಾದ ಮಕ್ಕಳು ಅಳುತ್ತಿರಬೇಕು ಎಂದು ಪರಿಸರದವರು ಕಳವಳಪಡುತ್ತಿದ್ದರು. ಆದರೆ ಹುಡುಕಿದಾಗ ಒಂದೂ ಮಗು ಸಿಗದ್ದರಿಂದ ಆಸಕ್ತಿ ಕೆರಳಿತು. ಅಲ್ಲಿರುವ ಜಲರಾಶಿಯಲ್ಲಿ ಕಂದು ಬಿಳಿ ಚುಕ್ಕಿಗಳಿರುವ ಕೊಕ್ಕರೆಗಳು ಮೀನು, ಚಿಪ್ಪುಮೀನು ಹಿಡಿದು ಉದರ ನಿರ್ವಹಣೆ ಮಾಡುತ್ತಿದ್ದವು. ರಾತ್ರಿಯ ಅಳುವಿಗೆ ಈ ಹಕ್ಕಿಗಳು ಕಾರಣವಾಗಿರಬಹುದೇ ಎಂಬ ಶಂಕೆ ವಿಜ್ಞಾನಿಗಳಲ್ಲಿ ಮೂಡಿತು. ಅವಿತು ನಿರೀಕ್ಷಣೆ ನಡೆಸಿದಾಗ ಕತ್ತಲಾದೊಡನೆ ಅವು ಒಂದೊಂದಾಗಿ ಮರಗಳ ಆಶ್ರಯ ಪಡೆದು ಕಗ್ಗತ್ತಲಾದ ನಂತರ ಚುಂಚು ತೆರೆದು, ನಾಲಿಗೆ ಹೊರ ಚಾಚಿ. ಅಳುವಿನ ಪ್ರಸಾರ ಮಾಡುತ್ತಿರುವದು ತಿಳಿದುಬಂದಿತು. ಅನಂತರ ಇವಕ್ಕೆ "ಅಳುವ ಲ್ಯಾಂಪ್‌ಕಿನ್ಸ್" ಎಂಬ ಹೆಸರು ಬಂದಿತು.

ಪಕ್ಷಿ ಪ್ರಪಂಚದ ಕೋಡಂಗಿ

ಧ್ರುವ ಪ್ರದೇಶವನ್ನು ತನ್ನ ಕರ್ಮಭೂಮಿಯನ್ನಾಗಿ ಮಾಡಿಕೊಂಡ ಪೆಂಗ್ವಿನ್ ಅಥವಾ ಕಡಲಕೋಳಿ, ಪಕ್ಷಿ ಪ್ರಪಂಚದ ಕೋಡಂಗಿ ಎಂದೇ ಹೆಸರುವಾಸಿಯಾಗಿದೆ. ಆ ಹಿಮ ಮರುಭೂಮಿಯನ್ನು ಭೇಟಿ ಮಾಡುವ ಸಾಹಸಿ ಮಾನವರಿಗೆ ಅದು ಬೆದರುವುದಿಲ್ಲ. ಪಲಾಯನ ಮಾಡುವುದಿಲ್ಲ. ಹುಲ್ಲಿನಿಂದ ನಿರ್ಮಿಸಿದ ಗೂಡಿನಿಂದ ಆಗಂತುಕರು ಮರಿಯನ್ನು ಮುದ್ದಿಸಲು ಎತ್ತಿಕೊಂಡರೂ ವಿರೋಧಿಸುವುದಿಲ್ಲ. ಆದರೆ ಅದರ ಆಜನ್ಮ ವೈರಿ 'ಗಲ್' ಗುಂಪಿಗೆ ಸೇರಿದ 'ಸ್ಕೂಆ' ಹಕ್ಕಿ ದಾಳಿ ಮಾಡಲಿರುವ

ಮುನ್ಸೂಚನೆ ಸಿಕ್ಕರೆ ಜಂಘಾಬಲವನ್ನೇ ಕಳೆದುಕೊಳ್ಳುವುದು. ತಕ್ಷಣ ಮೊಟ್ಟೆ-ಮರಿಗಳನ್ನು ರೆಕ್ಕೆಗಳಿಂದ ಸಂರಕ್ಷಿಸಿ ವೈರಿಯ ಆಕ್ರಮಣಕ್ಕೆ ಸಿದ್ಧವಾಗುವುದು. ಆದರೆ ಚಾಣಾಕ್ಷ ಸ್ಕೂಆ ಜೋಡಿಯಾಗಿ ಬಂದು ಮೋಸಮಾಡುತ್ತವೆ. ಒಂದು ಎದುರಿನಿಂದ ಬಂದು ಹಲ್ಲೆ ಮಾಡಿದ ನಟನೆ ಮಾಡಿದಾಗ, ಇನ್ನೊಂದು ಹಿಂದಿನಿಂದ ಕಳ್ಳತನದಿಂದ ಮೊಟ್ಟೆ-ಮರಿಗಳನ್ನು ಎತ್ತಿಕೊಂಡು ಗಗನಮಂಡಲ ಸೇರುವುದು. ಈ ಅಪಹರಣದಿಂದ ಬೆಚ್ಚಿದ ಪಾಲಕ ಹಕ್ಕಿಗಳು ಗಗನದತ್ತ ಮುಖಮಾಡಿ ಆರ್ತಧ್ವನಿಯಿಂದ ರೋಧಿಸುವವು. ಸ್ಕೂಆ ಕಳ್ಳಹಕ್ಕಿಯೆಂದೇ ಗುರುತಿಸಲಾಗುತ್ತಿದೆ. ಇದರಂತೆ ಇನ್ನಿತರ ಹಕ್ಕಿಗಳ ಮೊಟ್ಟೆ-ಮರಿಗಳನ್ನು ಹಾವು, ಹದ್ದು, ಕೋತಿಗಳಂತಹ ವೈರಿಗಳು ಅಪಹರಿಸಿದಾಗ ತಾಯ್ತಂದೆಗಳು ಆಹಾರ-ನಿದ್ರೆಗಳನ್ನು ಅಲಕ್ಷಿಸಿ ಮೌನವಾಗಿ ಅಳುತ್ತವೆ.

ಆಕಳು ಎಮ್ಮೆಗಳು, ಕರು ಮೃತಪಟ್ಟಾಗ ಆಹಾರ-ನೀರು ತೊರೆದು ಕಣ್ಣೀರು ಹಾಕುವುದನ್ನು ಕಾಣುತ್ತೇವೆ. ಈ ಬಳಗದ ಸದಸ್ಯ ಪ್ರಾಣಿಗಳಾದ ಕಾಡಿನ ನಿವಾಸಿಗಳಾದ ಕಾಡುಕೋಣ, ಜಿಗರೆಗಳೂ ಇದೇ ರೀತಿ ರೋಧಿಸುತ್ತಿರಬೇಕು. ಆದರೆ ಹಿಂಡಿನ ಕೆಲ ಪ್ರಾಣಿಗಳು ಹುಲಿ-ಚಿರತೆಗಳಂತಹ ಕ್ರೂರ ಮೃಗಗಳ ಆಕ್ರಮಣಕ್ಕೆ ಬಲಿಯಾಗಿ, ಮೃತಪಟ್ಟರೂ ಅಳು ಹತ್ತಿಕ್ಕಿ ಪ್ರಾಣ ರಕ್ಷಣೆಗೆ, ಸುರಕ್ಷಿತ ಸ್ಥಳಕ್ಕೆ ಧಾವಿಸಲೇಬೇಕಾಗುತ್ತದೆ. ಕಾಡಾನೆಯ ಮರಿ ಅಪಘಾತಕ್ಕೊಳಗಾಗಿ ಇಲ್ಲವೆ ರೋಗಪೀಡಿತವಾಗಿ ಮೃತವಾದಾಗ, ಇಡೀ ತಂಡವೇ ಶವವನ್ನು ಸುತ್ತುವರಿದು ಕಣ್ಣೀರು ಹಾಕುತ್ತ ತಮಗಾದ ಶೋಕವನ್ನು ಪ್ರದರ್ಶಿಸುವುದು. ಸಾಕುನಾಯಿಗಳೂ ತಮ್ಮನ್ನು ಅತಿಯಾಗಿ ಪ್ರೀತಿಸುವ ಮಾಲಿಕರು ಅನಾರೋಗ್ಯದಿಂದ ನರಳಿದರೂ ವಿಚಿತ್ರ ಧ್ವನಿ ತೆಗೆದು ಅಳಲಾರಂಭಿಸುತ್ತವೆ. ಕೆಲವು ಮೌನವಾಗಿ ಕಣ್ಣೀರು ಹಾಕುತ್ತ ಅನ್ನ-ನೀರು ತ್ಯಜಿಸಿ ಮಲಗಿಯೇ ಇರುತ್ತವೆ. ಹೆಚ್ಚಿನ ಕೋತಿಗಳು ತಮ್ಮ ಕುಟುಂಬದಲ್ಲಿ ಸಾವು ಸಂಭವಿಸಿದಾಗ ಒಂದೆಡೆ ಕುಳಿತು ಕಣ್ಣೀರು ಹರಿಸುತ್ತ ಬುಳುಬುಳು ಅಳುತ್ತವೆ. ಮರಿ ಮೃತಪಟ್ಟಾಗ ತಾಯಿಕೋತಿ ಅದರ ಮೃತ ದೇಹವನ್ನು ಎತ್ತಿ ಹಿಡಿದು ಅಳಲಾರಂಭಿಸುವುದು. ಶವ ಕೊಳೆತು ನಾರುವ ತನಕ ಅದನ್ನು ಎತ್ತಿಕೊಂಡೇ ಅಲೆಯುತ್ತದೆ. ಗೋರಿಲ್ಲಗಳು ಇಂಥ ಸಂದರ್ಭದಲ್ಲಿ ಕೈಗಳಿಂದ ಎದೆ ಬಡಿದುಕೊಂಡು ಚೀರುತ್ತ ಅಳುವುವು.

ಪ್ರಾಣಿಗಳ ಉದ್ರೇಕಾವಸ್ಥೆಗಳ ಬಗ್ಗೆ ತಿಳಿದಿರುವುದು ಅತ್ಯಲ್ಪ. ಈ ದೆಸೆಯಲ್ಲಿ ಆಳವಾದ ಸಂಶೋಧನೆ ನಡೆಸಿದಲ್ಲಿ ನಮ್ಮಲ್ಲಿರುವ ಅನೇಕ ಕಲ್ಪನೆಗಳನ್ನು ಹೋಗಲಾಡಿಸಲು ಅನುಕೂಲವಾಗುವುದು. ಆದರೆ ಪ್ರಾಣಿ-ಪರಿಸರದ ಮೇಲೆ ಏಕಪ್ರಕಾರವಾಗಿ ಆಕ್ರಮಣ ನಡೆಸಿದ ಮಾನವನು ಅವುಗಳ ನಗು-ಅಳುಗಳ ಸಹಜಭಾವಗಳ ಬಗ್ಗೆ ಸ್ವಲ್ಪವಾದರೂ ಸಹಾನುಭೂತಿ ತೋರಿಸಿದರೆ, ಅವುಗಳಲ್ಲಿ ನಮಗಿಂತ ಹೆಚ್ಚಿನ ಮಾನವೀಯತೆ ಇದೆ! ಎಂದು ಅರಿವಾಗದೇ ಇರದು.

5. ಹಗಲಲ್ಲಿ ಕಾಣುವ ಇರುಳು ಕಬ್ಬಾರೆ

"ಬಂಗಳೂರಿನಲ್ಲಿ ಒಂದು ಪಕ್ಷಿಧಾಮವಿರುತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದು ಹಗಲುಗನಸು ಕಾಣುತ್ತಿದ್ದಾಗ, ಮಲ್ಲೇಶ್ವರದ ಮನೆಯ ಹಿತ್ತಲಿನಲ್ಲಿಯೇ ಅಂಥದೊಂದನ್ನು ಕಾಣುವ ಸುಯೋಗ ಒದಗಿ ಬಂದೀತೆಂದು ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ಹಜಾರದ ಎದುರಿಗಿದ್ದ ಬೃಹದಾಕಾರದ ಹಲಸಿನ ಮರ, ಹಗಲಿನಲ್ಲಿ ಕಾಗೆಗಳಿಗೂ, ಇರುಳಿನಲ್ಲಿ ಗೂಬೆಗಳಿಗೂ ಆಶ್ರಯ ಕೊಟ್ಟಿತ್ತು. ನಸುಕಿನಲ್ಲಿ ಮತ್ತು ಸಂಜೆಯಲ್ಲಿ ಗುಬ್ಬಚ್ಚಿಗಳು ಚಿಲಿಪಿಲಿಗುಟ್ಟುತ್ತ, ತಮ್ಮಲ್ಲಿದ್ದ ವೈಮನಸ್ಸನ್ನು ಬಗೆಹರಿಸಿಕೊಳ್ಳುತ್ತಿದ್ದವು. ಆಗೊಮ್ಮೆ ಈಗೊಮ್ಮೆ "ಕೊಟರ್ ಕೊ" ಎಂದು ಕೂಗಿ ಕರೆಯುವುದಕ್ಕೂ, ಈ ಮರವನ್ನು ನೀಲಿ ಪಾರಿವಾಳಗಳೂ ಬಳಸುತ್ತಿದ್ದವು. ಒಂದು ಮುಂಜಾನೆ ಡಿಸೆಂಬರ್ ತಿಂಗಳ ಚಳಿಯನ್ನು ಹೋಗಲಾಡಿಸಿಕೊಳ್ಳಲು ಎಳೆ ಬಿಸಿಲಿನಲ್ಲಿ ಕುಳಿತು ಹಲಸಿನ ಮರದತ್ತ ಕಣ್ಣು ಹಾಯಿಸಿದಾಗ ನೂರಾರು ಬಿಳೀ ಪಕ್ಷಿಗಳು, ಅದಕ್ಕೆ ಪ್ರದಕ್ಷಿಣೆ ಹಾಕುವಂತೆ, ಹಾಕಲಾರಂಭಿಸಿದವು! ಜೋಡಿ ಕಣ್ಣುಗಳನ್ನು ನೂರು ಮಾಡಿ ನೋಡಿದಾಗ, ಹಾರುವ ಪಕ್ಷಿಗಳು ಒಂದೊಂದಾಗಿ ಮರದ ಮೇಲೆ ಇಳಿದು ಅತ್ಯಂತ ಸುರಕ್ಷಿತವೆನಿಸುವ ಆಯಕಟ್ಟಿನ ಸ್ಥಳಗಳನ್ನು ತಮ್ಮ ವಸತಿಗಾಗಿ ಆರಿಸುವುದು ಗೋಚರಿಸಿತು. ಅವುಗಳ ಆಗಮನದಿಂದಾಗಿ ಹಲಸಿನ ಮರವಿಡೀ ಬಿಳಿ ಹೂಗಳನ್ನು ತಳೆದು ನಿಂತಂತೆ ಭಾಸವಾಯಿತು.

ಈ ಆಗಂತುಕರ ಬಗ್ಗೆ ಕಾಕಸಮೂಹಕ್ಕೆ ಅಸೂಯೆ ಮೂಡಿರಬೇಕು. ತಂಡತಂಡಗಳಲ್ಲಿ ಬಂದು ಏಕಪ್ರಕಾರವಾಗಿ ಆಕ್ರಮಣ ನಡೆಸಿದವು. ಇದಕ್ಕೆ ಸಿದ್ಧವಿಲ್ಲದೆ ಈ ಬೆಳ್ಳಕ್ಕಿಗಳು, ಸುತ್ತಮುತ್ತಲೂ ಬೆಳೆದು ನಿಂತ ಕರಿಬೇವು, ಬಿಲ್ವ, ನೀಲಗಿರಿ, ತೆಂಗಿನ ಮರಗಳ ಆಶ್ರಯ ಪಡೆದವು. ಜಯಭೇರಿ ಹೊಡೆದ ಕಾಕಸೈನ್ಯ, ಹಸಿವು ತಾಳಲಾರದೇ ದಿನದಂತೆ ಆಹಾರವನ್ನು ಹುಡುಕಿಕೊಂಡು ಎಲ್ಲೆಲ್ಲಿಗೋ ಹಾರಿ ಹೋದವು. ಈ ಅವಕಾಶಕ್ಕಾಗಿಯೇ ಕಾದುಕೊಂಡಿದ್ದ ಹೊಸ ಹಕ್ಕಿಗಳು ತಾವು ಮೊದಲು ಆರಿಸಿಟ್ಟಿದ್ದ ಸ್ಥಾನಗಳಲ್ಲೆಲ್ಲ ಸ್ಥಾಪಿತವಾದವು. ಮತ್ತೊಮ್ಮೆ ಏರಿ ಬಂದ ಕಾಗೆಗಳನ್ನೆಲ್ಲ ಗರಿಗೆದರಿ ಎದುರಿಸಿ, ಬಾಯಿ ತೆಗೆದು "ಕರ್. ಕರ್" ಎಂದು ಗದರಿಕೊಂಡವು. ಈ ಬೃಹತ್ ಸೈನ್ಯವನ್ನು ಎದುರುಹಾಕಿಕೊಳ್ಳುವುದು ಜಾಣತನವಲ್ಲವೆಂದು ಕಾಗೆಗಳೆಲ್ಲಾ ಬೇರೆಲ್ಲಿಗೋ ಹಾರಿಹೋದವು. ಇಡೀ ಮರವನ್ನು ತಮ್ಮದನ್ನಾಗಿ ಮಾಡಿಕೊಂಡ ಹಕ್ಕಿಗಳಿಗೆ ಎಲ್ಲಿ ಯಾರು ವಾಸಿಸಬೇಕು, ಎಂಬ ನಿರ್ಧಾರ ಕೈಕೊಳ್ಳುವುದರಲ್ಲಿ ಇಡೀ ದಿನವೇ ಜಾರಿಕೊಂಡಿತು. ಯಾರ ಅಪ್ಪಣೆಯನ್ನು ಯಾರೂ ಪಾಲಿಸುವಂತಿರಲಿಲ್ಲವಾದ್ದರಿಂದ ವಾಗ್ಯುದ್ಧಗಳಿಗೇನೂ ಕೊರತೆಯಿರಲಿಲ್ಲ. ಪರಿಸರದಲ್ಲಿ ಈ ಪಾಚಾಳಿ ತಂಡ ಬೀಡು ಬಿಟ್ಟಿದ್ದರಿಂದ ನೆಮ್ಮದಿ ಅನಿಸಿತು.

ಬರಿಗಣ್ಣಿಗೆ ಬೆಳ್ಳಕ್ಕಿಗಳಂತೆ ಕಂಡರೂ, ದೂರದರ್ಶಕದಿಂದ ವೀಕ್ಷಿಸಿದಾಗ, ಯಾರದೋ ನರ್ತನ ಕೂಟದಲ್ಲಿ ಪಾಲುಗೊಳ್ಳಲು ಸಿದ್ಧರಾದ ನರ್ತಕಿಯರಂತೆ ಅವು ಸಿಂಗರಿಸಿಕೊಂಡಿದ್ದಂತೆ ಭಾಸವಾಯಿತು. ಎರಡು ಅಡಿ ಎತ್ತರದ ಶರೀರಕ್ಕೆ ಲೇಪಿಸಿಕೊಂಡ ಬಣ್ಣಗಳೆಷ್ಟು? ಉದ್ದ ಕಾಲುಗಳು, ಅರಿಸಿಣ ಅರೆದು ಸವರಿಕೊಂಡಷ್ಟು ಹಳದಿ, ಕಲಾಕಾರನಿಗಿರಬೇಕಾದ ಉದ್ದ ಬೆರಳುಗಳು. ಹಿಂದಕ್ಕೆ ಒಂದೇ ಒಂದು ಬೆರಳು. ಹೊಟ್ಟೆಯ ಭಾಗವೆಲ್ಲ ಹಿಮದಷ್ಟು ಬಿಳಿ. ರೆಕ್ಕೆ ಮತ್ತು ಬಾಲದ ಗರಿಗಳಿಗೆ ವಿಭೂತಿ ಬಳಿದಂತೆ ಬೂದುಬಣ್ಣ. ಶಿರದಿಂದ ಹಿಂಭಾಗಕ್ಕೆ ಹರಿದ ಕರಿಯ ಒಂದು ಪಟ್ಟಿ, ಕೆಂಡ ಕಾರುವಂತಿರುವ ಕೆಂಪು ಕಣ್ಣು, ಗುಡ್ಡೆಗಳು, ನಟ್ಟನಡುವೆ ಕರಿ ಬಿಂದು. ಹಣೆಯ ಮೇಲಿರುವ ಅರ್ಧ ಚಂದ್ರಾಕಾರದ ಬಿಳಿಯ ಪಟ್ಟೆಯಿಂದಾಗಿ ಅದು ಶಿವಭಕ್ತನಿರಬಹುದೆಂದು ತೋರುತ್ತದೆ! ಮೂಗು ಹೊರಳೆ ಮತ್ತು ಕಣ್ಣುಗಳನ್ನು ಕರಿಪಟ್ಟೆ ಜೋಡಿಸಿದ್ದರಿಂದ ಯಾರೋ ಬಿಲಾತಿ, ಚಶ್ಮಾ ತೊಡಿಸಿರಬೇಕು ಎನಿಸುತ್ತದೆ. ಶೂಲದಂತಹ ನೇರವಾದ ಕರಿಯ ಚುಂಚಿನಿಂದಾಗಿ ಕಾಗೆ ನೆನಪಿಗೆ ಬರುತ್ತದೆ. ಭೂಮಿಯಿಂದ ನೋಡುವವರಿಗೆ ಇದು ಬೆಳ್ಳಕ್ಕಿಯಾದರೆ ಗಗನವಿಹಾರಿಗೆ ಇದು ಕರಿಯಕ್ಕಿ!

ಪರಸ್ಪರ ಜಗಳ

ಬಂದು ಒಂದು ವಾರ ಕಳೆದರೂ ಅವುಗಳ ವಾಸ್ತವ್ಯದ ಬಗ್ಗೆ, ಸ್ಥಾನಮಾನದ ಬಗ್ಗೆ ಜಗಳ ಬಗೆಹರಿಯಲೇ ಇಲ್ಲ. ಯಾವುದೊಂದು ಕುಂಟ ನೆಪ ಸಿಕ್ಕಿದರೂ ಸಾಕು, ಪರಸ್ಪರ ಜಗಳ ಕಾಯುತ್ತಲೇ ಇದ್ದವು. ಆದರೆ ಎಂಥ ಸಿಟ್ಟು ವೈಮನಸ್ಸು, ಆಕ್ರೋಶಗಳಿದ್ದರೂ ಬಂಗಾಲಿಗಳಂತೆ ಬಾಯಿ ಜಗಳದಿಂದಲೇ ಪರಿಹರಿಸಿಕೊಳ್ಳುತ್ತವೆಯೇ ಹೊರತು ಪಠಾಣ ಸೈನಿಕರಂತೆ ಖಡ್ಗ, ಬಂದೂಕುಗಳನ್ನು ಬಳಸಿ ಕೊಲೆ-ಸುಲಿಗೆ ಮಾಡುವದಿಲ್ಲ, ಕಾದಾಡಿ ದಣಿದಾಗ ಅರೆ ನಿದ್ದೆಯಲ್ಲಿರುತ್ತವೆ. ಎಚ್ಚರವಾದಾಗೊಮ್ಮೆ ಮೈ ಕೊಡವಿ, ಗರಿಗಳನ್ನು ಹರವಿ, ಕಾಲಿಗಿರುವ ಬಾಚಣಿಗೆಯಿಂದ ಹಿಕ್ಕಿಕೊಳ್ಳುತ್ತವೆ. ಮೂಗಿನ ಸೊಳ್ಳೆಗಳಲ್ಲಿ ಸಿಕ್ಕಿಕೊಂಡ ಹೇನುಗಳನ್ನು ಕಾಲಿನ ಉಗುರುಗಳಿಂದ ಸಾಯಿಸುತ್ತವೆ. ಒಂದರ ಹಿಂದೊಂದು ಆಕಳಿಕೆಯನ್ನು ಹೊರಹಾಕುತ್ತವೆ. ವಿರಾಮವಿದ್ದಾಗ, ತಮ್ಮ ಕೊರಳನ್ನು, ಮುದಿಯಜ್ಜಿ ವೀಳ್ಯ ಜಗಿಯುವಾಗ, ಕೆಳದವಡೆ ತೂಗುವಂತೆ ಅಲುಗಾಡಿಸುವವು. ಇಡೀ ದಿನ ಮರದಲ್ಲಿಯೇ ಕುಳಿತು ಬೇರಾವ ಚಟುವಟಿಕೆಯಲ್ಲೂ ತೊಡಗದೇ ಇದ್ದುದರಿಂದ ಇವಕ್ಕೇನಾದರೂ ತ್ಯಾಗಿಗಳಿಗೆ ಸಿಗುವಂತಹ ಸಹಾಯಧನ ಸಿಗುತ್ತಿದೆಯೇ? ಎಂದು ವಿಚಾರ ಮೂಡಿತು. ಇಲ್ಲದಿದ್ದರೆ ಅನ್ನ-ನೀರಿಗೂ ಬಾಯಿ ಬಿಡದೇ ಜೀವಿಸುವುದು ಹೇಗೆ ಸಾಧ್ಯ?

ಒಂದು ಸಂಜೆ ಮರದತ್ತ ಕಣ್ಣು ಹಾಯಿಸಿದಾಗ ಅದು ಬರಿದಾಗಿ ಬಿಟ್ಟಿದ್ದರಿಂದ ಘೋರ ನಿರಾಶೆಯಾಯಿತು. ಅಪರೂಪಕ್ಕೆ ಬಂದ ಅತಿಥಿ-ಹಕ್ಕಿಗಳೆಲ್ಲ ಇಷ್ಟು ಬೇಗ ಹೊರಡಲು ಕಾರಣವೇನಿರಬಹುದು? ಯಾರಾದರೂ ಅಪಮಾನ, ಅಪಹಾಸ್ಯ ಮಾಡಿದರೇ? ಯಾವುದಾದರೂ ಅನಿರೀಕ್ಷಿತ ಗಂಡಾಂತರ ಒದಗಿ ಬಂದಿತೇ? ಏನೂ ತಿಳಿಯದಾಯಿತು. ಮಧ್ಯರಾತ್ರಿಯವರೆಗೆ ಕಾತರತೆಯಿಂದ ಕಾದರೂ ಹಕ್ಕಿಗಳ ಸುಳಿವೇ ಇಲ್ಲ. ಪೋಲೀಸ ಅರಣ್ಯಾಧಿಕಾರಿಗಳಿಗೆ ವಿಚಾರಿಸೋಣವೇ? ಏನೂ ತಿಳಿಯದಾಯಿತು. ಸರಿರಾತ್ರಿಯಲ್ಲಿ ಮಲಗುವ ಯತ್ನದಲ್ಲಿದ್ದಾಗ ಜಗಳಗಂಟ ನೆರೆಯವರು ಮರದಲ್ಲಿ

ಕಿರುಚಿಕೊಳ್ಳುತ್ತಿದ್ದಂತೆ ಕೇಳಿ ದಿಗ್ಗನೆದ್ದು ದೀಪ ಹಾಕಿ ನೋಡಿದರೆ ಹೌದು! ಒಂದೊಂದಾಗಿ ಗೂಡಿಗೆ ಮರಳುತ್ತಿವೆ. ಯಾರ ಮದುವೆಯೂಟಕ್ಕೆ ಹೋಗುತ್ತಿವೆ, ಬರುತ್ತಿವೆ- ಅರ್ಥವಾಗಲೊಲ್ಲದು! ಒಂದು ವಾರದ ನಂತರ ಹುಣ್ಣಿಮೆಯ ದಿನ ಅವು ಹಾರಿದ ದಿಕ್ಕಿನಲ್ಲಿಯೇ ಹಿಂಬಾಲಿಸಿ ಹೋದಾಗ ಹತ್ತಿರದ ಸಾಂಕಿಯ ಕೆರೆದಂಡೆಯಲ್ಲಿ ಅವುಗಳ ಸಂಕುಲ ಸೇರಿತ್ತು. ಮೊಣಕಾಲ ಮಟ್ಟ ನೀರಿನಲ್ಲಿ ನಿಂತು ಹತ್ತಿರ ಸುಳಿದ ಮೀನನ್ನು ಬರ್ಚಿಯಂತಹ ತಮ್ಮ ಕೊಕ್ಕಿನಿಂದ ಇರಿದು, ನುಂಗುವದರಲ್ಲಿ ಮೈ ಮರೆತಿದ್ದವು. ಉದ್ದ ಬೆರಳುಗಳಿಂದಾಗಿ ಕೆಸರಿನ ಮೇಲೆ ನಡೆಯಲು ಅನುಕೂಲವಾಗಿತ್ತು. ಮೀನು ಹಿಡಿಯುವಾಗಲೂ ಜಗಳ ಮಾಡುವುದನ್ನು ಬಿಡಲಿಲ್ಲ.

ಈ ಗೂಗೆಯಂತಹ ನಿಶಾಚರಿಗಳು, ಪಕ್ಷಿಗಳ ಪ್ರಪಂಚದಲ್ಲಿ ವಿಪುಲವಾಗಿದ್ದರಿಂದ, ಸೂತ್ರಗಳ ಸಹಾಯದಿಂದ ಈ ಅತಿಥಿಗಳು 'ಇರುಳು ಕಬ್ಬಾರೆ' ಎಂದು ಗುರುತಿಸಲು ಕಷ್ಟವಾಗಲಿಲ್ಲ. ಇದನ್ನು ರಾತ್ರೆಬಕ, ನಕ್ತಬಕ ಎಂದು ಕರೆಯುವುದೂ ಉಂಟು. ವಿವಿಧ ದೇಶಗಳಲ್ಲಿ ಪಸರಿಕೊಂಡ ಈ ಕಬ್ಬಾರೆಗೆ ಆಂಗ್ಲರು 'ನೈಟ್ ಹೆರಾನ್' ಎಂತಲೂ, ವಿಜ್ಞಾನಿಗಳು "ನಿಕ್ಟಿಕೋರೆಕ್ಸ್-ನಿಕ್ಟಿಕೋರೆಕ್ಸ್" ಎಂದೂ ಸಂಬೋಧಿಸುತ್ತಾರೆ. ಕೊಕ್ಕರೆ, ಫ್ಲ್ಯಾಮಿಂಗೊಗಳು ಇವುಗಳ ಹತ್ತಿರದ ಸಂಬಂಧಿಗಳಾಗಿದ್ದು 'ಸಿಕೋನ ಫಾರ್ಮಿಸ್' ವರ್ಗಕ್ಕೆ ಸೇರಿದ್ದಾಗಿವೆ. ಈ ಗುಂಪನ್ನು ಆರು ಕುಟುಂಬಗಳಲ್ಲಿ ವರ್ಗೀಕರಿಸಲಾಗಿದ್ದು ಇವುಗಳಲ್ಲಿ ನೂರ ಹತ್ತು ಪ್ರಭೇದಗಳಿವೆ. ಇರುಳು ಕಬ್ಬಾರೆ, ವಲಸೆ ಹೋಗುವುದರಲ್ಲಿ ಹೆಸರುವಾಸಿ. ಕಾಲಿಗೆ ಗುರುತಿನ ಚೀಟಿ ಅಂಟಿಸಿ, ಅಮೆರಿಕೆಯ ರಾಜಧಾನಿಯಿಂದ ಹಾರಿ ಬಿಟ್ಟವುಗಳನ್ನು ದೂರದ ಟೊರಾಂಟೊ (ಕ್ಯಾನಡಾ) ಮತ್ತು ದಕ್ಷಿಣದ ಕ್ಯೂಬಾ ನಡುಗುಡ್ಡೆಯಲ್ಲಿ ಬಂಧಿಸಲಾಯಿತು. ಇವುಗಳು ನೇರವಾಗಿ ಗಗನದತ್ತ ಹಾರಬಲ್ಲವಾದ್ದರಿಂದ, ಗಿಡುಗ ಬೇಟೆಯಾಡುವವರಿಗೂ ನೆಚ್ಚಿನ ಹಕ್ಕಿ. ಅವು ಕಳೆದ ಮೂರು ನೂರ ಅರವತ್ತು ಲಕ್ಷ ವರ್ಷಗಳಿಂದ ಜೀವನದಲ್ಲಿ ಯಾವ ಬದಲಾವಣೆ ಮಾಡಿಕೊಳ್ಳದೇ ಏಕಪ್ರಕಾರವಾಗಿ ಬದುಕುತ್ತ ಬಂದಿವೆ ಎಂದರೆ ನಂಬುವುದು ಕಷ್ಟ. ಮಾನವ ಲೋಕದಲ್ಲಿ ತಂದೆ ಧೋತರ ಉಟ್ಟರೆ, ಮಗ ಸಫಾರಿ ಸೂಟು ಧರಿಸುತ್ತಾನೆ. ತಾಯಿ ಸೀರೆ ಉಟ್ಟರೆ, ಮಗಳು ಸಲವಾರ ಕಮೀಜ ಧರಿಸುತ್ತಾಳೆ. ಒಂದು ತಲೆಮಾರಿನಲ್ಲೇ ಅಷ್ಟು ಅಂತರ!

ತಲೆಯ ಮೇಲೆ ತುರಾಯಿ

ಮೀಸೆ-ಗಡ್ಡಗಳಿದ್ದ ಗಂಡಿಗೆ ವಸಂತ ಋತುವಿನ ಆಗಮನದಿಂದಾಗಿ ತಲೆಯ ಮೇಲೆ ತುರಾಯಿ ಕಾಣಿಸಿಕೊಳ್ಳುವುವು. ಶುಭ್ರ-ಬಿಳಿ ಬಣ್ಣದ ಗರಿಗಳು, ಎರಡು, ಕೆಲ ಬಾರಿ ಮೂರು ಇರುತ್ತವೆ. ಸಾಮಾನ್ಯವಾಗಿ-ಗೇಣುದ್ದ ಇರುವುದು ವಾಡಿಕೆಯಾದರೂ, ಹಲವಕ್ಕೆ ಶರೀರ ಉದ್ದವಾಗಿರುತ್ತದೆ. ಇವುಗಳ ಸಂಖ್ಯೆ ಮತ್ತು ಉದ್ದದ ವ್ಯಾಸ, ಅವುಗಳ ವಯೋಮಾನಕ್ಕೆ ಅನುಗುಣವಾಗಿ ಬದಲಾವಣೆಯಾಗುತ್ತಿರಬಹುದೇ? ಈ ತುರಾಯಿಗಳು ಮೈಗೆ ಅಂಟಿಕೊಂಡೇ ಇರುವುದರಿಂದ ಸದಾ ಕಾಲ ಗಂಡು ಹೆಣ್ಣನ್ನು ಬಿಂಗಡಿಸುವುದು ಸುಲಭವೇನೂ ಅಲ್ಲ. ಅದೇ ನೆರೆಯವರನ್ನು ಬೆದರಿಸುವುದಕ್ಕಾಗಿ ಗರಿಗಳ ಜೊತೆಗೆ ತನ್ನ ಜುಟ್ಟನ್ನೂ ಹರಡಿಕೊಂಡು ರುದ್ರಾವತಾರ ತಾಳುತ್ತದೆ. ವಧೂ ಪರೀಕ್ಷೆಯ ಕಾಲದಲ್ಲಿ ವರನು ಸ್ವಸ್ಥಾನದಲ್ಲಿ ಗಂಭೀರವಾಗಿ ಕುಳಿತು, ಅತ್ತಿತ್ತ ಹಾರುವ ಕನ್ನೆಯರಿಗಾಗಿ ಕಾದು ನೋಡುತ್ತಾನೆ. ಮೆಚ್ಚಿಗೆಯಾದವಳು ಹಾರುತ್ತ ಬಂದಾಗ,



ಹಗಲಲ್ಲಿ ವಿರಮಿಸುವ ಇರುಳು ಕಬ್ಬಾರೆ



ಈ ಕಡ್ಡಿ ಸುಲಭವಾಗಿ ಮುರಿಯುವಂತಿದೆ



ಕಾದಾಟಕ್ಕೆ ಸದಾ ಸಿದ್ಧ






ನನ್ನ ಕಾರ್ಯದಕ್ಷತೆಗೆ ನಲ್ಲೆ ಅಭಿನಂದಿಸುತ್ತಾಳೆ



ಕಬ್ಬಾರೆಯ ವಿವಿಧ ಭಂಗಿಗಳು









ರೆಕ್ಕೆಗಳನ್ನು ಬಿಚ್ಚಿ, ಗರಿಗಳನ್ನು ಹರಡಿ, ತುರಾಯಿಗಳನ್ನು ನಿಲ್ಲಿಸಿ, ಗೋಣು ಬಾಗಿಸಿ, ಹಾಡುತ್ತ ನರ್ತಿಸಲಾರಂಭಿಸುವನು. ಈ ಸ್ವಾಗತಕ್ಕೆ ಮೆಚ್ಚಿ ಬಂದವಳು ಪೀಚಲು ಅನಿಸಿದರೆ, ರೇಗಾಡಿ ಕಚ್ಚಿ ಓಡಿಸುವುದರಲ್ಲಿ ಹಿಂದೆ-ಮುಂದೆ ನೋಡುವುದಿಲ್ಲ. ಯೌವನ ಪುಟಿಯುವ ಹೆಣ್ಣಿನ ಕಾಲುಗಳು ಗುಲಾಬಿ ವರ್ಣಕ್ಕೆ ಬದಲಾಗಿರುತ್ತವೆ. ಅಂಥವಳು ದೊರೆತಾಗ, ಗಂಡು ಹುಚ್ಚೆದ್ದು ಕುಣಿಯಲಾರಂಭಿಸುವದು. ಹೆಣ್ಣೂ ಅವನ ತಾಳಕ್ಕೆ ಹೆಜ್ಜೆ ಹಾಕುವುದರಿಂದ ಇಬ್ಬರಲ್ಲಿ ಅನುರಾಗ ಮೂಡಿ ಸಂತೋನೋತ್ಪತ್ತಿಗೆ ನಾಂದಿಯಾಗುವದು. ತಾನು ಆರಿಸಿದ ಕನ್ಯೆಗೆ ಬೇರಾವುದೂ ಕಣ್ಸನ್ನೆ ಮಾಡಿದರೂ, ಗಂಡು ವಿಪರೀತ ಕೋಪಗೊಂಡು ಅದಕ್ಕೆ ಬುದ್ಧಿ ಕಲಿಸದೇ ಬಿಡುವದಿಲ್ಲ.

ಗೃಹ-ನಿರ್ಮಾಣಕ್ಕೆ ತಾನು ಆರಿಸಿದ ತಾಣ ಪ್ರಶಸ್ತವಾಗಿದೆ, ಎಂದು ಪತ್ನಿಯಿಂದ ಬೆನ್ನು ಚಪ್ಪರಿಸಿಕೊಂಡು, ಗಂಡು ಗೂಡು ಕಟ್ಟಲು ಸಾಮಗ್ರಿ ತರಲಾರಂಭಿಸುವುದು. ಚಳಿಗಾಲವನ್ನು ದಕ್ಷ ರೀತಿಯಿಂದ ಎದುರಿಸುವುದಕ್ಕಾಗಿ ಪರ್ಣಕೋಡಿಯನ್ನು ಉದುರಿಸಿಕೊಂಡು ನಿಂತ ಬೇವಿನ ಮರ ಕಬ್ಬಾರೆಗೆ ಅತ್ಯಂತ ಆಕರ್ಷಕ. ಪತ್ನಿಯಿಂದ ಬೀಳ್ಕೊಂಡು, ತನ್ನನ್ನು ಯಾರೂ ಹಿಂಬಾಲಿಸುತ್ತಿಲ್ಲವೆಂದು ಖಚಿತಪಡಿಸಿಕೊಂಡು ಬೇವಿನ ಮರದತ್ತ ಧಾವಿಸುವುದು. ಅಲ್ಲಿ ಹತ್ತಾರು ಗಂಡುಗಳು ಆಗಲೇ ಕಡ್ಡಿಗಳ ಸಂಗ್ರಹಕ್ಕೆ ಬಂದಿರುವುದರಿಂದ ತಿರುಗಿ ಕಾಳಗವಾಗುವುದು. "ನಾನು ನಿನ್ನೆಯಿಂದ ಬರುತ್ತಿರುವ ಟೊಂಗೆಗೆ ನೀನು ಯಾಕೆ ಬರಬೇಕು?" "ಈ ಮರ ನಿಮ್ಮಪ್ಪ ನಟ್ಟಿದ್ದೇ?" ಎಂದು ಅವುಗಳು ವಾದ ಹೂಡುತ್ತಿರಬೇಕು. ಕಾದಾಟ ವಿಕೋಪಕ್ಕೆ ಹೋದಾಗ, ಎರಡೂ ಗಂಡುಗಳು ಕಡ್ಡಿ ತಾರದೇ ಪತ್ನಿಯತ್ತ ಹಿಂದಿರುಗುವವು. ಅಲ್ಲಿಯೂ ಪತ್ನಿಯರ ವಾಕ್‌ಪ್ರವಾಹ ಎದುರಿಸುವುವು!

ತನ್ನ ಶಕ್ತಿ-ಸಾಮರ್ಥ್ಯಗಳ ಬಗ್ಗೆ ಅಪಾರ ವಿಶ್ವಾಸವಿದ್ದ ಗಂಡು, ಗೂಡಿಗಾಗಿ ಗಟ್ಟಿಮುಟ್ಟಾದ ಟೊಂಗೆಯನ್ನು ಆರಿಸಿ, ಚುಂಚಿನಿಂದ ಕಚ್ಚಿ ಹಿಡಿದು, ಸಕಲ ಬಲವನ್ನು ಹಾಕಿ, ಎಳೆದು ಮುರಿಯಲು ಯತ್ನಿಸುವುದು. ಟೊಂಗೆ ಪ್ರತಿಭಟಿಸಿ ಮುರಿಯದಿದ್ದಾಗ, ಕಬ್ಬಾರೆ ದೃಢಸಂಕಲ್ಪದಿಂದ ಇನ್ನೂ ಮುರಿಯಲೆತ್ನಿಸಿದಾಗ, ಸಮತೋಲನ ತಪ್ಪಿ ನೆಲಕ್ಕುರುಳುವವರಲ್ಲಿರುತ್ತದೆ. ಇದರಿಂದ ಪೆಚ್ಚಾದ ಗಂಡು, ತೀರ ಸುಲಭವಾಗಿ ಸಿಗುವ ತೆಂಗಿನ ಗರಿಯಂತಹ ಕಡ್ಡಿಯನ್ನು ಕಚ್ಚಿಕೊಂಡು ಹಾರುವಾಗ ಕನಿಕರವೆನಿಸುತ್ತದೆ. ತಾವು ಗೂಡು ಕಟ್ಟಲು ಪಡುತ್ತಿರುವ ಪಾಡು ಪರರಿಗೆ ತಿಳಿಯಕೂಡದು! ಎಂದು ಮರಕ್ಕೆ ಸುತ್ತು ಹಾಕಿ ಆ ಟೊಂಗೆ ಈ ಟೊಂಗೆಯ ಮೇಲೆ ಕೂರುತ್ತ ಬಂದು ನಲ್ಲೆಯನ್ನು ಸೇರಿಕೊಳ್ಳುವುದು. ಗಂಡು ತಂದ ಕಡ್ಡಿಯಲ್ಲಿ ಏನೂ ಕಸುವು ಇಲ್ಲವೆಂದು ಹೆಣ್ಣು ನೆಲಕ್ಕೆ ಎಸೆದೇ ಬಿಟ್ಟಾಗ ಪೆಚ್ಚು ಮುಖ ಹಾಕಿದ ಗಂಡು ಅತ್ತಿತ್ತ ತನ್ನನ್ನು ಯಾರಾದರೂ ನೋಡಿ ಗೇಲಿ ಮಾಡಿಯಾರೇ? ಎಂದು ನೋಡಿಯೇ ನೋಡುವದು. ಹೆಣ್ಣಂತೂ ಈ ನಾಲಾಯಕನ ಯೋಗ್ಯತೆ ಮೊದಲೇ ಗೊತ್ತಾಗಿದ್ದರೆ ಇವನತ್ತ ಹಾಯುತ್ತಲೇ ಇರಲಿಲ್ಲ! ಎಂಬ ನಿರಾಸಕ್ತ ಮನೋಭಾವ ತಳೆದು ಕೂಡ್ರುವದು. ಇಂದು ಯಾರ ಮುಖ ನೋಡಿದೆನೋ! ಎಂಬ ಹತಾಶ ಭಾವ ಹೊತ್ತು ಗಂಡು ಅನಾಸಕ್ತಿಯಿಂದ ದಿನಕಳೆಯುವುದು.

ಗೂಡು ಕಟ್ಟುವ ನಿಧಾನ ಕಾರ್ಯ

ಗೂಡು ಕಟ್ಟುವ ಕಾರ್ಯ ಬಹಳ ನಿಧಾನವಾದದ್ದು. ಕಡಿಮೆಯೆಂದರೆ, ಹತ್ತು ಹದಿನೈದು ದಿನ ಬೇಕು. ಎಷ್ಟೋ ಸಲ ಅರ್ಧ ಕೆಲಸ ಮಾಡಿದಾಗ ಗಾಳಿ ಮಳೆಯಿಂದ ಎಲ್ಲವೂ ನೆಲಸಮವಾಗಿ ಬಿಡುವುದು. ಅಂಥ ಪ್ರಸಂಗಗಳಲ್ಲಿ ಎಲ್ಲವನ್ನೂ ಹೊಸದಾಗಿ ಪ್ರಾರಂಭಿಸಬೇಕು. ಉದ್ದ-ಅಗಲಕ್ಕೆ ಕಡ್ಡಿಗಳನ್ನು ಜೋಡಿಸಿ, ಅರೆ ವರ್ತುಲಾಕಾರದ ತೊಟ್ಟಿಲಿನಂತೆ ರಚಿಸುವ ಗೂಡು, ಮೆಚ್ಚತಕ್ಕಂಥದ್ದು. ಇದಾಗಲೇ ಬೇವಿನ ಮರ, ಚಿಗುರೆಲೆಗಳನ್ನು ತಳೆದು ನಿಲ್ಲುವದರಿಂದ ತೊಟ್ಟಿಲಿನಲ್ಲಿ ಹಾಕುವದಕ್ಕಾಗಿ ಅವನ್ನು ಗೂಡಿಗೆ ಸಾಗಿಸಲಾಗುವುದು. ಸಕಲ ಸಿದ್ಧತೆಗಳು ಸರಿಯಾಗಿವೆ ಎಂದು ಪತಿ-ಪತ್ನಿ ಒಮ್ಮತದಿಂದ ಒಪ್ಪಿಕೊಂಡಾಗ ಪತ್ನಿ ತನ್ನ ಮೈ ಭಾರ ಇಳಿಸಿಕೊಳ್ಳಲಾರಂಭಿಸುತ್ತದೆ. ದಿನಕ್ಕೊಂದರಂತೆ ನಾಲ್ಕು ಅಥವಾ ಐದು ಮೊಟ್ಟೆಗಳನ್ನು ಇಡುತ್ತದೆ. ಇವುಗಳ ಸಂರಕ್ಷಣೆಗಾಗಿ ಜೋಡಿ ಸರ್ಪಕಾವಲನ್ನು ಇಡುವುದು. ಇಷ್ಟಾದರೂ ಆಗೊಮ್ಮೆ, ಈಗೊಮ್ಮೆ ಕಾಕ ಸೈನ್ಯ ದಾಳಿ ಮಾಡಿ ಮೊಟ್ಟೆಗಳ ನಾಶ್ತಾ ಮಾಡಬಯಸಿದಾಗ, ಇಡಿ ಕಬ್ಬಾರೆ ಸಮಾಜವೇ ಅವುಗಳನ್ನು 'ಚೋಕ್ ಚೋಕ್' ಎಂದು ವಿರೋಧಿಸುವುದರಿಂದ ಪಲಾಯನ ಮಾಡದೇ ಬೇರೆ ಮಾರ್ಗವಿರುವುದಿಲ್ಲ. ಗಗನಮಂಡಲದಲ್ಲಿ ಸದಾ ಕಾಲ ಸಂಚರಿಸುವ ಹದ್ದುಗಳಿಗೆ ಮೊಟ್ಟೆಗಳು ಸುಲಭದಲ್ಲಿ ಎಟುಕದ್ದರಿಂದ, ಅವು ಎಷ್ಟೋ ಸುರಕ್ಷಿತ. ಆದರೆ ಕೆಂಪು ಮೂತಿಯ ಮಂಗಗಳು ಮರವೇರಿದವೆಂದರೆ, ಎಲ್ಲ ಪಾಲಕರೂ ತಮ್ಮ ತೀವ್ರ ವಿರೋಧವನ್ನು ವ್ಯಕ್ತಪಡಿಸಿದರೂ, ಉಪಯೋಗವಾಗದೇ ಕಂಡು ಕೇಳಬೇಕಾಗುತ್ತದೆ. ಕೋತಿಗಳು ಮೊಟ್ಟೆಗಳನ್ನು ಭಕ್ಷಿಸುವುದಲ್ಲದೇ ಗೂಡುಗಳನ್ನೂ ನೆಲಕ್ಕುರುಳಿಸುವುವು. ಇದರಿಂದ ಕಬ್ಬಾರೆ ಪಡುವ ಬವಣೆ, ಅಷ್ಟಿಷ್ಟಲ್ಲ. ಆದರೂ ಅವು ಧೃತಿಗೆಡದೇ ಪುನಃ ಗೂಡುಕಟ್ಟಿ ಮೊಟ್ಟೆಯಿಡುವುವು.

ಮರಿಗಳು ಹಾರುವುದಕ್ಕಾಗಿ ನಡೆಸುವ ತಾಲೀಮು ಆಕರ್ಷಕವಾಗಿರುತ್ತದೆ. ನಿಂತಲ್ಲಿಯೇ ನಿಂತು ಒಮ್ಮೆ ಪ್ರದಕ್ಷಿಣೆ ಹಾಕಿ, ತಿರು ಪ್ರದಕ್ಷಿಣೆ ಹಾಕಿ, ಜೋರಾಗಿ ರೆಕ್ಕೆಗಳನ್ನು ಕೊಡಹುತ್ತವೆ. ಎಡಕ್ಕೆ-ಬಲಕ್ಕೆ, ಮೇಲೆ-ಕೆಳಗೆ ಎಲ್ಲ ದಿಕ್ಕುಗಳಲ್ಲಿ ತಿರುಗಿಸುತ್ತವೆ. ವಿಮಾನದ ರೆಕ್ಕೆಗಳಂತೆ ಅತಿ ವೇಗದಿಂದ ಅವು ಬಡಿದುಕೊಳ್ಳುವದರಿಂದ, ಅವುಗಳ ಸ್ಥಾನಮಾನ ಅರಿಯಲು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು. ಕಣ್ಣಿಗೆ ಕಾಣುವ ದೃಶ್ಯಗಳನ್ನೆಲ್ಲ ಕ್ಯಾಮರಾದಲ್ಲಿ ಸೆರೆಹಿಡಿಯಲು ಯತ್ನಿಸಿದಾಗ ಹಲಸಿನ ಮರವೇ ಬೃಹದಾಕಾರದಲ್ಲಿ ಮೂಡುವಂತಾಯಿತು. ದೂರದರ್ಶಕ ಕಣ್ಣಿರುವ ಕ್ಯಾಮರಾ ಕೊಳ್ಳಬೇಕು ಎಂದು ಯೋಚಿಸುತ್ತಿದ್ದಾಗಲೇ ಮಳೆಗಾಲ ಪ್ರಾರಂಭವಾದ್ದರಿಂದ, ಕಬ್ಬಾರೆಗಳು ಹೊಸ ಪೀಳಿಗೆಯೊಂದಿಗೆ. ಗಂಟು ಮೂಟೆ ಕಟ್ಟಿಕೊಂಡು ಹಾರಿ ಎಲ್ಲಿಗೋ ಹೋದವು.

ನಿರೀಕ್ಷಿಸಿದಂತೆ ಮರು ವರ್ಷವೂ (1981) ಅದೇ ಕಾಲಕ್ಕೆ ಹಿಂದಿರುಗಿ ಬಂದು ಅದೇ ಮರದಲ್ಲಿ ಠಾಣ್ಯ ಹೂಡಿದವು. ಹೊಸ ಕ್ಯಾಮರಾದಲ್ಲಿ ಹಾರುತ್ತಿರುವ ಹಕ್ಕಿ ಕ್ಲಿಕ್ ಮಾಡುವುದರಲ್ಲಿ ಅವೆಲ್ಲೂ ಹಾರಿ ಕಣ್ಮರೆಯಾಗುತ್ತಿದ್ದುದರಿಂದ ಫಿಲ್ಮಿನ ಮೇಲೆ ನೀಲಿ ಆಕಾಶ ಮಾತ್ರ ಮೂಡುವಂತೆ ಆಯಿತು! ಬಳಸಿದ ಫಿಲ್ಮು ನಷ್ಟವಾಯಿತಲ್ಲದೆ ಯಾವ ಲಾಭವೂ ಆಗಲಿಲ್ಲ.

6. ಕವಡೆಗಳ ಕಥೆ

ಹಿಂದೊಮ್ಮೆ ಕವಡೆಗಳನ್ನು ನಾಣ್ಯದಂತೆ ಬಳಸಲಾಗುತ್ತಿತ್ತು. ಹದಿನೆಂಟನೆಯ ಶತಮಾನದಲ್ಲಿ ಆರು ಸಹಸ್ರ ಕವಡೆಗಳೆಂದರೆ ಒಂದು ರೂಪಾಯಿ. ಆದರೆ ಇಂದು ರೂಪಾಯಿಗೇ ಬೆಲೆ ಇಲ್ಲದಾಗ ಮೌಲ್ಯವನ್ನು ಗುರುತಿಸುವವರಾರು? ಅಂತೆಯೇ ಅಯೋಗ್ಯರಿಗೆ "ಕವಡೆಯ ಬೆಲೆಯೂ ಇಲ್ಲ" ಎಂಬ ನಾಣ್ನುಡಿ ಬಳಕೆಯಲ್ಲಿ ಬಂದಿದೆ. ಇಷ್ಟಾದರೂ ಒಂದು ವಿಧದಲ್ಲಿ ಕವಡೆಯ ಸ್ಥಾನಮಾನದಲ್ಲಿ ಕಿಂಚಿತ್ತೂ ಕಡಿಮೆಯಾಗಲಿಲ್ಲ.

ಏನ್ನೊ ಕಳೆದುಕೊಂಡವರು ಭಟ್ಟರಿಂದ ಕವಡೆ ಹಾಕಿಸಿ ಅದು ಮತ್ತೆ ಸಿಗುವ ಸಾಧ್ಯತೆ ತಿಳಿಯಲೆತ್ನಿಸುತ್ತಾರೆ. ಎಲ್ಲಮ್ಮನ ಭಕ್ತೆಯರು ಅವುಗಳ ಸರಗಳಿಂದ ಅಂಗಾಂಗಗಳನ್ನು ಅಲಂಕರಿಸಿಕೊಳ್ಳುತ್ತಾರೆ. ಹಳ್ಳಿಗಳಲ್ಲಿ ಹುಡುಗಿಯರು ಕವಡೆಗಳಿಂದ ಚೆನ್ನೆಯಾಡುತ್ತಾರೆ. ಕುಶಲ ಕರ್ಮಿಗಳು, ಆಧುನಿಕರು ಅವುಗಳಿಂದ ಗೊಂಬೆ, ಹೂದಾನಿಗಳನ್ನು ನಿರ್ಮಿಸಿ ಗೃಹಾಲಂಕಾರವಾಗಿ ಬಳಸುತ್ತಾರೆ. ಆದರೆ ಆದಿವಾಸಿಗಳು ಅವನ್ನು ಆಪ್ತ ಧನದಂತೆ ಪ್ರೀತಿಸುತ್ತಾರೆ, ಸುವರ್ಣದಂತೆ ಸಂರಕ್ಷಿಸುತ್ತಾರೆ. ಆಧುನಿಕರು ಬಂಗಾರ ಶೇಖರಿಸುವಂತೆ ಅವರು ಕವಡೆಗಳನ್ನು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ.

ಸ್ತ್ರೀ ಪುರುಷರ ಪೋಷಾಕುಗಳನ್ನು ತಯಾರಿಸುವುದರಲ್ಲಿ ಕವಡೆಗಳನ್ನು ಬಳಸಲಾಗುತ್ತದೆ. ಹೆಂಗಳೆಯರು ಹೂ-ಗುಚ್ಛದಂತೆ ಗೊಂಚಲಿನಂತೆ ಕವಡೆಗಳನ್ನು ಕುಪ್ಪಸದಲ್ಲಿ ಹೆಣೆಯುತ್ತಾರೆ. ಸೆರಗಿನ ಅಂಚಿಗೆ ನೇತುಬಿಡುತ್ತಾರೆ. ಬಟ್ಟೆ ಚೀಲಕ್ಕೆ ಹೊರಗಿನಿಂದ ಕವಡೆಗಳನ್ನು ಪೋಣಿಸುತ್ತಾರೆ. ಹಬ್ಬ-ಹುಣ್ಣಿಮೆಗಳಲ್ಲಿ ವಿಶೇಷ ಸಮಾರಾಧನೆಗಳಲ್ಲಿ ಕವಡೆಯ ಪೋಷಾಕುಗಳನ್ನು ಧರಿಸುವುದು ಹೆಚ್ಚು. ಬಲೆಯಂತೆ, ನೂಲಿನಂತೆ, ನಿಲುವಂಗಿ ತಯಾರಿಸಿ ಅದರ ಕೆಳಭಾಗದಲ್ಲಿ ವಿವಿಧ ಬಗೆಯಲ್ಲಿ ಕವಡೆಗಳನ್ನು ಜೋಡಿಸುತ್ತಾರೆ. ಆದಿವಾಸಿಗಳು ಈ ನಿಲುವಂಗಿ ಪಾಶ್ಚಾತ್ಯರ 'ನಿಗ್ಲಿಜಿ'ಯನ್ನು ಬಹಳವಾಗಿ ಹೋಲುತ್ತದೆ. ಅಂತಹವನ್ನು ಪಾಶ್ಚಾತ್ಯರು ಖಾಸಗಿ ಜೀವನದಲ್ಲಿ ಶಯನಾಗಾರದಲ್ಲಿ (ಅದನ್ನು) ಉಟ್ಟರೆ, ಆದಿವಾಸಿಗಳು ಬಹಿರಂಗವಾಗಿ ಅತಿಥಿಗಳನ್ನು ರಂಜಿಸಲು, ಹಾಸ್ಯ-ವಿನೋದದಲ್ಲಿ ತೊಡಗಿದಾಗ ಧರಿಸುವರು. ಬನಿಯನ್ ಹೋಲುವಂಥ ಒಳ ಅಂಗಿಗೆ ದಟ್ಟವಾಗಿ ಕವಡೆಗಳನ್ನು ಜೋಡಿಸುವ ಪರಿಪಾಠವೂ ಇದೆ. ಕೆಲವು ಬಾರಿ 'ಪೆಟಿಕೋಟ್'ದಂತಹ ಕಿರಿಯ ಉಡುಪಿಗೆ ಕವಡೆಗಳನ್ನು ಪೋಣಿಸುವ ಪರಿಪಾಠವೂ ಇದೆ.

ದನಕರು-ಎತ್ತುಗಳನ್ನು ಅಲಂಕರಿಸುವದರಲ್ಲೂ ಕವಡೆಗಳನ್ನು ಧಾರಾಳವಾಗಿ ಬಳಸುತ್ತಾರೆ. ದೊಡ್ಡ ದೊಡ್ಡ ಕವಡೆಗಳನ್ನು ದಪ್ಪ ದಪ್ಪ ದಾರಕ್ಕೆ ಪೋಣಿಸಿ ಎತ್ತಿನ

ಕೊರಳಿಗೆ ಹಾಕುವರು. ಎತ್ತನ್ನು ಅಲಂಕರಿಸಲು ಬೇರೆ ಬೇರೆ ಸರಗಳನ್ನು ಹಾಕಿದರೂ ಅವುಗಳ ಅಂಚಿಗೇ ಒಂದೆರಡಾದರೂ ಕವಡೆಗಳನ್ನು ಪೋಣಿಸುತ್ತಾರೆ. ಎತ್ತಿನ ಕೋಡಿಗೆ ಒಂದು ವರ್ತುಲ, ನಂತರ ಕನ್ನಡಿ, ಆ ಬಳಿಕ ಗೊಂಡೆಗಳನ್ನು ತೂಗಬಿಡುತ್ತಾರೆ.

ದೈವದ 'ಕಣ್ಣು'

ಆದಿವಾಸಿಗಳು ಆನೆಯ, ಕುದುರೆಯ ಮೂರ್ತಿಗಳನ್ನು ಮಾಡುವಾಗ ಅವುಗಳಿಗೆ ಕಣ್ಣು ಮೂಡಿಸಲು ಎರಡು ಕವಡೆಗಳನ್ನು ಜೋಡಿಸುವರು. ದೂರದಿಂದ ಅವು ಕಣ್ಣುಗಳಂತೆಯೇ ಭಾಸವಾಗುವವು. ಕೆಲ ಆದಿವಾಸಿ ಬಣದವರು 'ಗಾಂಗೂ' ದೇವರನ್ನು ಪೂಜಿಸುವರು. ಭೂತ-ಪಿಶಾಚಿಗಳಲ್ಲಿ ಹೆಚ್ಚಿನ ವಿಶ್ವಾಸವಿಟ್ಟ ಆದಿವಾಸಿಗಳು ವಕ್ರ ದೃಷ್ಟಿ ತಮ್ಮ ಮೇಲೆ ಬೀಳದಂತೆ ತಮ್ಮನ್ನು ಸಂರಕ್ಷಿಸಿಕೊಳ್ಳಲು, ಕಣ್ಣಿಗೆ ಹೋಲುವ ಕವಡೆಗಳನ್ನು ಸದಾಕಾಲ ಧರಿಸುವರು. ಬಂಜೆಯರು, ರೋಗ ಪೀಡಿತರು, ಮಂತ್ರಿಸಿದ ಕವಡೆಗಳ ತಾಯಿತ ಧರಿಸುವ ಪದ್ಧತಿಯೂ ಬೆಳೆದು ಬಂದಿದೆ.

ಮಾನವಶಾಸ್ತ್ರ ಪಂಡಿತರ ವಿಚಾರ-ವಿಶ್ಲೇಷಣೆ ಹೇಗೆ ಹೊರಟೀತೆಂದು ಹೇಳಲಾಗದು. ತೃಣ ಸಮಾನವಾದ ಕವಡೆಗಳಿಗೆ ಆದಿವಾಸಿಗಳು ಇಷ್ಟೊಂದು ಮಹತ್ವ ಏಕೆ ಕೊಡುತ್ತಾರೆಂದು ಕಾರಣ ಹುಡುಕುತ್ತ ಹೋದರೆ ಕಗ್ಗತ್ತಲೆಯಲ್ಲಿ ಮುಗ್ಗರಿಸಿದಂತೆ ಕಾಣುತ್ತದೆ. ಒಬ್ಬ ಪಂಡಿತನು ಕವಡೆಯ ಆಕೃತಿ ಯೋನಿಯನ್ನು ಹೋಲುವದರಿಂದ ಮೂಲ ಬುಡಕಟ್ಟಿನವರಿಗೆ ಅವುಗಳ ಮೇಲೆ ವಿಶೇಷ ಪ್ರೀತಿ-ಎಂದು ವಾದಿಸಿದ. ಆದರೆ ಸ್ತ್ರೀಯರು ಪುರುಷರಿಗಿಂತ ಹೆಚ್ಚಾಗಿಯೇ ಇವನ್ನು ಅಲಂಕಾರದಲ್ಲಿ ಬಳಸುವದರಿಂದ ಈ ಹೋಲಿಕೆ ಸರಿಯಲ್ಲ ಎನಿಸದಿರದು. ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುವ ಘನ ಪಂಡಿತನೋರ್ವ ಕವಡೆಯ ಮೇಲ್ಭಾಗ, ಮಾಟವಾದ ಸ್ತನಗಳಿಗೆ ಹೋಲುವದರಿಂದ ಅವುಗಳಿಗೆ ಹೆಚ್ಚಿನ ಬೇಡಿಕೆ ಇದ್ದಿರಬೇಕೆಂದು ವಿಚಾರ ಮಂಡಿಸಿದ. ಆದರೆ ಆದಿವಾಸಿಗಳಲ್ಲಿ ಸ್ತನ, ಕಾಮಾಂಗವಲ್ಲ; ಕುಪ್ಪಸ ಧರಿಸದಿರುವ ಅವರ ಸಮಾಜದಲ್ಲಿ ಹೆಣ್ಣಿನ ತೆರೆದ ಎದೆ ನೋಡುವ ಅವಕಾಶ ಸದಾಕಾಲವೂ ಇರುವಾಗ, ಕವಡೆ ನೋಡಿ ಕಲ್ಪನಾಲೋಕಕ್ಕೆ ಹೋಗಬೇಕಾದ ಅಗತ್ಯವೇನೊ ತಿಳಿಯದು. ಅಲ್ಲದೇ ಹಲವಾರು ಮಕ್ಕಳನ್ನು ಹೆರುವ ಮಹಿಳೆಯ ವಕ್ಷ ಕವಡೆಯಂತಿರುವುದು ಅತಿ ವಿರಳ. ಪ್ರಾಯಶಃ ಇವೆಲ್ಲ ಪಾಶ್ಚಾತ್ಯರಿಂದ ಎರವಲು ಪಡೆದ ವಿಚಾರಗಳು.

ಕೊರಳಸರ

ಆದಿವಾಸಿಗಳಲ್ಲಿ ದಿನಬಳಕೆಯ ಕೊರಳ ಸರಗಳನ್ನು ರಚಿಸಲು ಒಂದರಿಂದ ನಾಲ್ಕು ಎಳೆಗಳಿಗೆ ಗಾಜಿನ ಮಣಿಗಳನ್ನು ಪೋಣಿಸಿ, ಎರಡು ಅಂಚಿಗೂ ಒಂದೊಂದು ಕವಡೆಯನ್ನು ನೇತು ಬಿಟ್ಟಿರುತ್ತಾರೆ. ಬಣ್ಣಬಣ್ಣದ ಕವಡೆಗಳನ್ನು ರೇಷ್ಮೆದಾರಗಳಿಂದ ಪೋಣಿಸಿ, ನಡು ನಡುವೆ ನೀಲಿ, ಕೆಂಪು ಮಣಿಗಳನ್ನು ಸೇರಿಸುತ್ತಾರೆ. ನೆಕ್ಲೇಸ್‌ನಂತಹ ಪಟ್ಟಿ-ಸರ ರಚಿಸಲು ಕೆಂಪು, ನೀಲಿ, ಹಸಿರು ಬಟ್ಟೆಗಳ ಪಟ್ಟಿ ಹೊಲಿದು ಅನಂತರ ಶುಭ್ರ ಬಿಳಿ ಕವಡೆಗಳನ್ನು ಜೋಡಿಸುವರು. ದಿನಂಪ್ರತಿ ಬಳಕೆಯಿಂದ ಅವು ಮುರಿ-ಮುರಿಯಾಗಬಾರದೆಂದು, ಬಟ್ಟೆಯನ್ನು ಚಾಪೆಯಂತೆ ಹೊಲಿದು ಕವಡೆಗಳಿಗೆ ಆಶ್ರಯ



ಕವಡೆಗಳ ಕೈಚೀಲ



ಕನ್ಯೆಯ ಕಣ್ಣಿನಂತಹ ಕವಡೆ



ನೃತ್ಯಗಾರರ ಕೈ ಅಲಂಕಾರ




ಗೊಂಡ ಬಾಸುರಿ ವಾದಕ



ಅಲಂಕಾರಕ್ಕಾಗಿ ಕವಡೆಗಳು

ಕವಡೆಗಳ ಕಂಠಾಲಂಕಾರ



ನೀಡುವರು. ಕೆಲ ರಸಿಕ ಹೆಂಗಳೆಯರು ಒಂದೇ ಅಳತೆಯ ಕವಡೆಗಳನ್ನು ನಾಲ್ಕು ಐದು ಎಳೆಗಳ ಸರಗಳಲ್ಲಿ ಕಲಾತ್ಮಕವಾಗಿ ಹೆಣೆಯುವುದರಲ್ಲಿ. ತುತ್ತ ತುದಿಯಲ್ಲಿ ಹೂಗೊಂಚಲಿಗೆ ಹೋಲುವಂತೆ ನೇತು ಬಿಟ್ಟಿರುತ್ತಾರೆ. ಇನ್ನು ಕೆಲವರು ಬಿಳಿ ಕವಡೆಗಳನ್ನು ಮಲ್ಲಿಗೆ ದಂಡೆಯಂತೆ ಜೋಡಿಸಿ ತಮ್ಮ ಕೂದಲಲ್ಲಿ ಪಿನ್ ಹಾಕಿ ಮುಡಿಯುತ್ತಾರೆ. ಬಣ್ಣಬಣ್ಣದ ಕವಡೆಗಳಿಂದ ಎಷ್ಟು ಆಕರ್ಷಕವಾದ ಆಭರಣಗಳನ್ನು ತಯಾರಿಸುತ್ತಾರೆಂದು ನೋಡಲು ಆದಿವಾಸಿಗಳು ಹೆಚ್ಚಾಗಿ ನೆರೆಯುವ ಸಂತೆ, ಜಾತ್ರೆಗಳಿಗೆ ಹೋಗಬೇಕು. ಈ ಆಭರಣಗಳು ಆದಿವಾಸಿ ಲಲನೆಯರಿಗೆ ಭೂಷಣವೋ ಇಲ್ಲವೇ ಲಲನೆಯರೇ ಆಭರಣಗಳಿಗೆ ಭೂಷಣವೋ ಎಂದು ಖಚಿತವಾಗಿ ಹೇಳುವುದು ಕಷ್ಟ! ಎರಡನ್ನೂ ನೋಡುವುದೇ ಕಣ್ಣಿಗೊಂದು ಹಬ್ಬ.

ಪುರುಷರು, ತಮ್ಮ ನೃತ್ಯದಲ್ಲಿ ಬಳಸಲಾಗುವ ಶಿರೋಭೂಷಣ ತಯಾರಿಸಲು ಕವಡೆಗಳನ್ನು ಬಳಸುವರು. ಮಧ್ಯಪ್ರದೇಶದ ಬಸ್ತರದ "ಕಾಡು ಕೋಣ ಕೋಡಿ"ನ (Bisonunorn Maria) ಮಾರಿಯ ಜನರು ನರ್ತಿಸುವಾಗ ಕೋಡುಗಳನ್ನು ಮುಂಭಾಗಕ್ಕೆ ಜೋಡಿಸಿ ಕವಡೆ ಸರಗಳನ್ನು ಅಲಂಕಾರವಾಗಿ ಇಳಿಬಿಡುತ್ತಾರೆ. ಎರಡು ಕೋಡುಗಳ ಮಧ್ಯೆ ನವಿಲುಗರಿಗಳನ್ನು ಸಿಕ್ಕಿಸಿ ಕವಡೆಗಳಿಂದ ಹೂಗೊಂಚಲುಗಳನ್ನು ರಚಿಸಿ ಕಟ್ಟುತ್ತಾರೆ. ರುಮಾಲು ಇಲ್ಲದೇ ಕವಡೆಗಳ ಶಿರೋಭೂಷಣ ಧರಿಸುವ ಮಾರಿಯರೂ ಇದ್ದಾರೆ. ಜೋಡಿಕೋಡುಗಳನ್ನು ಬಟ್ಟೆಯಿಂದ ಸುತ್ತಿ ಅದಕ್ಕೆ ಎರಡು ಅಲಂಕೃತ ಕನ್ನಡಿಗಳನ್ನು ಜೋಡಿಸುವುದೂ ಇದೆ.

ನಿಸರ್ಗದ ಕಲಾಕೃತಿ

ಕವಡೆಗಳು ಕಡಲ-ಮೃದ್ವಂಗಿಗಳ ಒಂದು ಪ್ರಭೇದ. ಶಂಖದಂತೆ ಇದೊಂದು ಹೊರ ಕವಚ ಮಾತ್ರ. ಜೀವಿಯ ಅಂಗಾಂಗಗಳು ಅತಿ ಮೃದುವಾಗಿರುವುದರಿಂದ ಸಂರಕ್ಷಣೆಗಾಗಿ ಈ ಕವಚವಿರುತ್ತದೆ. ತನ್ನ ಪರಿಸರದಲ್ಲಿ ಸುಣ್ಣವನ್ನು ಬಳಸಿ ವರ್ಣಮಯ ಚಿಪ್ಪನ್ನು ತಯಾರಿಸುವ ಈ ಪ್ರಾಣಿ ಒಂದು ಅಪೂರ್ವ ಕಲಾಕಾರನೆನಿಸಿಕೊಳ್ಳುತ್ತದೆ.

ಹಳದಿ, ನಸುಗೆಂಪು, ಕೇಸರಿ ವರ್ಣಗಳ ಗೆರೆ, ವರ್ತುಲ, ಬಿಂದುಗಳಿಂದ ಅಲಂಕೃತವಾದ ಕವಡೆಗಳು ನಿಸರ್ಗದ ಕಲಾಕೃತಿಗಳು. ಈ ಪ್ರಾಣಿ, ನಿಶಾಚರವಾಗಿದ್ದರಿಂದ ಆಹಾರ ಸಂಪಾದನೆಯನ್ನು ಸಾಯಂಕಾಲದ ನಂತರವೇ ಆರಂಭಿಸುವುದು. ಪರಿಸರದಲ್ಲಿ ಸ್ವಲ್ಪವಾದರೂ ಬದಲಾವಣೆಗಳಾದರೆ, ಅದು ಶಿಂಪನ್ನು ಸೇರಿಕೊಂಡು ತಟಸ್ಥವಾಗಿ ಬಿಡುತ್ತದೆ. ಮೀನುಗಾರರ ಬಲೆಗಳಲ್ಲಿ ಇವು ಅಸಂಖ್ಯಾತವಾಗಿ ಬರುವವಲ್ಲದೇ, ಪ್ರಾಣಿಗಳು ಮೃತಪಟ್ಟಾಗ ಶಿಂಪುಗಳೆಲ್ಲ ಕಡಲ ದಡಕ್ಕೆ ಕೊಚ್ಚಿ ಬಂದು ಬೀಳುವುದು. ಆದರೆ ಇಂಥ ಚಿಪ್ಪುಗಳಿಗೆ ಬಣ್ಣದ ಹೊಳಪು ಕಡಿಮೆಯಾಗುವುದರಿಂದ, ವ್ಯಾಪಾರಿಗಳು ಅವುಗಳನ್ನು ಕಡಲ ಆಳದಿಂದಲೇ ಸಂಗ್ರಹಿಸಿ, ಬಿಸಿ ನೀರಿನಿಂದ ಒಳಗಿನ ಹುಳುವನ್ನು ಪರಲೋಕಕ್ಕೆ ಕಳಿಸಿ, ಆಕರ್ಷಕ ಕವಡೆಗಳನ್ನು ಪಡೆಯುತ್ತಾರೆ.

ಒಟ್ಟು ಸುಮಾರು ನೂರೈವತ್ತು ಪ್ರಕಾರದ ಕವಡೆಗಳಿವೆ. ಕೆಲವೇ ಕೆಲವು ಮಿಲಿ ಮೀಟರದಿಂದ ಹಿಡಿದು, ಎಂಟು ಸೆಂಟಿಮೀಟರ ಉದ್ದವೂ ಇವೆ. ಅವುಗಳ ಆಕಾರ,

ಬಣ್ಣ, ಬಳಕೆಯಿಂದಾಗಿ ನಾಣ್ಯ ಉಂಗುರ ಕಿತ್ತಳೆ, ಕೇಸರಿ, ಕುಬ್ಜ, ರಮ್ಯ, ಅದ್ಭುತ, ಕೂರ್ಮ, ನಕ್ಷೆ, ವಕ್ರ, ಬೂದು, ವಿದೂಷಕ ಜಾತಿಯ ಕವಡೆಗಳೆಂದು ಗುರುತಿಸಬಹುದಾಗಿದೆ. ಅದ್ಭುತ ಕವಡೆ ಅತಿ ಹೆಚ್ಚು ಬೆಲೆ ಬಾಳುವಂತಾದರೆ, ಕೂರ್ಮ ಕವಡೆ ಅತ್ಯಂತ ವಿರಳವಾದದ್ದು.

ಕವಡೆಗಳನ್ನು ನಾಣ್ಯವಾಗಿ ಬಳಸುವ ಯುಗದಲ್ಲಿ ಆಂಗ್ಲರು, ಅರಬರು, ಫ್ರೆಂಚರು, ಡಚ್ಚರು, ವಿಶ್ವಾದ್ಯಂತ ಈ ವ್ಯಾಪಾರದಲ್ಲಿ ತೊಡಗಿದ್ದರು.

ಆಫ್ರಿಕದಲ್ಲಿ ನಾಲ್ಕಾರು ಕವಡೆ ಕೊಟ್ಟು ಒಬ್ಬ ಗುಲಾಮನನ್ನು ಪಡೆಯಬಹುದಾಗಿದ್ದ ಕಾಲವೊಂದಿತ್ತು.

ಆಳವಿಲ್ಲದ ಕಡಲಿರುವೆಡೆ ಕವಡೆಗಳು ಸಂಸಾರ ಹೂಡುತ್ತವೆ. ಲಕ್ಷದ್ವೀಪಗಳಲ್ಲಿ ಉತ್ತಮ ದರ್ಜೆಯವು ಸಿಗುವುದರಿಂದ ಅಲ್ಲಿಯ ನಾವಿಕರು ಅವನ್ನು ಮಂಗಳೂರಿಗೆ ತಂದು ಮಾರುವರು. ರಾಮೇಶ್ವರ, ಧನುಷ್ಕೋಟಿ, ಕ್ರುಸಾಡಿ ನಡುಗಡ್ಡೆ, ಗುಜರಾಥ ಕೊಲ್ಲಿ, ಬಂಗಾಳದ ಕೊಲ್ಲಿಯ ಅಂಡಮಾನ ನಿಕೋಬಾರಗಳಲ್ಲಿಯೂ ಹೇರಳವಾಗಿ ಕವಡೆ ಸಿಗುತ್ತವೆ. ಅವುಗಳನ್ನು ಸಂತೆ, ಜಾತ್ರೆಗಳಲ್ಲಿ ಖರೀದಿಸುವ ಆದಿವಾಸಿಗಳಿಗೆ, ಲಂಬಾಣಿಗಳಿಗೆ ಅವುಗಳು ವಜ್ರ–ವೈಡೂರ್ಯ, ಹವಳ, ಕೆಂಪು, ಪಚ್ಚೆ ಮುತ್ತುಗಳಿಗೆ ಏನೇನೂ ಕಡಿಮೆ ಎನಿಸದು.

7. ಸಂಗ್ರಹಾಲಯದ ಪ್ರಾಣಿಗಳು

ಎಲ್ಲ ಸೌಕರ್ಯಗಳಿದ್ದು ಸುಖ ನೆಮ್ಮದಿ ಇಲ್ಲದಿದ್ದರೆ 'ಪಂಜರದ ಗಿಣಿ' ಇದ್ದಂತೆ ಎನ್ನುವುದು ರೂಢಿಯೊಳಗೆ ಬಂದ ಮಾತು. ಬಂಗಾರದ ಪಂಜರದೊಳಗಿದ್ದ ಗಿಳಿಗೆ ಪತ್ರ ಬರೆಯಲು ಬರುವಂತಿದ್ದರೆ "ಪ್ರಿಯೆ, ನನಗೆ ಇಲ್ಲಿ ಎಲ್ಲವೂ ಇದೆ. ನೀನು ಮಾತ್ರ ಇಲ್ಲ. ಆದ್ದರಿಂದ ನೀನೂ ಬಂದು ಬಿಡು ಇದ್ದುದರಲ್ಲೇ ಸುಖವಾಗಿರೋಣ" ಎಂದು ಪತ್ರ ಬರೆಯುತ್ತಿತ್ತೊ ಏನೋ! ಪಶು-ಪಕ್ಷಿಗಳನ್ನು ಬಂಧನದಲ್ಲಿ ಇಟ್ಟದ್ದರಿಂದಲೇ ಅವು ನೆಮ್ಮದಿಯಿಂದ ಬಾಳಲಾರವು ಎಂದು ಹೇಳಲಾಗದು. ಪ್ರಾಣಿಗಳ ನಿತ್ಯ ಜೀವನವನ್ನು ಹುಟ್ಟು ನಿರ್ಧರಿಸುವಂತೆ, ಪರಿಸರವೂ ನಿರ್ಧರಿಸುತ್ತದೆ. ಕಾಡಿನಿಂದ ಹಿಡಿದು ತಂದ ಹುಲಿ ಪಂಜರದಲ್ಲಿ ಅಸಂತುಷ್ಟವಾದಷ್ಟು, ಪಂಜರದಲ್ಲಿಯೇ ಹುಟ್ಟಿ ಬೆಳೆದ ಮರಿ ಅಸಂತುಷ್ಟವಾಗಲಾರದು. ಎರಡು ಮೂರು ತಲೆಮಾರಿನಿಂದ ಪಂಜರದಲ್ಲಿ ವಾಸಮಾಡಿದ 'ಪ್ರಾಣಿಗೆ ಒಮ್ಮೆಲೇ ಕಾಡಿನಲ್ಲಿ ಬಿಟ್ಟರೆ ಆಹಾರ, ಆಶ್ರಯ, ಸಂಗಾತಿಯನ್ನು ಹುಡುಕಿಕೊಳ್ಳುವದು ಅದಕ್ಕೆ ಸುಲಭವಾಗಿ ಸಾಧ್ಯವಾಗಲಿಕ್ಕಿಲ್ಲ.

ಪ್ರಾಣಿ ಜೀವನದ ವಿವಿಧ ಅಂಶಗಳನ್ನು ಆಳವಾಗಿ ಅಭ್ಯಸಿಸಿ ಅವುಗಳಿಗೆ ಹೊಂದಿಕೆಯಾಗುವ ವಾತಾವರಣ ನಿರ್ಮಿಸಿ ಜನ ಸಾಮಾನ್ಯನಿಗೆ ಸುಲಭವಾಗಿ ಕಾಣ ಸಿಗದ ಪ್ರಾಣಿಗಳನ್ನೆಲ್ಲ ಸಂಗ್ರಹಾಲಯದಲ್ಲಿ ಸಾಕುತ್ತಾರೆ. ಮೀನು ಸಾಕುವದು ಸುಲಭವಾದುದು. ಅವುಗಳಿಗೆ ಬೇಕಾದ ಆಹಾರ ನೀರುಗಳನ್ನು ವಿಪುಲವಾಗಿ ಒದಗಿಸಿದರೆ ಅವು ಬಂಧನದಲ್ಲಿ ಇರುವುದನ್ನು ಮರೆತು ಸುಖದಿಂದ ಬಾಳುವವು. ಕಪ್ಪೆಗಳನ್ನು ಸಾಕಬೇಕೆಂದಿಲ್ಲ. ನೀರು, ತಂಪು ಇದ್ದಲ್ಲಿ ತಾವಾಗಿ ಬಂದು ಸೇರಿಕೊಳ್ಳುವವು. ಓತಿಕ್ಯಾತ, ಉಡ, ಹಾವುಗಳಿಗೆ ಹೆಚ್ಚಿನ ವಿಚಾರಶಕ್ತಿಯಿರುವುದಿಲ್ಲ. ಸದಾ ಪಲಾಯನ ಯತ್ನದಲ್ಲಿ ಇರುವವು. ಆದ್ದರಿಂದ ಅವನ್ನು ಸೆರೆಯಲ್ಲಿ ಇಟ್ಟಂತೆ ಇಡಬೇಕಾಗುವದು. ಅದೇ ವರ್ಗಕ್ಕೆ ಸೇರಿದ ಆಮೆ, ಮೊಸಳೆಗಳು, ಕೆಲ ಮಟ್ಟಿಗೆ ಸುಧಾರಿಸಿದವು ಎನ್ನಬೇಕು. ವಿಸ್ತಾರವಾದ ಮಡುವಿನಲ್ಲಿ ಆಹಾರವಿದ್ದರಾಯಿತು. ಅಲ್ಲಿಯೇ ವಾಸ ಮಾಡುವವು. ಮಕ್ಕಳ ಕೈಯಲ್ಲಿ ಬೆತ್ತಕ್ಕೆ ಕಟ್ಟಿದ ಬಾಳೆ ಹಣ್ಣು ಕೊಟ್ಟು ದೊಡ್ಡ ಆಮೆಯ ಮೇಲೆ ಕೂಡಿಸಿದರೆ ಅದು ಹಣ್ಣು ತಿನ್ನುವ ಆಸೆಯಿಂದ ಮಕ್ಕಳಿಗೆ ಸವಾರಿ ಕೊಡುವದು.

ಸ್ವಾತಂತ್ರ್ಯ ಪ್ರಿಯ ಪಕ್ಷಿಗಳು

ಪಕ್ಷಿಗಳಲ್ಲಿ ಎರಡು ವಿಧ. ಹೊಟ್ಟೆಗೆ ಅನ್ನ ಸಿಗದಿದ್ದರೂ ನಡೆದೀತು, ಸದಾ ಸ್ವತಂತ್ರವಾಗಿರಬೇಕೆಂದು ಒಂದು ಗುಂಪು ಯತ್ನಿಸಿದರೆ ಇನ್ನೊಂದು ಗುಂಪು ರಾಮನ

ರಾಜ್ಯದಲ್ಲಿ ಇದ್ದರೂ ಅಷ್ಟೆ, ರಾವಣನ ರಾಜ್ಯದಲ್ಲಿ ಇದ್ದರೂ ಅಷ್ಟೆ, ನಿತ್ಯ ರಾಗಿ ದೊರಕಿದರಾಯಿತು! ಅನ್ನುವಂತೆ ಜೀವಿಸುವವು. ಮೊದಲನೇ ಗುಂಪಿನ ಪಕ್ಷಿಗಳನ್ನು ಬಂಧನದಲ್ಲಿ ಇಟ್ಟು ಸಾಕಿದರೆ, ಎರಡನೇ ಗುಂಪಿಗೆ ಬೇಕಾಗುವ ಸವಲತ್ತುಗಳನ್ನು ನಿರ್ಮಿಸಿದರೆ ಅವು ತಾವಾಗಿ ಬಂದು ನೆಲೆಯೂರುವವು. ಬಾತುಕೋಳಿ, ಹಂಸಪಕ್ಷಿ ಕಬ್ಬಾರೆ, ಜಮುಜಮುಖಿ, ಗುಬ್ಬಚ್ಚಿ, ಕಾಗೆಗಳು ಈ ಗುಂಪಿಗೆ ಸೇರಿದವು. ಬಂಧನದಲ್ಲಿದ್ದ ನವಿಲಿಗೆ ಸಮೃದ್ಧಿ ಇಲ್ಲದಿದ್ದರೂ ನಲ್ಲೆ ಬಳಿಯಲ್ಲಿದ್ದರೆ ಸದಾ ಕಾಲ ಅವಳೆದುರು ಸುಳಿದಾಡುತ್ತ ನೆಮ್ಮದಿ ತಂದುಕೊಳ್ಳಲೆತ್ನಿಸುತ್ತದೆ. ಗಗನದಲ್ಲಿ ಮೋಡಗಳು ತುಂಬಿ ಗುಡುಗು ಸಿಡಿಲುಗಳ ಆರ್ಭಟವಾದಾಗ ಮಾತ್ರ ಗರಿ ಬಿಚ್ಚಿ ಕುಣಿಯಬೇಕೆಂಬುದನ್ನು ಮರೆತು ಸಂಗಾತಿಯನ್ನು ಒಲಿಸಿಕೊಳ್ಳಲು ಪ್ರತಿದಿನವೂ ನರ್ತಿಸುತ್ತದೆ. ಮಾನವರಲ್ಲಿ ಸೌಂದರ್ಯ, ಮಧುರ ಕಂಠ, ನೃತ್ಯ ಕೌಶಲಗಳು ಹೆಣ್ಣಿಗೆ ಮೀಸಲಾಗಿದ್ದರೆ ಹಕ್ಕಿಗಳಲ್ಲಿ ಅವು ಗಂಡಿನ ಸೊತ್ತು. ಹೆಣ್ಣು ನವಿಲಿನಷ್ಟು ಕುರೂಪಿ ಕುಮಾರಿ, ಮಾನವರಲ್ಲಿ ಇದ್ದರೆ ಜೀವನದ ಉದ್ದಕ್ಕೂ ಆಕೆ ಕುಮಾರಿಯಾಗಿಯೇ ಇರಬೇಕಾಗುತ್ತಿತ್ತೋ ಏನೋ! ಗಿಳಿಯ ವರ್ಗಕ್ಕೆ ಸೇರಿದ–ಆದರೆ ಅಳತೆಯಲ್ಲಿ ತೀರ ಚಿಕ್ಕದಾದ–ಹಕ್ಕಿಗಳು ಪಂಜರದಲ್ಲಿಯೂ ಸುಖಕರ ಜೀವನ ನಡೆಸುತ್ತವೆ. ರಸಿಕ ಗಂಡು ಕುಮಾರಿಯನ್ನು ಮಾತನಾಡಿಸುತ್ತ, ಹಣ್ಣನ್ನು ರಮಿಸುತ್ತ ಚಿಲಿಪಿಲಿಯೆಂದು ಕೂಡಿಯೇ ಉಲಿಯುತ್ತ ಹಾರಾಡುತ್ತಿರುವುದು ರಮ್ಯವಾದ ನೋಟ. ಈಗ್ರೆಟ್, ಬಿಲ್ ಸ್ಟಾರ್ಕಗಳಂತಹ ಹಕ್ಕಿಗಳು ಎತ್ತರವಾದ ಮರದ ತುತ್ತತುದಿಯಲ್ಲಿ ಗೂಡುಗಳನ್ನು ಕಟ್ಟಕೊಳ್ಳಲು ಹೆಸರುವಾಸಿಯಾಗಿವೆ. ಆದರೆ ಬಂಧನದಲ್ಲಿಯೂ ಅವು ತಮ್ಮ ತನವನ್ನು ಬಿಡದೆ ಮಾಡಿನಲ್ಲಿಯೂ ಹವಾ ಕಿಂಡಿಗಳಲ್ಲಿ ಗೂಡುಗಳನ್ನು ಕಟ್ಟಕೊಳ್ಳುವವು. ದಕ್ಷಿಣ ಅಮೇರಿಕೆಯ ಬೃಹತ್ ಗಿಳಿ ತನ್ನ ಕೊಕ್ಕಿನಿಂದ ಗಿಡ ಮರಗಳನ್ನು ಏರುವ ಹವ್ಯಾಸ ಬಿಡಲಾರದೇ ಜಾಳಿಗೆಯನ್ನೇ ಹಿಡಿದು ತನ್ನ ಬಂಧನ ಗೃಹದಲ್ಲೆ ದಿನವೆಲ್ಲ ತಿರುಗುತ್ತದೆ. ಏಕ ಪತ್ನಿತ್ವದಲ್ಲಿ ವಿಶ್ವಾಸವಿಟ್ಟ ಹಾರ್ನ್‌ಬಿಲ್ ಹಕ್ಕಿ, ತನ್ನ ಪತ್ನಿಯ ಪ್ರಸವ ಕಾಲದಲ್ಲಿ ಕಾರಾಗೃಹದಲ್ಲಿ ಕೂಡ ಹೆಣ್ಣಿನ ಸುತ್ತಲೂ ಗೂಡೊಂದನ್ನು ನಿರ್ಮಿಸಿ ಚಿಕ್ಕ ಚಿಕ್ಕ ಬಿಲ ಮಾಡಿ ಅದರ ಮೂಲಕ ಆಹಾರವನ್ನು ಪೂರೈಸುತ್ತದೆ. ಕಾಡುಕುಟುಕ, ಕಳಿಂಗ ಪಕ್ಷಿ, ಕೋಗಿಲೆ, ಸಿಳ್ಳು ಹಕ್ಕಿ, ನೊಣಹಿಡುಕ, ಬಾಗಕ್ಕಿ, ಮೈನಾ, ಗೀಜಗ, ಮೀಂಚುಳ್ಳಿ, ಅಂಬಕ್ಕಿ, ಮಲೆಹಕ್ಕಿ, ಕಪೋತ, ಕೊಕ್ಕರೆ, ಗಿಡುಗ, ಮೊದಲಾದವನ್ನು ಸಂಗ್ರಹಾಲಯದಲ್ಲಿ ಕಾಣಬಹುದು.

ಬುದ್ಧಿಶಾಲಿ ಸಸ್ತನಿ ಪ್ರಾಣಿಗಳು

ಸಸ್ತನಿ ಪ್ರಾಣಿಗಳು ಹಕ್ಕಿಗಳಿಗಿಂತ ಬುದ್ಧಿಶಾಲಿಗಳೆಂದು ಹೆಸರುವಾಸಿಯಾದ್ದರಿಂದ ಅವುಗಳು ಪ್ರೇಕ್ಷಕರಿಗೆ ಹೆಚ್ಚು ಆಕರ್ಷಕವಾದಷ್ಟು ಉಳಿದವು ಆಗಿರುವುದಿಲ್ಲ. ಕಷ್ಟಪಟ್ಟು ಕಾಡಿನಿಂದ ಹಿಡಿದು ತಂದರೆ ಕೆಲ ದಿನ ಅನ್ನ ಸತ್ಯಾಗ್ರಹವನ್ನೂ ಹೂಡುವವು. ಬೇಟೆಯಾಡಿ ಆಹಾರ ಪಡೆಯುವ ಇವುಗಳಿಗೆ ಸತ್ತ ಪ್ರಾಣಿಯ ಮಾಂಸ ರುಚಿಸದು. ಒಂಟಿತನದ ಬಾಳು ಬೇಸರಕ್ಕಿಟ್ಟುಕೊಳ್ಳುವದು. ಸಜಾತೀಯವಾದ ಹೆಣ್ಣು ಪಶುವನ್ನು ಕೂಡಲೇ ಸಂಗಾತಿಯೆಂದು ಒಪ್ಪಿಕೊಳ್ಳಲಾರವು. ಇಂಥವುಗಳ "ಮನಸ್ಸಿಗೆ ಒಪ್ಪುವ ಕನ್ಯೆ" ಒದಗಿಸುವದು ಕಷ್ಟದ ಕೆಲಸ. ನೂರಾರು ಜನ ನೋಡುತ್ತಿರುವಾಗ ಪ್ರಣಯ



ಕಾಂಗರೂ




ಗಿಳಿ



ಚಿಂಪಾಂಜಿ



ಮೃಗರಾಜ



ಖಡ್ಗಮೃಗ



ಮುಳ್ಳು ಹಂದಿ



ಗಜರಾಜ

ಚೇಷ್ಟೆ ಮಾಡಲು ಇವಕ್ಕೆ ಮನಸ್ಸಾಗುವುದಿಲ್ಲ. ಅಲ್ಲದೇ ಅನೇಕ ಪ್ರಾಣಿಗಳಿಗೆ ವಿಶಿಷ್ಟವಾದ ಉಷ್ಣತಾಮಾನ, ಆರ್ದ್ರತೆ, ಹವೆಯ ಒತ್ತಡಗಳು ಬೇಕಾಗುವವು. ಇವು ಇಲ್ಲದ ಸ್ಥಳಗಳಲ್ಲಿ ಇವನ್ನು ಇಟ್ಟಾಗ ಅವು ಪಡುವ ತೊಂದರೆ ಅಷ್ಟಿಷ್ಟಲ್ಲ. ಧ್ರುವಕರಡಿಗಳು ಹಿಮಾಚ್ಛಾದಿತ ಪ್ರದೇಶದಲ್ಲಿ ಸುಖವಾಗಿರುವವು. ಎಂದೂ ಹಿಮವನ್ನೇ ಕಾಣದ ಮದ್ರಾಸ, ಮೈಸೂರುಗಳ ಸಂಗ್ರಹಾಲಯದಲ್ಲಿ ಅವು ಪಡುವ ಸಂಕಟ ಹೇಳಲಾಸಲ್ಲ.

ಮಾನವರ ಪೂರ್ವಜರು, ವಾನರ ವಂಶಕ್ಕೆ ಸೇರಿದ್ದವರಿದ್ದುದರಿಂದಲೋ ಏನೋ ಮಂಗ, ಚಿಂಪಾಂಝಿ, ಗೋರಿಲ್ಲಾಗಳ ವಿಭಾಗ ಮಕ್ಕಳನ್ನೂ, ದೊಡ್ಡವರನ್ನೂ, ಕೂಡಿಯೇ ಆಕರ್ಷಿಸುತ್ತದೆ. ಕರಿ, ಬಿಳಿ, ನೀಲಿ, ಕೆಂಪು ಮೂತಿಯ ಮಂಗಗಳು ಉದ್ದವಾದ ಬಾಲ, ಕೈಯಂತೆ ಹಿಡಿಯಬಲ್ಲ ಬಾಲವಿದ್ದ, ಬಾಲವಿಲ್ಲದ ಮಂಗಗಳು, ನಾಲ್ಕೈದು ಪೌಂಡು ತೂಕದ ಮಂಗಗಳಿಂದ ಐನೂರು ಪೌಂಡು ತೂಕದ ಗೊರಿಲ್ಲಾಗಳವರೆಗೆ ಎಲ್ಲವುಗಳನ್ನು ನೋಡಬಹುದು ಈ ವಿಭಾಗದಲ್ಲಿ. ಹೊಸದಾಗಿ ಬಂದ ಮಂಗಗಳು ಕೆಲ ದಿನ ತಮ್ಮ ಬಂಧನವನ್ನು ತೀವ್ರವಾಗಿ ವಿರೋಧಿಸಿದರೆ ಕಾಲಕ್ರಮೇಣ ಸಂಗ್ರಹಾಲಯದ ಜೀವನವನ್ನು ರೂಢಿಮಾಡಿಕೊಳ್ಳುತ್ತವೆ. ಗೋರಿಲ್ಲಾದಂತಹ ಮಹಾನ್ ಶಕ್ತಿಶಾಲಿ ಪ್ರಾಣಿ ಸಂದರ್ಶಕರ ಹತ್ತಿರ ತಿಂಡಿಗೆ ಕೈ ಒಡ್ಡಿದಾಗ ಕನಿಕರ ಬಾರದೇ ಇರದು. ಅದು ಈ ತಿಂಡಿಗಾಗಿ ವಿವಿಧ ಕಸರತ್ತು ಮಾಡಲೂ ಸಿದ್ಧ. ಆ ಚೇಷ್ಟೆಗಳನ್ನು ನೋಡಿ ಜನ ಬ್ರೆಡ್ಡಿನ ತುಣುಕು, ಸೇಂಗಾವನ್ನು ಕೊಟ್ಟರೂ ಅಭಿಮಾನದಿಂದ ತಿನ್ನುವದು. ಉರಿಯುವ ಬೀಡಿ, ಸಿಗರೇಟು ಕೊಟ್ಟರೆ ಇವನ್ನು ಸೇದುವದರಲ್ಲಿ ತಾನು ಮಾನವರಿಗಿಂತ ಏನೂ ಕಡಿಮೆಯಿಲ್ಲ ಎಂದು ತೋರಿಸಿಕೊಡುವದು. ಕೆಲವು ಪ್ರೇಕ್ಷಕರಿಗೆ ಈ ಪ್ರಾಣಿಗಳನ್ನು ರೊಚ್ಚಿಗೆಬ್ಬಿಸಿದಾಗಲೇ ಸಂತೋಷ. ಅಂಥ ಸಮಯದಲ್ಲಿ ಮಂಗಗಳು ಹಲ್ಲುಕಿರಿದು ಇದ್ದ ಬಲವನ್ನೆಲ್ಲ ಉಪಯೋಗಿಸಿ ತಮ್ಮ ಸಿಟ್ಟನ್ನು ಸಲಾಕಿಗಳ ಮೇಲೆ ತೀರಿಸಿಕೊಳ್ಳುವವು. ಸಂಗ್ರಹಾಲಯದಲ್ಲಿ ಗಂಡು-ಗಂಡು, ಗಂಡು-ಹೆಣ್ಣು ಗೆಳತನದಿಂದ ಇರುವವು.

ಕೋಪೋದ್ರಿಕ್ತ ಕ್ರೂರ ಮೃಗಗಳು

ಕ್ರೂರ ಪಶುಗಳೆಂದು ಹೆಸರಾದ ಹುಲಿ, ಕರಡಿ, ಚಿರತೆ, ಸಿಂಹಗಳಂತಹ ಕಾಡು ಮೃಗಗಳು ಅನೇಕರನ್ನು ಆಕರ್ಷಿಸುವವು. ಈ ನಿಶಾಚರ ಪ್ರಾಣಿಗಳೂ ಪ್ರೇಕ್ಷಕರು ಬರುವ ವೇಳೆಗೆ ನಿದ್ರಿಸುವವು. ಜನರ ಗಲಾಟೆ ಹೆಚ್ಚಾದಾಗ ಎದ್ದು ಮೈಕೈ ಮುರಿದು, ಆಕಳಿಸಿ, ನೀರು ಕುಡಿದು ಪ್ರೇಕ್ಷಕರನ್ನು ನೋಡುತ್ತ ನಿಲ್ಲುವವು. ನಿಂತು ಬೇಸರ ಬಂದಾಗ ಶತಪಥ ಹಾಕುವವು. ಮಂಗನನ್ನು ಕೆಣಕಿದಂತೆ ಹುಲಿಯನ್ನು ಕೆಣಕಿದಾಗ ಶೂಲದ ಹಲ್ಲು ತೋರಿಸುತ್ತ ಅಬ್ಬರಿಸುವವು. ವನರಾಜನು ಸಿಟ್ಟಿಗೆದ್ದಾಗಲಂತೂ ಕಿವಿ ಕಿವುಡಾಗುವಂತೆ ಗರ್ಜಿಸುವನು. ಮೋಸದಿಂದ ಬೇಟೆ ಹಿಡಯುವವರಲ್ಲಿ ಹೆಸರಾದ ಚಿರತೆ ತೀಕ್ಷ್ಣ ಕಣ್ಣುಗಳಿಂದ ಪ್ರೇಕ್ಷಕರನ್ನು ನೋಡತ್ತ "ಹೊರಗೆ ಒಮ್ಮೆ ಬಿಡಿ, ನೋಡುವಿರಂತೆ ತಮಾಷೆ!" ಎಂದು ಕೂತಿರುತ್ತದೆ. ಅಕ್ಕಪಕ್ಕದ ಪಂಜರದೊಳಗಿನ ಸಿಂಹ-ಸಿಂಹಿಣಿಯರು ಒಂದನ್ನೊಂದು ಮೆಚ್ಚಿಕೆಯಿಂದ ನೋಡುತ್ತಿದ್ದರೆ, ಜಂಬದ ಹುಲಿರಾಯ ಪ್ರೇಯಸಿಯೊಡನೆ ಪ್ರೇಮಾಲಾಪನ ನಡೆಸಿರುವ, ಬಲಶಾಲಿಯಾದ ಗಂಡು ಕರಡಿ ಮಲಗಿದ ಹೆಣ್ಣು ಕರಡಿಯನ್ನು ಒತ್ತಾಯದಿಂದ ಎಬ್ಬಿಸುತ್ತಿರುತ್ತದೆ. ಪ್ರಾಣಿ

ಸಂಗ್ರಹಾಲಯದಲ್ಲಿ ಪ್ರಾಣಿ ವೈದ್ಯನಿದ್ದರೂ ಅಲ್ಲಿ ಹುಟ್ಟಿದ ಮರಿಗಳು ಬದುಕುವವಕ್ಕಿಂತ ಸಾಯುವುದು ಹೆಚ್ಚು.

ಸ್ವಲ್ಪ ಸಪ್ಪಳಕ್ಕೂ ಬೆದರುವ ಚಿಗರೆ, ಮಾನವನನ್ನು ಎದುರಿಸಲು ಕಲಿಯುವದು. ಮರಿಯನ್ನು ಹೊಟ್ಟೆಯಲ್ಲಿ ಇಟ್ಟುಕೊಂಡು, ಟಣ್ ಟಣ್ ಜಿಗಿಯುವ ಕಾಂಗರು ಒಂದೆಡೆ ಕೂತಿರಲು ಕಲಿಯುವದು. ನೀರಿನ ಸಾನಿಧ್ಯದಲ್ಲಿದ್ದು ದಟ್ಟವಾದ ಅಸಾಮದ ಕಾಡಿನಲ್ಲಿ ಮೇಯ್ದು ಇರುವ ಖಡ್ಗಮೃಗ ಬಯಲು ಪ್ರದೇಶದಲ್ಲಿ ಒಣ ಹುಲ್ಲು ತಿಂದಿರಲು ಸಮರ್ಥವಾಗುವದು. ವೈರಿಗಳನ್ನು ತನ್ನ ಮುಳ್ಳುಗಳ ಬಾಣದಿಂದ ಗಾಸಿಗೊಳಿಸುವ ಮುಳ್ಳು ಹಂದಿ ಬ್ರೆಡ್ಡಿನ ತುಂಡುಗಳನ್ನು ತಿಂದಿರಲು ಕಲಿಯಬೇಕಾಗುತ್ತದೆ. ಎಂಥ ಮರವನ್ನೂ ಸೊಂಡಿಲಿನಿಂದ ಕಿತ್ತೊಗೆಯುವ ಆನೆ ಅರೆ ಹೊಟ್ಟೆ ಹುಲ್ಲು ತಿಂದು ಸರಪಳಿಯಿಂದ ಕಟ್ಟಿದರೂ ಅಷ್ಟೆ, ಕಟ್ಟದಿದ್ದರೂ ಅಷ್ಟೆ ಎಂದು ಸ್ಥಿತಪ್ರಜ್ಞೆಯಂತೆ ಇದ್ದುಬಿಡುತ್ತದೆ. ಹಲವಾರು ಸಂಗ್ರಹಾಲಯಗಳಲ್ಲಿ ಐವತ್ತು ಪೈಸೆ ಕೊಟ್ಟರೆ ಜಂಬು ಸವಾರಿಯ ಮಹಾರಾಜನಾಗಬಹುದು. ಎತ್ತರವಾದ ಬೇಲಿಯನ್ನೂ ಹಾರಬಲ್ಲ ಎಂಟಿಲೋಪಗಳು (ಚಿಗರ್ ಜಾತಿಯ ಮೃಗ) ಪ್ರತಿ ದಿನ ನಿಂತಲ್ಲಿ ಹುಲ್ಲು ಸಿಗುತ್ತಿರುವಾಗ ಪಲಾಯನವೇಕೆ ಮಾಡಬೇಕು ಎಂದು ಸಮಾಧಾನವಾಗಿಯೇ ಇರುತ್ತವೆ. ಇದರಂತೆ ಉದ್ದ ಕಾಲು-ಗೋಣಗಳ ಜಿರಾಫೆ, ಒಂದು ಎರಡು ಡುಬ್ಬದ ಒಂಟೆಗಳು, ಝಿಬ್ರಾ, ಮೊಲ, ಅಳಿಲು, ಬಾವಲಿ, ಕಾಡುಕೋಣ, ಸಾರಂಗ, ಕಾಡುಹಂದಿ, ನರಿ ಮೊದಲಾದ ಪ್ರಾಣಿಗಳು ಸಂಗ್ರಹಾಲಯದ ಜೀವನಕ್ಕೆ ಒಗ್ಗಿಕೊಂಡಿರುತ್ತವೆ.

ಸಂಗ್ರಹಾಲಯದ ಪಶು ಪಕ್ಷಿಗಳಿಗೆ ಪ್ರತಿ ದಿನ ಆಹಾರ, ನೀರು ಪೂರೈಸುವದು, ಅವುಗಳ ಸ್ವಚ್ಛತೆ ಕಾಪಾಡಿಕೊಳ್ಳುವದು ಅತಿಮುಖ್ಯ ಮತ್ತು ಖರ್ಚಿನ ಕೆಲಸವಾಗಿದೆ. ಹಾಗೆಯೇ ಉರಿಬಿಸಿಲು, ಶೀತ ಗಾಳಿಯ ದಿನಗಳಲ್ಲಿ ಇವನ್ನು ರಕ್ಷಿಸುವದೂ ಕಷ್ಟದ ಕೆಲಸ. ನೀರಿನ ಅಭಾವ ಇದ್ದ ವರ್ಷ, ಕುಡಿಯಲು, ವಾಸಿಸಲು ನೀರು ಪೂರೈಸುವದೂ ಅಸಾಧ್ಯವಾದಾಗ ಅನೇಕ ಪ್ರಾಣಿಗಳು ಸಾಯುವವು. ಅಂತಹ ಸಮಯಗಳಲ್ಲಿ ಗಂಡಾಂತರವಿಲ್ಲದ ಪ್ರಾಣಿಗಳನ್ನು ಬಿಟ್ಟುಬಿಡುವರು. ಕ್ರೂರ ಪ್ರಾಣಿಗಳನ್ನು ಸರ್ಕಸ್ಸಿನವರಿಗೆ ಮಾರಿಬಿಡುವರು.' ಕ್ವಚಿತ್ತಾಗಿರುವ ಪ್ರಾಣಿಗಳನ್ನು ವಿಶ್ವದ ಬೇರೆ ಬೇರೆ ಭಾಗಗಳಿಂದ ಕೊಳ್ಳುವರು. ಇಲ್ಲವೇ ತಮ್ಮಲ್ಲಿ ಹೆಚ್ಚಾಗಿರುವ ಪ್ರಾಣಿಗಳೊಂದಿಗೆ ಅದಲು ಬದಲು ಮಾಡಿಕೊಳ್ಳುವರು.

ಸಂಗ್ರಹಾಲಯದ ಪ್ರಾಣಿಗಳ ವರ್ತನೆ ನಿಸರ್ಗದಲ್ಲಿ ಬದುಕುವ ಪ್ರಾಣಿಗಳ ವರ್ತನೆಗಿಂತ ಭಿನ್ನವಾಗಿದ್ದರೂ ಅವು ಬಾಳಿ ಬದುಕುವ ಪದ್ಧತಿಯ ಕಲ್ಪನೆ ಬರುವಂತಿದೆ. ಅಂತೆಯೇ ಪ್ರಾಣಿ ಸಂಗ್ರಹಾಲಯ ಅಬಾಲ ವೃದ್ಧರಿಗೆ ಒಂದು ಶಿಕ್ಷಣ ಶಾಲೆ ಇದ್ದಂತೆ.

8. ಲಾಂಗೂಲ ಮಹಾತ್ಮೆ

ಶ್ರೀರಾಮನ ಭಕ್ತ ಹನುಮಂತ ಲಂಕೆಗೆ ಹಾರಿ, ತನ್ನ ಉದ್ದವಾದ ಬಾಲದಿಂದ ರಾಕ್ಷಸರಿಗೆಲ್ಲ ಸಾಕಷ್ಟು ಉಪಟಳ ನೀಡಿ, ರಾವಣನಿಗೆ ಅವಮಾನವಾಗುವಷ್ಟು ಎತ್ತರವಾದ ಲಾಂಗೂಲಾಸನವನ್ನು ರಚಿಸಿ ಕುಳಿತುಕೊಂಡು, ಕೊನೆಗೆ ಲಂಕಾದಹನವನ್ನೂ ಮಾಡಿದ ವರ್ಣನೆಯನ್ನು ರಾಮಾಯಣದಲ್ಲಿ ನಾವು ಕಾಣುತ್ತೇವೆ. ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ಅದಕ್ಕೂ ವಿಸ್ಮಯಕಾರಿ ಚಟುವಟಿಕೆಗಳನ್ನು ಪ್ರಾಣಿಗಳು ತಮ್ಮ ಏಕಮಾತ್ರ ಬಾಲದಿಂದ ನೆರವೇರಿಸಿಕೊಳ್ಳುತ್ತವೆ, ಎಂಬುದನ್ನು ಕಣ್ತೆರೆದು ನೋಡಿದಾಗ ತಿಳಿಯುತ್ತದೆ. ಬೆನ್ನು ಹುರಿಯಿಂದ, ಗುದದ್ವಾರದ ಹಿಂದಕ್ಕೆ ರಚಿತವಾದ ಅವಯವವನ್ನು, 'ಬಾಲ'ವೆಂದು ಪ್ರಾಣಿಶಾಸ್ತ್ರಜ್ಞರು ಗುರುತಿಸುತ್ತಾರೆ.

ಜಲಸಾಮ್ರಾಜ್ಯವನ್ನು ಆಳುವ ಮೀನುಗಳಿಗೆ ಬಾಲವೇ ವಾಹನ. ಶರೀರದ ಪ್ರಧಾನ ಭಾಗವಾಗಿದ್ದ ಈ ಅವಯವ, ಪ್ರಬಲವಾದ ಮಾಂಸಖಂಡಗಳಿಂದ ಕೂಡಿದ್ದು, ಇಚ್ಛಿತ ದಿಕ್ಕಿನಲ್ಲಿ ಬೇಕಾದಂತೆ ಮಣಿಸಲು ಬರುವಂತೆ ಇರುವುದರಿಂದ ಮೀನುಗಳು ಶರವೇಗದಲ್ಲಿ ನೀರಿನಲ್ಲಿ ಓಡಾಡಬಲ್ಲವು. ಇಲ್ಲವೇ ಆಗೊಮ್ಮೆ ಈಗೊಮ್ಮೆ ಗಗನದತ್ತ ಜಿಗಿಯುವವು. "ರೇ" ಮೀನು ಚಾವಟಿಗೆಯಂತಹ ಬಾಲದಿಂದ ವಿದ್ಯುತ್ತನ್ನು ಹೊರಹೊಮ್ಮಿಸಿ ತನ್ನನ್ನು ರಕ್ಷಿಸಿಕೊಳ್ಳುವುದು. ಮತ್ಸ್ಯವರ್ಗಕ್ಕೇ ಸೇರಿದ ಕಡಲಕುದುರೆ, ಒಂದೆಡೆಗೆ ಸ್ಥಾಯಿಯಾಗಿರಲು, ಬಾಲವನ್ನು ಲಂಗರಿನಂತೆ ಬಳಸುತ್ತದೆ. ಸುವರ್ಣ ಮೀನಿಗಿರುವ ಹೂಗೊಂಚಲಿನಂತಹ ಬಾಲದಿಂದಾಗಿ ಮನೆಯ ಮತ್ಸ್ಯಾಗಾರ (ಅಕ್ವೇರಿಯಂ)ದಲ್ಲಿ ಅವನ್ನು ಸಾಕಿ ಸಲಹುವ ಪರಿಪಾಠ ಬೆಳೆದು ಬಂದಿದೆ.

ಮಂಡೂಕರಾಯರಿಗೆ ಪ್ರೌಢಾವಸ್ಥೆಯಲ್ಲಿ ಬಾಲವಿಲ್ಲದಿದ್ದರೂ, ಶೈಶವಾವಸ್ಥೆಯಲ್ಲಿ ನೀರಿಗೆ ಸೀಮಿತವಾದ ಮರಿಗಳು ತಮ್ಮ ಬಾಲದಿಂದಾಗಿ ಮೀನುಗಳನ್ನು ಬಹಳವಾಗಿ ಹೋಲುತ್ತವೆ. ಅವುಗಳ ಮುಂಗಾಲು, ಹಿಂಗಾಲುಗಳು ಬೆಳೆಯಲಾರಂಭಿಸಿದಾಗ ಬಾಲ, ಕುಂಠಿತವಾಗುತ್ತ ಕೊನೆಗೆ ಅದೃಶ್ಯವಾಗಿ ಬಿಡುತ್ತದೆ. ಇದೇ ಗುಂಪಿಗೆ ಸೇರಿದ ಸ್ಯಾಲೆಮೆಂಡರ್, ನ್ಯೂಟ್‌ಗಳಿಗೆ, ಜೀವನದುದ್ದಕ್ಕೂ ಬಾಲವಿರುವದರಿಂದ ಅವು ಓತಿಕಾಟವನ್ನು ಹೋಲುತ್ತವೆ.

ತಮ್ಮ ತೀರ ಕಿರಿದಾದ ಬಾಲವನ್ನು ಆಮೆಗಳು ನೀರಿನಲ್ಲಿ ಈಜುವಾಗ ಚುಕ್ಕಾಣಿಯಂತೆ ದಿಕ್ಕನ್ನು ಬದಲಿಸಲು ಬಳಸಿಕೊಳ್ಳುತ್ತವೆ. ವೈರಿಯನ್ನು ಎದುರಿಸಬೇಕಾಗಿ

ಬಂದಾಗ, ಓತಿಕಾಟವು ಬಾಲವನ್ನು ಕವಾನಿನಂತೆ ಮೇಲಕ್ಕೆ ಮಣಿಸಿ ಬೆದರಿಕೆ ಹಾಕಲು ಹವಣಿಸುವದು. ವಿಫಲವಾದರೆ ಬಾಲವನ್ನು ಶರೀರದಿಂದ ಬೇರ್ಪಡಿಸಿ ತಾನು ಪಲಾಯನ ಮಾಡುತ್ತದೆ. ಆಗ ನಿಯಂತ್ರಣವಿಲ್ಲದ ಬಾಲದ ತುಂಡು ಮನಸ್ವಿ ಪುಟಿಯಲಾರಂಭಿಸುವದರಿಂದ, ವೈರಿಯ ಲಕ್ಷ್ಯ ಅತ್ತ ಹರಿದು ಅದನ್ನು ಆಕ್ರಮಿಸಲು ಎಳಸುವದು. ಹೀಗೆ ಶತ್ರುವಿಗೆ ಬಾಲದ ಕಪ್ಪ-ಕಾಣಿಕೆ ಕೊಟ್ಟು ತಾನು ಸುರಕ್ಷಿತ ಸ್ಥಳಕ್ಕೆ ಪಾರಾಗಿ ಹೋಗುವುದು ಹಲವಾರು ಓತಿಕೇತಗಳ ವೈಶಿಷ್ಟ್ಯ. ಹಲ್ಲಿಗಳೂ ತಾವು ಕಳೆದುಕೊಂಡ ಬಾಲವನ್ನು ತಿರುಗಿ ಬೆಳೆಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿವೆ. ಗೋಸುಂಬೆ, ತಾನು ಅಡಗಿಕೊಂಡು ಟೊಂಗೆಗೆ ಬಾಲವನ್ನು ಸುತ್ತಿ ನಿಲುಕದ ಕೀಟಕ್ಕಾಗಿ ಉದ್ದವಾದ ನಾಲಿಗೆಯನ್ನು ಚಾಚುವದು ತೀರ ಸಾಮಾನ್ಯ. ದಕ್ಷಿಣ ಅಮೇರಿಕೆಯಲ್ಲಿ ಜೀಡುಬಿಟ್ಟ ಬೆಸಲಿಕಾ ಓತಿಕೇತ, ನೀರ ಮೇಲೆ ನಡೆಯುವ ಸಾಮರ್ಥ್ಯ ಪಡೆದಿದೆ. ಗಂಡಾಂತರ ಕಾಲದಲ್ಲಿ ಅದು, ವೈರಿಯ ಆಕ್ರಮಣದಿಂದ ಪಲಾಯನ ಮಾಡಲು ನೀರಿನತ್ತ ವೇಗವಾಗಿ ಧಾವಿಸುವುದು. ಕೇವಲ ಹಿಂಗಾಲುಗಳ ಬಲ ನಂಬಿ ನೀರ ಮೇಲೆ ಓಡುತ್ತಿರುವಾಗ, ವಿಸ್ತಾರವಾದ ಬಾಲದಿಂದ ಸಮತೋಲನ ಕಾಯ್ದಿಟ್ಟುಕೊಳ್ಳುತ್ತದೆ.

ನೀರಿನಲ್ಲಿ ಜೀವಿಸುವ ಮೊಸಳೆಗಳು ತಮ್ಮ ಆಹಾರವಾದ ವಿವಿಧ ಜಾತಿಯ ಮೀನುಗಳು, ಹಕ್ಕಿಗಳ ಮತ್ತು ಇತರ ಶತ್ರುಗಳ ಮೇಲೆ ತಮ್ಮ ಪ್ರಬಲವಾದ ಬಾಲದಿಂದ ಗದಾಪ್ರಹಾರ ನಡೆಸುತ್ತವೆ. ಅವು ದಣಿದು ಬೆಂಡಾದಾಗ ನೀರಿನ ಆಳಕ್ಕೆ ಎಳೆದುಕೊಂಡು ಹೋಗಿ, ಉಸಿರು ಕಟ್ಟಿಸಿ ಸಾಯಿಸುತ್ತವೆ. ಹರಿದಾಡುವ ಹಾವು ತನ್ನ ಉದ್ದದ ಬಾಲವನ್ನೆ ಕೈ ಕಾಲುಗಳಂತೆ ಬಳಸುತ್ತದೆ. ಹೆಬ್ಬಾವು ತನ್ನ ಶಕ್ತಿಯುತ ಬಾಲದಲ್ಲಿ ಮೊಲ, ನರಿ, ಜಿಂಕೆಗಳನ್ನು ಸೆರೆಹಿಡಿದು, ಅದುಮಿ, ಸಾಯಿಸಿ ಭಕ್ಷಣ ಮಾಡುತ್ತದೆ. ದಕ್ಷಿಣ ಅಮೇರಿಕೆಯ



ಅನಕೊಂಡ (Anaconda) ಹಾವಿನ ಬಾಲದ ಬಂಧನಕ್ಕೆ ಒಳಗಾದರೆ, ಎಂಥ ದೃಢಕಾಯ ದಾನವನಿಂದಲೂ ಬಿಡಿಸಿಕೊಳ್ಳಲಾಗುವುದಿಲ್ಲ. ಮರದ ಹಾವುಗಳು ಟೊಂಗೆಯನ್ನು ಬಾಲದಿಂದ ಬಿಗಿದಪ್ಪಿ, ಇನ್ನೊಂದಕ್ಕೆ ಹರಿದು ಹೋಗುತ್ತವೆ. ಕೆಲವೊಮ್ಮೆ ಹಗ್ಗದಂತೆ ನೇತಾಡಿ ಕಪ್ಪೆ, ಇಲಿಗಳ ಭಕ್ಷಣ ನಡೆಸುವುದೂ ಉಂಟು.

ಪಕ್ಷಿಗಳ ಬಾಲದ ಬೆನ್ನೆಲುಬಿನ ಮಣಿಗಳು ಒಂದಕ್ಕೊಂದು ಜೋಡಣೆಯಾಗಿ, ವಿಶೇಷ ಎಲುಬೊಂದು ಉಂಟಾಗುತ್ತದೆ. ಆದ್ದರಿಂದ ಬಾಲಕ್ಕೆ ಇರುವ ಗರಿಗಳ ಚಲನವಲನವನ್ನು ಸೊಂಟದ ತುತ್ತ ತುದಿಯ ಬೆನ್ನೆಲುಬಿನಿಂದ ನಿಯಂತ್ರಿಸಬೇಕಾಗುತ್ತದೆ. ಹಾರುವಾಗ ಬಾಲದ ಪುಕ್ಕಗಳು "ರಡಾರ್"ನಂತೆ ಕೆಲಸ ಮಾಡುತ್ತವೆ. ಅವು ಅತ್ಯಂತ ಹಗುರವಾಗಿದ್ದರಿಂದ ಚುಕ್ಕಾಣಿಯಂತೆ ಬಳಸಿ ಹಕ್ಕಿಗಳು ತಮ್ಮ ಇಚ್ಛಿತ ಸ್ಥಾನಕ್ಕೆ ಹಾರಬಲ್ಲವು. ಬಾಲದ ಗರಿಗಳು ಉದ್ದವಾಗಿರುವ ಹಕ್ಕಿಗಳಿಗೆ, [illegible] ಹಾರಿ, ಸುಲಭದಲ್ಲಿ ದಿಕ್ಕನ್ನು ಬದಲಿಸಲು ಸಾಧ್ಯವಾಗುತ್ತದೆ. ಗಗನ ಮಂಡಲದಿಂದ ಭೂಮಿಗೆ ಇಳಿದು ಬರುವಾಗ, ಈ ಗರಿಗಳು, ಪ್ಯಾರಾಚೂಟಿನಂತೆ ವರ್ತಿಸುತ್ತವೆ. ಮರಕುಟಿಗ ಪಂಜುಗಳ ಜೊತೆಗೆ, ಬಾಲದ ಪುಕ್ಕದಿಂದಲೂ ನೆಲಕ್ಕುರುಳದಂತೆ ಮರವನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತದೆ. ಗಂಡು ಹೆಣ್ಣು ಹಕ್ಕಿಗಳಲ್ಲಿ ಗರಿಗಳ ಉದ್ದಳತೆ, ರೂಪಲಾವಣ್ಯದಂತೆಯೇ ಭಿನ್ನವಾಗಿರುತ್ತದೆ. ಗಂಡು ಹೆಣ್ಣಿಗಿಂತ ಆಕರ್ಷಕವಾಗಿರುವುದು ತೀರ ಸಾಮಾನ್ಯ. ಸೌಂದರ್ಯಕ್ಕೆ ಹೆಸರು ನವಿಲು ಗಂಡಾಗಿದ್ದರೆ,



ಹೆಣ್ಣು ತೀರ ಅನಾಕರ್ಷಕ. ಅದರಂತೆ ನ್ಯೂಝಿಲಂಡ್ ಕಾಡುಗಳಲ್ಲಿ ಹಾಯಾಗಿ ಹಾರುವ ಪ್ಯಾರಡಾಯಿಝ್ ಹಕ್ಕಿಗಳಲ್ಲಿ ಗಂಡಿಗೆ ಅತ್ಯಂತ ಸುಂದರವಾದ ಬಾಲದ ಗರಿಗಳಿರುತ್ತವೆ. ಅಂತೆಯೇ ಅಲ್ಲಿಯ ಆದಿವಾಸಿಗಳು, ಅವನ್ನು ತುರಾಯಿಗಳಲ್ಲಿ ಅಲಂಕಾರವಾಗಿ ಬಳಸುತ್ತಾರೆ. ಜಪಾನಿನ ಬಾಂಟಮ್ ಹುಂಜದ ಬಾಲದ ಗರಿಗಳು ಆರು ಅಡಿ ಉದ್ದವಿರುತ್ತವೆ!

ಸಸ್ತನಿ ಪ್ರಾಣಿಗಳಲ್ಲಿ ಬಾಲಗಳ ವೈವಿಧ್ಯ, ವಿಸ್ಮಯಕಾರಿ. ಒಂದು ಶ್ವಾನವರ್ಗದಲ್ಲಿಯೇ ಅದೆಷ್ಟು ಪ್ರಕಾರದ ಬಾಲಗಳಿಲ್ಲ! ಅಲ್‌ಸೇಶಿಯನ್, ಪೊಮೆರಾಯಿನ್, ಬುಲ್‌ಡಾಗ್, ಕಂತ್ರಿನಾಯಿ, ಬೇಟೆ ಬಾಯಿಗಳ ಬಾಲಗಳು ಉದ್ದಳತೆ, ಆಕಾರ, ಅಂದ ಚಂದಗಳಲ್ಲಿ ಭಿನ್ನವಾಗಿರುತ್ತವೆ. ಎಲ್ಲ ನಾಯಿಗಳೂ, ತಮ್ಮ ಆಕ್ರೋಶ, ಆವೇಶ, ಆನಂದಗಳನ್ನು ತೋಡಿಕೊಳ್ಳಲು ಬಾಲವನ್ನು ಧಾರಾಳವಾಗಿ ಬಳಸಿಕೊಳ್ಳುತ್ತವೆ. ಬಾಲ ಅಲ್ಲಾಡಿಸುತ್ತ ಅನ್ನದಾತನನ್ನು ಸ್ವಾಗತಿಸಿದರೆ, ಆಗದವರನ್ನು ಮುನ್ನೆಚ್ಚರಿಸಲು ಮೇಲಕ್ಕೆತ್ತಿ ಹಿಡಿಯುವವು. ಪ್ರತಿಸ್ಪರ್ಧಿಯೊಡನೆ ಕಾದಾಟದಲ್ಲಿ ಸೋತಾಗ, ಬಾಲವನ್ನು ಹಿಂಗಾಲುಗಳ ಮಧ್ಯ ಸಿಕ್ಕಿಸಿ ಪಲಾಯನ ಮಾಡುತ್ತವೆ. ಕುದುರೆ, ಕತ್ತೆ, ಝಿಬ್ರಾಗಳ ಬಾಲಗಳು ಉದ್ದ ಕೂದಲುಗಳಿಂದ ಕೂಡಿದ್ದು ಮೈಮೇಲೆ ದಾಳಿಯಿಡುವ ಹುಳ-ಹುಪ್ಪಡಿಗಳನ್ನು ಯಮಸದನಕ್ಕೆ ಕಳಿಸಲು ಉತ್ತಮ ಸಾಧನವಾಗಿದೆ. ಆದರೆ ದನಕರುಗಳ ಬಾಲದ ತುದಿಗಷ್ಟೇ ಕೂದಲ ಗೊಂಡೆ ಇರುವದರಿಂದ ಸದಾ ಕಾಲ ಅದನ್ನು ಬೀಸುತ್ತಾ ನೊಣಗಳನ್ನು ಹೊಡೆದೋಡಿಸುತ್ತಿರುತ್ತವೆ.

ತೀರ ಕಿರಿದಾದ ತಮ್ಮ ಬಾಲವನ್ನು ಜಿಗರೆಗಳು ಅತ್ಯಂತ ಸಮರ್ಪಕವಾಗಿ ಬಳಸಿಕೊಳ್ಳುತ್ತವೆ. ಹಿಂಡಿನ ಮುಖಂಡನ ನೇತೃತ್ವದಲ್ಲಿ ಕಾಡು-ಮೇಡುಗಳಲ್ಲಿ ಮೇಯುತ್ತಿದ್ದಾಗ ಆಗದವರ ಸುಳಿವು ಸ್ವಲ್ಪವಾದರೂ ಸಿಕ್ಕರೆ, ಮುಂದಾಳು, ಅನಾಹುತ ಬರಬಹುದಾದ ದಿಕ್ಕಿನಲ್ಲಿ ನಿಟ್ಟಿಸುತ್ತ, ಬಾಲವನ್ನು ಮೇಲಕ್ಕೆ ಎತ್ತಿ, ಇನ್ನಿತರರನ್ನು ಎಚ್ಚರಿಸುವುದು. ಇಡೀ ತಂಡವೇ ಕಿವಿಯನ್ನು ನಿಮಿರಿಸಿ, ಗಂಡಾಂತರದ ಆಳವನ್ನು ಅಳೆಯಲಾರಂಭಿಸುವುದು. ಎದುರಿಗೆ ಬರುವ ವೈರಿ ಚಿಕ್ಕದಾಗಿದ್ದರೆ, ಮುಖಂಡನು, ಹಿಂಗಾಲುಗಳ ಮೇಲೆ ನಿಂತು ಬೆದರಿಕೆ ಹಾಕಿದಾಗ, ಉಳಿದ ತಂಡ ಅವನನ್ನು ಅನುಕರಿಸುವದು. ಅದೇ ತೋಲ, ಕತ್ತೆ, ಕಿರುಬ, ಹುಲಿಯಂಥ ವೈರಿಗಳನ್ನು ಎದುರು ಹಾಕಿಕೊಳ್ಳಲು ಇಚ್ಛಿಸದೇ ನಾಯಕನು ತನ್ನನ್ನು ಹಿಂಬಾಲಿಸುವಂತೆ ತಂಡಕ್ಕೆ ಆಜ್ಞೆಯಿತ್ತು ಕಾಲಿಗೆ ಬುದ್ಧಿ ಹೇಳುವನು. ನಾಯಕ ಜಿಂಕೆಯು ಎತ್ತಿದ ಬಾಲವನ್ನೆ ಹಿಂಬಾಲಿಸುತ್ತ ತಂಡ, ಪಲಾಯನ ಮಾಡುವದು. ಆದ್ದರಿಂದ ಬಾಲ ಕಳೆದುಕೊಂಡ ಜಿಂಕೆ, ಮುಂದಾಳು ಆಗಲಾರದು.

ಜೋಡಿ ಗಂಡು ಇಣಚಿಗಳು ಒಂದೇ ಹೆಣ್ಣಿಗಾಗಿ ದ್ವಂದ್ವ ನಡೆಸಿ, ಗೆದ್ದ ಗಂಡು ಬಾಲವನ್ನು ಅರಳಿಸಿ, ತನ್ನ ಯಶಸ್ಸನ್ನು ಸಾರುವದಲ್ಲದೇ ಪ್ರತಿಸ್ಪರ್ಧಿಯನ್ನು ಬಹುದೂರದವರೆಗೆ ಅಟ್ಟಿಸಿಕೊಂಡು ಹೋಗುವುದು. ಮರಿ ಇಣಚಿ ಕಾಣೆಯಾದಾಗ, ತಾಯಿ, ಸತತವಾಗಿ ಬಾಲವನ್ನು ಗಗನದತ್ತ ತೂರಿ, ಲೊಚ್‌ಗುಡುತ್ತ ಕರೆಯಲಾರಂಭಿಸುವದು. ಸನಿಹದಲ್ಲಿ ಕಾಗೆ-ಹದ್ದುಗಳು ಹಾರಾಡುತ್ತಿದ್ದರಂತೂ,

ಶಂಖಿನಾದ ಪ್ರಾರಂಭಿಸಿಬಿಡುವದು. ದಟ್ಟ ಕಾಡುಗಳಲ್ಲಿ ವಾಸಿಸುವ ಹಾರುವ ಇಣಚಿ, ಎತ್ತರದ ಮರವೇರಿ ಐವತ್ತು ಅಡಿ ದೂರದ ಇನ್ನೊಂದು ಮರಕ್ಕೆ ತೇಲಿ ಹೋಗುವಾಗ, ಬಾಲವನ್ನು ಹರವಿ, ಸಮತೋಲನ ಕಾಯ್ದುಕೊಳ್ಳುವದು. ಅನಿರೀಕ್ಷಿತವಾಗಿ ಗಂಡಾಂತರ ಎದುರಿಸಬೇಕಾಗಿ ಬಂದಾಗ, ಬಾಲವನ್ನು ಚುಕ್ಕಾಣಿಯಂತೆ ಬಳಸಿ ದಿಕ್ಕನ್ನೇ ಬದಲಿಸಬಲ್ಲದು. ಅದರ ಬಾಲದಡಿ ಇರುವ ಚಿಪ್ಪುಗಳಿಂದ, ಮರದಿಂದ ಜಾರದಂತೆ, ಗಟ್ಟಿಯಾಗಿ ಹಿಡಿದುಕೊಳ್ಳುವುದು. ಹಾರುಬೆಕ್ಕು ಇದೇ ರೀತಿ ಗಗನ ವಿಹಾರಿಯಾಗಿ ಕುಂಚದಂತೆ ಇರುವ ತನ್ನ ಬಾಲವನ್ನು ಬಳಸಿಕೊಳ್ಳುವುದು.

ಆಸ್ಟ್ರೇಲಿಯ ಖಂಡಕ್ಕೆ ಸೀಮಿತವಾದ ಕಾಂಗರೂಗೆ ಅದರ ಬಾಲ, ಒಂದು ವರದಾನವಿದ್ದಂತೆ. ಮುಂಗಾಲುಗಳು ತೀರ ಚಿಕ್ಕವಾಗಿರುವದರಿಂದ ಮರುಭೂಮಿಯಲ್ಲಿ ನಾಗಾಲೋಟ ಹಾಕುವಾಗ, ಪ್ರಬಲವಾದ ಹಿಂಗಾಲು ಮತ್ತು ಪುಷ್ಟವಾದ ಬಾಲಕ್ಕೇ ಮೊರೆ ಹೋಗುವದು. ಕೆಂಪು ಕಾಂಗರು ಒಂದೇ ನೆಗೆತಕ್ಕೆ ಒಂದು ಗುಡಿಸಲನ್ನು ಸುಲಭವಾಗಿ ದಾಟಬಲ್ಲದು. ಅದು ಇಪ್ಪತ್ತೇಳು ಅಡಿ ಉದ್ದ ಜಿಗಿತ ಮಾಡುವದಲ್ಲದೇ ಗಂಟೆಗೆ ಮೂವತ್ತು ಮೈಲಿ ವೇಗದಲ್ಲಿ ಓಡಬಲ್ಲದು. ದೂರದ ವೈರಿಯನ್ನು ಗುರುತಿಸಲು ಬಾಲವನ್ನೇ ಏಣಿಯಾಗಿ ಬಳಸುವದೂ ಉಂಟು.

ಪ್ಲಾಟಿಪಸ್, ಮೊಟ್ಟೆ ಇಡುವ ಏಕಮಾತ್ರ ಸಸ್ತನಿ. ಅದು ಬಿಲದಲ್ಲಿ ಜೀವಿಸಿದರೂ, ಆಹಾರಕ್ಕಾಗಿ ನೀರನ್ನು ಆಶ್ರಯಿಸುವದು. ಬಾಲವನ್ನು ಹುಟ್ಟಿನಂತೆ ಬಳಸಿ, ಹಿಂದೆ ಮುಂದೆ ಈಜಾಡಿ, ಹುಳ-ಹುಪ್ಪಡಿಗಳ ಶಿಕಾರಿ ನಡೆಸುವದು. ಗಂಡು, ಹೆಣ್ಣಿನ ಬಾಲ ಹಿಡಿದು ಸಂತಾನೋತ್ಪತ್ತಿಯಲ್ಲಿ ತೊಡಗುವದು. (ಅಮೇರಿಕಾ ವಾಸಿಯಾದ ಹಳ್ಳ ನದಿಗಳಿಗೆ ಸೇತುವೆ ಕಟ್ಟುವ ಖ್ಯಾತ 'ಬೀವರ್', ದಡದಲ್ಲಿ ಗಚ್ಚನ್ನು ಸಿದ್ಧಮಾಡಿ, ಚಪ್ಪಟೆಯಾದ ಬಾಲದ ಮೇಲೆ ಅದನ್ನು ಸಾಗಿಸುವದು). ಆಸ್ಟ್ರೇಲಿಯದ ಕಾಂಗರೂ-ಇಲಿ, ಹೊಲದಲ್ಲಿ ಹುಲ್ಲನ್ನು ಶೇಖರಿಸಿ, ಬಾಲಸುತ್ತಿ, ಗಂಟು ಹೊರೆಮಾಡಿ ತನ್ನ ಗೂಡಿಗೆ ಎಳೆದೊಯ್ಯುವದು. ನಂತರ ಬಾಲದಿಂದ ಹುಲ್ಲನ್ನು ಬೇರ್ಪಡಿಸಿ, ಮೃದುವಾದ ಹಾಸಿಗೆಯನ್ನು ಸಿದ್ಧಪಡಿಸುವದು. ದಪ್ಪ ಬಾಲದ ಇಲಿ, ಹೆಚ್ಚಿನ ಕೊಬ್ಬನ್ನು ಬಾಲದಲ್ಲಿ ಸಂಗ್ರಹಿಸಿ, ಬರ ಬಿದ್ದಾಗ, ಈ ಕೊಬ್ಬನ್ನೇ ಆಹಾರವಾಗಿ ಬಳಸಿಕೊಳ್ಳುವುದು.

ಚಿಪ್ಪಿನ ಪೆಂಗೋಲಿಯನ್, ತನ್ನ ಬಾಲವನ್ನು ಟೊಂಗೆಯೊಂದಕ್ಕೆ ಸುತ್ತಿ, ಅದೇ ಆಧಾರದಿಂದ ಜೋತುಬಿದ್ದು, ಮುಂಗಾಲುಗಳಿಂದ ಇರುವೆ, ವರಲೆ ಗೂಡುಗಳನ್ನು ಒಡೆದು, ಅವನ್ನು ತಿಂದು ತೇಗುವದು. ಅದರಂತೆ ಜೇನು ಪೋಪಸ್, ಬಾಲದಿಂದ ಮರವನ್ನು ಆಧರಿಸಿ, ಗೂಡಿನಿಂದ ಜೇನನ್ನು ತಿನ್ನಲಾರಂಭಿಸುವದು. ಹಲವಾರು ಜಾತಿಯ ಕೋತಿಗಳು ತಮ್ಮ ಬಾಲವನ್ನು ಐದನೆಯ ಕೈಯಂತೆ ಬಳಸಿಕೊಳ್ಳುತ್ತವೆ.

ಬೆಕ್ಕು, ಹುಲಿ, ಸಿಂಹಗಳು ಬೇಟೆಯಾಡುವಾಗ, ಬಾಲವನ್ನು ನೆಲದತ್ತ ತೂಗಬಿಡುವವು. ಆದರೆ ಪ್ರತಿಸ್ಪರ್ಧಿಯನ್ನು ಎದುರಿಸುವಾಗ, ಪ್ರೇಮಿಗಾಗಿ ಕಾದಾಡುವಾಗ, ಬಾಲವನ್ನು ಗಗನದತ್ತ ಎತ್ತಿ ಹಿಡಿದು ತಮ್ಮ ಆಕ್ರೋಶದ ತೀವ್ರತೆಯನ್ನು ತೋರ್ಪಡಿಸುವುವು. ಗಂಡಾಂತರ ಕಾಲದಲ್ಲಿ ಮಲ ಮೂತ್ರಗಳನ್ನು ವೈರಿಯತ್ತ

ತೂರಲು. ಕಿರಿದಾದ ಬಾಲವನ್ನೇ ಆಶ್ರಯಿಸುವವು (ಸರ್ಪ ರೀತಿಯಲ್ಲಿ ಮೀನನ್ನು ಹೋಲುವ ತಿಮಿಂಗಲು, ಸಸ್ತನಿ. ಅಂತೆಯೇ ಕಡಲಿನಲ್ಲಿ ಈಜಾಟಕ್ಕಾಗಿ ಬಳಸುವ ಅವಯವ ಬಾಲವಾಗಿರದೇ ಚರ್ಮದಿಂದ ಆವರಿಸಲ್ಪಟ್ಟ ಹಿಂಗಾಲುಗಳಾಗಿರುತ್ತವೆ).

ಪ್ರೌಢಾವಸ್ಥೆಯಲ್ಲಿ ಮಾನವನು ಬಾಲರಹಿತನಾಗಿದ್ದರೂ, ಭ್ರೂಣಾವಸ್ಥೆಯಲ್ಲಿ ಅದು ಎದ್ದು ಕಾಣುತ್ತದೆ. ಅಪರೂಪಕ್ಕೆ ಶಿಶುಗಳು ಕಿರಿಬಾಲದೊಂದಿಗೆ ಜನ್ಮ ತಾಳುವುದುಂಟು. ಎಷ್ಟಾದರೂ ಮಾನವ, ಮರವನ್ನು ತ್ಯಜಿಸಿ ಬಂದ ಮಂಗನೇ ಅಲ್ಲವೇ?

9. ಇಂಥ ವರ ಬೇಕು

"ಮಡದಿ ಮಕ್ಕಳಿಗಾಗಿ ಸರ್ವಸ್ವವನ್ನೂ ತ್ಯಾಗ ಮಾಡುವಂತಹ ವರನು ಬೇಕು" ಎಂಬ ಜಾಹೀರಾತೊಂದನ್ನು ಎಲ್ಲ ಭಾರತೀಯ ಪತ್ರಿಕೆಗಳಲ್ಲಿ ಪ್ರಕಟಿಸಿದರೂ, ಅಂಥ ವರ ಸಿಗುವದಿರಲಿ, ಕೇಳಿದ ವಧು ಮಾನಸಿಕ ರೋಗಿ ಎಂದು ಓದಿದವರು ಶೀರ್ಷಾನಿಸಲೂಬಹುದು. ಆದರೆ ಇಂಥ ಯಾವ ಬೇಡಿಕೆ ಇಲ್ಲದೆಯೇ ಪಕ್ಷಿ ಲೋಕದ ಕೊಂಬು ಚುಂಚಿನ 'ಹಾರ್ನ್‌ಬಿಲ್' ಅಥವಾ ಓಂಗಿಲೆ (ಮಂಗಟ್ಟೆ)ಯನ್ನು ಇಂಥ ವರನೇ ವರಿಸುತ್ತಾನೆ. ಅವನು ತನ್ನವಳನ್ನು ಬಿಟ್ಟು ಇರುವದೇ ಇಲ್ಲ. ಅರೆ ನಿಮಿಷವೂ ಮಡದಿ ಕಾಣದಾದರೆ ಕೂಗಾಡಿ ಚೀರಾಡಿ ಅವಳ ಇರವನ್ನು ಪತ್ತೆ ಹಚ್ಚಿ ಸೇರಿಕೊಂಡಾಗಲೇ ಅವನಿಗೆ ನೆಮ್ಮದಿ. ಪತ್ನಿಯ ಸೇವೆಯಲ್ಲಿ ಅವನಿಗೆ ದಣಿವು, ಹಸಿವು ಯಾವ ಲೆಕ್ಕಕ್ಕೂ ಇಲ್ಲ. ತಾನು ತಂದೆಯಾಗಲಿರುವ ವಾರ್ತೆ ತಿಳಿದಾಗಲಂತೂ ಅವನ ಸಂತೋಷಕ್ಕೆ ಮೇರೆಯೇ ಇರುವುದಿಲ್ಲ. ಎತ್ತರದ ಮರದಲ್ಲಿ ಪೊಳ್ಳೊಂದನ್ನು ಪತ್ತೆ ಹಚ್ಚಿ ಅದನ್ನೇ ಪ್ರಸೂತಿ ಗೃಹವಾಗಿ ಮಾರ್ಪಡಿಸುವ, ಮಡದಿಯನ್ನು ಅದರೊಳಗೆ ಸೇರಿಸಿ, ತೊಗಟೆ, ಸೂಸು ಮಣ್ಣು ಮತ್ತು ತನ್ನ ಮಲಮೂತ್ರಗಳ ಬೆರಕೆಯಿಂದ ಪೊಳ್ಳಿನ ಬಾಯಿಯನ್ನು ಮುಚ್ಚಿ ಬಿಡುವ. ಆಹಾರ ಪೂರೈಕೆಗಾಗಿ, ಪತ್ನಿ ದರ್ಶನಕ್ಕಾಗಿ ನಟ್ಟ ನಡುವು ಕಿರಿದಾದ ಕಿಂಡಿಯನ್ನು ರಚಿಸುವ, ಪೊಳ್ಳಿನ ಸುತ್ತಲೂ ಸುಳಿದಾಡುತ್ತಲೇ ಇದ್ದು ಆಗೊಮ್ಮೆ ಈಗೊಮ್ಮೆ ಬಂದು? "ವಾಕರಿಕೆಯಾಗತ್ತದೆಯೇ? ಹೊಟ್ಟೆ ವಿಪರೀತ ನೋಯುತ್ತದೆಯೇ? ಹಸಿವೆ ಅನಿಸುತ್ತದೆಯೇ? ದಣಿವು ಅನಿಸಿದರೆ ನಿದ್ರಿಸಿಬಿಡು" ಎಂದು ಯೋಗಕ್ಷೇಮ ವಿಚಾರಿಸುತ್ತಲೇ ಇರುವ.

ಮಿತ ಸಂತಾನದ ಜಂಜಾಟವಿಲ್ಲದ ಓಂಗಿಲೆಯ ಸಂಸಾರದಲ್ಲಿ ಐದು ಮಕ್ಕಳಿಗೂ ಸುಸ್ವಾಗತವೇ! ಮೊಟ್ಟೆಗಳನ್ನಿಟ್ಟ ಬಾಣಂತಿಗಾಗಿ ಅಶ್ವತ್ಥದ ಎಲೆ, ಅಂಕುರಿಸಿದ ಧಾನ್ಯಗಳು ಸಲ್ಲದೆಂದು, ಹಣ್ಣು ಹಂಪಲು ಬರುತ್ತವೆ. ಆಗೊಮ್ಮೆ ಈಗೊಮ್ಮೆ ದುಂಬಿ, ಜೀರುಂಡೆ, ಓತಿಕಾಟದ ಮರಿ ಬರಲಾರಂಭಿಸುತ್ತವೆ. ಒಮ್ಮೆ ಮೈನಾ ಹಕ್ಕಿಯ ಕಣ್ಣು ಬಿಡದ ಮರಿಯನ್ನು ತಾಜಾ ಆಹಾರವೆಂದು ಪತ್ನಿಗೆ ತಂದಾಗ, "ಇದೇನು ಮಾಡುತ್ತಿರುವಿರಿ ದೊರೆ? ನಮ್ಮ ಸಂತಾನಕ್ಕಾಗಿ ಇನ್ನೊಂದು ಹಕ್ಕಿಯ ಸಂತಾನವನ್ನು ನಾಶಮಾಡುವುದು ಸರಿಯೆ?" ಎಂದು ಪ್ರಶ್ನಿಸಿದಾಗ "ನಮ್ಮ ಮರಿಗಳನ್ನು ಕೋತಿ, ಇಣಚಿಗಳು ಧ್ವಂಸ ಮಾಡಿದಾಗ ಯಾರಾದರೂ ಅವುಗಳ ಸಂರಕ್ಷಣೆಗೆ ಧಾವಿಸಿದರೇ? ಇನ್ನು ಮುಂದೆ ಹೀಗೆ ಮಾಡುವುದಿಲ್ಲ. ಇದೊಂದು ದಿನ ಊಟ ಮಾಡಿಬಿಡು. ನಿನಗೆ ಅಶಕ್ತಿ ಇದೆ, ಒಳ್ಳೆ ಹುಡುಗಿ" ಎಂದು ಕೊಕ್ಕಿನಿಂದ ಬಾಯಿ ಮುಚ್ಚಿ ಬಿಡುವ. ಪ್ರತಿದಿನ ಎಂಟು-

ಹತ್ತು ಸಲ ಆಹಾರದೊಂದಿಗೆ ಬರುವನು. ಮರಿಗಳು ಹೊರಬಂದಾಗಿನಿಂದ ದಿನಕ್ಕೆ ಹದಿನೈದು ಇಪ್ಪತ್ತು ಸಲ ಬರಬೇಕಾಗುತ್ತದೆ. ಆರು ಹಸಿದ ಹೊಟ್ಟೆಗಳನ್ನು ತಣ್ಣಗಿರಿಸುವದು ಒಬ್ಬನಿಂದ ಸುಲಭ ಸಾಧ್ಯವಿಲ್ಲ. ಹಲವು ಸಾರೆ ತಾನೇ ಹಸಿದಿದ್ದರೂ ಕುಟುಂಬಕ್ಕೆ ಆಹಾರ ಪೂರೈಸುತ್ತಲೇ ಇರುತ್ತಾನೆ. ಅಂತಹ ಸಮಯದಲ್ಲಿ ಬಾಯಲ್ಲಿದ್ದ ತುತ್ತನ್ನು ನುಂಗದೇ ಇರಲು ಅದೆಂತಹ ಸಂಯಮ ಬೇಕು! ಈ ಸಾಹಸ ಸತತವಾಗಿ ಮೂರು ತಿಂಗಳು ಅವಧಿಯವರೆಗೆ ನಡೆಯಬೇಕಾಗುತ್ತದೆ. ಅಷ್ಟರಲ್ಲಿ ಓಂಗಿಲಣ್ಣ ಸುಮಾರು ಇಪ್ಪತ್ನಾಲ್ಕು ಸಹಸ್ರ ಹಣ್ಣು ಹಂಪಲು, ಕ್ರಿಮಿ-ಕೀಟಗಳನ್ನು ಸಂಪಾದಿಸಿ ಪೂರೈಸಬೇಕಾಗುತ್ತದೆ. ಎಷ್ಟೋ ಬಾರಿ ಇಂಥ ಸೇವೆ ಮಾಡಿ ಮುಗಿಸುವುದರೊಳಗಾಗಿ ಹಸಿವು, ಬಾಯಾರಿಕೆ, ದಣಿವುಗಳಿಂದ ಗಂಡು ವೀರ ಸ್ವರ್ಗ ಸೇರಿದ ಉದಾಹರಣೆಗಳಿವೆ. ಇಂಥವಕ್ಕೆ ಕೊಂಬು ಚುಂಚಿನ ವೀರಗಲ್ಲು ನಿಲ್ಲಿಸುವವರಾರು?

ಎಲ್ಲಿ ಸಿಗುವ ಈ ನಲ್ಲ?

ಈ ಸುದೀರ್ಘ ಅವಧಿಯಲ್ಲಿ ಓಂಗಿಲಮ್ಮ ಗೃಹ ಸ್ವಚ್ಛತೆಯೊಂದನ್ನು ಬಿಟ್ಟು ಬೇರಾವ ಗೃಹಕೃತ್ಯ, ಗೃಹಿಣಿಯ ಜವಾಬ್ದಾರಿಯನ್ನು ನಿರ್ವಹಿಸುವದೇ ಇಲ್ಲ. ಬೆಳೆಯುತ್ತಿರುವ ಮಕ್ಕಳು ಅಲ್ಲಿ ಇಲ್ಲಿ ಚೆಲ್ಲಿದ ಆಹಾರ ಕಣಗಳನ್ನು ಬಿಲದಿಂದ ಹೊರಕ್ಕೆ ತೂರುವಳು. ಅಲ್ಲದೇ ಆಗಾಗ ವಿಸರ್ಜಿಸಿದ ಮಲಮೂತ್ರ ಮಿಶ್ರಣವನ್ನೂ ಎಸೆದು ಬಿಡುವಳು. ಪ್ರತಿದಿನವೂ ಮಕ್ಕಳು "ನಾವು ಅಪ್ಪನನ್ನು ಎಂದು ಸೇರಿಕೊಳ್ಳುವದು?" ಎಂದು ಕೇಳುತ್ತಲೇ ಇರುವ ಪ್ರಶ್ನೆಗೆ "ನಾಳೆ, ನಾಳೆ" ಎಂದು ಉತ್ತರಿಸಿ ಬೇಸತ್ತು ಒಂದು ದಿನ ಗೂಡಿನ ಕವಚವನ್ನು ಕೊಕ್ಕಿನಿಂದ ಒಡೆದು ಬಿಡುವಳು. ಮರಿಗಳು ಅಲ್ಲಿ ಇಲ್ಲಿ ಓಡಲು ಯತ್ನಿಸಿದಾಗ, "ಹೊರಗೆಲ್ಲ ವೈರಿಗಳು ನಿಮ್ಮನ್ನು ಸ್ವಾಹಾ ಮಾಡಲು ಹೊಂಚು ಹಾಕಿ ಕುಳಿತಿವೆ. ಮೊದಲಿಗೆ ಸರಿಯಾಗಿ ಹಾರಲು ಕಲಿಯಿರಿ, ಅನಂತರ ಮನಸ್ಸಿಗೆ ಬಂದಂತೆ ಹಾರುವಿರಂತೆ" ಎಂದು ಅವನ್ನು ಗೂಡಿಗೇ ಸೀಮಿತಗೊಳಿಸುವಳು. ಕೂತಲ್ಲಿ ತಿಂದು ತಿಂದು ಕೊಬ್ಬಿದ ತಾಯಿಗೂ ಸುಲಭವಾಗಿ ಹಾರಲು ಆಗದ್ದರಿಂದ ಮೇಲಿನ ಟೊಂಗೆಯಿಂದ ಕೆಳಗಿನ ಟೊಂಗೆಗೆ ತೇಲಿ, ಮೈ ಕರಗಿಸುವ ಚಟುವಟಿಕೆ ಪ್ರಾರಂಭಿಸುವಳು. ಇಂಥ ಪ್ರಸಂಗಗಳಲ್ಲಿ ಪತಿರಾಯ ಅಲ್ಲಿಯೇ ಸುಳಿದಾಡುತ್ತಿರುವ. ಇಂಥ ತ್ಯಾಗಿ ನಲ್ಲ ಮಾನವಲೋಕದಲ್ಲಿ ಸಿಗಲು ಸಾಧ್ಯವೇ?

ಕೊಂಬು ಚುಂಚಿನ ಪಕ್ಷಿಗಳು ನಗರಗಳಿಂದ ದೂರದ ಕಾಡಿನ ಎತ್ತರದ ಮರಗಳಲ್ಲಿ ವಾಸಿಸುವುದರಿಂದ ಸುಲಭವಾಗಿ ಕಾಣಲಾರವು. ಕೊಂಕಣದಿಂದಲ್ಲಿ ಮಲಬಾರದವರೆಗೆ ಪಶ್ಚಿಮ ಘಟ್ಟದ ಕಾಡುಗಳಲ್ಲಿ ಹುಲಿಯಂತೆ ಹೊಂಚು ಹಾಕಿ ಕುಳಿತರೆ ಇವುಗಳ ಚಮತ್ಕಾರಿಕ ಜೀವನದ ಪರಿಚಯ ಮಾಡಿಕೊಳ್ಳಬಹುದಾಗಿದೆ. ಶರೀರ, ಶಿರಗಳಿಗೆ ದೊಡ್ಡವೇ ಆದ ಉದ್ದ ಚುಂಚು. ಅಲ್ಲದೇ ವೇಗದ ಕೊಂಬಿನಾಕಾರದ ಅಲಂಕಾರ. ಇಷ್ಟೆಲ್ಲ ಹೊತ್ತು ಅವು ಹೇಗಾದರೂ ಹಾರಾಡಬಲ್ಲವು? ಎಂದು ಅನಿಸುವದು ಸಹಜ. ಆದರೆ ಈ ಅವಯವವು ತೀರ ಪೊಳ್ಳಾಗಿದ್ದು ಬೆಂಡಿನಂತೆ ಹಗುರಾಗಿರುತ್ತದೆ. ಮಲೇಶಿಯದ ಓಂಗಿಲೆ ಜಾತಿಯ ಚುಂಚುಗಳು ವರ್ಣಮಯವಾಗಿ

ಆಕರ್ಷಕವಾಗಿರುತ್ತವೆ. ರೆಪ್ಪೆಗಳಿಂದ ಒಳಗೂಡಿದ ವರ್ತುಲಾಕಾರದ ಕಣ್ಣುಗಳು ಭಾವಪೂರ್ಣವಾಗಿರುತ್ತವೆ. ರೆಕ್ಕೆಗಳು ಸಾಕಷ್ಟು ಉದ್ದಗಲವಾಗಿರುವವಲ್ಲದೇ ಬಾಲದ ಗರಿಗಳ ಹರಹು ಉಳ್ಳವಾಗಿರುವದರಿಂದ ಹಕ್ಕಿ ಗಗನವಿಹಾರಿಯಾದಾಗ ಚುಕ್ಕಾಣಿಯಂತೆ ಬಳಸಲು ಸಹಾಯವಾಗುತ್ತದೆ. ಮೈ ಬಣ್ಣ ಕಂದು. ಊದಾ ಬಣ್ಣದ್ದಾಗಿದ್ದರೂ ರೆಕ್ಕೆಗಳ ತುತ್ತ ತುದಿಗಳು ಬಿಳಿ ಬಣ್ಣದವು. ಓಂಗಿಲೆಗಳು ಸತತವಾಗಿ ಹಾರಾಡಲು ಇಚ್ಛಿಸುವದಿಲ್ಲ. ಒಂದೇ ಮರದ ಆ ಟೊಂಗೆ ಈ ರೆಂಬೆಗಳಿಗೆ ಜಿಗಿಯುತ್ತಿರುತ್ತವೆ. ಒಂದೇ ಮರ ಬೇಸರವಾದಾಗ, ರೆಕ್ಕೆ ಪಸರಿಸಿ, ಹವೆಯಲ್ಲಿ ತೇಲಿ ಇನ್ನೊಂದು ವೃಕ್ಷದ ಆಶ್ರಯ ಪಡೆಯುತ್ತವೆ. ಗಂಡು, ಅತ್ತ ಇತ್ತ ನೋಡಿ ವೈರಿಯ ಭಯವಿಲ್ಲವೆಂದು ಖಚಿತಪಡಿಸಿಕೊಂಡು, ಕಣ್ಣ ಸನ್ನೆಯಿಂದಲೇ ಪತ್ನಿಗೆ ಹಾರಲು ಸೂಚನೆ ಕೊಟ್ಟು ತಾನೂ ಸಜ್ಜಾಗುವದು. ಅವು ಜೊತೆ ಜೊತೆಯಾಗಿಯೇ ಹೊರಡುವದು ರೂಢಿ. ಒಂದೊಮ್ಮೆ ಹೆಣ್ಣೆ ಯಾವುದೋ ವಿಚಾರದಲ್ಲಿ ಮೈಮರೆತು ಹಿಂದುಳಿದರೆ, ಗಂಡು, ದೊಡ್ಡ ಧ್ವನಿಯಿಂದ ಕೂಗಿ, ಕಿರುಚಿ ಕರೆಯಲಾರಂಭಿಸುವದು. ಅವು ಹಸಿದಾಗಲೂ ಇದೇ ರೀತಿಯಾಗಿ ಬೊಬ್ಬಿಡುವವು. ಅಪರಿಚಿತರಿಗೆ ಯಾವುದೇ ಭೂತ, ಪಿಶಾಚಿಗಳ ಕರೆ ಇರಬೇಕೆನ್ನಿಸುವಷ್ಟು ಕರ್ಕಶವಾಗಿರುತ್ತವೆ, ಅವುಗಳ ಧ್ವನಿ. ಆದರೆ ಆಹಾರ ದೊರಕಿದಾಗ ಅವುಗಳಿಗೆ ಆಟವಾಡುವ ಹಂಬಲವಾಗುತ್ತದೆ. ಹಣ್ಣು ಕಾಯಿ, ಕ್ರಿಮಿ ಕೀಟ ಅಥವಾ ಬೇರೇನಾದರೂ ಇರಲಿ ಅದನ್ನು ಸಂಪಾದಿಸಿದೊಡನೆ ಹೊಟ್ಟೆಗೆ ಸೇರಿಸಿ ಬಿಡುವದಿಲ್ಲ. ಚುಂಚನ್ನು ಗಗನದತ್ತ ಏರಿಸಿ, ಗಾಳಿಯಲ್ಲಿ ಎರಡು ಮೂರು ಸಲ ತೂರಿದ ನಂತರವೇ ಅವುಗಳಿಗೆ ಶರೀರದಲ್ಲಿ ಪ್ರವೇಶ ಸಿಗುವದು.

ಹಿಮಾಲಯ ಮತ್ತು ಅಸ್ಸಾಮದ ಕಾಡುಗಳಲ್ಲಿಯ ಓಂಗಿಲೆಗಳು ನಮ್ಮಲ್ಲಿಯವಕ್ಕಿಂತ ಬೇರೆ. ಅಲ್ಲಿಯ ಆದಿವಾಸಿಗಳು, ಗಿರಿಜನರು ಅವುಗಳನ್ನು ಮನೆಯಲ್ಲಿ ಬೆಳೆಸುವದರಿಂದ ವ್ಯಾಪಾರದ ಸರಕಾಗಿ-ಬಿಟ್ಟವೆ. ಅವುಗಳನ್ನು ಬಂಧಿಸುವದು ಅಷ್ಟು ಸುಲಭವಲ್ಲದಿದ್ದರೂ ಹೆಣ್ಣು ಪ್ರಸೂತಿಗೃಹದಲ್ಲಿ ಬಂಧಿತವಾಗಿದ್ದಾಗ, ಮಕ್ಕಳೊಂದಿಗೆ ಅವನ್ನೆಲ್ಲ ಕಲೆ ಹಾಕುತ್ತಾರೆ. ಮರಿಗಳು ಕೊಟ್ಟದ್ದನ್ನು ಭಕ್ಷಿಸುತ್ತ ಗಿಳಿಗಳಂತೆ ಆತ್ಮೀಯವಾಗಿ ಇದ್ದುಬಿಟ್ಟರೂ ಪ್ರೌಢ ಹಕ್ಕಿಗಳು ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ಬಳಲುತ್ತಿರುತ್ತವೆ. ಒಂದು ವೇಳೆ ಅವು ಬಂಧಿತ ವಾಸದಿಂದ ಜಾರಿಕೊಂಡರೂ ಕಾಡಿಗೆ ಧಾವಿಸಿ, ತನ್ನವರೊಂದಿಗೆ ಸೇರಿಕೊಂಡು ನೆಮ್ಮದಿಯಿಂದ ಬಾಳುವ ಬದಲಾಗಿ ತಮ್ಮ ಕೈತಪ್ಪಿ ಹೋದ ಪೀಳಿಗೆಗಾಗಿ ಕೊರಗುತ್ತ ಸುತ್ತಮುತ್ತಲಿನ ಮರಗಳಲ್ಲಿ ಅಲೆದಾಡುತ್ತಿರುತ್ತವೆ. ಮರಿಗಳಿಗೂ ಗುಟುಕು ಕೊಡಲಾರೆ! ಎಂದು ಅರಿತರೂ, ಚುಂಚು ತುಂಬ ಹಣ್ಣು ತಂದು ಅವಕ್ಕೆ ಕೊಡಲು ಅವಕಾಶ ಸಿಕ್ಕೀತೆ? ಎಂದು ಕಾದಿರುತ್ತವೆ. ಲಂಡನ್ನಿನ ಪ್ರಾಣಿ ಸಂಗ್ರಹಾಲಯದಲ್ಲಿದ್ದ ಓಂಗಿಲೆಯು ಅಲ್ಲಿಯ ಅಧಿಕಾರಿಗಳೊಂದಿಗೆ ನಂಟು ಬೆಳಸಿಕೊಂಡುಬಿಟ್ಟಿತ್ತು. ನಿರ್ದೇಶಕರು ಬರುತ್ತಿರುವ ಸುಳಿವು ಸಿಕ್ಕೊಡನೆ, ಹಾರಾಟ ನಿಲ್ಲಿಸಿ, ಬಳುಕುತ್ತ, ವೈಯಾರ ಮಾಡುತ್ತ, ಆತ್ಮೀಯವಾಗಿ ಅವರ ಮುಂಗೈ ಮೇಲೆ ಕುಳಿತು ಬಾಯಲ್ಲಿ ಹಿಡಿದ ಹಣ್ಣು ಕಿತ್ತುಕೊಳ್ಳುವಷ್ಟು ಚುರುಕಾಗಿತ್ತು.

ಹೊಸ ಗರಿಗಾಗಿ ಕಾಯುವಿಕೆ

ಹೊಸ ಗರಿಗಳು ಬೆಳೆದಾಗ ಹಳೆಯುದನ್ನು ಕೈ ಬಿಡುವುದು ಪಕ್ಷಿಗಳ ನಿಯಮ. ಆದರೆ ಆಫ್ರಿಕದ ಹೆಣ್ಣು ಓಂಗಿಲೆಯ ಎಲ್ಲ ಗರಿಗಳೂ ಉದುರಿ ಅದು ನಗ್ನವಾದ ನಂತರವೇ ಹೊಸವು ಕಾಣಿಸಿಕೊಳ್ಳುವವು. ಈ ಸ್ಥಿತಿಯಲ್ಲಿ ಹಾರಲಾಗದ್ದರಿಂದ ವೈರಿಗಳಿಗೆ ತುತ್ತಾಗುವುದು ಸುಲಭ. ಆಗ ಅವು ರಕ್ಷಣೆಗೆ ಬಿಲಗಳನ್ನು ಬಳಸುತ್ತವೆ. ಪೊಳ್ಳೊಂದನ್ನು ಪತ್ತೆ ಹಚ್ಚಿ ಅದರ ಪ್ರವೇಶದ್ವಾರವನ್ನು ಮುಚ್ಚಲಾರಂಭಿಸುವದು. ನಂತರ ಕಿರಿದಾರಿಯಿಂದ ಒಳಗೆ ನುಸುಳಿಕೊಂಡು, ತೀರ ಇಕ್ಕಟ್ಟಾದ ದಾರಿಯನ್ನು ತೆರೆದಿಡುತ್ತದೆ. ಹಳೆ ಗರಿಗಳು ಉದುರಿದಾಗ ಅವನ್ನು ಒಂದೊಂದಾಗಿ ಹೊರಹಾಕುತ್ತಿರುತ್ತದೆ. ಗಂಡು ಮಾತ್ರ ಹೊರಗೇ ಇದ್ದು ತನ್ನವಳಿಗೆ ಆಹಾರ ಪೂರೈಕೆ ಮಾಡುತ್ತಲೇ ಇರುತ್ತದೆ. ಮಾನವನ ವಂಶಜರು ಹಣ ಸುರಿದು ನಗ್ನತೆಯ ದರ್ಶನ ಪಡೆದರೆ, ಓಂಗಿಲಮ್ಮ ಸಂಪೂರ್ಣ ರೆಕ್ಕೆಗಳು ಮೈ ಮುಚ್ಚಿದಾಗ ಮಾತ್ರ ಹೊರಬರುವ ತನಕ ಸಭ್ಯ ಗೃಹಿಣಿಯಂತೆ ಕಾಯುವ ತಾಳ್ಮೆ ಪ್ರದರ್ಶಿಸುತ್ತದೆ. ಮಲೇಶಿಯಾದವು ಅತಿ ದೊಡ್ಡವಾಗಿರುವದರಿಂದ "ಖಡ್ಗಮೃಗ ಓಂಗಿಲೆ" ಎಂಬ ಅನ್ವರ್ಥಕನಾಮ ಪಡೆದಿವೆ. ಅವು ಹೆಜ್ಜಾರ್ಲೆ (ಪೆಲಿಕನ್)ಯಷ್ಟು ದೊಡ್ಡದಾಗಿದ್ದು ಒಂದು ಅಡಿ ಚುಂಚನ್ನು ಹೊಂದಿರುತ್ತವೆ. ಸಂಜೆಗತ್ತಲಿನಲ್ಲಿ ಅವು ಜೋರಾಗಿ ರೆಕ್ಕೆಗಳನ್ನು ಬಡಿದುಕೊಂಡು ಆರ್ತಧ್ವನಿಯ ಬೊಗಳುವಿಕೆಯಂತಹ ನಾದ ಹೊರಡಿಸುತ್ತವೆ. ಬಹುದೂರದವರೆಗೆ ಈ ಸದ್ದು ಕೇಳಿಬರುವದರಿಂದ ಅಲ್ಲಿಯ ನಿವಾಸಿಗಳು ಈ ಹಕ್ಕಿಗಳನ್ನು ಕಂಡರೇ ಹೆದರಿಕೊಳ್ಳುತ್ತಾರೆ.

ಪೂರ್ವಕಾಲದಿಂದಲೂ ಭಾರತದಿಂದ ಓಂಗಿಲೆಯ ಚುಂಚು ಹೊರದೇಶಕ್ಕೆ ರಫ್ತು ಮಾಡಲಾಗುತ್ತಿತ್ತು. ಒಂದರ ಬೆಲೆ, ಒಂದು ಕಿಲೋ ಹಸ್ತಿದಂತದಷ್ಟು ಇರುತ್ತಿತ್ತು. ಚೀನೀಯರು ಅವುಗಳನ್ನು ಬಹಳವಾಗಿ ಮೆಚ್ಚಿ ಅವುಗಳ ಕಲಾಕೃತಿಗಳನ್ನು ನಿರ್ಮಿಸಿ ಬೈಠಕ್ ಖಾನೆಯ ಅಲಂಕಾರಕ್ಕಾಗಿ ಬಳಸುತ್ತಿದ್ದರು. ಅದರ ಹಣೆಯ ಭಾಗದಲ್ಲಿ ಬುದ್ಧನ ಜೀವನದ ಸನ್ನಿವೇಶಗಳನ್ನೊ, ಜಾತಕ ಕಥೆಗಳಲ್ಲಿ ಬರುವ ಘಟನೆಗಳನ್ನೊ ರೂಪಿಸುತ್ತಿದ್ದರು. ಈ ಕೆತ್ತನೆ ನಮ್ಮ ಗುಡಿಗಾರರ ಶ್ರೀಗಂಧದ ಕುಸುರಿ ಕಲೆಯನ್ನು ಬಹಳವಾಗಿ ಹೋಲುತ್ತಿತ್ತು. ಅವುಗಳ ನಸ್ಯದ ಡಬ್ಬಿ, ಬೀಸಣಿಗೆಯ ಹಿಡಿಕೆ, ಲಂಬಕ, ಮೊದಲಾದವನ್ನು ನಿರ್ಮಿಸುತ್ತಿದ್ದರು. ಚೀನೀಯರ ಈ ಕಲೆ ನಶಿಸಿ ಹೋಗಿದ್ದರಿಂದ ನಮ್ಮ ಓಂಗಿಲೆಗಳು ಕೆಲವಾದರೂ ಬದುಕುವಂತೆ ಆದದ್ದು ನಮ್ಮ ಸುದೈವ. ಇಲ್ಲದಿದ್ದರೆ ಹಸ್ತಿದಂತದ ದುರಾಸೆಗೆ ಅಳಿಯುತ್ತಿದ್ದ ಆನೆಗಳ ಸ್ಥಿತಿ ಓಂಗಿಲೆಗಳಿಗೆ ಒದಗಿ ಎಂದೋ ನಿರ್ನಾಮವಾಗುತ್ತಿದ್ದವು. ಇಂದಿಗೂ ಬೋರ್ನಿಯೋದ ಕೆಲ ಆದಿವಾಸಿಗಳು ಈ ಹಕ್ಕಿಗಳ ಚುಂಚುಗಳಿಂದ ಲೋಲಕ, ಲಾಕೆಟ್, ಲಂಬಕ, ಖಡ್ಗದ ಹಿಡಿಕೆಗಳನ್ನು ಮಾಡುತ್ತಾರೆ. ಆದರೆ ಅವೆಲ್ಲ ಹೆಚ್ಚು ಕಲಾತ್ಮಕವಲ್ಲದ್ದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲ.

ಓಂಗಿಲೆಗಳ ಸಮಾಜದಲ್ಲಿ ಸ್ತ್ರೀಸ್ವಾತಂತ್ರ್ಯ-ಸಮಾನತೆಗಳಿಗಾಗಿ ಯಾವ ಆಂದೋಲನವೂ ಬೇಕಿಲ್ಲ. ಪತ್ನಿಯರನ್ನು ದೇವಿಯರಂತೆ ಪತಿರಾಯರು ಮೆರೆದಾಡಿಸಬೇಕಾದರೆ ಸಮಾನತೆ ತಾನೇ ಯಾರಿಗೆ ಬೇಕು? ನಮ್ಮ ಸ್ತ್ರೀ ಕೋಟಿ ಏಷ್ಟ



ಸದಾ ಜೊತೆಯಲ್ಲಿಯೇ ಇರುವ ದಂಪತಿ





ಮರದ ಪೊಳ್ಳಿನಲ್ಲಿ ತಾಯಿ ಮಕ್ಕಳು



ಮರದ ಪೊಳ್ಳಿನಲ್ಲಿ ತಾಯಿ ಮಕ್ಕಳು

ಪ್ರಯತ್ನಪಟ್ಟರೂ ಈ ತೆರನ ಪತಿಲಾಭ, ಕನಸಿನ ಮಾತು. ಆದರೆ ಮಹಿಳೆಯರೇ, ಒಂದು ಕಿವಿಮಾತು; ನಿಮ್ಮನ್ನು ವರಿಸಿದಾತನ ನಡಾವಳಿಯು ನಿಮಗೆ ಅನುಕೂಲವಾಗುವಂತೆ ಪರಿವರ್ತನೆಯಾಗಬೇಕಾದರೆ ಅವರನ್ನು ಉಚ್ಚಿಸಿ ಒಮ್ಮೆ ನಾಗರಹೊಳೆಗೆ ಕರೆದೊಯ್ಯಿರಿ. ಅಲ್ಲಿ ನಿಲ್ಲಿಸಿದ ಮಂಚಲಿನಲ್ಲಿ ಕುಳಿತು ಮುಂಜಾನೆ ಸಂಜೆ ಕಾದು, ಗಂಡು ಓಂಗಿಲ ಮಾಡುತ್ತಿರುವ ಪತ್ನಿಯ ಸೇವೆಯ ದರ್ಶನವನ್ನು ನಿಮ್ಮ ಪತಿ ದೇವರಿಗೆ ಮಾಡಿಸಿ, ಬೆರಳು ಮಾಡಿ ತೋರಿಸಿ! ಇದರಿಂದ ಪರಿಶ್ರಮ-ವೆಚ್ಚಗಳೇನೋ ಉಂಟು. ಆದರೆ ಪತಿರಾಯ ಜೀವನದುದ್ದಕ್ಕೂ ಧ್ವನಿಯೇರಿಸಿ ಮಾತನಾಡುವುದನ್ನು, ದರ್ಪ ತೋರುವುದನ್ನು, ಮಾಡಲಾರ!

10. ನಮ್ಮ ಆಪ್ತ ಗೊರಿಲ್ಲಾ

ಕೋವಿ, ಕಾಡತೂಸುಗಳೊಂದಿಗೆ ಕಾಡಿನೊಳಗೆ ನುಗ್ಗಿ ಶಿಕಾರಿಯ ಹೆಸರಿನಲ್ಲಿ ಪ್ರಾಣಿಗಳ ವಧೆ ಮಾಡುವ ಕಾಲವೊಂದಿತ್ತು. ಆದರೆ ಇಂದು ಅರಣ್ಯವೆಂದರೆ ದೇಗುಲ. ವನ್ಯಜೀವಿಗಳೆಂದರೆ ಉತ್ಸವ ಮೂರ್ತಿಗಳು. ಅವನ್ನು ಕೊಲ್ಲಕೂಡದೆಂಬ ಪ್ರಜ್ಞೆ ಬೆಳಸಿದಂತೆ, ಅವುಗಳ ದರ್ಶನ ಮಾತ್ರದಿಂದಲೇ ಕೃತಕೃತ್ಯರಾಗಲು ದೂರದರ್ಶಕ ಕ್ಯಾಮರಾಗಳನ್ನು ಬಳಸುವಂತಾಗಿದೆ. ಮಧ್ಯ ಆಫ್ರಿಕಾಕ್ಕೆ ಮಾತ್ರ ಸೀಮಿತವಾದ ಪ್ರಾಣಿ, ನಮ್ಮ ಹತ್ತಿರದ ಸಂಬಂಧಿ, ಗೊರಿಲ್ಲಾ ಬಗ್ಗೆ ಈ ಮಾತಂತೂ ನೂರಕ್ಕೆ ನೂರು ಸತ್ಯ. ಬಯಲು ಗೊರಿಲ್ಲಾಗಳು ಆ ಖಂಡದ ಪಶ್ಚಿಮ ಕರಾವಳಿಯಿಂದ ಕಾಂಗೊ ಕೊಳ್ಳದವರೆಗೆ ವಸತಿ ಬಿಟ್ಟಿವೆ. ಗುಡ್ಡಗಾಡಿನ ಗೊರಿಲ್ಲಾಗಳು 3000 ದಿಂದ 4000 ಮೀಟರ ಎತ್ತರದ ಎಡ್ವರ್ಡ್, ಕಿವು ಪರ್ವತಾವಳಿಗಳಲ್ಲಿ ಮತ್ತು ಟಾಂಗಾನಿಕಾ ಸರೋವರದ ನಡುವಣ ಬೆಟ್ಟದ ಪ್ರದೇಶಕ್ಕಷ್ಟೆ ಸೀಮಿತವಾಗಿವೆ. ಅಂತರ್‌ರಾಷ್ಟ್ರೀಯ ಒಪ್ಪಂದದ ಮೇರೆಗೆ ಈ ಬೃಹತ್ ವಾನರಗಳು ಸಂಪೂರ್ಣ ರಕ್ಷಣೆ ಹೊಂದಿದ್ದರಿಂದ ಅವುಗಳ ರಾಜ್ಯದಲ್ಲಿ ಕಾಲಿಡಲು ಅಧಿಕೃತ ಅಪ್ಪಣೆ ಪಡೆಯಬೇಕು. ಧೈರ್ಯ ಸಾಹಸಗಳಿಂದ ಕಾಡು-ಮೇಡು ಹತ್ತಿ ಇಳಿದು, ಆಸೆ ನಿರಾಸೆಗಳಿಂದ ತೊಳಲಾಡದೆ ಇವುಗಳ ದರ್ಶನ ಲಾಭವೂ ಸಿಗುವಂತಿಲ್ಲ.

ಕ್ರಿ.ಪೂ.500ರಲ್ಲಿ ಕಾರ್ಥೆಜಿನಿಯನ್ ನಾವಿಕನೋರ್ವನು ಆಫ್ರಿಕಾ ಖಂಡದ ಪಶ್ಚಿಮ ಕರಾವಳಿಯತ್ತ ಹೊರಟಾಗ, ಈ ಪ್ರಾಣಿಯನ್ನು ಕಂಡು "ಉದ್ದ ಕೂದಲಿನ ಕಾಡ ಮಾನವ"ನ ಅಸ್ತಿತ್ವವನ್ನು ಲೋಕಕ್ಕೆ ಸಾರಿದ. ಕ್ರಿ.ಶ. 1600ರಲ್ಲಿ ಆಫ್ರಿಕದಿಂದ ಯುರೋಪಿಗೆ ಹಿಂದಿರುಗಿದ ಪ್ರವಾಸಿಯೋರ್ವ ಈ ಅಸಾಮಾನ್ಯ 'ನರ'ನ ಬಗ್ಗೆ ಅಲ್ಪ ಮಾಹಿತಿ ನೀಡಿದ್ದ. ಕ್ರಿ.ಶ. 1847ರಲ್ಲಿ ಅಮೆರಿಕಾದ ಮಿಶನರಿಯೋರ್ವ ಅವುಗಳ ತಲೆಬುರುಡೆಗಳನ್ನು ಕಲೆಹಾಕಿದ. ಕ್ರಿ.ಶ. 1855ರಲ್ಲಿ ಪ್ರಥಮ ಬಾರಿಗೆ ಪಾಶ್ಚಾತ್ಯರು ಜೀವಂತ ಗೊರಿಲ್ಲಾವನ್ನು 'ಚಿಂಪಾಂಝಿ' ಎಂದು ಗುರುತಿಸಿದರು! ಕ್ರಿ.ಶ. 1861ರಲ್ಲಿ ಅಮೆರಿಕನ್ ಸಾಹಸಿ ಪಾಲ್. ಡು. ಚಾಯ್ಲು ಈ ಪ್ರಾಣಿಯೊಡನೆ ನಡೆದ ಘರ್ಷಣೆಯನ್ನು ಬಹಿರಂಗಪಡಿಸಿದಾಗ, ವಿಜ್ಞಾನಿಗಳೆಲ್ಲ ಇದು ಕಾಲ್ಪನಿಕ ಕಥೆಯೆಂದು ಪರಿಗಣಿಸಿದರು. 20ನೇ ಶತಕದ ಆದಿಯಲ್ಲಿ ಗೊರಿಲ್ಲಾಗಳ ಬಗ್ಗೆ ಹೆಚ್ಚು ಆಸಕ್ತಿ ತಳೆದು ವೈಜ್ಞಾನಿಕ ಅಧ್ಯಯನ ಪ್ರಾರಂಭಿಸಲಾಯಿತು. ಇಷ್ಟಾದರೂ ಜನಸಾಮಾನ್ಯರು ಈ ಅಪೂರ್ವ ಪ್ರಾಣಿಗಳ ಬಗ್ಗೆ ಅಜ್ಞಾನಿಗಳೇ! ಎಂದರೆ ಅತಿಶಯೋಕ್ತಿಯಾಗಲಾರದು.

ನರ-ವಾನರ ಗುಂಪಿನಲ್ಲಿಯೇ ಅತ್ಯಂತ ಶಕ್ತಿಯುತವಾದ ಗೊರಿಲ್ಲಾ ಆರು ಅಡಿ ಎತ್ತರ ಐದು ನೂರು ಪೌಂಡು ಭಾರವಿರುವವು. ಮೈ ಕೈ ಕಾಲುಗಳೆಲ್ಲ ದಟ್ಟವಾದ ಕರಿ ಕೂದಲಿನಿಂದ ಆವೃತವಾಗಿರುತ್ತವೆ. ಹಣೆ, ಮುಖ, ಅಂಗೈ, ಪಾದಗಳಿಗೆ ಮಾತ್ರ ರೋಮವಿರುವುದಿಲ್ಲ. ಕೆಲ ಗೊರಿಲ್ಲಗಳಲ್ಲಿ ಶಿರದ ಕೇಶ ಕಂದು ಬಣ್ಣಕ್ಕೆ ಪರಿವರ್ತನೆಗೊಳ್ಳುತ್ತವೆ. ಪ್ರೌಢಾವಸ್ಥೆಯಲ್ಲಿ ಕಾಲಿಡುತ್ತಿರುವಾಗ ಗಂಡಿನ ಬೆನ್ನ ರೋಮ ಬೂದುಬಣ್ಣ ತಳೆದಿರುತ್ತದೆ. ಮುದಿಯಾದಾಗ ತಲೆ, ಎದೆ, ಬೆನ್ನುಗಳು ಕೂದಲು ಕಳೆದುಕೊಂಡು ಮರುಭೂಮಿಯಂತಾಗುವದು ತೀರ ಸಾಮಾನ್ಯ. ಆದರೆ ಅದಕ್ಕಾಗಿ ಅವು ವ್ಯಥೆ ಪಡುವುದಿಲ್ಲ. ಇತರರ ಕಣ್ಣಿನಲ್ಲಿ ಮಣ್ಣೆರಚಲು ಬಣ್ಣ, ಶಾಂಪೂ, ತೈಲಗಳು ಅವಕ್ಕೆ ಬೇಕಿಲ್ಲ. ಅಗಲವಾದ ಹಣೆ, ಕುಳಿಬಿದ್ದ ಕಣ್ಣು, ಇಲಿಯ ಬಿಲದಂತಹ ಮೂಗ ಹೊಳ್ಳೆಗಳು, ಸುಕ್ಕುಬಿದ್ದ ಕಪೋಲಗಳು, ತೀರ ಕಿರಿದಾದ ಕಿವಿಗಳು, ಅತ್ಯಂತ ಶಕ್ತಿಯುತವಾದ ಕೈಗಳು, ಉಬ್ಬಿಕೊಂಡ ಹೊಟ್ಟೆಗಳಿಂದಾಗಿ, ಗೊರಿಲ್ಲಾ ಅತ್ಯಂತ ಕ್ರೂರ ಪ್ರಾಣಿ ಎಂದು ಅನಿಸಿದರೆ ಆಶ್ಚರ್ಯವಿಲ್ಲ. ಆದರೆ ಕರಿಮುಖದ ಕೋತಿಯಷ್ಟೂ ಕಪಟತನ ಈ ಪ್ರಾಣಿಗಿಲ್ಲವೆಂಬುದು ಸತ್ಯ ಸಂಗತಿ.

ಹೆಣ್ಣು ಗೊರಿಲ್ಲಾ ಗಂಡಿಗಿಂತ ತೂಕ ಮತ್ತು ಎತ್ತರದಲ್ಲಿ ಕಡಿಮೆ ಇರುತ್ತದೆ. ಗುಡ್ಡಗಾಡಿನವುಗಳಿಗಿಂತ ಬಯಲು ಗೊರಿಲ್ಲಾಗಳು ಚಿಕ್ಕವು. ಪರ್ವತಾವಳಿಯಲ್ಲಿ ಹವಾಮಾನದ ಪ್ರಕೋಪ ಹೆಚ್ಚಾಗಿರುವದರಿಂದ ಅವುಗಳಿಗೆ ದಟ್ಟವಾದ ಕೇಶರಾಶಿಯಿರುತ್ತದೆ. ಈ ಗುಂಪಿನಲ್ಲಿ ವೈಯಕ್ತಿಕ ವೈವಿಧ್ಯ ವಿಪರೀತ; ಅಂತೆಯೇ ಹಿಂದೊಮ್ಮೆ ಅವುಗಳಲ್ಲಿ ಹತ್ತಾರು ಜಾತಿ, ಉಪಜಾತಿಗಳನ್ನು ಗುರುತಿಸಲಾಗಿತ್ತು. ಆದರೆ ಅವುಗಳ ಅಸ್ಥಿಪಂಜರಗಳ ಅಭ್ಯಾಸದ ನಂತರ ಬಯಲು, ಗುಡ್ಡಗಾಡು ಎಂಬ ಎರಡೇ ಪ್ರಭೇದಗಳನ್ನು ಮಾಡಲಾಗಿದೆ. ಪ್ರಾಣಿ ಸಂಗ್ರಹಾಲಯದವರು, ಸರ್ಕಸ್ಸಿನವರು, ಹೆಚ್ಚಾಗಿ ಬಯಲು ಗೊರಿಲ್ಲಾಗಳನ್ನು ಸಾಕುತ್ತಾರೆ. ಇದಕ್ಕೆ ಮುಖ್ಯ ಕಾರಣ, ಅವುಗಳನ್ನು ಸುಲಭವಾಗಿ ಪಳಗಿಸಬಹುದು. ಮೊದಮೊದಲು, ತಬ್ಬಲಿಯಾದ ಹಸುಳೆಗಳನ್ನು ಕಾಡಿನಿಂದ ತಂದು ಆದಿವಾಸಿ ಹೆಂಗಳೆಯರ ಎದೆಹಾಲಿನ ಮೇಲೆ ಅವುಗಳ ಲಾಲನೆ, ಪಾಲನೆ ಮಾಡಲಾಗುತ್ತಿತ್ತು. ಆದರೆ ಈಗಿನ ದಿನಗಳಲ್ಲಿ ಅವುಗಳನ್ನು ಮಾನವ ಶಿಶುವಿಗೆ ಸಲ್ಲುವ ಬಾಟ್ಲಿ ಹಾಲು, ಹಣ್ಣಿನ ರಸ, ಪ್ರತಿನಿತ್ಯದ ಸ್ನಾನ ಔಷಧೋಪಚಾರಗಳಿಂದ ಬೆಳೆಸಲಾಗುತ್ತದೆ. ಅಂತೆಯೇ ಗೊರಿಲ್ಲಗಳ ಬೆಲೆ ಗಗನಕ್ಕೇರಿಬಿಟ್ಟಿದೆ. ಕೆಲ ಪಾಶ್ಚಿಮಾತ್ಯರು ಪ್ರೌಢ ಪ್ರಾಣಿಗಳನ್ನು ಸೆರೆಹಿಡಿಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕಾಗಿ ಅವರು ಅವುಗಳು ಬೀಡುಬಿಟ್ಟ ಸ್ಥಳಗಳನ್ನು ಪತ್ತೆಹಚ್ಚಿ ಹಲವಾರು ಬಲೆಗಳನ್ನು ಹರವಿ, ಆದಿವಾಸಿಗಳ ನೆರವಿನಿಂದ ಡೋಲು ಬಡಿಯುತ್ತ ಸುತ್ತುವರಿಯುವರು. ಗಾಬರಿಗೆಟ್ಟ ಗೊರಿಲ್ಲಾಗಳು ಪಲಾಯನ ಯತ್ನದಲ್ಲಿ ಬಲೆಗಳಲ್ಲಿ ಸಿಕ್ಕಿ ಹಾಕಿಕೊಳ್ಳುವವು. ತಪ್ಪಿಸಿಕೊಳ್ಳಲು ಯತ್ನಿಸಿದಷ್ಟೂ ಬಂಧನ ಬಿಗಿಯಾಗುವದು. ದಣಿದು ಅವುಗಳ ಹೋರಾಟ ಕಡಿಮೆಯಾದಾಗ, ಆದಿವಾಸಿಗಳು ಉದ್ದವಾದ ಬಿದುರು ಬೊಂಬುಗಳನ್ನು ಬಳಸಿ ಅವುಗಳ ಕಾಲುಗಳನ್ನು ನೆಲಕ್ಕೆ ಅದುಮಿ ಹಿಡಿದು ಮಿಸುಕಾಡದಂತೆ ಮಾಡಿ ಪಂಜರಕ್ಕೆ ಸೇರಿಸಿಬಿಡುವರು.



ದೃಷ್ಟಿಯುದ್ಧ ಪ್ರವೀಣ

ಗೊರಿಲ್ಲಾಗಳು ಸಂಘಜೀವಿಗಳು. ಒಂದು ಕುಟುಂಬದಲ್ಲಿ ಮೂರರಿಂದ ಒಂಬತ್ತರ ತನಕ ಸದಸ್ಯರಿರುವದು ಸಾಮಾನ್ಯ. ಅದರ ಮುಖ್ಯಸ್ಥನನ್ನು ಎಲ್ಲರೂ ಪ್ರೀತಿಸುತ್ತಾರೆ. ಗೌರವಿಸುತ್ತಾರೆ. ಮಕ್ಕಳು ಮರಿಗಳಂತೂ ಸದಾಕಾಲ ಅವನಿಗೆ ಕೀಟಲೆ ಕೊಡುತ್ತಲೇ ಇರುತ್ತವೆ. ಇಷ್ಟಾದರೂ ಅವನು ಎಂದೂ ಅವುಗಳ ಮೇಲೆ ಶಕ್ತಿ ಪ್ರಯೋಗ ಮಾಡುವುದಿಲ್ಲ. ಕೀಟಲೆ ಮಿತಿಮೀರಿದಾಗ ಒಮ್ಮೆ ಅವನು ದುರುಗುಟ್ಟಿ ನೋಡಿದನೆಂದರೆ ಎಲ್ಲವೂ ಶಾಂತವಾಗಿಬಿಡುವವು. ಬಹು ಪತ್ನಿತ್ವದಲ್ಲಿ ವಿಶ್ವಾಸವಿಟ್ಟುದರಿಂದ ಪ್ರತಿ ಗುಂಪಿನಲ್ಲಿ

ಒಂದೆರಡು ಹೆಣ್ಣು. ಎರಡು ಮೂರು ಮರಿಗಳು ಇರುವುದು ಸಾಮಾನ್ಯ. ಪ್ರತಿಯೊಂದು ಗುಂಪಿಗೂ ಅದರದೇ ಆದ ಮೂವತ್ತರಿಂದ ಐವತ್ತು ಚದರ ಕಿಲೋಮೀಟರುಗಳ ಕಾರ್ಯಕ್ಷೇತ್ರವಿರುತ್ತದೆ. ಒಂದೇ ಪ್ರದೇಶದಲ್ಲಿ ಹತ್ತಾರು ಗುಂಪುಗಳು ಬೀಡುಬಿಟ್ಟರೂ ಅವು ಇನ್ನೊಂದರ ರಾಜ್ಯದಲ್ಲಿ ಕಾಲಿಡದಂತೆ ಎಚ್ಚರಿಕೆ ವಹಿಸುತ್ತವೆ. ಅಪ್ಪಿ ತಪ್ಪಿ ಒಂದು ಗುಂಪು ಇನ್ನೊಂದನ್ನು ಎದುರಿಸುವ ಪ್ರಸಂಗ ಬಂದರೂ ದೃಷ್ಟಿಯುದ್ಧದಿಂದಲೇ ತಮ್ಮ ತೀವ್ರ ಅಸಂತೋಷವನ್ನು ತೋರ್ಪಡಿಸುವವೇ ಹೊರತು ಮುಷ್ಟಿ ಯುದ್ಧಕ್ಕೆ ಸಾಮಾನ್ಯವಾಗಿ ಇಳಿಯಲಾರವು! ತಮ್ಮ ಮಲ-ಮೂತ್ರಗಳಿಂದ ಹೊರಹೊಮ್ಮುವ ಅಮೋನಿಯ ಅನಿಲದಿಂದ ಅವು ತಮ್ಮ ಸಾಮ್ರಾಜ್ಯವನ್ನು ಗುರುತಿಸಿಕೊಳ್ಳುತ್ತವೆ.

ಹುಲಿ-ಕರಡಿಗಳಿಗಿರುವಂತಹ ಉದ್ದವಾದ ಶೂಲದ ಹಲ್ಲುಗಳಿರುವುದರಿಂದ ಗೊರಿಲ್ಲಗಳು ಮಾಂಸಾಹಾರಿಗಳೆಂದು ಅನಿಸಬಹುದಾದರೂ ಅವು ಶುದ್ಧ ಶಾಕಾಹಾರಿಗಳು. ಕಾಡಿನ 'ಸೆಲರಿನ್'ಗಳೆಂದರೆ ಅವಕ್ಕೆ ಪಂಚಪ್ರಾಣ. ಅವನ್ನು ಕಲೆಹಾಕಿ, ಗಟ್ಟಿ ಹೊರಕವಚಗಳನ್ನು, ಇತರ ಸಸ್ಯಗಳ ಹೊರಸಿಪ್ಪೆಗಳನ್ನು ಶೂಲದ ಹಲ್ಲುಗಳಿಂದ ವ್ಯವಸ್ಥಿತವಾಗಿ ಸುಲಿದು ಒಂದೆಡೆ ಅಚ್ಚುಕಟ್ಟಾಗಿ ರಾಶಿ ಹಾಕಿ, ಮೃದುವಾದ ಭಾಗವನ್ನಷ್ಟೇ ತಿಂದು ತೇಗುವವು. ನಂತರ ಹತ್ತಿರದ ಕೊಳ ಅಥವಾ ಮಡುವಿಗೆ ಹೋಗಿ ನಾಲ್ಕೂ ಕಾಲ ಮೇಲೆ ಬಗ್ಗಿ ಬಾಯನ್ನು ನೀರಿನಲ್ಲಿ ಮುಳುಗಿಸಿ ನೀರಡಿಕೆಯನ್ನು ನೀಗಿಸಿಕೊಳ್ಳುವವು. ಎಳೆ ಬಿಸಿಲೆಂದರೆ ಅವಕ್ಕೆ ತುಂಬ ಇಷ್ಟ. ಹೀಗಾಗಿ ಬಯಲಿನಲ್ಲಿ ವಿರಾಮವಾಗಿ ಕುಳಿತು ಕಾಲಹರಣ ಮಾಡುವವು. ಕೆಲವು ಮೈ ಹಿಕ್ಕಿಕೊಳ್ಳುವವು. ಹೇನು ಆರಿಸುವವು. ಮಧ್ಯಾಹ್ನ ಇನ್ನೊಮ್ಮೆ ಆಹಾರ ಶೋಧ ಮತ್ತು ಸೇವನೆಗೆ ಹೊರಡುವವು. ಅವುಗಳಿಗೆ ಸಸ್ಯಾಹಾರ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಬೇಕಾಗುವುದರಿಂದ ಪ್ರತಿದಿನವೂ ಅವು ಹೊಸ ಹೊಸ ತಾಣಕ್ಕೆ ಹೋಗಲೇಬೇಕಾಗುತ್ತದೆ. ಹಿಂದಿನ ತಾಣಕ್ಕೆ ಬರುವಷ್ಟರಲ್ಲಿ ಅವುಗಳಿಗೆ ಆಹಾರ ಪೂರೈಸುವ ಸಸ್ಯಗಳು ತಿರುಗಿ ಚಿಗುರಿ ನಿಂತಿರುತ್ತವೆ. ಇದರಿಂದಾಗಿ ವರ್ಷವಿಡೀ ಆಹಾರದ ಪೂರೈಕೆಗೆ ಸಮಸ್ಯೆ ಅಷ್ಟಾಗಿ ಆಗಲಾರದು.

ಎಲೆ ತೊಪ್ಪಲು ಹಾಸಿಗೆ

ಉಳಿದ ವಾನರ ವರ್ಗದವುಗಳಂತೆ ಇವುಗಳೂ ಗೂಡು ಕಟ್ಟುವುದಿಲ್ಲ. ಆದರೆ ಪ್ರತಿ ಸಂಜೆ, ಎರಡೂ ಕೈಗಳಲ್ಲಿ ಹಿಡಿಯುವಷ್ಟು ಗಿಡ-ಮರಗಳ ಟೊಂಗೆಗಳನ್ನು ಕಲೆಹಾಕಿ, ಹಾಸಿಗೆ ಸಿದ್ಧಮಾಡಿಕೊಳ್ಳುವವು. ಚಿಂಪಾಂಝಿಗಳಂತೆ ಇವಕ್ಕೂ ಬಾಲವಿಲ್ಲ. ಅವುಗಳಂತೆಯೇ ಎಂಥ ಭಾರೀ ಮರಗಳನ್ನಾದರೂ ಏರಬಲ್ಲವು. ಇಷ್ಟಾದರೂ ಅವುಗಳಿಗೆ ಇನ್ನಿತರ ಕೋತಿಗಳಂತೆ ಒಂದು ಟೊಂಗೆಯಿಂದ ಇನ್ನೊಂದು ಟೊಂಗೆಗೆ ಕಲಾತ್ಮಕವಾಗಿ ಹಾರಲು ಬರುವುದಿಲ್ಲ. ಅಂತೆಯೇ ಎತ್ತರದಿಲ್ಲದ ಮರಗಳ ಮೇಲೆ ಹಾಸಿಗೆ ಸಿದ್ಧ ಮಾಡಿಕೊಳ್ಳುವುದು ವಾಡಿಕೆ. ಮರಿಗಳು ತಾಯಿಯೊಂದಿಗೆ ನಿದ್ರಿಸುವವು. ಬೀಡುಬಿಟ್ಟ ಕಾಡಿನಲ್ಲಿ ಬಿದಿರು ಮಳೆ ಇದ್ದರೆ, ಅವುಗಳನ್ನು ಬಾಗಿಸಿ ತೂಗು ಹಾಸಿಗೆಯನ್ನು ಮರಿಗಳಿಗಾಗಿ ಕಟ್ಟಲಾಗುತ್ತದೆ. ಗುಂಪಿನ ಮುಖ್ಯಸ್ಥ ಮಾತ್ರ ಮರದಡಿಯಲ್ಲಿ ಮಲಗಿ



ಸರ್ಪ ಕಾವಲು ಇರುತ್ತಾನೆ. ಅವುಗಳು ಒಟ್ಟಿ ಹಾಕಿದ ಸಿಪ್ಪೆಯ ರಾಶಿಯಿಂದಾಗಿ ಮತ್ತು ರಚಿಸಿದ ಪರ್ಣಗಳ ಹಾಸಿಗೆಯಿಂದಾಗಿ ಗುಂಪು ಯಾವ ದಿಕ್ಕಿಗೆ ಸಾಗಿದೆ ಎಂದು ಸುಲಭವಾಗಿ ಗುರುತಿಸಬಹುದು.

ಗೊರಿಲ್ಲಾಗಳಿಗೆ. ತೀಕ್ಷ್ಣ ದೃಷ್ಟಿ ಸೂಕ್ಷ್ಮ ಗ್ರಹಣ ಶಕ್ತಿಗಳು ಇವೆ. ಆದ್ದರಿಂದ ತಮ್ಮ ಪರಿಸರದಲ್ಲಿ ಸ್ವಲ್ಪವಾದರೂ ಪರಿವರ್ತನೆಯಾದರೆ ಕೂಡಲೇ ಗುರುತಿಸುತ್ತವೆ. ಮಾನವನ ಕಾಲು ಹೆಜ್ಜೆ, ಸೀನು, ಕೆಮ್ಮು, ಆಕಳಿಕೆಗಳು ಅವನ್ನು ಎಚ್ಚರಿಸುತ್ತವೆ. ತಮ್ಮ ಆಜನ್ಮ ವೈರಿಗಳ ಉಪಸ್ಥಿತಿಯ ಅರಿವಾದಾಗ ಅವು ಬೆಚ್ಚಿಬಿದ್ದು ಕೈಕಾಲು ನಡುಗಿಸಲಾರಂಭಿಸುವವು. ಆದರೆ ಮುಖ್ಯಸ್ಥನು ಎಲ್ಲಿಲ್ಲದ ಧೈರ್ಯ ತಂದುಕೊಂಡು ಗುಂಪಿನ ಸಂರಕ್ಷಣೆಗೆ ನಿಂತು ವೈರಿಯತ್ತ ಮುನ್ನುಗ್ಗುವನು. ಅವನು ನಾಲ್ಕೂ ಕಾಲ ಮೇಲೆ ನಡೆಯುವಾಗ ಮುಂಗಾಲ ಮುಷ್ಟಿಮಾಡಿ ವೈರಿಯನ್ನು ಬೆದರಿಸಲು ಹೂಂಕಾರ ಹಾಕಿ. ನಂತರ ಗಿಡ ಮರ ಅದುರುವಂತೆ ಕೂಗು ಹಾಕುವನು. ಮುಂಗೈಯಿಂದ ಒಂದೇ ಸಮನೆ ನೆಲವನ್ನು ಪರಚಲಾರಂಭಿಸುವನು. ಕೆಲ ಹೆಜ್ಜೆ ಮುಂದುವರಿದು, ಎರಡು ಕಾಲ ಮೇಲೆ ನಿಂತು

ಕೈಗಳಿಂದ ಏಕಪ್ರಕಾರವಾಗಿ ಎದೆಯನ್ನು ನಗಾರಿಯಂತೆ ಬಡಿದುಕೊಳ್ಳಲಾರಂಭಿಸುವನು. ಮತ್ತಷ್ಟು ಹೆದರಿಸುವುದಕ್ಕಾಗಿ ಕಾಲುಗಳನ್ನು ನೆಲಕ್ಕೆ ಅಪ್ಪಳಿಸಿ ತೊಡೆಯನ್ನು ಬಡಿದುಕೊಳ್ಳುತ್ತ ಸೆಡ್ಡು ಹೊಡೆದು ಬೊಬ್ಬೆ ಇಡುವನು. ಇಷ್ಟಕ್ಕೆ ಮಾನವ ಎದುರಾಳಿಯ ಜಂಘಾಬಲವೇ ಉಡುಗಿ ಹೋಗದಿದ್ದರೆ, ಅವನು ಅತಿಮಾನವನೆಂದೇ ಪರಿಗಣಿಸಬೇಕು! ಆದರ ಇಷ್ಟಕ್ಕೇ ಕಾಲಿಗೆ ಬುದ್ಧಿ ಹೇಳಿದರೆ, ಅದು ಯಮಧರ್ಮ ರಾಜನಿಗೆ ಆಮಂತ್ರಣ ಕೊಟ್ಟಂತೆ. ಮಿಸುಕಾಡದೇ ನಿಂತಲ್ಲಿಯೇ ನಿಂತರೆ, ಮುಖ್ಯಸ್ಥನು ಹತ್ತು ಅಡಿ ದೂರದಲ್ಲಿಯೇ ನಿಂತು ಬೆದರಿಕೆಯ ಸುರಿಮಳೆ ಸುರಿಸುತ್ತಲೇ ಇರುವ. ಅವನ ಗುಂಪು ಸುರಕ್ಷಿತ ಸ್ಥಳಕ್ಕೆ ತಲುಪಿದಾಗ ಮುಖ್ಯಸ್ಥನೂ ಕಾಲಿಗೆ ಬುದ್ಧಿ ಹೇಳುವನು. ಅವನು ಕ್ರೌರ್ಯ, ಹಿಂಸೆಗಳಲ್ಲಿ ವಿಶ್ವಾಸವಿಟ್ಟವನಲ್ಲವೆಂದು ಇದರಿಂದ ಖಚಿತವಾಗುವುದು.

ತರುಣಿಯರ ಅಪಹರಣ

ಗೊರಿಲ್ಲದ ಅನಾಕರ್ಷಕ, ಕಗ್ಗ ಹೊರನೋಟ ಮತ್ತು ಬೊಬ್ಬೆ ಇಡುವ, ಬೆದರಿಕೆ ಹಾಕುವ ಮನೋಧರ್ಮಗಳಿಂದಾಗಿ ಅವುಗಳಿಗೆ ಅಂಜದವರು ವಿರಳ. ಅಂತೆಯೇ ಗೊರಿಲ್ಲಾಗಳ ಕ್ರೌರ್ಯದ ಬಗ್ಗೆ ಅನೇಕಾನೇಕ ದಂತ ಕತೆಗಳು ಪ್ರಚಲಿತವಿವೆ. ಮಾನವ ತರುಣಿಯರನ್ನು ಅಪಹರಿಸಿ ಒಯ್ದು ಭೋಗಿಸಿ ಕೊಲ್ಲುತ್ತವೆ ಎಂಬುದು ಇಂಥ ಪ್ರತೀತಿ. ಇದಕ್ಕೆ ಸಾಕ್ಷಿ ಎಂಬಂತೆ ಅನೇಕ ಪಾಶ್ಚಾತ್ಯ ನಾರಿಯರು ಕಾಣೆಯಾಗಿ ಅವರ ಕಳೇಬರಗಳು ಗೊರಿಲ್ಲಾ ರಾಜ್ಯದಲ್ಲಿ ಸಿಕ್ಕವು. ಈ ಘಟನೆ ಆಧರಿಸಿದ ಚಲನಚಿತ್ರಗಳೂ ಆಗಿವೆ. ಆದರೆ ಇಂಥ ಘಟನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಬೆಳಕಿಗೆ ಬಂದ ಸತ್ಯ ಎಲ್ಲರನ್ನೂ ಚಕಿತವಾಗಿಸಿತು. ಕೆಲ ಕಾಮುಕ ಆದಿವಾಸಿಗಳು ಬೇಕೆಂತಲೇ ಗೊರಿಲ್ಲಗಳ ಚರ್ಮ ಧರಿಸಿ ಪ್ರವಾಸಿಗಳಾಗಿ ಬಂದ ಮಹಿಳೆಯರನ್ನು ಅಪಹರಿಸಿ, ಅತ್ಯಾಚಾರ ನಡೆಸಿ ಕೊಲ್ಲುತ್ತಿದ್ದರು. ಮುಂದೆ ಇಂಥ ತಂಡಗಳು ಗೊರಿಲ್ಲಾ ಪ್ರದೇಶಗಳಿಗೆ ಭೇಟಿಕೊಡುವುದನ್ನು ಪ್ರತಿಬಂಧಿಸಿದ್ದರಿಂದ ಇಂಥ ಘಟನೆಗಳು ನಿಂತೇ ಹೋದವು.

ಆದಿವಾಸಿಗಳು ಸಾಮಾನ್ಯವಾಗಿ ಈ ಬೃಹತ್ ಪ್ರಾಣಿಗಳಿಗೆ ಹೆದರುತ್ತಿದ್ದರೂ ಕೆಲವು ಬಣಗಳು ಮಾಂಸಕ್ಕಾಗಿ ಅವುಗಳ ಬೇಟೆ ಮಾಡುತ್ತಾರೆ. ಚಿರ್ತೆ, ಹೆಬ್ಬುಲಿಗಳು ಅವುಗಳಿಗಾಗಿ ಹಾತೊರೆದರೂ ಗಟ್ಟಿ ಮುಟ್ಟಾದ ಪ್ರಾಯದವುಗಳ ಗೋಜಿಗೆ ಹೋಗದೇ ಅಂಗವಿಕಲವಾದವು, ಎಳೆಮರಿಗಳೂ ಮುಂತಾದವುಗಳ ಮೇಲೆ ಹಲ್ಲೆ ನಡೆಸಿ ಬೇಟೆಯಾಡುತ್ತವೆ.

ಹೆಣ್ಣು ಗೊರಿಲ್ಲಾ ಎಂಟು ವರ್ಷಕ್ಕೆ ಪುಷ್ಪವತಿಯಾದರೆ ಗಂಡು ಹತ್ತು ವರ್ಷಕ್ಕೆ ಪ್ರೌಢವಾಗುವುದು. ಯುವ ಗೊರಿಲ್ಲಾ ಬೇರೊಂದು ತಂಡದ ಹೆಣ್ಣನ್ನು ತನ್ನದನ್ನಾಗಿ ಮಾಡಿಕೊಂಡು, ತಂದೆ-ತಾಯಿಗಳೊಡನೆ, ವಾಸಿಸಬಹುದು. ಇಲ್ಲವೇ ಸ್ವತಂತ್ರವಾಗಿಯೂ ಜೀವಿಸಬಹುದು. ಒಮ್ಮೊಮ್ಮೆ ಮುದಿಯ ಮುಖ್ಯಸ್ಥನೇ ನವ ಯುವತಿಯನ್ನು ಅಪಹರಿಸಿ ಗಂಡನ್ನು ಬೀಡಿನಿಂದ ಹೊಡೆದೋಡಿಸುವುದೂ ಉಂಟು! ಇಂಥ ಸಂದರ್ಭದಲ್ಲಿ ಯುವಕ ಗಂಡು, ಒಂಟಿಯಾಗಿ ಜೀವಿಸುವ ಪ್ರಸಂಗ ಬರುವದು. ಮೂರರಿಂದ ನಾಲ್ಕು ವರ್ಷಗಳ ಅಂತರದಲ್ಲಿ ಹೆಣ್ಣು ಗರ್ಭ ಧರಿಸಬಲ್ಲದು. ನವಮಾಸ ತುಂಬಲು

ಹತ್ತು ದಿನಗಳಿರುವಾಗಲೇ ಶಿಶು ಇಹಲೋಕಕ್ಕೆ ಇಳಿಯುವದು. ಕೇವಲ ಐದು ಪೌಂಡು ತೂಕದ ಮರಿ, ಶೀರ ಅಸಹಾಯಕವಾಗಿರುವದರಿಂದ ನಾಲ್ಕು ತಿಂಗಳು ತಂದೆ-ತಾಯಿಗಳೇ ಅದಕ್ಕೆ ಅನ್ನ ನೀರು ಪೂರೈಸುವವು. ಕಾಲಕಾಲಕ್ಕೆ ಮೊಲೆ ಹಾಲು ಉಣಿಸಿ, ಪೂರ್ಣ ಆರೈಕೆ ನೋಡಿಕೊಳ್ಳುವವು. ಮಾನವ ಸಂತಾನಕ್ಕೆ ತಗಲುವ ಯಾವತ್ತೂ ವ್ಯಾಧಿಗಳಿಂದ ಗೊರಿಲ್ಲಾ ಮರಿಗಳೂ ಬಳಲುತ್ತವೆ. ಮನುಷ್ಯರಲ್ಲಿ ಸಾಮಾನ್ಯವಾಗಿರುವ ನೆಗಡಿ, ಕೆಮ್ಮು, ಜ್ವರ, ವಿಷಮ ಶೀತ ಜ್ವರ, ಕ್ಷಯ ರೋಗಗಳು ಅವುಗಳಿಗೆ ಶಾಪವಿದ್ದಂತೆ. ಕಾಡಿನ ಕಷ್ಟಮಯ ಜೀವನದಿಂದ ಈ ವ್ಯಾಧಿಗಳನ್ನು ಎದುರಿಸುವ ಸಾಮರ್ಥ್ಯವನ್ನು ಅವು ಪಡೆದರೂ, ಬಂಧನದಲ್ಲಿ ಹೆಚ್ಚಿನ ಶಾರೀರಿಕ ಚಟುವಟಿಕೆಗಳು ಇಲ್ಲದೇ ತಿಂದು, ಮೈ ಬೆಳೆಸಿ, ಆರೋಗ್ಯವಂತರಾಗಿ ಬಾಳಲು





ಪಶುವೈದ್ಯರು ಕೊಡುವ ಮಾತ್ರೆಗಳನ್ನು ನುಂಗಿ ಚುಚ್ಚುಮದ್ದನ್ನು ಸ್ವೀಕರಿಸಬೇಕಾಗುವದು. ಸರ್ಕಸ್ಸಿನವರಾದರೋ ತಮ್ಮ ಜೇಬು ಭರ್ತಿ ಮಾಡಿಕೊಳ್ಳಲು ದಿನಪೂರ್ತಿ ಅವನ್ನು ದುಡಿಸುತ್ತಾರೆ. ಸರ್ಕಸ್ಸುಗಳಲ್ಲಿ ಅವುಗಳು ಮೋಟಾರ್ ಸಾಯಕಲ್ ಓಡಿಸುವುದನ್ನು, ವಿವಿಧ ವಾದ್ಯಗಳನ್ನು ನುಡಿಸುವುದನ್ನು ನೋಡಬಹುದಾಗಿದೆ.

ನರ–ವಾನರರೆಲ್ಲ ಒಂದೇ ಆದಿವಂಶದಿಂದ ಇಳಿದು ಬಂದವರೆಂದು ಜೀವ ವಿಜ್ಞಾನಿಗಳು ಪರಿಗಣಿಸುತ್ತಾರೆ. ಮಾನವನ ವಿಕಾಸದಲ್ಲಿ ಗಿಬ್ಬನ್ ಕೋತಿ, ಓರೆಂಗ್ ಉಟಾನ್‌ಗಳು ಪ್ರಥಮ ಹಂತವನ್ನು ಪ್ರತಿನಿಧಿಸಿದರೆ ಗೊರಿಲ್ಲಾ–ಚಿಂಪಾಂಝಿಗಳು ದ್ವಿತೀಯ ಹಂತದಲ್ಲಿ ನಿಂತಿವೆ. ಚಿಂಪಾಂಝಿ. ಮಾನವನಿಗೆ ಹತ್ತಿರದ ಸಂಬಂಧಿಯಾದರೂ ಗೊರಿಲ್ಲಾ ಚಿಂಪಾಂಝಿ, ರಕ್ತ ಸಂಬಂಧಿಗಳು. ಗೊರಿಲ್ಲಾದ ಮಿದುಳು ಮಾನವನದಕ್ಕಿಂತ ಎರಡು ಮೂರಂಶ ಕಿರಿದಾಗಿದ್ದರೂ, ಅವುಗಳನ್ನು ಹಲವಾರು ವಿದ್ಯೆಗಳಲ್ಲಿ ಪಳಗಿಸಬಹುದಾಗಿದೆ. ಸುಮಾರು 5 ಲಕ್ಷ ವರ್ಷಗಳ ಹಿಂದೆ ಮಂಗನಂತಹ ಮಾನವ (ಪಿಥಿಕ್ಯಾನ್ ಥ್ರೊಪಸ್) ಭೂಮಿಯ ಮೇಲೆ ಉದಯಿಸಿದ. ಆ ನಂತರ ಉತ್ಕ್ರಾಂತಿಯಾಗುತ್ತ ಆಧುನಿಕ ಮಾನವನು ತನ್ನ ಪರಿಸರವನ್ನೆ ನಿಯಂತ್ರಿಸಲಾರಂಭಿಸಿದ. ಗೊರಿಲ್ಲಾಗಳು ನಮ್ಮ ರಕ್ತಸಂಬಂಧಿಗಳು ಎಂಬ ಮಾತಿನಲ್ಲಿ ವಿಶ್ವಾಸವಿಡದವರು, ಒಮ್ಮೆ ಆಫ್ರಿಕಾ ಖಂಡವನ್ನು ಸುತ್ತಾಡಿ ಬರಬೇಕು. ಅವುಗಳಂತೆಯೇ ಮೈ ರೋಮ ಹೊಂದಿದವರು, ಕಾಡಿಗೆಯಂತಹ ಕಪ್ಪು ಚರ್ಮದವರು ಹನುಮಂತನಂತೆ ಉಬ್ಬಿದ ದವಡೆಯವರು, ಕಿರಿ ಮೂಗು, ಕಣ್ಣು ಇರುವ ಆದಿವಾಸಿ ಜನಾಂಗಗಳನ್ನು ಅಲ್ಲಿ ಕಾಣಬಹುದಾಗಿದೆ.



ಮೈಸೂರು ಮೃಗಾಲಯದಲ್ಲಿ ಒಂಟಿ ಹೆಣ್ಣು ಗೊರಿಲ್ಲಾಗೆ 'ಸುಮತಿ' ಎಂಬ ಸುಂದರ ಹೆಸರು ಕೊಟ್ಟಿದ್ದಾರೆ. ಆದರೆ ಅವಳು ಒಂಟಿತನದಿಂದಾಗಿ ಪರಿತಪಿಸುತ್ತಲೇ ಇರುತ್ತಾಳೆ. ಅವಳಿಗೆ ಸಂಗಾತಿಯೋರ್ವನನ್ನು ಬರಮಾಡಿಕೊಳ್ಳಲು ಅಧಿಕಾರಿಗಳಿಗೆ ಸಾಧ್ಯವಾಗುತ್ತಲೇ ಇಲ್ಲ. ಪರದೇಶದಿಂದ ಗೊರಿಲ್ಲಾ ಮುಂತಾದ ಕಾಡುಪ್ರಾಣಿಗಳನ್ನು ತಂದುಕೊಳ್ಳಲು ಅನೇಕಾನೇಕ ಕಟ್ಟಳೆಗಳನ್ನು ಪಾಲಿಸಬೇಕಾಗುವುದು. ವಿಶ್ವದ ಮೃಗಾಲಯಗಳು ಪಶು-ಪಕ್ಷಿಗಳನ್ನು ಅದಲು ಬದಲು ಮಾಡಿಕೊಳ್ಳುವದರಲ್ಲಿ ವಿಶೇಷ ಆಸಕ್ತಿ ವಹಿಸುತ್ತವಲ್ಲದೆ, ಬಂಧನದಲ್ಲಿರುವ ಪ್ರಾಣಿಗಳಿಗೆ ಜೊತೆಯನ್ನು ಪೂರೈಸುವದು ತಮ್ಮ ಆದ್ಯಕರ್ತವ್ಯವೆಂದು ಪರಿಗಣಿಸುವುದಿಲ್ಲ. ಸುಮತಿ, ಶಾಂತ ಸ್ವಭಾವದವಳಾದರೂ, ಪ್ರೇಕ್ಷಕರು ಕೆರಳಿಸಿದಾಗೊಮ್ಮೆ ಕಲ್ಲುಗೊಜ್ಜನ್ನು ಅವರತ್ತ ತೂರದೇ ಇರುವುದಿಲ್ಲ. ಅವಳಿಗೆ ಕೋಸಿನ ಎಳೆಗಳೆಂದರೆ ಪಂಚಪ್ರಾಣ. ಅವನ್ನು ಪೂರೈಸಿದಾಗ ಆಲುಗಡ್ಡೆ ಚಿಪ್ಸ್ ತರಹ ನುರಿಸಿ ತಿನ್ನುವುದನ್ನು ನೋಡುವದೇ ಮೋಜು. ಬಾಯಾರಿಕೆ ಆದಾಗೊಮ್ಮೆ ಪ್ಲಾಸ್ಟಿಕ್ ಟಂಬ್ಲರನಿಂದ ನೀರು ಕುಡಿಯುತ್ತಾಳೆ. ಪ್ರತಿ ದಿನವೂ ಪರ್ಣಗಳ ಹಾಸಿಗೆ ರಚಿಸಿಕೊಳ್ಳುವುದು ಅಸಾಧ್ಯವಾದ್ದರಿಂದ ಗೋಣಿ ತಟ್ಟನ್ನೇ ವಿವಿಧ ಸ್ಥಳಗಳಲ್ಲಿ ಒಯ್ದು ಹಾಸಿ ವಿರಮಿಸುತ್ತಾಳೆ. ಅವಳಿಗೆ ಒಂಟಿ ಜೀವನ ತೀರ ಅಸಹನೀಯ. ಎಂದಾದರೊಮ್ಮೆ ಮೈಸೂರಿಗೆ ಹೋದಾಗ "ಹೇಗಿದ್ದೀಯಮ್ಮಾ?" ಎಂದು ವಿಚಾರಿಸಿ. ಅವಳ ಮೂಕ ನೋವನ್ನು ಅರಿಯಲು ಯತ್ನಿಸಿದರೆ ಅವಳಿಗೆಷ್ಟೋ ನೆಮ್ಮದಿಯೆನಿಸೀತು! ಸು 1999ರಲ್ಲಿ ಪಶ್ಚಿಮ ಜರ್ಮನಿಯ ಮೃಗಾಲಯವೊಂದರಲ್ಲಿ ಜನ್ಮ ತಳೆದ ಸುಮತಿ, 1977ರಲ್ಲಿ ಮೈಸೂರು ಮೃಗಾಲಯಕ್ಕೆ ಬಂದಿದ್ದಳು. ಒಂಟಿಯಾಗಿಯೇ ತಾ॥ 4-10-2000 ರಂದು ಹೃದಯಸ್ತಂಭನದಿಂದ ಮೃತಪಟ್ಟಳು.

11. ಅಕ್ಕಾ ಭಾವಾ ಬಂದ್ರು

ದೀಪಾವಳಿ, ಯುಗಾದಿ ಹಬ್ಬಗಳಿಗೆ ತವರಿಗೆ ಬಂದ ಅಕ್ಕನಿಗೆ, ಭಾವನಿಗೆ ಮಕ್ಕಳು ಹಾರ್ದಿಕ ಸ್ವಾಗತ ಕೋರುವುದು ತೀರ ಸಾಮಾನ್ಯ. ಆದರೆ ಬೆಳ್ಳೂರಿನ ಹಳ್ಳಿಗರಿಗೆ ಹೆಜ್ಜಾರ್ಲೆ (ಪೆಲಿಕನ್) ಪಕ್ಷಿಗಳು ಮಗಳ ಸಮಾನ ಎಂದು ಹೇಳಿದರೆ ಇತರರಿಗೆ ನಂಬುವುದು ಕಷ್ಟವಾದೀತು! ಅವರು ಒಮ್ಮೆಯಾದರೂ ಈ ಊರಿಗೆ ಭೇಟಿ ಕೊಡುವಂತೆ ಆದರೆ ಈ ಮಾತಿನ ಸತ್ಯಾಂಶ ಅರಿವಾಗದಿರದು. ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಮದ್ದೂರಿನ ಸತ್ಯಾಗ್ರಹ ಸೌಧ ದಾಟಿದ ನಂತರ ಕೊಂಚ ದೂರ ಹೋಗಿ ತಿರುಗಿ ತೈಲೂರ ಮಾರ್ಗವಾಗಿ ಹದಿನೈದು ಕಿಲೋಮೀಟರ್ ಪ್ರವಾಸ ಮಾಡಿದರೆ ಬೆಳ್ಳೂರು ತಲುಪುತ್ತೇವೆ. ಸಾರಿಗೆ ರಸ್ತೆಯನ್ನು ರೈತರು ಕಾಳು, ಕಡಿ ಒಣಗಿಸಲು, ಬತ್ತ ಬಡಿಯಲು ಖಾಸಗಿ ರೀತಿಯಲ್ಲಿ ಬಳಸುವುದರಿಂದ ಪ್ರಯಾಣ ಪ್ರಯಾಸಕಾರಿಯೆನಿಸದೇ ಇರದು. ರಸ್ತೆಯ ಇಕ್ಕೆಲದಲ್ಲಿ ಕೆಮ್ಮಣ್ಣಿನ ಹೊಲಗಳು, ಅವುಗಳಲ್ಲಿ ರಾಗಿ, ಜೋಳ, ಬತ್ತ, ಕಡ್ಲೆಕಾಯಿ, ಆಲೂಗಡ್ಡೆಗಳ ತರಹ ಬೆಳೆಗಳನ್ನು ಬೆಳೆಯುತ್ತಾರೆ. ಬೆಳ್ಳೂರಿನ ವಸತಿ ಒಂದೂವರೆ ಸಾವಿರದಷ್ಟಾಗಬಹುದು. ರೈತರು ಮತ್ತು ಹರಿಜನರೇ ಬಹುಸಂಖ್ಯಾತರಿದ್ದು ಎಲ್ಲೆಲ್ಲಿಯೂ ಬಡತನ ತಾಂಡವವಾಡುತ್ತಿದೆ. ಮಣ್ಣಿನ ಗೋಡೆ ನಿಲ್ಲಿಸಿ ಅವುಗಳ ಮೇಲೆ ಚಾಪೆ, ತೆಂಗಿನಗರಿ, ಇಲ್ಲವೇ ನಾಡ ಹಂಚು ಮುಚ್ಚಿದ ಗುಡಿಸಲುಗಳೇ ಅವರ ವಾಸಸ್ಥಾನ. ರಾಗಿಮುದ್ದೆ ಸೊಪ್ಪು ಸಾರುಗಳೇ ಆಹಾರ. ಎಂದಾದರೂ ಕಡ್ಲೆಪುರಿ ಸಿಕ್ಕಾಗ ಅದೇ ಮಹಾದಿನವೆಂದು ಮಕ್ಕಳು ಬಗೆಯುತ್ತವೆ.

ಸಾವಿರಾರು ಕಿಲೋಮೀಟರ್ ಪ್ರವಾಸ ಮಾಡಿ, ದಣಿದು ಬೆಂಡಾಗಿ, ಬೆಳ್ಳೂರೇ ತಮ್ಮ ತವರು ಎಂದು ನಂಬಿದಂತೆ ಹೆಜ್ಜಾರ್ಲೆಗಳು ಸುಮಾರು ಕ್ರಿಸ್ಮಸ್ ಹಬ್ಬದ ಕಾಲಕ್ಕೆ ಅಲ್ಲಿಗೆ ಬರುತ್ತವೆ. ಮೊದಲ ಹಕ್ಕಿಗಳನ್ನು ಕಂಡಾಗ ಹಳ್ಳಿಗರಿಗೆ ಆಗುವ ಖುಷಿ ಅಷ್ಟಿಷ್ಟಲ್ಲ. ಗೋಲಿಯಾಡುವ ಮಕ್ಕಳು, ಗೃಹಕೃತ್ಯದಲ್ಲಿ ತೊಡಗಿದ ಗೃಹಿಣಿಯರು, ಕೃಷಿಯಲ್ಲಿ ತೊಡಗಿದ ಹಿರಿಯರು ಈ ಶುಭವಾರ್ತೆಯ ಬಗ್ಗೆ ಮಾತನಾಡಿಕೊಳ್ಳುತ್ತಾರೆ. ಭರ್ ಭರ್ ಎಂದು ರೆಕ್ಕೆ ಬೀಸುತ್ತ ಗಗನದಿಂದ ಧರೆಗೆ ಹೆಜ್ಜಾರ್ಲೆಗಳು ಬಂದು ಇಳಿಯಲಾರಂಭಿಸಿದರೆ, ಸ್ಥಳೀಯ ಕಾಕಲೋಕದಲ್ಲಿ ಕೋಲಾಹಲವೇಳುತ್ತದೆ. ಹಳ್ಳಿಯಲ್ಲಿದ್ದ ಹುಣಿಸೆ, ಜಾಲಿ, ಹಲಸು, ಅಶ್ವತ್ಥ ಮರಗಳನ್ನು ದೇವರು ತಮಗಾಗಿಯೇ ಸೃಷ್ಟಿಸಿದ್ದಾನೆಂದು ತಮ್ಮ ಬಿಡಾರಗಳನ್ನು ಅಲ್ಲಲ್ಲಿ ಸ್ಥಾಪಿಸಿ ಹಾಯಾಗಿ ವಿಶ್ರಾಂತಿ ಪಡೆಯುತ್ತವೆ. ಕಾಗೆಗಳು ಆಗಂತುಕರನ್ನು ಕೆಲಕಾಲ ಅಸೂಯೆಯಿಂದ ನೋಡಿದರೂ ಈ ಬೃಹದಾಕಾರದ ಪಕ್ಷಿಗಳೊಡನೆ ದ್ವಂದ್ವದಲ್ಲಿ ಗೆಲ್ಲುವುದು ಸಾಧ್ಯವಿಲ್ಲವೆಂದು ಪರಿಗಣಿಸಿ ಅವುಗಳಿಗೆ

ಮೇಲಿನ ಸ್ಥಳಗಳನ್ನು ಬಿಟ್ಟು ಕೊಟ್ಟು ತಾವು ಗಂಟುಮೂಟೆ, ಮೊಟ್ಟೆ ಮರಿಗಳನ್ನು ಕಟ್ಟಿಕೊಂಡು ಕೆಳಗಿನ ಟೊಂಗೆಗಳಿಗೆ ಪಯಣ ಬೆಳೆಸುತ್ತವೆ. ಮೊದಲ ದಿನ ಹೆಜ್ಜಾರ್ಲೆಗಳು ಅನ್ನ-ನೀರುಗಳಿಗೆ ಬಾಯಿ ಬಿಡದೆ ಪ್ರಯಾಣದ ದಣಿವನ್ನು ನಿವಾರಿಸಿಕೊಳ್ಳಲು ತೂಕಡಿಸುತ್ತ ಮರಗಳಲ್ಲಿಯೇ ಕೂತಿರುತ್ತವೆ. ಬೀಸುಗಾಳಿಯಿಂದಲೋ ಕಾಗೆಗಳ ಕರ್ಕಶ ಕೂಗಿನಿಂದಲೋ ಎಚ್ಚರಗೊಂಡಾಗೊಮ್ಮೆ ಪಯಣದಲ್ಲಿ ಮಿತಿಮೀರಿ ರೆಕ್ಕೆಗಳಲ್ಲಿ ಸಂತಾನೋತ್ಪತ್ತಿ ಮಾಡಿದ ಹೇನುಗಳನ್ನು ಕೊಕ್ಕಿನಿಂದ ಒಂದೊಂದಾಗಿ ಹೆಕ್ಕಿ ಹೆಕ್ಕಿ ನುಂಗುವವು. ಜೊತೆಗೆ ಮುದುಡಿದ ಗರಿಗಳನ್ನು ಬಾಚಿ, ತೀಡಿ ಸರಿಪಡಿಸಿಕೊಳ್ಳುವವು.

ಆಕಾಶ

ಬೂದುಬಣ್ಣದ ಹೆಜ್ಜಾರ್ಲೆ ಎಲ್ಲಿದ್ದರೂ ಎದ್ದು ಕಾಣಿಸುವಷ್ಟು ಭವ್ಯಾಕಾರದ್ದು. ಉದ್ದವಾಗಿ ಹರಿತವಾದ ಚುಂಚು, ಕೆಳದವಡೆಯಿಂದ ಜೋಳಿಗೆಯಂತಹ ಚರ್ಮದ ಚೀಲ ನೇತಾಡುತ್ತಿರುತ್ತದೆ. ಶ್ವಾಸೋಚ್ಛ್ವಾಸದೊಂದಿಗೆ ಈ ಚೀಲ ಹಿಗ್ಗುತ್ತ ಕುಗ್ಗುತ್ತ ಇರುವುದರಿಂದ ಮುದಿಯನು ವೀಳ್ಯ ಜಗಿಯುತ್ತ ಇರುವಂತೆ ಭಾಸವಾಗುತ್ತದೆ. ಕಣ್ಣುಗಳು ತುಂಬ ಕಿರಿಯವು ಎನಿಸಿದರೂ ದೃಷ್ಟಿ ಮಾತ್ರ ಗಜದಂತೆ ತೀಕ್ಷ್ಣವಾದುದು. ಗೋಣು ಹನುಮಂತನ ಬಾಲದಂತೆ ಸುಲಭವಾಗಿ ಕತ್ತರಿಸಲು ಸಾಧ್ಯವಿದೆಯಾದ್ದರಿಂದ. ಆನೆಯ ಸೊಂಡಿಲಿನಂತೆ ವಿವಿಧ ಚಟುವಟಿಕೆಗಳಿಗೆ ಬಳಸಲಾಗುತ್ತದೆ. ರೆಕ್ಕೆಗಳು ಉದ್ದವಾಗಿ ಅಗಲವಾಗಿರುವವು. ಕಾಲುಗಳು ಗಿಡ್ಡವಾಗಿದ್ದರೂ, ನಾಲ್ಕು ಬೆರಳುಗಳನ್ನು ಚರ್ಮದಿಂದ ಜೋಡಿಸಿದ್ದರಿಂದ ನೀರೊಳಗೆ ಈಸಲು ಸುಲಭವಾಗುವದು. ಬಾಲ ಗಿಡ್ಡವಾಗಿದ್ದು, ಗರಿಗಳನ್ನು ಬೀಸಣಿಗೆಯಂತೆ ಜೋಡಿಸಲಾಗಿದೆ. ನಾಲ್ಕಡಿ ಎತ್ತರದ ಈ ಬೃಹತ್ ಹಕ್ಕಿಗಳನ್ನು ಕಿರಿಬೆರಳಿನ ಗಾತ್ರದ ಟೊಂಗೆಗಳು ಹೇಗೆ ಹೊತ್ತುಕೊಳ್ಳಲು ಸಾಧ್ಯವೆಂದು ಮೊದಲ ಬಾರಿಗೆ ಅವುಗಳನ್ನು ಕಂಡಾಗ ಅನಿಸದೆ ಇರದು. ಆದರೆ ಅವು ಕಾಣಲು ಅಕ್ಕಿ ಮೂಟೆಯಂತೆ ಇದ್ದರೂ. ತೂಕದಲ್ಲಿ ಚುರಮುರಿ ಚೀಲದಂತಿರುತ್ತವೆ. ಅಂಗಾಂಗಗಳೆಲ್ಲ ಟೊಳ್ಳುಪೊಳ್ಳುಗಳಿಂದ ಕೂಡಿವೆ. ಹಲ್ಲಿಲ್ಲದ ಬಾಯಿಗೆ ಹವೆ ತುಂಬಿದ ಕೆಳದವಡೆ ಚೀಲ. ಕತ್ತಿನಲ್ಲಿ ಆಹಾರವನ್ನು ತಾತ್ಕಾಲಿಕವಾಗಿ ಸಂಗ್ರಹಿಸಲು ಇರುವ ಕೈಚೀಲ. ಎಲುಬುಗಳೆಲ್ಲ ಪೊಳ್ಳು ಮತ್ತು ಹಗುರವಾಗಿರುತ್ತವೆ. ಅಂಗಾಂಗಗಳಲ್ಲೆಲ್ಲ ಪುಗ್ಗಗಳನ್ನು ಹೋಲುವ ಗಾಳಿ ಚೀಲಗಳು ಪಸರಿಸಿಕೊಂಡಿರುತ್ತವೆ. ಒಂದು ದೃಷ್ಟಿಯಲ್ಲಿ ಹೆಜ್ಜಾರ್ಲೆ ಜೀವಂತ ಬಲೂನಗಳ ರಾಶಿ!

ರೈತರು ಬೆಳೆಯುವ ಯಾವ ಕಾಳು-ಕಡಿಗಳಿಗೂ ಹೆಜ್ಜಾರ್ಲೆ ಬಾಯಿ ಹಾಕುವದಿಲ್ಲ. ಜಲಚರಗಳೆಂದರೆ ಅವಕ್ಕೆ ಪಂಚಪ್ರಾಣ. ಬೆಳ್ಳೂರಿನ ಸಮೀಪದಲ್ಲಿ ಶಿಂಶಾನದಿ ಹರಿಯುತ್ತದೆ. ಪಶ್ಚಿಮಕ್ಕೆ ತೈಲೂರಿನ ವಿಸ್ತಾರವಾದ ಕೆರೆ ಇದೆ. ಇನ್ನೂ ಮುಂದೆ ಕಾವೇರಿ ಮಂದಗತಿಯಿಂದ ಹರಿಯುತ್ತಿದ್ದಾಳೆ. ನಸುಕಿನಲ್ಲಿ ಎದ್ದು, ಆಕಳಿಸಿ, ರೆಕ್ಕೆ ಬಡಿದು ಕವಾಯಿತು ಮಾಡುತ್ತ ಹಳ್ಳಿಗೆ ಒಂದೆರಡು ಪ್ರದಕ್ಷಿಣೆ ಹಾಕುವವು. ಕಂದಣ್ಣ, ಬಿಳಿಯಕ್ಕ, ಬೂದಣ್ಣ, ಬೆಳ್ಳಿಯಮ್ಮಂದಿರೆಲ್ಲ ಸಿದ್ಧರಾದೊಡನೆ, ಗುಂಪು ಕಟ್ಟಿಕೊಂಡು ನೀರಿನತ್ತ ಧಾವಿಸುವವು. ಅವು ರೆಕ್ಕೆ ಬಿಚ್ಚಿ ಹಾರಲಾರಂಭಿಸುವ ಅನಾಕರ್ಷಕ ರೀತಿ ನೋಡಿದಾಗ, ಇವಕ್ಕೆ ಹಾರಲು ಸಾಧ್ಯವೇ! ಎನಿಸಿ ಬಿಡುವುದು. ಆದರೆ ಒಮ್ಮೆ





ಮೇಲೇರಿ ಸಹಸ್ರ ಅಡಿಯ ಗಗನಮಂಡಲ ಸೇರಿದವೆಂದರೆ, ಹಾರಾಡುವ ಕಲೆಯಲ್ಲಿ ಅವುಗಳ ಪರಿಣತಿಯ ಅರಿವಾಗುವದು. ಹದ್ದುಗಳಂತೆ ರೆಕ್ಕೆಗಳನ್ನು ಅಗಲವಾಗಿ ಹರವಿ, ಗಾಳಿಪಟದಂತೆ ತೇಲಿಸಿ ಲೀಲಾಜಾಲವಾಗಿ ಅವು ಹಾರುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. ಸಣ್ಣಪುಟ್ಟ ಮಡುವು, ಹೊಂಡಗಳನ್ನು ಅಲಕ್ಷಿಸಿ, ನೀರ ಸಮೂಹವೇ ಎದುರಿಗೆ ಕಂಡಾಗ ಇಳಿಯಲಾರಂಭಿಸುವವು. ಅವುಗಳ ತೀಕ್ಷ್ಣದೃಷ್ಟಿಯಿಂದ ಮೀನುಗಳು ಸುಲಭವಾಗಿ ತಪ್ಪಿಸಿಕೊಳ್ಳುವಂತಿಲ್ಲ. ರೆಕ್ಕೆಗಳನ್ನು ತತ್ತರ-ವೆತ್ತರವಾಗಿ ಬಡಿಯುತ್ತಿದ್ದರೂ,



ಅಂಬುಪಿನ ವೇಗದಲ್ಲಿ ಆಹಾರದತ್ತ ಎರಗಿ, ನೀರಿನೊಳಗೆ ಸೇರಿ, ಚುಂಚನ್ನು ಭರ್ಚಿಯಂತೆ ಬಳಸಿ, ಕ್ಷಣಾರ್ಧದಲ್ಲಿ ಮೀನನ್ನು ದವಡೆ ಚೀಲಕ್ಕೆ ಸೇರಿಸಿ ಬಿಡುವದು. ಅದರೊಂದಿಗೆ ಸೇರಿಕೊಂಡು ಒಂದು ಚೊಂಬು ನೀರನ್ನು ಸೋಸಿ ಮೀನನ್ನು ದಾಸ್ತಾನುಚೀಲಕ್ಕೆ ಸ್ಥಳಾಂತರಿಸುವದು. ಅಲ್ಲಿ ಪಚನಕ್ರಿಯೆಯ ಪ್ರಥಮ ಹಂತ ಪ್ರಾರಂಭವಾಗುತ್ತಿದ್ದಂತೆ ಇನ್ನಷ್ಟು ಶಿಕಾರಿಯತ್ತ ಕಣ್ಣು ಹಾಯಿಸುವದು. ಮೈತುಂಬ ಇದ್ದ ಗಾಳಿಚೀಲಗಳಿಂದಾಗಿ ನೀರಿನಲ್ಲಿ ಹಗುರವಾಗಿ ತೇಲಲು ಸಹಾಯವಾಗುವದು. ಚಿಕ್ಕಪುಟ್ಟ ಮೀನಗಳು ಹತ್ತಿರ ನುಸುಳಿಕೊಂಡಾಗ, ದವಡೆಚೀಲವನ್ನು ಕೈಬಲೆಯಂತೆ ಬಳಸಿ ಅವುಗಳನ್ನು ಹೊಟ್ಟೆಯಲ್ಲಿ ಸೇರಿಸುವುದು. ಆಳವಾದ ನೀರಿನಲ್ಲಿದ್ದ ಆಹಾರವನ್ನು ಚುಂಚಿಗೆ ಸಿಗುವಂತೆ ಮಾಡುವ ವಿಧಾನ ಚಮತ್ಕಾರಿಕವಾದದ್ದು.

ಕಾಮನ ಕೀಟಲೆ

ವಸಂತಾಗಮನದಿಂದ ಅವಕ್ಕೆ ಕಾಮನ ಕೀಟಲೆ ಕಾಣಿಸಿಕೊಳ್ಳುವುದು. ಬೆಳೆಯುತ್ತಿರುವ ಗರ್ಭದಿಂದಾಗಿ ಹೆಣ್ಣು ಹಕ್ಕಿ ಹಿಗ್ಗಲಾರಂಭಿಸುವುದು. ಗಂಡು, ಹೆಣ್ಣಿನ ಸಹವಾಸಕ್ಕಾಗಿ ಹಾತೊರೆಯುವುದು. ಪತ್ನಿ, ಗರ್ಭವತಿ ಎಂದರಿತ ಪಕ್ಷಿ ರಾಜ ಗೃಹ ನಿರ್ಮಾಣಕಾರ್ಯದಲ್ಲಿ ನಿರತನಾಗುವ. ಆಚೆ–ಈಚೆ ಮರಗಳ ತೀರ ಸುಲಭವಾಗಿ ಮುರಿಯಲು ಬರುವ ಟೊಂಗೆಗಳನ್ನು ತಂದು ಟಿಸಿಲು ಒಡೆದ ರೆಂಬೆಯ ಮೇಲೆ ಉದ್ದಗಲವಾಗಿ ಅವನ್ನು ಜೋಡಿಸಲಾರಂಭಿಸಿದಾಗ, ಪತ್ನಿ, ಸಕ್ರಿಯ ಸಹಾಯ ನೀಡುವಳು. ಆ ಶರಪಂಜರ ಎಳೆಯ ಮರಿಗಳಿಗೆ ಸಲ್ಲದು ಅನಿಸಿದಾಗ ಅಶ್ವತ್ಥ, ಬೇವಿನ ಹಸಿರೆಲೆಗಳನ್ನು ಹೊತ್ತು ತಂದು ಮೆತ್ತಗಿನ ಹಾಸಿಗೆ ಸಿದ್ಧಪಡಿಸುವವು. ಹೋಳಿ ಹಬ್ಬದ ಹೊತ್ತಿಗೆ ಹೆಣ್ಣು ಮೂರು ಮೊಟ್ಟೆಗಳನ್ನಿಡುವದು. ಆಕಾರ, ಬಣ್ಣಗಳಲ್ಲಿ ಕೋಳಿಮೊಟ್ಟೆಯನ್ನು ಹೋಲಿದರೂ ಅದರ ನಾಲ್ಕು ಪಟ್ಟು ದೊಡ್ಡದಾಗಿರುತ್ತವೆ. ಗಂಡು–ಹೆಣ್ಣು ಸರದಿಯಂತೆ ಕಾವು ಕೊಡುತ್ತ ಕಾವಲು ಇರುವವು. ಸರಿಯಾಗಿ ಕಾವು ಸಿಗಬೇಕೆಂದು ಅವನ್ನು ಕೊಕ್ಕಿನಿಂದ ತಿರುಗಿಸುವಾಗ, ಕೆಲವು ಸಲ ಗೂಡಿನಿಂದ ಜಾರಿ ನೆಲಕ್ಕೆ ಬಿದ್ದು ಒಡೆಯುವುದೂ ಉಂಟು. ಅಲ್ಲದೆ ವೈರಿಗಳೂ ನಾಶಮಾಡದೆ ಇರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಹೆಣ್ಣು ಇನ್ನೆರಡು ಮೊಟ್ಟೆಗಳನ್ನಿಟ್ಟು ಸಂತತಿ ಬೆಳೆಯಲು ಸಹಾಯ ಮಾಡುವುದು. ಯುಗಾದಿ ಹೊತ್ತಿಗೆ ಮರಿಗಳು ಬೆಳೆದು ಮೊಟ್ಟೆ ಒಡೆದು ಒಂದೊಂದಾಗಿ ಹೊರಬರಲು ಪ್ರಾರಂಭಿಸುವವು. ಕವಚಗಳನ್ನೆಲ್ಲ ಹೊರಚೆಲ್ಲಿ ಗೂಡಿನ ಸ್ವಚ್ಛತೆ ಕಾಯ್ದುಕೊಳ್ಳುವುದು ತಾಯಿಯ ಜವಾಬ್ದಾರಿ.

ಹೆಜ್ಜಾರ್ಲೆ ಮರಿಗಳಾದರೋ ಅಡಿಗೆಗೆ ಸುಲಿದಿಟ್ಟ ಕೋಳಿಯನ್ನು ನೆನಪಿಗೆ ತರುವಂತಹವುಗಳು. ಸೊಗಸಿನ ತಂದೆ–ತಾಯಿಗಳಿಗೆ ಅದೆಷ್ಟು ಅನಾಕರ್ಷಕ ಮಕ್ಕಳು! ಸದಾಕಾಲ ಹಸಿವಿನಿಂದ ಚಾಂವ್‌ಪಾಂವ್ ಎಂದು ವಟಗುಟ್ಟುವ ಹೊಸ ಪೀಳಿಗೆಯನ್ನು ಗೂಡಿಗೇ ಸೀಮಿತವಾಗಿ ಇಡುವುದರೊಳಗೆ ತಾಯ ತಲೆ ಚಿಟ್ಟಿಡಿದು ಹೋಗುತ್ತದೆ. ಇಡೀ ಕುಟುಂಬದ ಉದರ ಪೋಷಣೆಯಲ್ಲಿ ತಂದೆ ಬಳಲಿ ಬೆಂಡಾಗಿ ಬಿಡುತ್ತದೆ. ಪ್ರತಿದಿನವೂ ಹೆಚ್ಚು ಹೆಚ್ಚು ಮೀನುಗಳನ್ನು ಬೇಟೆಯಾಡಿ ಅವನ್ನು ಹೊತ್ತು ಗೂಡಿಗೆ ಮರಳಬೇಕು. ಮರಿಗಳು, ತಾ ಮುಂದೆ, ನೀ ಹಿಂದೆ ಎಂದು ಕಚ್ಚಾಡಿ, ತಂದೆಯ

ಕೋಟೆ ಹೆಬ್ಬಾಗಿಲಿನಂತೆ ತೆರೆದ ಬಾಯಲ್ಲಿ ತಮ್ಮ ಗೋಣು ಸೇರಿಸಿ ಜಠರದ ಚೀಲದಿಂದ ಜೀರ್ಣಿಸಲು ಸಿದ್ಧವಾದ ಮೀನುಗಳನ್ನು ತಿನ್ನುವವು. ಬೆಳೆಯುತ್ತಿರುವ ಈ ಮರಿಗಳು ಮಿತಿಮೀರಿ ತಿನ್ನುವುದರಿಂದ ಅವು ಹಾರಲು ಕಲಿಯುವವರೆಗೆ ಅಂದರೆ ಮೂರು ಮಾಸದೊಳಗೆ, ನೂರು ಕಿಲೋಗ್ರಾಮದಷ್ಟು ಅಧಿಕವಾದ, ಪೌಷ್ಟಿಕವಾದ, ಇಷ್ಟಮಯವಾದ ಮತ್ಸ್ಯಾಹಾರವನ್ನು ಜೀರ್ಣಿಸಿಕೊಳ್ಳುವವು. ಮಾನವನು ಸಹಸ್ರಾರು ರೂಪಾಯಿ ಖರ್ಚು ಮಾಡಿದರೂ ಇಷ್ಟು ಉತ್ತಮ ಆಹಾರ ಅವನಿಗೆ ದೊರೆಯಲಾರದು. ಹೆಜ್ಜಾರ್ಲೆ ಸಂಸಾರ ಕಾಲಕಾಲಕ್ಕೆ ಮಲಮೂತ್ರ ಮಿಶ್ರಣವನ್ನು ಭೂಮಿಯತ್ತ ತೂರುತ್ತಲೇ ಇರುವದು. ಇದು ಅತ್ಯುತ್ತಮ ಗೊಬ್ಬರವಾದದ್ದರಿಂದ ಹಳ್ಳಿಗರು ಮರದ ಸುತ್ತ ಮಣ್ಣು ಹರವಿ ಕಾಲಕಾಲಕ್ಕೆ ಅದನ್ನು ತಮ್ಮ ಹೊಲಗಳಲ್ಲಿ ಹರವುತ್ತಾರೆ.

ಬೆಳ್ಳೂರೇ ಏಕೆ?

ಕರ್ನಾಟಕದಲ್ಲಿ ಬೇರೆಲ್ಲೂ ಕಾಣಸಿಗದ ಹೆಜ್ಜಾರ್ಲೆ ಬೆಳ್ಳೂರಿಗೇ ಏಕೆ ಬರಬೇಕು? ಪ್ರತಿವರ್ಷವೂ ಅವೇ ಮರಗಳನ್ನೇ ಏಕೆ ಆಶ್ರಯಿಸಬೇಕು? ಅವು ಎಂದಿನಿಂದ ಅಲ್ಲಿ ಬರುತ್ತಲೆ ಇವೆ? ಎಂಬ ಹಲವಾರು ಪ್ರಶ್ನೆಗಳಿಗೆ ಉತ್ತರ ಸಿಗದು. ಇಂದಿನ ಪೀಳಿಗೆಯ ತಾತ, ಮುತ್ತಾತನ ಕಾಲದಿಂದಲೂ ಅವು ಬರುತ್ತಿವೆ! ಎಂದು ಹಳ್ಳಿಗರು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಬೆಳ್ಳೂರೆಂಬ ಹೆಸರೇ ಈ ಹಕ್ಕಿಗಳಿಂದಾಗಿ ಬಂದಿರಬಹುದೇ? ಅವುಗಳ ಮಲಮೂತ್ರ ಮಿಶ್ರಣ ಖಣೆಗಳಲ್ಲಿಯ ಸುಣ್ಣದಷ್ಟು ಬಿಳಿಯದಾಗಿರುತ್ತದೆ. ಸನಿಹದ ಊರಿಗೆ 'ಕಬ್ಬಾರೆ' ಎಂಬ ಇನ್ನೊಂದು ಹಕ್ಕಿಯ ಹೆಸರಿರುವದರಿಂದ ಈ ಊಹೆ ತರ್ಕಬದ್ಧವಾಗಿದೆಯೆಂದು ಅನಿಸುತ್ತದೆ. ಊರಲ್ಲಿ ನಾಲ್ಕಾರು ವೀರಗಲ್ಲುಗಳಿದ್ದರೂ ಅವುಗಳನ್ನು ಯಾವುದೂ ಹೆಜ್ಜಾರ್ಲೆಯ ಸಂರಕ್ಷಣೆ ಮಾಡುವದರಲ್ಲಿ ದುಡಿದ ವೀರರವು ಇಲ್ಲ. ಬಹುಶಃ ಇಂದಿನಂತೆ, ಎಂದೆಂದಿಗೂ ಈ ಹಕ್ಕಿಗಳಿಗೆ ಬೆಳ್ಳೂರಿನಲ್ಲಿ ವೈರಿಗಳೇ ಇದ್ದಿರಲಿಕ್ಕಿಲ್ಲ. ಮಗಳು ಪ್ರಸೂತಿಗಾಗಿ ತೌರಿಗೆ ಬರುವಂತೆ ಇವುಗಳೂ ಇದೇ ಉದ್ದೇಶದಿಂದಲೇ ತಮ್ಮಲ್ಲಿ ಬರುವವೆಂದು ಅಚಲವಾಗಿ ನಂಬಿದ ಹಳ್ಳಿಗರು ವೈರಿಗಳು ಹೇಗಾದಾರು? ಮಳೆಗಾಲದ ಮುನ್ನ ಅಳಿಯದೇವರು ತನ್ನ ಹೊಸ ಪೀಳಿಗೆಯೊಂದಿಗೆ ಹೊರಟು ನಿಂತಾಗ, ರೈತರಿಗೆ ಅರೆ ವರ್ಷದ ಬಾಂಧವ್ಯ ಕಡಿದುಕೊಳ್ಳುವದು ತೀರ ನೋವಿನದಾಗುತ್ತದೆ. ಮುಂದಿನ ಹೆರಿಗೆಗೂ ಅಕ್ಕ-ಭಾವ ತಮ್ಮಲ್ಲಿಗೇ ಬರುತ್ತಾರಲ್ಲ! ಎಂದು ಮಕ್ಕಳು ಬೀಳ್ಕೊಡುವ ನೋವನ್ನು ಮರೆಯಲು ಯತ್ನಿಸುತ್ತಾರೆ.

ಜೀವನದಲ್ಲಿ ಸದಾ ವಸಂತ ಋತುವನ್ನು ಬಯಸುವ ಹೆಜ್ಜಾರ್ಲೆ, ವಲಸೆ ಹೋಗುತ್ತಲೇ ಇರುತ್ತದೆಂಬ ವಿಚಾರವನ್ನು ಅರಿಸ್ಟಾಟಲನು ಬಲ್ಲವನಾಗಿದ್ದ. ಇಂದಿನ ಸರ್ವತೋಮುಖ ವೈಜ್ಞಾನಿಕ ಪ್ರಗತಿಯಿಂದಲೂ ಇದನ್ನು ಹೇಗೆ ಸಾಧಿಸುತ್ತದೆಂದು ಕಂಡು ಹಿಡಿಯಲಾಗಿಲ್ಲ. ವಿವಿಧ ರಾಷ್ಟ್ರಗಳಲ್ಲಿ ವಿವಿಧ ವರ್ಣದ ಹೆಜ್ಜಾರ್ಲೆ ಕಾಣಸಿಗುತ್ತದೆ. ಆಸ್ಟ್ರೇಲಿಯದಲ್ಲಿಯ ಶುಭ್ರ ಹಕ್ಕಿಗಳು ಆರೇಳು ಅಡಿ ಉದ್ದವಿರುತ್ತವೆ. ಅಲ್ಲಿಯ ಮೂಲ ಬೇಟೆ ಸುಲಭ ಸಾಧ್ಯವಲ್ಲದ್ದರಿಂದ ಅವುಗಳ ಪಾಲಿಗೆ ಅವು ನೆಮ್ಮದಿಯಾಗಿದ್ದವು. ಆದರೆ ಯುವ ಜನಾಂಗ ಬಿಲ್ಲು-ಬಾಣವಷ್ಟೇ ಅಲ್ಲ ಕೋವಿಯನ್ನೂ ಬಳಸಿ ಕೊಲ್ಲಲಾರಂಭಿಸಿದ್ದಾರೆ. ಆಫ್ರಿಕದ ಹೆಜ್ಜಾರ್ಲೆಗಳು ಬಿಳಿ ಅರಿಶಿನ ಮಿಶ್ರಿತ ಪಟ್ಟೆಗಳನ್ನು ಹೊಂದಿವೆ. ಅಮೇರಿಕದವು

ಮೂರು ಬಣ್ಣಗಳನ್ನು ಹೊಂದಿವೆ. ಪೂರ್ವಪ್ರದೇಶದಲ್ಲಿ ಬಿಳಿಯವು. ಫ್ಲೋರಿಡಾದಲ್ಲಿ ನಸ್ಸಿದ ಬಣ್ಣದವು. ಕೆಲಿಫೋರ್ನಿಯದವು, ಕಂದು ಮೈಯ ಬಿಳಿಪಟ್ಟೆಯವು. ಹೆಜ್ಜಾರ್ಲೆಯ ಅತ್ಯಾಕರ್ಷಕ ರೂಪದಿಂದಾಗಿ ಅವನ್ನು ವಾಣಿಜ್ಯ ಚಿಹ್ನೆಯಾಗಿ ಬಳಸಿಕೊಂಡಿದ್ದಾರೆ. ಬ್ರಿಟನ್ನಿನ ಖ್ಯಾತ ಪೆಲಿಕನ್ ಪ್ರಕಾಶಕರು. ಚುಂಚಿನಲ್ಲಿ ಪುಸ್ತಕ ಹೊತ್ತು ಹಾರುವ ಹಕ್ಕಿಯನ್ನು ತಮ್ಮ ಹೆಗ್ಗುರುತಾಗಿ ಬಳಸುತ್ತ ಬಂದಿದ್ದಾರೆ. ದಕ್ಷಿಣ ಅಮೇರಿಕೆಯ ಕಲಾ ವ್ಯಾಪಾರಿಗಳು ತಮ್ಮ ಕೇಂದ್ರದ ಮುಂದೆ ಹೆಜ್ಜಾರ್ಲೆಯ ಬೃಹತ್ ಶಿಲ್ಪವನ್ನು ನಿಲ್ಲಿಸಿರುತ್ತಾರೆ.

ಬೆಳ್ಳೂರಿನವರು ಅಂತಃಕರಣದಿಂದಲೊ ಅಜ್ಞಾತದಿಂದಲೋ ಈವರೆಗೆ ಈ ಪಕ್ಷಿಗಳನ್ನು ಸಂರಕ್ಷಿಸಿಕೊಂಡು ಬಂದಿದ್ದಾರೆ. ಆದರೆ ಜಗತ್ತಿನೊಂದಿಗೆ ಈ ಹಳ್ಳಿಯೂ ಬದಲಾಗುತ್ತಿದೆ. ವಾಹನ ಸೌಕರ್ಯಗಳು ಬೆಳೆದಿದ್ದರಿಂದ ಇಲ್ಲಿ ಬರುವ ಪ್ರಯಾಣಿಕರ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಬರುವವರೆಲ್ಲ ಪಕ್ಷಿ–ಪ್ರೇಮಿಗಳೆಂದು ಹೇಳಲಾಗದು. ಮೋಜಿಗಾಗಿಯೂ ಬರುವವರಿದ್ದಾರೆ. ಕಡ್ಡಾಯವಾಗಿ ಕರೆತಂದ ಶಾಲೆ ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರೂ ಇರುತ್ತಾರೆ. ಕೊಳಲು ನುಡಿಸುವವರು, ಸಿಳ್ಳು ಹಾಕುವವರು, ರೇಡಿಯೋ ಕಿರುಚಿಸುವವರೂ ಸಾಮಾನ್ಯವಾಗಿದ್ದಾರೆ. ಆಗೊಮ್ಮೆ ಈಗೊಮ್ಮೆ ಕಲ್ಲೆಸೆಯುವವರೂ ಬರುತ್ತಾರೆ. ಇವರನ್ನೆಲ್ಲ ನಿಯಂತ್ರಿಸಬೇಕಾದವರು ಯಾರು? ಹಳ್ಳಿಯ ಜನವಸತಿಯ ಜೊತೆಗೆ ಅವುಗಳ ಬೇಡಿಕೆಗಳೂ ಬೆಳೆಯುತ್ತವೆ. ಒಬ್ಬನು ಉರುವಲಿಗಾಗಿ ಮರದ ಟೊಂಗೆಯನ್ನು ಕಡಿದರೆ, ಇನ್ನೊಬ್ಬನು, ಇಟ್ಟಿಗೆ ಗೂಡಿಗಾಗಿ ತನ್ನ ಹೊಲದ ಮರವನ್ನೆ ಉರುಳಿಸಿದ್ದಾನೆ. ಸಾಯಿಕಲ್ ಸಾಬಿ ಹಳ್ಳಿಗೆ ಮೇಲಿನಿಂದ ಮೇಲೆ ಭೇಟಿ ಕೊಡುತ್ತಿರುತ್ತಾನೆ. ಗೂಡಿನಿಂದ ನೆಲಕ್ಕುರುಳಿದ ಪುಟ್ಟ ಮರಿಗಳನ್ನು ಮಾಂಸಕ್ಕಾಗಿ ಅವನು ಐದು ರೂಪಾಯಿಗೆ ಒಂದರಂತೆ ಕೊಳ್ಳುತ್ತಾನಂತೆ. ಹೆಜ್ಜಾರ್ಲೆಯಲ್ಲಿ ಹಣದ ಪ್ರಲೋಭ ಕಂಡಾಗ ವೇದಾಂತ ಹೇಳಿ ಬಡ ಹಳ್ಳಿಗರಿಗೆ ಸುಮ್ಮನಿರಲಾದೀತೇ? ಹಳ್ಳಿಗರಲ್ಲಿ ಧಾರ್ಮಿಕವಲ್ಲದಿದ್ದರೂ, ವೈಜ್ಞಾನಿಕ ಪ್ರಜ್ಞೆ ಜಾಗೃತವಾಗಿ ಇಂದಿನಂತೆ ಮುಂದೆಯೂ ಈ ಹಕ್ಕಿಗಳಿಗೆ, ಅನ್ನ, ಆಶ್ರಯ, ಸಂರಕ್ಷಣೆಗೆ ಕೊರತೆಯಾಗದಂತೆ ನೋಡಿಕೊಂಡರೆ, ಭಾವೀ ಪೀಳಿಗೆಯವರೂ ಅವುಗಳ ದರ್ಶನ ಲಾಭ ಪಡೆಯುವಂತೆ ಆಗಬಹುದು. ಇಲ್ಲದಿದ್ದರೆ ಒಂದೊಮ್ಮೆ ನಮ್ಮಲ್ಲಿ ಹೆಜ್ಜಾರ್ಲೆಗಳು ವಲಸೆ ಬರುತ್ತಿದ್ದವು, ಎಂದು ಕೇವಲ ಚಾರಿತ್ರಿಕ ಪುಸ್ತಕಗಳಿಂದ ಅರಿಯುವ ಪ್ರಸಂಗ ಬಂದೀತು.

12. ಪ್ರಾಣಿ ಪ್ರಪಂಚದ ರಾಸಾಯನಿಕ ಅಸ್ತ್ರಗಳು

'ಹಾವು' ಎಂದರೆ ಹೆದರುವವರು ಇದ್ದಾರೆ. ಆದರೆ ಕೆಲವು ಸರ್ಪ ಜಾತಿಗಳು ವಿಷಕಾರಿ. ಅವುಗಳ ಎಂಜಲು ವಿಷಕಾರಿ. ಚುಚ್ಚುಮದ್ದಿನ ಸೂಜಿಯಂತಿರುವ ಹಲ್ಲುಗಳಿಂದ ತಮ್ಮ ಎಂಜಲನ್ನು ವೈರಿಯ ಶರೀರದಲ್ಲಿ ಸೇರಿಸುವುವು. ಗಂಡಾಂತರದಲ್ಲಿ ಸಿಕ್ಕಿಕೊಂಡಾಗ, ಎದುರಾಳಿಗೆ ಗಾಯ ಮಾಡಿ, ಅನಂತರ ವಿಷ ಹರಿಸುವವು. ಆದರೆ ಎಷ್ಟೋ ಸಲ ಸುರಕ್ಷಿತ ಸ್ಥಳಕ್ಕೆ ಪಲಾಯನ ಮಾಡುವ ಆತುರತೆಯಲ್ಲಿ ವಿಷ ಹೊರ ಹಾಕುವದನ್ನು ಮರೆತು ಬಿಡುವವು. ಇಂತಹ ಕಚ್ಚುವಿಕೆಯಿಂದ ಎದುರಾಳಿಗೆ ಯಾವ ಹಾನಿಯೂ ಇಲ್ಲ. ಇದರಂತೆ, ವಿಷ ಬರಿದಾದ ನಾಗರಹಾವಿನ ಕಡಿತದಿಂದ ನೋವು, ಸಾವು ಬರಲಾರವು. ಕೆಲ ಸರ್ಪಗಳಲ್ಲಿ ವಿಷಹಲ್ಲುಗಳು, ಗಂಟಲಿನ ಹತ್ತಿರ ಇರುವುದರಿಂದ ವೈರಿಯನ್ನು ಕಚ್ಚಲು ಅವು ಬಹಳ ಶ್ರಮ ಪಡಬೇಕಾಗುತ್ತದೆ. ಆದ್ದರಿಂದ, ಸರ್ಪದಿಂದ ಕಡಿಸಿಕೊಂಡ ಬಹು ಸಂಖ್ಯಾತರಲ್ಲಿ ವಿಷ ಸೇರಿರುವುದಿಲ್ಲ. ರಕ್ತ ಪ್ರವಾಹದಲ್ಲಿ ಸೇರಿಕೊಂಡ ವಿಷ ವಿವಿಧ ಅಂಗಾಂಗಗಳಿಗೆ ತಲುಪಲು ಅನುಕೂಲವಾಗುತ್ತದೆ. ನಾಗರಹಾವಿನ ವಿಷ, ಮಜ್ಜಾತಂತು ಮತ್ತು ಮಿದುಳನ್ನು ನಿಷ್ಕ್ರಿಯವಾಗಿ ಮಾಡಿಬಿಡುತ್ತದೆ. ಕೆಲ ಸರ್ಪಗಳ ವಿಷ, ಸ್ನಾಯುಗಳನ್ನು ಬಲಹೀನಗೊಳಿಸಿ, ಪಾರ್ಶ್ವವಾಯು ಬರುವಂತೆ ಮಾಡುವದು. ಕೆಲವು ಸಲ, ಕಾದ ನಾಣ್ಯದಿಂದ ಸುಡುವುದು, ಕೋಳಿಯಿಂದ ರಕ್ತ ಹೀರಿಸುವುದು, ಗರುಡ ರೇಖೆ ಉಳ್ಳವರು ಬದುಕಿಸುವುದು, ವಿಷ ಪ್ರಯೋಗಕ್ಕೆ ಬಲಿಯಾಗದವರನ್ನು ಮಾತ್ರ, ಎಲ್ಲಕ್ಕೂ ಮೊದಲು ವಿಷ ರಕ್ತ ಪ್ರವಾಹದಲ್ಲಿ ಸೇರಿಕೊಳ್ಳದಂತೆ ಬಿಗಿಯಾಗಿ ಕಟ್ಟು ಹಾಕಬೇಕು. ಅನಂತರ ಸರ್ಪವಿಷ ಪ್ರತಿರೋಧಕ ಚುಚ್ಚುಮದ್ದು ಕೊಡಿಸುವುದು, ಅತ್ಯಂತ ಫಲಕಾರಿ ವೈಜ್ಞಾನಿಕ ವಿಧಾನ.

ಮರುಭೂಮಿಯಲ್ಲಿ ವಾಸಿಸುವ, 'ಗಿಲಾ' ಓತಿಕಾಟದ ಕೆಳ ದವಡೆಗಳಲ್ಲಿ ವಿಷ ಗ್ರಂಥಿಗಳಿರುತ್ತವೆ. ಸರ್ಪದಂತೆ, ಈ ಪ್ರಾಣಿಯೂ ಟೊಳ್ಳು ಹಲ್ಲುಗಳಿಂದಲೇ ಎದುರಾಳಿಯ ಶರೀರದಲ್ಲಿ ವಿಷ ಹರಿಸುತ್ತದೆ. ಈ ವಿಧಾನವನ್ನು ಸ್ವರಕ್ಷಣೆಗೆ ಹೆಚ್ಚಾಗಿ ಬಳಸಿಕೊಳ್ಳುವುದರಿಂದ ಈ ಓತಿಕಾಟಗಳು ಸರ್ಪಗಳಷ್ಟು ಗಂಡಾಂತರಕಾರಿ ಅಲ್ಲ. ಗೃಹಗಳಲ್ಲಿ ವಾಸಿಸುವ ಹಲ್ಲಿ, ಬೇಲಿಗಳಲ್ಲಿ ಇರುವ ಓತಿಕಾಟ, ಕಾಡುಗಳಲ್ಲಿ ಓಡಾಡುವ ಗೋಸುಂಬೆಗಳಲ್ಲಿ ವಿಷ ತುಂಬಿದೆ ಎಂದು ಜನಸಾಮಾನ್ಯರು ನಂಬಿದರೂ, ಇವುಗಳ ಶರೀರದಲ್ಲಿ ವಿಷಕಾರಿ ರಾಸಾಯನ ಉತ್ಪಾದಿಸುವ ಯಾವ ಅವಯವವೂ ಇರುವುದಿಲ್ಲ. ನಿಶಾಚರ ಕಪ್ಪೆಯ ಮೈ ಚರ್ಮದಲ್ಲಿರುವ ಗ್ರಂಥಿಗಳು ವಾಕರಿಕೆ ಹುಟ್ಟಿಸುವ ರಾಸಾಯನವನ್ನು ಉತ್ಪಾದಿಸುತ್ತವೆ; ಆದ್ದರಿಂದ ಹಾವು, ಹದ್ದು, ಕಾಗೆ, ಗೂಗೆಗಳು ಇವುಗಳ ಗೋಜಿಗೆ ಹೋಗುವುದಿಲ್ಲ.

ಮತ್ಸ್ಯ ಲೋಕದ–ಮೀನಿಗೆ ಚಾವಟಿಗೆಯಂತಹ ಬಾಲವಿರುತ್ತದೆ. ಅದರ ಚರ್ಮ ಚಿಕ್ಕ ಚಿಕ್ಕ ಮುಳ್ಳುಗಳಾಗಿ ಮಾರ್ಪಟ್ಟಿವೆ. ಬಾಲದ ತುತ್ತ ತುದಿ ಹರಿತವಾದ ಮೊಳ್ಳು, ಮುಳ್ಳಿನಲ್ಲಿ ಅಂತ್ಯಗೊಳ್ಳುತ್ತದೆ. ವೈರಿಯೊಂದಿಗೆ ಕದನದಲ್ಲಿ ತೊಡಗಿದಾಗ, ತೀವ್ರ ನೋವನ್ನು ಕೊಡುವ ರಾಸಾಯನವನ್ನು ಮುಳ್ಳಿನಿಂದ ವಿರೋಧಿಯ ಮೈಯಲ್ಲಿ ಹರಿಸುವದು. ಬಾಲ ಎಲ್ಲ ದಿಕ್ಕಿನಲ್ಲಿಯೂ ಹೊರಳಿಸಬಹುದಾಗಿದೆ. ಈ ರಾಸಾಯನ ವೈರಿಯ ರಕ್ತದ ಚಲನವಲನ ಅಸ್ತವ್ಯಸ್ತಗೊಳಿಸಿ, ಕೈ ಕಾಲುಗಳಿಗೆ ಜಂಪು ಬರುವಂತೆ ಮಾಡುತ್ತದೆ. ಆಕ್ರಮಣಕ್ಕೆ ಬಲಿಯಾದ ಈಸುಗಾರನು ಸುರಕ್ಷಿತವಾಗಿ ದಂಡೆಗೆ ಮರಳುವುದು ತೀರ ವಿರಳ. ವಿಷಮುಳ್ಳು ಸವೆದು ಹೋದರೆ, ಇಲ್ಲವೇ ಮುರಿದು ಹೋದರೆ, ಅದರ ಸ್ಥಳದಲ್ಲಿ ಇನ್ನೊಂದು ಬೆಳೆಯುವುದು. ಮೀನುಗಾರನು, ಗಾಳಕ್ಕೆ ಸಿಕ್ಕಹಾಕಿಕೊಂಡ ಈ ಮೀನನ್ನು ನೀರಿನಿಂದ ಹೊರಗೆಳೆಯುವಾಗ ಬಹಳ ಎಚ್ಚರಿಕೆ ವಹಿಸುತ್ತಾನೆ. ಅದರ ಬಾಲ ತುಂಡರಿಸಿಯೇ ಬುಟ್ಟಿಗೆ ಸೇರಿಸುತ್ತಾನೆ. ಕೆಲ ಆದಿವಾಸಿಗಳು ಈ ಬಾಲವನ್ನು ಬಾರಕೋಲಿನಂತೆ ಬಳಸುವರು. ಮುಳ್ಳನ್ನು ಗೋಣಿ ತಟ್ಟನ್ನು ಹೊಲಿಯುವದಕ್ಕೂ, ಬೇಟೆಯಾಡುವುದಕ್ಕೂ ಬಳಸುವರು.

ಇದೇ ಗುಂಪಿಗೆ ಸೇರಿದ ಟೊರಪಿಡೊ ಮೀನು, ರಾಸಾಯನ ಬಳಸಿ ವಿದ್ಯುತ್ ಉತ್ಪಾದಿಸುವದು. ಇದರ ಮಧ್ಯ ಶರೀರದ ಕೆಲ ಮಾಂಸ ಖಂಡಗಳು ಚಿಕ್ಕ ಚಿಕ್ಕ ವಿದ್ಯುತ್ ಬ್ಯಾಟರಿಗಳಾಗಿ ಮಾರ್ಪಟ್ಟಿವೆ. ವಿದ್ಯುತ್ ಪ್ರವಾಹದ ಬಲವೂ ಏರುತ್ತದೆ. ಬೇಕು ಎನಿಸಿದಾಗ ಈ ಮೀನು ಇನ್ನೂರಾ ಇಪ್ಪತ್ತು ವೋಲ್ಟ್ ವಿದ್ಯುತ್ ಹೊರ ಹಾಕಬಲ್ಲದು. ಅನಂತರ ತಿರುಗಿ ಈ ಅಸ್ತ್ರ ಬಳಸಲು ಸ್ವಲ್ಪ ಕಾಲ ಬೇಕಾಗುತ್ತದೆ. ಪ್ರತಿಯೊಂದು ಬ್ಯಾಟರಿಯು ಮಜ್ಜಾ ತಂತು ಮತ್ತು ರಕ್ತ ವಾಹಿನಿಗಳಿಂದ ಜೋಡಿಸಲ್ಪಟ್ಟಿದೆ. ಇವುಗಳಲ್ಲಿ ಆಗುವ ರಾಸಾಯನಿಕ ಕ್ರಿಯೆಯಿಂದ ವಿದ್ಯುತ್ತಿನ ಉತ್ಪತ್ತಿಯಾಗುತ್ತದೆ. ಗಂಡು, ವಿದ್ಯುತ್ ಬೇಲಿಯಿಂದ ತನ್ನ ನಲ್ಲೆಯನ್ನು ಅಪಹರಿಸಿ ಹೋಗದಂತೆ ಎಚ್ಚರಿಕೆ ವಹಿಸುತ್ತದೆ. ಬೆಳೆಯುತ್ತಿರುವ ಮರಿಗಳ ಸಂರಕ್ಷಣೆಗೂ ಇಂತಹ ಬೇಲಿ ಬಳಸಲಾಗುತ್ತದೆ.

ಚೇಳಿನ ಇಕ್ಕಳದಂತೆ ಇರುವ ಮುಂಗಾಲುಗಳು ಭಯ ಹುಟ್ಟಿಸುವವು. ಆದರೆ ಅದರ ವಿಷದ ಆಯುಧ, ಬಾಲದ ತುದಿಯಲ್ಲಿರುತ್ತದೆ. ಗುಲಾಬಿ ಮುಳ್ಳಿನ ಆಕಾರದಲ್ಲಿರುವ



ಈ ಆಯುಧ ಪೊಳ್ಳಾಗಿದ್ದು ರಾಸಾಯನವನ್ನು ಹರಿಬಿಡುವ ವ್ಯವಸ್ಥೆಯಿಂದ ಸುಸಜ್ಜಿತವಾಗಿದೆ. ಚೇಳಿನ ಆಕ್ರಮಣಕ್ಕೆ ಒಳಗಾದವರು, ತಲೆ–ಶೂಲೆ, ವಾಂತಿ, ಭೇದಿಗಳಿಂದ ನರಳುವರು. ಈ ರಾಸಾಯನ, ಕೊಲೆಗಡುಕ ಅಲ್ಲದಿದ್ದರೂ ಪುಕ್ಕಲು ರೋಗಿ ಕೊನೆಯ ಉಸಿರು ಬಿಡಲೂಬಹುದು. ಶತಪಾದಿ ಹುಳುವಿನ ಮೊದಲ ಜೋಡಿ ಕಾಲುಗಳು, ಬಲಿಷ್ಠ ಕೊಕ್ಕೆಯಂತೆ ಇದ್ದು ವಿಷಗ್ರಂಥಿಗಳಿಂದ ಜೋಡಿಸಲಾಗಿದೆ. ಈ ರಾಸಾಯನ ಎದುರಾಳಿಯ ಮೈ ಸೇರಿದಾಗ ತೀವ್ರ ನೋವು ಕಾಣಸಿಕೊಳ್ಳುವುದು. ಕೆಲವರಲ್ಲಿ ಜ್ವರವೂ ಕಾಣಿಸಿಕೊಳ್ಳಬಹುದು. ಜೇಡ, ತನ್ನ ಪ್ರಬಲವಾದ ದವಡೆಗಳನ್ನು ವಿಷಾಯುಧವಾಗಿ ಬಳಸಿಕೊಳ್ಳುವುದು. ಇದೇ ರೀತಿಯಾಗಿ ಉಣ್ಣೆ ಕಚ್ಚಿದಾಗಲೂ ರಾಸಾಯನಿಕದಿಂದಾಗಿ ಮೈ ನೋವು ಕಾಣಿಸಿಕೊಳ್ಳುವುದು.

ಇರುವೆ, ಜೇನು, ಕಣಜದಹುಳುಗಳಲ್ಲಿ, ಅಂಡ ನಳಿಕೆಯನ್ನು ವಿಷಾಯುಧವಾಗಿ ಬಳಸಲಾಗುತ್ತದೆ. ಅಂತೆಯೇ ಈ ಕೀಟಗಳಲ್ಲಿ ಲಿಂಗರಹಿತ ಹೆಣ್ಣಾಳುಗಳು ಮಾತ್ರ ಉಪದ್ರವಿಗಳು. ಹರಿತವಾದ ಹಲ್ಲುಗಳಿಂದ ಕೂಡಿದ ಅಂಬುವನ್ನು ಕವಚದಿಂದ ಸಂರಕ್ಷಿಸಲಾಗುತ್ತದೆ. ವಿಷ ಚೀಲದಲ್ಲಿ ರಾಸಾಯನಿಕ ಗ್ರಂಥಿಗಳು ಉತ್ಪಾದಿಸಿದ ದ್ರವ್ಯವನ್ನು ಶೇಖರಿಸಲಾಗುತ್ತದೆ. ಅಂಬು ಕಳೆದುಕೊಂಡ ಹೆಣ್ಣಾಳುಗಳು ಬದುಕಲಾರವು. ಆದರೂ ಅವು ತಮ್ಮ ಗೂಡಿಗಾಗಿ ಯಾವ ತ್ಯಾಗವನ್ನು ಮಾಡಲೂ ಸಿದ್ಧ. ಫಾರ್ಮಿಕ್, ಆಮ್ಲವನ್ನು ತಮ್ಮ ಶರೀರದಲ್ಲಿ ಉತ್ಪಾದಿಸಿ ಬಳಸುವುವು. ಕರಿ ಇರುವೆ ರಾಣಿ, ಗರ್ಭವತಿ ಇದ್ದಾಗ, ಕೆಲಸಗಾರ್ತಿಯರು, ಸಣ್ಣ ಇರುವೆ ವಸಾಹತಿನ ಮೇಲೆ ಹಲ್ಲೆ ನಡೆಸುವವು. ಆಮ್ಲ ಅಸ್ತ್ರ ಬಳಸಿ, ಎರಡೂ ಬಣಗಳಲ್ಲಿ ಕಾಳಗ ನಡೆಯುವದು. ನಂತರ ಕರಿ ಇರುವೆಗಳ ಗುಲಾಮರನ್ನು ಸೆರೆ ಹಿಡಿದು ತಂದು ತಮ್ಮ ಗೂಡಿನ ಕೆಲಸ ಮಾಡಿಸುವವು. ಮನೆಗಳ ಮೇಲೆ ದಾಳಿ ಮಾಡುವ ಕೆಂಜಿಗ ಇರುವೆಗಳ ಆಕ್ರಮಣ ಸಹಿಸಿಕೊಳ್ಳುವುದು ಕಷ್ಟ. ಎಲೆಗಳ ಗೂಡುಗಳಲ್ಲಿ ವಾಸ ಮಾಡುವ ಕೆಂಪು ಇರುವೆಗಳ ಕಡಿತ ಅತೀ ತೀಕ್ಷ್ಣವಿರುವುದರಿಂದ ಮಾವು, ತೆಂಗು, ಅಡಿಕೆ ಮರಗಳನ್ನು ಹತ್ತುವವರಿಗೆ ಅವು ಶಾಪವಿದ್ದಂತೆ. ಹಿಂದಿನ ಕಾಲದಲ್ಲಿ ಕಳ್ಳ–ಕಾಕರನ್ನು ವಂಚಕರನ್ನು ಶಿಕ್ಷಿಸಲು, ಮರಕ್ಕೆ ಕಟ್ಟಿ ಹಾಕಿ, ಬೆಲ್ಲದ ನೀರನ್ನು ಮೈಗೆ ಸಿಂಪಡಿಸಿ, ಈ ಇರುವೆಗಳನ್ನು ಹರಿಯ ಬಿಡುತ್ತಿದ್ದರು. ಸೈನಿಕ ಇರುವೆಯ ಕಡಿತಕ್ಕೆ ಹೆದರದವರು ಇಲ್ಲ. ಕಾಳಸರ್ಪ, ನಾಗರ, ಚೇಳುಗಳಂತಹ ವಿಷ ಪ್ರಾಣಿಗಳ ಮೇಲೆ ಹಲ್ಲೆ ನಡೆಯಿಸಿ, ಅವುಗಳ ಮಾಂಸ ಖಂಡಗಳ ಮೇಲೆ ಭೋಜನ ಕೂಟ ನಡೆಸಿ, ಕೇವಲ ಅಸ್ಥಿ ಪಂಜರಗಳನ್ನು ಮಾತ್ರ ಬಿಟ್ಟು ಮುಂದೆ ಹೋಗುವವು. ಯಾರನ್ನೂ ಕಚ್ಚದ ಹುಚ್ಚು ಇರುವೆಗಳೂ ರಾಸಾಯನಿಕ ಗ್ರಂಥಿಗಳನ್ನು ಪಡೆದಿರುತ್ತವೆ. ಗಂಡಾಂತರ ಎದುರಿಸುವಾಗ ತಮ್ಮ ಸುತ್ತಲೂ ಆಮ್ಲ ಸಿಂಪಡಿಸಿಕೊಂಡು, ಸಂರಕ್ಷಣೆ ಮಾಡಿಕೊಳ್ಳುತ್ತವೆ.

ಹತ್ತಾರು ಜೇನುಗಳು ಆಕ್ರಮಣ ನಡೆಸಿದಾಗ ಪಲಾಯನ ಮಾಡುವದೂ ಕಷ್ಟ. ಮುಖ, ಕೈ ಕಾಲುಗಳು, ಊದಿಕೊಳ್ಳುವುದು ಸಾಮಾನ್ಯ. ಮೈಯಲ್ಲಿ. ನೆಟ್ಟ ಅಂಬುಗಳನ್ನು ಕಿತ್ತು ಒಗೆದರೆ ಎಷ್ಟೋ ನೆಮ್ಮದಿ ಅನಿಸುವುದು. ಅಂಬು ಶಕ್ತಿಯುತವಾಗಿದ್ದು ಅದು ತನ್ನ ಆಹಾರದ ಬೇಟೆಯಾಡಲು ಬಳಸಿಕೊಳ್ಳುತ್ತದೆ. ಮಾಂಸಾಹಾರ ಬಹಳ ದಿನಗಳವರೆಗೆ ಕೆಡದಂತೆ ಇಡಲು ಈ ರಾಸಾಯನ ಸಹಾಯ ಮಾಡುತ್ತದೆ. ಕಂಬಳಿ ಹುಳಗಳ ಮೈ, ತುರಿಕೆ ಏಳಿಸುವ ರಾಸಾಯನದಿಂದ ಹೊಂದಿದ ಅಂಬುಗಳಿಂದ ತುಂಬಿರುತ್ತದೆ. ಕೇವಲ ಸ್ಪರ್ಶ ಮಾತ್ರದಿಂದ ಇದು ಎದುರಾಳಿಯ ಮೈಯಲ್ಲಿ ಹೊಕ್ಕಿಬಿಡುತ್ತದೆ.

ಬೊಕ್ಕೆ ಎಬ್ಬಿಸುವ ದುಂಬಿಯಲ್ಲಿ. ರಾಸಾಯನಿಕ ಅಸ್ತ್ರ, ಶರೀರದ ಹಿಂಭಾಗದಲ್ಲಿ ಇವೆ. ಈ ದ್ರವ್ಯ ವೈರಿಯತ್ತ ಪುಟಿಸಿದಾಗ, ಎದುರಾಳಿಯ ಮೈಮೇಲೆ ಬಾಸುಂಡೆಗಳು ಕಾಣಿಸಿಕೊಳ್ಳುವವು. ಇದನ್ನು ಭಕ್ಷಿಸಲು ಬಾಯಿಗೆ ಸೇರಿಸಿದ ಹಾವು, ಕಪ್ಪೆಗೂ ಈ ದುಂಬಿ, ಮುಂದೆ ಎಂದೂ ತನ್ನ ಗೋಜಿಗೆ ಬಾರದಂತೆ, ಬುದ್ಧಿ ಕಲಿಸುವದು. ಸೊಪ್ಪಟಿಕ ದುಂಬಿ, ಮುಟ್ಟು ಯುವ ಕಾರಖಾನೆ ಇದ್ದಂತೆ. ಆದರ ಶರೀರದ ಹಿಂಭಾಗದಲ್ಲಿ ಎರಡು ಭಾಗಗಳಿಂದ ಕೊಠಡಿಯಲ್ಲಿ ರಾಸಾಯನಗಳ ಉತ್ಪತ್ತಿಯಾಗುತ್ತದೆ. ಮೊದಲನೆಯದರಲ್ಲಿ ಎರಡು ಪ್ರಕಾರದ ಹೈಡ್ರೋಕ್ವಿನೋನ ಸಿದ್ಧವಾಗಿ ಎರಡನೆಯದಕ್ಕೆ ಕಳಿಸಲಾಗುತ್ತದೆ. ವೈರಿ ಇದ್ದಲ್ಲಿ ಗುರಿ ಇಟ್ಟು ಈ ರಾಸಾಯನಿಕ ತುಪಾಕಿ ಹಾರಿಸಿದಾಗ ಎಲ್ಲ ಕಡೆಯಲ್ಲಿ ಹೊಗೆ ತುಂಬಿ ಎದುರಾಳಿ ಪಲಾಯನ ಮಾಡಲೇಬೇಕಾಗುತ್ತದೆ.

ವರ್ಣ ರಂಜಿತವಾದ ಸಸ್ಯ ತಗಣಿಗಳನ್ನು ದೂರದಿಂದಲೇ ನೋಡಿ ಆನಂದಿಸಬೇಕು. ಹತ್ತಿರ ಹೋದಾಗ ದುರ್ನಾತ ಕೊಡುವ ರಾಸಾಯನವನ್ನು ಅದು ಹೊರ ಹಾಕುವುದು. ಇವುಗಳ ಭಕ್ಷಕ ಪ್ರಾಣಿಗಳು ಕೂಡಾ ಮೂಗು ಮುಚ್ಚಿ ಪಲಾಯನ ಮಾಡಬೇಕಾಗುತ್ತದೆ. ನಮ್ಮ ಸಹವಾಸಿ ತಗಣಿಗೂ ಈ ವರದಾನ ಇರುವದರಿಂದ ಅವನ್ನು ಹಿಸುಕಿ ಕೊಲ್ಲಲು ಮನಸ್ಸು ಬರುವುದಿಲ್ಲ. ರೇಶಿಮೆ ಹುಳವು ಬಿಳಿ ದ್ರವ್ಯ ಕಾರಂಜಿಯಂತೆ ಚಿಮ್ಮಿಸಿ ಸಂರಕ್ಷಿಸಿಕೊಳ್ಳುವುದು. ವಸಾಹತು ರಕ್ಷಿಸುವ ಜವಾಬ್ದಾರಿ ಹೊತ್ತ ಸೈನಿಕ ಗೆದ್ದಲುಗಳ ಶರೀರಗಳಲ್ಲಿಯೂ ಇಂಥವೇ ಗ್ರಂಥಿಗಳು ಇರುತ್ತವೆ. ಅವುಗಳ ಜಾತ ಶತ್ರುಗಳಾದ ಇರುವೆಗಳು ಈ ನಾತ ತಾಳಲಾರದೆ ಪಲಾಯನ ಮಾಡುವವು.

ಕಡಲಲ್ಲಿ ಜೀವಿಸುವ ಮೃದ್ವಂಗಿ, ಸೇಫಿಯಾ, ತಿಳಿನಾಶಿಮುದಿ ವರ್ಣದ ಮಸಿ ಸಿದ್ಧ ಮಾಡುತ್ತದೆ. ತನ್ನ ಆಹಾರ ಎಂದು ಬಂದಾಗ ಮಸಿಯನ್ನು ನೀರಿನಲ್ಲಿ ಹರಡಿ ಬೇಟೆಯಾಡುವುದು. ವೈರಿಯನ್ನು ಎದುರಿಸುವಾಗ, ಮಸಿಯನ್ನು ಅದರತ್ತ ತೂರಿ, ತಾನು ಪಲಾಯನ ಮಾಡುವುದು.

ಜವಳು ಪ್ರದೇಶದಲ್ಲಿ ವಾಸಿಸುವ ಜಿಗಳೆ. ಪ್ರಾಣಿಲೋಕದ ಮಹಾನ್ ರಕ್ತ ಹೀರಕ. ತನ್ನ ಎಂಜಲಲ್ಲಿ ಇರುವ ರಾಸಾಯನಿಕದಿಂದ ಬಿಸಿ ರಕ್ತದ ಪ್ರಾಣಿಗಳಿಗೆ ಅರಿವಾಗದಂತೆ ಗಾಯ ಕೊಯ್ದು ಒಂದು ವರ್ಷಕ್ಕೆ ಆಹಾರವಾಗುವಷ್ಟು ರಕ್ತ ಹೀರಿಕೊಂಡು ಬಿಡುವುದು. ಕಡಲವಾಸಿ, ಲೋಳೆ-ಮೀನು ಮತ್ತು ಅದರ ಸಂಬಂಧಿ ಫಾಸೆಲಿಯಾ, ಹರಿತವಾದ ಸೂಜಿಯಂತಹ ಆಯುಧದ ಮೂಲಕ ತುರಿಕೆ ಏಳಿಸುವ ರಾಸಾಯನವನ್ನು ಎದುರಾಳಿಯ ಮೈಯಲ್ಲಿ ಸೇರಿಸುವವು. ಇದರಿಂದಾಗಿ ತಮಗಿಂತ ಹತ್ತು ಪಟ್ಟು ಬಲಿಷ್ಠವಾದ ಮೀನುಗಳನ್ನು ಇವು ಬೇಟೆಯಾಡಬಲ್ಲವು. ವಿಕಾಸ ಹಂತದಲ್ಲಿ ತೀರ ಕೆಳ ಮಟ್ಟದಲ್ಲಿ ಪೆರಮೇಶಿಯಮ್ ಕೂಡ ಸೂಜಿಯಂತಹ ಟ್ರಾಯಕೋಸಿಸ್ಟ ಮೂಲಕ ವಿಷ ದ್ರವ್ಯವನ್ನು ನೀರಿನಲ್ಲಿ ಹರವಿ ಸಂರಕ್ಷಿಸಿಕೊಳ್ಳುತ್ತದೆ. ಆದರೆ ಯಾವ ಪ್ರಾಣಿಯೂ ಸ್ವನಾಶಕ್ಕೆ ಈ ರಾಸಾಯನಿಕ ಅಸ್ತ್ರ ಬಳಸುವುದಿಲ್ಲ. ಮಾನವನು ಮಾತ್ರ ಇಂತಹ ಕ್ರೂರ ಕೃತ್ಯ ಮಾಡಬಲ್ಲ.

13. ಕೊಕ್ಕರೆ ರಾಯನ ಸಂಸಾರ

ಜಾಗತಿಕ ಸಮ್ಮೇಳನ ನಡೆಸಿ ವಿಶ್ವಕುಟುಂಬಿಯಾಗಲು ಹೊರಟ ಕನ್ನಡಿಗನಿಗೆ ತನ್ನ ಸಹಜೀವಿಗಳನ್ನು ಗುರುತಿಸಿ ಸರಿಯಾಗಿ ಹೆಸರಿಸಲು ಕೂಡ ಬಿಡುವು ಇಲ್ಲ! ಚಿಕ್ಕವುಗಳೆಲ್ಲ ಗುಬ್ಬಚ್ಚಿ, ಬೆಳ್ಳಗಿದ್ದವು ಬೆಳ್ಳಕ್ಕಿ, ಉದ್ದವಿರುವುದೆಲ್ಲಾ ಕೊಕ್ಕರೆಗಳು! ಈ ವರ್ಷ ಧಾರವಾಡದ ಹತ್ತಿರದ ನೀರಸಾಗರ ಪರಿಸರದಲ್ಲಿ ಸಾವಿರಾರು ಹಕ್ಕಿಗಳು ವಲಸೆ ಬಂದು ಬೀಡುಬಿಟ್ಟವು. ಪ್ರಾಣಿ ವಿಜ್ಞಾನಿಯೊಬ್ಬರು ಅದು ಸೈಬೀರಿಯಾದ ಹಕ್ಕಿ ಎಂದು ಗುರುತಿಸಿದರೆ ಅರಣ್ಯಾಧಿಕಾರಿಯೊಬ್ಬರು ಅದರ ಎತ್ತರ ಕಡಿಮೆ ಇದ್ದುದರಿಂದ ಉತ್ತರಭಾರತದ್ದೇ ಇರಬೇಕೆಂದರು. ಇವೆರಡೂ ಇರದೆ ಅದು ಬೇರೆಯೇ ಹಕ್ಕಿಗಳ ಬಳಗವೆಂದು ಪಕ್ಷಿತಜ್ಞರು ಅಭಿಪ್ರಾಯ ಪಟ್ಟರೆ ಆಶ್ಚರ್ಯವಿಲ್ಲ. ಹೀಗಾಗಿ ನಮ್ಮ ರಾಜ್ಯಕ್ಕೆ ಪ್ರತಿ ವರ್ಷವೂ ವಲಸೆ ಬರುವ, ಅತ್ಯಪೂರ್ವವಾದ ಸೌಂದರ್ಯ, ಲಾವಣ್ಯಗಳನ್ನು ಹೊಂದಿರುವ ಹಕ್ಕಿಗೆ ನಾವು "ಕೊಕ್ಕರೆ" ಎಂದಷ್ಟೇ ಕರೆಯುತ್ತೇವೆ– ಆಂಗ್ಲರು ಅದನ್ನು "ಪೇಂಟೆಡ್ ಸ್ಟಾರ್ಕ್" ಎಂತಲೂ ವಿಜ್ಞಾನಿಗಳು "ಐಬಿಸ್ ಲ್ಯೂಕೊಸೆಫೆಲಿಸ್" ಎಂದೂ ಗುರುತಿಸುತ್ತಾರೆ. ಬೇರಾವ ಹೆಸರು ಹೊಳೆಯದಿದ್ದರೂ "ಕುಸುರಿನ" ಇಲ್ಲವೆ "ಕಲಾತ್ಮಕ ಕೊಕ್ಕರೆ" ಎಂದಾದರೂ ಹೆಸರಿಬಹುದಾಗಿತ್ತು. ಹೋದ ವರ್ಷ (1985ರಲ್ಲಿ) ಬೆಳ್ಳೂರಿಗೆ ಒಂದು ಸಹಸ್ರಕ್ಕೂ ಹೆಚ್ಚು ಚಲುವ ಕೊಕ್ಕರೆಗಳು ವಲಸೆ ಬಂದಿದ್ದವು. ಆದರೆ ಈ ವರ್ಷ ಅವು ಬಾರದಿರಲು ಶಿಂಷಾ ನದಿಯಲ್ಲಿ ನೀರಿನ ಕೊರತೆಯೇ ಮುಖ್ಯ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಈ ನದಿಯ ನೀರನ್ನು ಬೆಂಗಳೂರಿಗೆ ಸರಬರಾಜು ಮಾಡಲು ಸರಕಾರ ನಿರ್ಧರಿಸಿದ್ದರಿಂದ ಈ ಕೊಕ್ಕರೆಗಳು ಇನ್ನೆಂದೂ ಬೆಳ್ಳೂರಿಗೂ ವಲಸೆ ಬಾರದೇ ಇರುವ ಸಾಧ್ಯತೆ ಇದೆ! ಎಂದು ಯಾರೂ ಹೌಹಾರಿದಂತೆ ಅನಿಸುವುದಿಲ್ಲ.

ಈ ಹಕ್ಕಿಯಲ್ಲಿ ಜೀವಕಳೆ ತುಂಬಿಸುವುದಕ್ಕಾಗಿ ಸೃಷ್ಟಿಕರ್ತನು ತನ್ನೆಲ್ಲ ಕಲಾಕಾರರ ಸೇವೆಯನ್ನೂ ಬಳಸಿರಬೇಕು. ಅರಿಸಿನ ವರ್ಣದ ಉದ್ದ ಚುಂಚನ್ನು ಶ್ರೀಗಂಧವನ್ನು ಕೊನರಿಸಬಲ್ಲ ಗುಡಿಗಾರನಿಂದ ರೂಪಿಸಿರಬೇಕು. "ಮೂರಡಿ ಎತ್ತರದ ದೇಹಕ್ಕೆ ಚಿಕ್ಕವು ಎನಿಸುವ ಕಾಡಿಗೆಗಣ್ಣುಗಳ ನಿರ್ಮಾಣಕ್ಕೆ ಬಿದರಿ ಕಲಾಕರರ ನೆರವು ಪಡೆದಿರಬೇಕು. ಮೈಗೆ ಅಂದವಾಗಿ ಮೂಡಿಸಿರುವ ಬಿಳಿ ಬಣ್ಣಕ್ಕಾಗಿ ಉಪ್ಪಾರರಿಂದ ಚಿಪ್ಪಿನ ಸುಣ್ಣ ಕುಟ್ಟಿಸಿರಬೇಕು. ಕಲಮ್‌ಕಾರಿ ಚಿತ್ರಕಾರರಿಂದ ಕಡಲ ತೆರೆಗಳನ್ನು ಹೋಲುವಂತಹ ನಕ್ಷೆಗಳನ್ನು ಕಡುಹಸಿರು ಬಣ್ಣದಲ್ಲಿ ರಚಿಸಿರಬೇಕು. ರಾಜಸ್ಥಾನಿ ಹೆಂಗಳೆಯರಿಂದ ಗುಲಾಲು ಸಿಂಪಡಿಸಿ, ಕಂಠ, ಕಾಲು ಪುಚ್ಛಗಳಿಗೆ ಕೆಂಬಣ್ಣ ಸವರಿಸಿರಬೇಕು. ನಾಚುತ್ತ

ಬಳಕುತ್ತ ಶೀವಿಯಿಂದ ನಿಂತ ಈ ಕೊಕ್ಕರೆಯನ್ನು ಕೈತುಂಬ ದಕ್ಷಿಣೆ-ಉಡುಗೊರೆ ಕೊಟ್ಟು ಗೌರವಿಸಬೇಕು. ಇಂಥ ಅಪೂರ್ವ ಹಕ್ಕಿ ನಮ್ಮ ಕರ್ನಾಟಕಕ್ಕೆ ವಲಸೆ ಬರುತ್ತಿದೆ ಎಂಬ ವಿಚಾರ ಬಹುಸಂಖ್ಯಾತರಿಗೆ ಗೊತ್ತಿಲ್ಲದಿದ್ದಾಗ, ಅವುಗಳ ದರ್ಶನಲಾಭ ಪಡೆಯುವ ಮಾತಂತೂ ದೂರವೇ ಉಳಿಯಿತು.

ದೀಪಾವಳಿಯ ನಂತರ ಉತ್ತರಭಾರತದಲ್ಲಿ ಚಳಿಗಾಲದ ತೀವ್ರತೆ ಹೆಚ್ಚಾದಾಗ, ಈ ಕೊಕ್ಕರೆಗಳು ಭುರ್ ಭುರ್ ಎಂದು ರೆಕ್ಕೆ ಬಡಿಯುತ್ತ ನಿಲ್ದಾಣದಲ್ಲಿ ಬಂದಿಳಿಯುವ ವಿಮಾನಗಳಂತೆ, ಇಳಿಯಲಾರಂಭಿಸುವವು. ಹೆಚ್ಚಿನವು ಬೆಳ್ಳೂರಿಗೆ (ಮದ್ದೂರ ತಾಲೂಕು) ಹಾರಿದರೆ, ಕೆಲವು ಮೈಸೂರು ನಗರದ ಹೊರವಲಯದಲ್ಲಿದ್ದ ಕಾರಂಜಿ ಕೊಳದ ಸುತ್ತಲೂ ಆಶ್ರಯ ಪಡೆಯುವವು. ಆದರೆ ಜಲಪಕ್ಷಿಗಳಿಗೇ ಮೀಸಲಾದ ರಂಗನ ತಿಟ್ಟುಗಾಗಲಿ, ಮಂಡಗದ್ದೆ (ತೀರ್ಥಹಳ್ಳಿ ತಾಲೂಕು)ಗಾಗಲಿ ಅವು ಯಾಕೆ ಹೋಗುವುದಿಲ್ಲವೆಂದು ವಿವರಿಸುವದು ಸುಲಭವಲ್ಲ. ಮೈಸೂರಿನ ಜನಜಂಗುಳಿಯಿಂದ ಸುರಕ್ಷಿತವಾಗಿರಲು ಮೂವತ್ತರಿಂದ ನಲವತ್ತು ಅಡಿ ಎತ್ತರದ ಅಗಸೆ, ಅಶ್ವತ್ಥ, ಅಳಲೆ, ಕರಿಬುರಿಗಳಂತಹ ಮರಗಳಲ್ಲಿ ವಾಸ ಮಾಡುತ್ತವೆ. ಅದೇ ಬೆಳ್ಳೂರಿನ ಜನ, ಅವಕ್ಕೆ ಸಕಲ ಸಂರಕ್ಷಣೆ ನೀಡುವುದರಿಂದ ಹಳ್ಳಿಯ ಹೃದಯ ಸ್ಥಾನದಲ್ಲಿಯೇ ಇರುವ 15-20 ಅಡಿ ಎತ್ತರವಿರುವ ಕರಿದಾಲಿ, ಕಸ್ತೂರಿಜಾಲಿ, ಬಿಲ್ವಪತ್ರೆ ಮಾವುಗಳಂತಹ ವೃಕ್ಷಗಳಲ್ಲಿ ಆಶ್ರಯ ಪಡೆಯುತ್ತವೆ. ಭರತಪುರ (ರಾಜಸ್ಥಾನ)ದ ರಕ್ಷಿತ ಪಕ್ಷಿಧಾಮದ ಸರೋವರದ ಸುತ್ತಮುತ್ತ ಈ ಕೊಕ್ಕರೆಗಳನ್ನು ಕಾಣಬಹುದು. ಅದೇ ಮಾಂಸಾಹಾರಿ ಪಾಕಿಸ್ತಾನಿಗಳಿಂದ ಬದುಕಿರಲು ಕರಾಚಿಯಲ್ಲಿ ಅವು ನೀರಿನ ಮಧ್ಯದಲ್ಲಿಯೇ ಸಂಸಾರ ಹೂಡುತ್ತವೆ.

ವಲಸೆ

ಹತ್ತರಿಂದ ಇಪ್ಪತ್ತು ಹಕ್ಕಿಗಳಿರುವ ಗುಂಪುಗಳಲ್ಲಿ ಅವು ಎರಡು ಮೂರು ವಾರಗಳವರೆಗೆ ವಲಸೆ ಬರುತ್ತಲೇ ಇರುತ್ತವೆ. ಮುಂದಾಳ್ತನ ವಹಿಸಿದ ಕೊಕ್ಕರೆ ಎಲ್ಲಕ್ಕೂ ಮುಂದೆ ಇದ್ದು ಇನ್ನುಳಿದವು ತ್ರಿಕೋನಾಕಾರದಲ್ಲಿ ಹಿಂಬಾಲಿಸುತ್ತವೆ. ಜ್ಞಾಪಕಶಕ್ತಿಯಿಂದಲೋ, ಅನುವಂಶೀಯವಾಗಿ ಬಂದ ವರ್ತನೆಯಿಂದಲೋ ಅವು ಪ್ರತಿವರ್ಷವೂ ಅವೇ ಮರಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳುವುವು. ಒಂದೇ ಮರದ ಮೇಲೆ ನೂರಾರು ಹಕ್ಕಿಗಳು ಬಂದಿಳಿದರೂ, ಪ್ರತಿಯೊಂದಕ್ಕೂ ತನ್ನದೇ ಸ್ವತಂತ್ರ ಟೊಂಗೆಯಿರುತ್ತದೆ. ಅಲ್ಲಿ ಇನ್ನೊಂದು ಹಕ್ಕಿ ಬಂದು ಆಕ್ರಮಿಸಲು ಯತ್ನಿಸಿದಾಗ ಬಲವಾದ ಚುಂಚಿನಿಂದ ಕಾದಾಡಿ, ಅದನ್ನು ಓಡಿಸಿದ ಹೊರತು ವಿಶ್ರಮಿಸುವುದಿಲ್ಲ. ಜೀವನದುದ್ದಕ್ಕೂ ಅವು ಮೌನವ್ರತ ಆಚರಿಸುವುದರಿಂದ ಚುಂಚುಗಳ ಪರಸ್ಪರ ಬಡಿತದಿಂದ ಉಂಟಾಗುವ 'ಕಟಕ್, ಕಟಕ್' ಸದ್ದೇ ಅವುಗಳ ಸಂಪರ್ಕ ಭಾಷೆ. ಒಂದೆಡೆ ಕುಳಿತು, ಗರಿಗಳನ್ನು ಸ್ವಚ್ಛಗೊಳಿಸಿ, ಹೇನು ಝಾಡಿಸಿ, ಆಕಳಿಸಿ, ಬೇಸರವಾದಾಗ, ಈ ಭಾಷೆಯಿಂದಲೇ ಸಂಗಡಿಗರನ್ನು ಉಡ್ಡಾಣಕ್ಕೆ ಆಮಂತ್ರಿಸುವವು. ಗಗನ ಮಂಡಲದಲ್ಲಿ ರೆಕ್ಕೆಗಳನ್ನು ಪಸರಿಸಿ, ಹದ್ದುಗಳಂತೆ ಹವೆಯಲ್ಲಿ ತೇಲುವದೆಂದರೆ ಈ ಕೊಕ್ಕರೆಗಳಿಗೆ ಪಂಚಪ್ರಾಣ. ಹತ್ತಾರು ಹಕ್ಕಿಗಳು ಏಕಕಾಲಕ್ಕೆ ಹಾರುವುದನ್ನು ಕಂಡಾಗ, ದಾಳಿ ಮಾಡಲು ಹೊರಟ ಜೆಟ್ ವಿಮಾನಗಳನ್ನು ನೆನಪಿಗೆ ತರುತ್ತವೆ. ತಾಸುಗಟ್ಟಲೆ ಮನದಣಿ







ಹಾರಾಡಿ, ಎತ್ತರದಿಂದ ತಮ್ಮ ಮರದಡಿ ಇಳಿಯುವಾಗ ಅವುಗಳ ಗರಿ, ರೆಕ್ಕೆ ಭಂಗಿಗಳು ಅತ್ಯಂತ ಸುಂದರವಾಗಿ ಗೋಚರಿಸುತ್ತವೆ. ಈ ಚಟುವಟಿಕೆಗಳು ಮಿಂಚಿನ ವೇಗದಲ್ಲಿ ನಡೆಯುವುದರಿಂದ ಅವುಗಳನ್ನು ಗ್ರಹಿಸುವ ಸಾಮರ್ಥ್ಯ ಕಣ್ಣಿಗಿಂತ ಕ್ಯಾಮರಾಕಣ್ಣಿಗೇ ಹೆಚ್ಚಾಗಿರುತ್ತದೆ.

ಸಂಪೂರ್ಣ ಮಾಂಸಾಹಾರಿಗಳಾದ ಈ ಕೊಕ್ಕರೆಗಳು ಮೀನುಗಾರಿಕೆಯಲ್ಲಿ ಎತ್ತಿದ ಕೈ. ಮೈಸೂರಿನ ಕಾರಂಜಿ ಕೊಳದಲ್ಲಿ, ಬೆಳ್ಳೂರಿನ ಶಿಂಷಾ ನದಿಯಲ್ಲಿ, ಭರತಪುರದ ಸರೋವರದಲ್ಲಿ, ಕರಾಚಿಯಲ್ಲಿ ಸಿಂಧೂ ನದಿಯ ಆಳವಿಲ್ಲದ ಸ್ಥಳಗಳಲ್ಲಿ ಬಕಧ್ಯಾನ ಮಾಡುತ್ತ ನಿಂತಿರುತ್ತವೆ. ಕಿರುಬೆರಳಿನಷ್ಟು ಉದ್ದಗಲದ ಮೀನುಗಳು ತಮ್ಮ ಕೊಕ್ಕುಗಳನ್ನು ಮುಟ್ಟುವಷ್ಟು ಅಂತರದಲ್ಲಿದ್ದಾಗ ಎವೆಯಿಕ್ಕುವಷ್ಟರಲ್ಲಿ ಅವುಗಳನ್ನು ಬಂಧಿಸಿ ಕೊರಳಲ್ಲಿರುವ ಸಂಚಯ ಚೀಲಕ್ಕೆ ಸೇರಿಸಿಬಿಡುವವು. ಪ್ರತಿಸಲ ನೀರಿಗಿಳಿದಾಗ ಹತ್ತೆಂಟು ಮೀನುಗಳನ್ನೂ ಜೊತೆಗೆ ಒಂದು ಲೀಟರಿನಷ್ಟು ನೀರನ್ನೂ ಹೊತ್ತು ದೂರದ ಗೂಡಿಗೆ ಹಿಂದಿರುಗುವಾಗ ದಾರಿಯುದ್ದಕ್ಕೂ ನೀರನ್ನು ಹೊರಗೆಡಹುವವು. ಮಳೆಯಾಗದ ವರ್ಷಗಳಲ್ಲಿ ನದಿ-ಕೆರೆಗಳ ನೀರು ಬತ್ತಿ ಮೀನಿನ ಅಭಾವವಾದಾಗ, ಕೆಸರಿನಲ್ಲಿರುವ ಇತರ ಕ್ರಿಮಿ-ಕೀಟಗಳನ್ನೂ, ಚಿಪ್ಪು-ಮೀನನ್ನೂ ಆಹಾರವಾಗಿ ಸೇವಿಸುವವು. ತಮ್ಮ ಆಹಾರದಲ್ಲಿನ ಜೀರ್ಣವಾಗದ ಭಾಗವನ್ನು ಕಾಲ-ಕಾಲಕ್ಕೆ ಬಿಳಿದ್ರವ್ಯದ ರೂಪದಲ್ಲಿ ಹೊರಗೆಡಹುವುದು. ಇದು ಹೊಲಗಳಿಗೆ ಉತ್ತಮ ಗೊಬ್ಬರವಾದ್ದರಿಂದ ಅವು ಆಶ್ರಯಿಸಿದ ಪರಿಸರದ ಗಿಡ-ಮರಗಳು ಹುಲುಸಾಗಿ ಬೆಳೆಯುತ್ತವೆ.

ಸಂಕ್ರಾತಿಯ ಹೊತ್ತಿಗೆ ಅವುಗಳ ಸಂತಾನೋತ್ಪತ್ತಿಯ ಅಂಗಾಂಗಗಳು ಕಾರ್ಯಾಚರಣೆಗೆ ಬರುತ್ತವೆ. ಅಂತೆಯೇ ಗಂಡುಹಕ್ಕಿ, ಹೆಣ್ಣಿನ ಪ್ರತೀಕ್ಷೆಯಲ್ಲಿ ಸ್ವಸ್ಥಾನದಲ್ಲಿ ಸ್ಥಾಯಿಯಾಗಿರುತ್ತದೆ. ಹೆಣ್ಣುಹಕ್ಕಿಯೊಂದು ಆ ಮಾರ್ಗವಾಗಿ ಹಾರಿ ಬರುವುದನ್ನು ಕಂಡಾಗ, ಗರಿಗೆದರಿ, ಗೋಣನ್ನು ಜಿಲ್ಲಿನಾಕಾರದಲ್ಲಿ ಮಣಿಸಿ, ಪ್ರಿಯತಮೆಯನ್ನು ಹಾರ್ದಿಕವಾಗಿ ಸ್ವಾಗತಿಸುವುದು. ಹತ್ತಾರು ಪ್ರೇಮಿಗಳು ಇದೇ ರೀತಿ ಕರೆಯುತ್ತಾಗ ಯಾವನನ್ನು ಆರಿಸಬೇಕೆಂದು ತಿಳಿಯದ ಚಂಚಲಾಕ್ಷಿ ಅನುಮಾನಿಸುತ್ತ ದೂರದ ಟೊಂಗೆಯಲ್ಲಿ ಆಸೀನಳಾಗುತ್ತಾಳೆ. ಗಂಡುಗಳೆಲ್ಲ ಬಡಿದಾಡಿ, ಜುಚ್ಚಾಡಿ ಗೆದ್ದ ವೀರನನ್ನು ವರಿಸುತ್ತಾಳೆ. ನವವಿವಾಹಿತ ಜೋಡಿ, ಗರಿಗಳನ್ನು ಹರವಿ ಕೊಕ್ಕಿನಿಂದ ಚುಂಬಿಸಿ ಪ್ರಣಯ ನೃತ್ಯ ಮಾಡುತ್ತವೆ. ಅವು ಕಾಮಬಾಧೆಯಲ್ಲಿದ್ದಾಗ ಗಂಡಿನ ಶಿರೋಭಾಗವೂ ಹೆಣ್ಣಿನ ಕಾಲು ಭಾಗವೂ ಅಧಿಕ ಕೆಂಬಣ್ಣ ತಳೆಯುತ್ತವೆ. ಪತ್ನಿ ಕನಸಿನ ಲೋಕದಲ್ಲಿ ವಿಹರಿಸುತ್ತಿದ್ದಾಗ ಮತ್ತೇರಿದ ಗಂಡು ಕ್ಷಣಾರ್ಧದಲ್ಲಿ ತನ್ನವಳನ್ನಾಗಿ ಮಾಡಿಕೊಂಡು ಬಿಡುತ್ತದೆ. ಕಾಮಜ್ವರ ಇಳಿದಾಗ, ಜೋಡಿ ಸ್ತಬ್ಧವಾಗಿ ಕುಳಿತು ದಣಿವನ್ನು ನಿವಾರಿಸಿಕೊಳ್ಳುತ್ತವೆ.

ವಿವಾಹಕಾಲದಲ್ಲಿ ವಧು ಗರ್ಭವತಿಯಾಗಿರುವುದು ಪಕ್ಷಿಲೋಕದ ವೈಶಿಷ್ಟ್ಯ. ಅಂತೆಯೇ ನವದಂಪತಿಗಳು ಧರೆಗೆ ಇಳಿದು ಬರಲಿರುವ ಭಾವಿ ಪೀಳಿಗೆಗಾಗಿ ಗೂಡುಕಟ್ಟಲಾರಂಭಿಸುವವು. ಇದಕ್ಕೆ ಬೇಕಾಗುವ ಕಡ್ಡಿರೆಂಬೆಗಳನ್ನು ತಾವು ಆಶ್ರಯಿಸಿದ ಮರಗಳಿಂದ ದೊರಕಿಸದೇ ಬೇರೊಂದು ಮರದತ್ತ ಧಾವಿಸುವವು. ಉದ್ದ-ಅಗಲ





ಸರಿ ಇರುವ ಟೊಂಗೆಗೆ ಗಟ್ಟಿತನ ಇದೆಯೇ ಇಲ್ಲವೇ ಎಂದು ಚುಂಚಿನಿಂದ ಪರೀಕ್ಷಿಸಿ, ಬೇಡಾದ್ದನ್ನು ತ್ಯಜಿಸಿ, ಹದವಾದುದನ್ನು ಇದ್ದ ಶಕ್ತಿ-ಸಾಮರ್ಥ್ಯಗಳಿಂದ ಮುರಿದು, ಸಮತೋಲನವಾಗುವಂತೆ ಬಾಯಲ್ಲಿ ಕಚ್ಚಿಹಿಡಿದು, ಮಡದಿಯಿರುವಲ್ಲಿಗೆ ಗಂಡು ಧಾವಿಸುವುದು. ಹಲವಾರು ಸಲ ಈ ರೆಂಬೆಗಳು ಕೊಕ್ಕುಗಳಿಂದ ಉದುರುವುದೂ ಇದೆ. ಆದರೆ ಅಂಥ ಪ್ರಸಂಗಗಳಲ್ಲಿ ಅವನ್ನು ತಿರುಗಿ ಸಂಗ್ರಹಿಸುವ ಗೋಜಿಗೆ ಹೋಗದೆ ಬೇರೊಂದನ್ನು ಮುರಿಯಲು ಹೋಗುವುದು. ಪಕ್ಷಿ ಈ ರೆಂಬೆಗಳನ್ನೂ ಟಿಸಿಲುಗಳನ್ನೂ ಉದ್ದಗಲಕ್ಕೆ ಹಾಸಿ, ನಡುವೆ ತಗ್ಗು ಇರುವ ಗೂಡೊಂದನ್ನು ರಚಿಸುವುದು. ಈ ಶರಪಂಜರದಂತಹ ಗೂಡು ಮೃದುವಾದ ಮರಿಗಳಿಗೆ ಸರಿಯೋಗದೆಂದು, ಅದರ ಮೇಲೆ ಹಸಿರೆಲೆಗಳ ಹಾಸಿಗೆ ಹಾಸುವುದು. ಇಷ್ಟೆಲ್ಲ ಸಾಮಗ್ರಿಗಳನ್ನು ಪೂರೈಸಿದ ಗಂಡಿಗೆ ತನ್ನ ಶಕ್ತಿ-ಸಾಮರ್ಥ್ಯಗಳ ಬಗ್ಗೆ ಅಭಿಮಾನ ಮೂಡಿ ಪತ್ನಿಯ ಮೈಗಂಟಿ ಕುಳಿತು ತೂಕಡಿಸಲಾರಂಭಿಸುವುದು.

ಪತ್ನಿಗೆ ಪ್ರಸವ ವೇದನೆ ಕಾಣಿಸಿಕೊಂಡಾಗ ಪತಿ ಸನಿಹದಲ್ಲೇ ನುಸುಳಿ, ಚುಂಚಿನಿಂದ ಕತ್ತನ್ನು ನೇವರಿಸಿ, ಅನುಕಂಪ ಸೂಚಿಸುತ್ತದೆ. ಶುಭ ಮುಹೂರ್ತದಲ್ಲಿ ತಾಯಿಯ ಗರ್ಭದಿಂದ ಮೊಟ್ಟೆಗಳು ಒಂದೊಂದಾಗಿ ಭೂಮಿಗೆ ಇಳಿದು ಬರಲಾರಂಭಿಸಿದಾಗ, ಅಭಿಮಾನಿ ತಂದೆ, ಅವುಗಳು ನೆಲಕ್ಕೆ ಜಾರದಂತೆ ಜಾಗ್ರತೆವಹಿಸುತ್ತವೆ. ಎರಡು-ಮೂರು ದಿನಗಳಲ್ಲಿ ನಾಲ್ಕು-ಐದು ಮೊಟ್ಟೆಗಳನ್ನು ಇಡುವುದು ತೀರಾ ಸಾಮಾನ್ಯ. ಕುಟುಂಬ ಯೋಜನೆ ಅವುಗಳಲ್ಲಿ ಹುಟ್ಟಾ ರೂಪಗೊಂಡಿರುವದರಿಂದ ತಮಗೆ ಸಾಕುವ ಸಾಮರ್ಥ್ಯವಿದ್ದಷ್ಟೇ ಮೊಟ್ಟೆಗಳನ್ನು ಇಡುತ್ತವೆ. ಅದೇ ಒಂದೆರಡು ಮೊಟ್ಟೆಗಳು ಕಾಣೆಯಾದರೆ, ಹೆಣ್ಣು ತಿರುಗಿ ಮೊಟ್ಟೆಯಿಡಲಾರಂಭಿಸುತ್ತದೆ. ಇವುಗಳಿಂದ ಮರಿಮಾಡುವ ಜವಾಬ್ದಾರಿಯಲ್ಲಿ ತಂದೆ-ತಾಯಿ ಸರಿಯಾಗಿ ಪಾಲುಗೊಂಡು ಸರದಿಯಂತೆ ಕಾವು ಕೊಡುತ್ತವೆ. ಮೊಟ್ಟೆಯ ಎಲ್ಲ ಭಾಗಗಳಿಗೂ ಏಕಪ್ರಕಾರದ ಉಷ್ಣತೆ ಸಿಗಬೇಕೆಂದು ಆಗಾಗ ಮೊಟ್ಟೆಗಳನ್ನು ತಿರುವುತ್ತ ಇರುತ್ತವೆ. ಅರ್ಧಗಂಟೆ ಕಾವುಕೊಟ್ಟ ನಂತರ ಅವು ಮೀನ ಬೇಟೆಗೆ ಹೋಗಿ ಮನದಣಿ ಭೋಜನ ಮಾಡಿದ ನಂತರ, ಸ್ವೇಚ್ಛೆಯಿಂದ ಗಗನಮಂಡಲದಲ್ಲಿ ಕೆಲಹೊತ್ತು ಹಾರಾಡಿ, ಗೂಡಿಗೆ ಹಿಂದಿರುಗಿ ತಿರುಗಿ ಕಾವು ಕೊಡುವ ಕೆಲಸ ಮುಂದುವರಿಸುತ್ತವೆ. ತೀವ್ರವಾಗಿ ಬಿಸಿಲು ಬಿದ್ದಾಗ, ಗಂಡು-ಹೆಣ್ಣು ಜೊತೆಯಾಗಿಯೇ ರೆಕ್ಕೆಗಳನ್ನು ಹರಡಿ, ಮೊಟ್ಟೆಗಳನ್ನು ಸಂರಕ್ಷಿಸುತ್ತವೆ. ಮರ ಒಂದರಲ್ಲಿ ನೂರಾರು ಜೋಡಿಗಳು ಈ ರೀತಿ ರೆಕ್ಕೆ ಬಿಚ್ಚಿ ಶಿಸ್ತಿನಿಂದ ನಿಂತಾಗ ಸೈನಿಕರ ಕವಾಯಿತು ನೋಡಿದಂತೆ ಭಾಸವಾಗುತ್ತದೆ. ಸಣ್ಣದೊಂದು ಕರಿಮೋಡ ಸೂರ್ಯನನ್ನು ಅಡ್ಡಗಟ್ಟಿದಾಗ, ಅವು ರೆಕ್ಕೆಗಳನ್ನು ಮೈಗಂಟಿಸಿಕೊಂಡು ವಿರಮಿಸಿ ನಿಲ್ಲುವುವು.

ಸುಮಾರು ಮೂರು-ನಾಲ್ಕು ವಾರ ಕಾವು ಕೊಟ್ಟ ನಂತರ ಮರಿಗಳು ಒಂದೊಂದಾಗಿ ಹೊರಬರಲಾರಂಭಿಸುವವು. ಪಾಲಕಜೋಡಿ, ಮೊಟ್ಟೆ ಚೂರುಗಳನ್ನು ನೆಲಕ್ಕುರುಳಿಸಿ ಗೂಡಿನ ಸ್ವಚ್ಛತೆಯನ್ನು ಕಾಯ್ದುಕೊಳ್ಳುವವು. ಬೂದಿರಾಶಿಯಲ್ಲಿ ಹೊರಳಿ ಬಂದಂತಿರುವ ಮರಿಗಳನ್ನು ಕಂಡಾಗ, ಎಂಥ ಸುಂದರ ಪಾಲಕರಿಗೆ ಅದೆಷ್ಟು ಕುರೂಪಿ ಮಕ್ಕಳು ಎಂದು ಅನಿಸದೇ ಇರದು. ಆದರೂ ಪಾಲಕರು ಮಾತ್ರ ಗಂಡು-ಹೆಣ್ಣು ಎಂಬ ಭೇದ-ಭಾವ ಮಾಡದೇ ಅನಾಕರ್ಷಕವೆಂದು ಗೊಣಗದೇ ಮಕ್ಕಳ

ಸೇವೆಗೆ ಟೊಂಕಕಟ್ಟಿ ನಿಲ್ಲುವವು. ನೆರೆಹೊರೆಯವರಾದರೋ ಮಹಾ ಜಗಳಗಂಟರು. ಒಬ್ಬರನ್ನು ಕಂಡರೆ ಇನ್ನೊಬ್ಬರಿಗಾಗದು. ಸದಾಕಾಲ ಕಚ್ಚಿಕೊಳ್ಳುತ್ತ ಅರಚಿಕೊಳ್ಳುತ್ತ ಕುಕ್ಕುತ್ತ ನೂಕಿಸಿಕೊಳ್ಳುತ್ತವೆ. ಹೀಗಾಗಿ ಒಂದು ಹಕ್ಕಿ ಸದಾಕಾಲ ಕಾವಲು ಇದ್ದೇ ಇರಬೇಕಾಗುತ್ತದೆ. ಇನ್ನೊಂದು ಅವುಗಳ ಹಸಿವು ನೀಗಿಸಲು ಆಹಾರ ಸಂಪಾದನೆಯಲ್ಲಿ ತೊಡಗಬೇಕಾಗುತ್ತದೆ. ಈ ಹೊಟ್ಟೆಬಾಕ ಮರಿಗಳು ಆಹಾರಕ್ಕಾಗಿ ಬಾಯಿಬಿಡುತ್ತಲೇ ಇರುವದರಿಂದ ತಾಯಿ-ತಂದೆ ಹೊಳೆಯಿಂದ ಹಿಂದಿರುಗಿ ಬರುವುದನ್ನೇ ಎದುರುನೋಡುತ್ತಿರುತ್ತವೆ. ಆಹಾರ ಗೂಡಿನತ್ತ ಬರುತ್ತಿದ್ದಂತೆ ತಾನು ಅತಿಯಾಗಿ ಹಸಿದಿದ್ದೇನೆ! ತನಗೇ ಮೊದಲ ಗುಟುಕು ಸಿಗಬೇಕು! ಎಂದು ಗೋಣು ಉದ್ದ ಮಾಡಿ ಪಾಲಕರತ್ತ ಮುಖಮಾಡಿ. ದುಂಬಾಲು ಬೀಳುವುವು. ಪ್ರತಿ ಮರಿಯೂ ತನ್ನತ್ತ ಲಕ್ಷ್ಯ ಸೆಳೆದುಕೊಳ್ಳಲು ಸ್ಪರ್ಧೆ ನಡೆಸುವದರಿಂದ ಕಂಠದಲ್ಲಿ ಶೇಖರಿಸಿದ ಆಹಾರ ಬಾಯಿಗೆ ತಂದುಕೊಳ್ಳಲು ಆಗದಾಗ, ಹಿರಿಹಕ್ಕಿ ರೆಕ್ಕೆಗಳಿಗೆ ಬುದ್ಧಿ ಹೇಳಿ ಒಂದು ಪ್ರದಕ್ಷಿಣೆ ಹಾಕಲು ಹೊರಡುವುದು.

ಗೂಡಿಗೆ ಬಂದ ಆಹಾರ, ಬಾಯಿಗೆ ಬೀಳದಿರಲು ಕಾರಣ ಯಾರು? ಎಂದು ಮತ್ತೆ ಕಿರಿಯರಲ್ಲಿ ಕಿರುಚಾಟ, ಕಾದಾಟಕ್ಕೆ ಅನುವು ಮಾಡಿಕೊಟ್ಟಂತೆ ಆಗುತ್ತದೆ. ಹಿರಿಹಕ್ಕಿ ಗೂಡಿಗೆ ಹಿಂದಿರುಗಿ ಚುಂಚಿನಲ್ಲಿ ತಂದ ಮೀನ ರಾಶಿಯನ್ನು ಗೂಡಿನ ಮಧ್ಯದಲ್ಲಿ ಹೊರಗೆಡಹುವದು. ಈ ಕ್ಷಣಕ್ಕಾಗಿ ಕಾದಿದ್ದ ಮರಿಗಳೆಲ್ಲ ಆಹಾರಕ್ಕೆ ಎರಗಿದರೂ, ಮುಂದಿದ್ದವುಗಳಿಗೆ ಸಿಂಹಪಾಲು ಸಿಗುತ್ತದೆ. ಇದರಿಂದ ರೊಚ್ಚಿಗೆದ್ದ ಉಳಿದ ಬಂಧುಗಳು, ಸಮಪಾಲು ಪಡೆಯುವದಕ್ಕಾಗಿ ಅವುಗಳ ಕೊಕ್ಕುಗಳಲ್ಲಿ ತಮ್ಮವನ್ನು ಸೇರಿಸಿ ದ್ವಂದ್ವವನ್ನು ಪ್ರಾರಂಭಿಸುವವು. ಇದರ ಮನೆಹಾಳಾಗ! ಎಂದು ಒಂದೆರಡು ಮೀನನ್ನು ಅವುಗಳಿಗೆ ಕೊಡಬೇಕಾಗುತ್ತದೆ. ಈ ಜಗಳಾಟ, ಕಾದಾಟ, ಹೋರಾಟಗಳಲ್ಲಿ ಒಂದೆರಡು ಮೀನುಗಳು ಗೂಡಿನಿಂದ ಜಾರಿ ನೆಲಕ್ಕುರುಳುವದು ತೀರ ಸಾಮಾನ್ಯ. ಈ ಕ್ಷಣಕ್ಕಾಗಿಯೇ ಹತ್ತಿರದ ಮರದ ಮೇಲೆ ಕಾಯುತ್ತಿರುವ ಹದ್ದುಗಳು ಕ್ಷಣಾರ್ಧದಲ್ಲಿ ಅವನ್ನು ತಮ್ಮ ಹೊಟ್ಟೆಗೆ ಸೇರಿಸಿಬಿಡುವುದು. ನೀರಿಗೆ ಧಾವಿಸದೇ, ಬಿಸಿಲಲ್ಲಿ ಪರಿತಪಿಸದೇ ಕುಳಿತಲ್ಲೇ ಸಿಗುವ ಮೀನಿನ ಸಮೀಚೀನ ಭೋಜನಕ್ಕಾಗಿ ಹದ್ದುಗಳು ಕೊಕ್ಕರೆಗಳಿಗೆ ಋಣಿಯಾಗಿರಬೇಕು!

ಭರದಿಂದ ಬೆಳೆಯುತ್ತಿರುವ ಮಕ್ಕಳ ಹಸಿವಿಗೆ ಕೊನೆಮೊದಲಿಲ್ಲ. ಪ್ರತಿದಿನವೂ 30-40 ಸಲ ಉಣಬಡಿಸಿದರೂ ಅವುಗಳಿಗೆ ತೃಪ್ತಿಯಿಲ್ಲ. ದಿನ ಒಂದರಲ್ಲಿ ಅವು ತಮ್ಮ ತೂಕದಷ್ಟೆ ಆಹಾರವನ್ನು ತಿಂದು ತೇಗುವವೆಂದರೆ ನಂಬುವುದು ಕಷ್ಟ. ಅವುಗಳ ಉದರ ನಿರ್ವಹಣೆಯಲ್ಲಿಯೇ ತಂದೆ-ತಾಯಿಗಳ ಎತ್ತರಕ್ಕೆ ಬೆಳೆದು ಬಿಡುವವು. ರೆಕ್ಕೆಗಳನ್ನು ಜೋರಾಗಿ ಬಡಿಯುವವು. ಹತ್ತಾರು ಮರಿಗಳು ಆ ಚಟುವಟಿಕೆಯಲ್ಲಿ ತೊಡಗಿದಾಗ, ಇಲ್ಲಿ ಯಾವುದೋ ಜೀವಂತ ಕಾರಖಾನೆ ಪ್ರಾರಂಭವಾಗಿದೆ ಎನಿಸದೇ ಇರದು. ಶರೀರ ಭಾರ ಹೊರುವ ಸಾಮರ್ಥ್ಯ ಪಡೆದಾಗ ಮೇಲಿನ ಟೊಂಗೆಯಿಂದ ಕೆಳಗಿನದಕ್ಕೆ ಹಾರಿ, ತತ್ತರ-ವತ್ತರ ನಡಿಗೆಯಿಂದ ಮರವೇರಿ, ಸ್ವಸ್ಥಾನಕ್ಕೆ ಹಿಂದಿರುಗುವವು. ತಿರುಗಿ ಇದೇ ಕವಾಯಿತು ಮುಂದುವರಿಯುವುದು. ಈ ಯಶಸ್ಸಿನಿಂದ ಎದೆಯುಬ್ಬಿ ಹತ್ತಿರದ ಮರಕ್ಕೆ ಹಾರಲು ಯತ್ನಿಸಿದಾಗ ನೆಲಕ್ಕುರುಳುವುದುಂಟು. ಇಂಥ ಅಪಾಯಕರ



ಸ್ಥಿತಿಯಲ್ಲಿದ್ದ ಮರಿಗಾಗಿ ಪಾಲಕರು ಮರುಗುವದನ್ನು ಬಿಟ್ಟರೆ, ಬೇರೇನೂ ಮಾಡುವಂತೆ ಇರುವುದಿಲ್ಲ. ಕಿರಿ ಕೊಕ್ಕರೆ ಜಾಣವಾಗಿದ್ದರೆ, ಹತ್ತಿರದ ಗಿಡ-ಗಂಟಿಗಳನ್ನು ಏರಿ, ಅಲ್ಲಿಂದ ಮರದ ಬಾಗಿದ ಟೊಂಗೆಯ ಸಹಾಯದಿಂದ ಗೂಡಿಗೆ ಮರಳುವುದು. ಆದರೆ ಬಹುಸಂಖ್ಯಾತ ಮರಿಗಳು ಮರದಡಿಯಲ್ಲಿ ಕಂಗಾಲಾಗಿ ಅತ್ತಿಂದಿತ್ತ ಓಡಾಡುತ್ತಿರುತ್ತವೆ. ಈ ಅವಕಾಶಕ್ಕಾಗಿಯೇ ಕಾದು ಕುಳಿತ ನಾಯಿ, ಬೆಕ್ಕುಗಳು ಅವುಗಳ ಮೇಲೆ ಜಿಗಿದು, ಗೋಣು ಮುರಿದು, ಪೊದೆಯೊಂದರಲ್ಲಿ ಮೃಷ್ಟಾನ್ನ ಸವಿದು ಹೋಗುವದು ತೀರ ಸಾಮಾನ್ಯ.

ಮರಿಗಳು ಪ್ರೌಢವಾಗಲಾರಂಭಿಸಿದಾಗ ಅವೂ ಹತ್ತಿರದ ಹೊಂಡಗಳಿಗೆ ಹೋಗಿ, ಮೀನುಗಾರಿಕೆಯಲ್ಲಿ ಪಾಲುಗೊಳ್ಳುವವು. ಪ್ರತಿ ಕೊಕ್ಕರೆ ಕುಟುಂಬದಲ್ಲಿ ಎರಡು-ಮೂರು ಮರಿಗಳು ಮಾತ್ರ ಬಾಲ್ಯಾವಸ್ಥೆಯ ನಂತರ ಬದುಕಿರುವುದರಿಂದ ಅವುಗಳ ಸಂಖ್ಯೆ ಅಷ್ಟಾಗಿ ಬೆಳೆಯುವುದಿಲ್ಲ. ಅಲ್ಲದೇ ಹವಾಮಾನದಲ್ಲಿ ತೀರ ಬದಲಾವಣೆಯಾದಾಗ, ಆಹಾರದ ಕೊರತೆಯಾದಾಗ, ಅವುಗಳ ಸಂಖ್ಯೆ ಒಮ್ಮೆಲೆ ಕುಗ್ಗಿಹೋಗುವುದು. ಮಳೆಗಾಲದ ಆದಿಯಲ್ಲಿ ಅವು ತಮ್ಮ ಹೊಸ ಪೀಳಿಗೆಯೊಡನೆ ಉತ್ತರಕ್ಕೆ ಅಭಿಮಾನದಿಂದ ಹಾರಿಹೋಗುವವು. ಇವು ಎಲ್ಲಿಂದ ಬರುವವು, ಎಲ್ಲಿಗೆ ಹೋಗುವವು? ಎಂದು ಯಾರೂ ಅಧಿಕಾರವಾಣಿಯಿಂದ ಹೇಳಲಾರರು. ಮಧ್ಯ ಏಷ್ಯದಿಂದ ನೇರವಾಗಿ ಕರ್ನಾಟಕಕ್ಕೆ ಬರುತ್ತಿರಬಹುದೇ, ಇಲ್ಲವೇ ಪಾಕಿಸ್ತಾನ, ರಾಜಸ್ಥಾನ ಮತ್ತು ಇನ್ನಿತರ ಕಡೆಯಲ್ಲಿ ಅವುಗಳ ಸಂಖ್ಯೆ ಹೆಚ್ಚಾದಾಗ ಕೆಲವು ದಕ್ಷಿಣಕ್ಕೆ ಬರುತ್ತಿರಬಹುದೇ?

14. ಬಿಳಿ ಹುಲಿ

ಭಾರತದ ವಿವಿಧ ರಾಜ್ಯಗಳಲ್ಲಿ ಬೀಡುಬಿಟ್ಟ ಹುಲಿರಾಯನ ಪೀಳಿಗೆಗೆ ಪಟ್ಟೆ ಹುಲಿ, ಬಂಗಾಲ ಹುಲಿ, ಹೆಬ್ಬುಲಿಗಳೆಂಬ ಅನ್ವರ್ಥಕ ಹೆಸರುಗಳಿವೆ. ಕಂದು ಮೈ ಬಣ್ಣ, ಕಪ್ಪು ಪಟ್ಟೆಗಳು, ಕೇಸರಿ ಕಣ್ಣುಗಳಿರುವದು ಸಾಮಾನ್ಯ. ಆದರೆ ಈ ಶತಕದ ಆದಿಯಲ್ಲಿ ಹುಲಿ ಬೇಟೆಯಲ್ಲಿ ತೊಡಗಿರುತ್ತಿದ್ದ ಆಂಗ್ಲರಲ್ಲಿ ಕೆಲವರು "ರೇವಾ ರಾಜ್ಯದ ಅರಣ್ಯದಲ್ಲಿ ಬಿಳಿ ಹುಲಿಯು ದರ್ಶನವಾಯಿತು" ಎಂದು ಆಗಾಗ ವರದಿ ಮಾಡಹತ್ತಿದರು. ನಂತರದ ಮೂರು ದಶಕಗಳಲ್ಲಿ ಸುಮಾರು ಹದಿನೇಳು ಶ್ವೇತ ವ್ಯಾಘ್ರಗಳನ್ನು ಗುಂಡಿಕ್ಕಿ ಕೊಂದಿದ್ದರು. ಇವುಗಳಲ್ಲಿ ಆರು ಹುಲಿಗಳ ಬೇಟೆಯಲ್ಲಿ ರೇವಾದ ಮಹಾರಾಜನೇ ಪಾಲುಗೊಂಡಿದ್ದ. ಅವುಗಳಲ್ಲಿ ಕೆಲವನ್ನು "ಪೇಪರ್ ಮೆಶ" (paper mache)ದಿಂದ ತುಂಬಿಸಿ ತನ್ನ ದರ್ಬಾರ ಹಾಲನ್ನು ಅಲಂಕರಿಸಿದ್ದ. ಮಹಾರಾಜನ ಪೂರ್ವಜರೂ ವ್ಯಾಘ್ರ ಪ್ರೇಮಿಗಳಾಗಿದ್ದರಿಂದ ಜೋಡಿಕಂದು, ಒಂದು ಬಿಳಿ ವ್ಯಾಘ್ರ ಲಾಂಛನವನ್ನೇ ಸ್ವೀಕರಿಸಿದ್ದರು.

ರಾಜನ ಕನಸು

ವಜ್ರದ ಖನಿಜಗಳಿಗಾಗಿ ಖ್ಯಾತಿ ಪಡೆದ ಮಧ್ಯಪ್ರದೇಶದ ರೇವಾ ಸಂಸ್ಥಾನದ ರಾಜಧಾನಿ ಗೋವಿಂದ್‌ಗಡ ಆಗಿತ್ತು. ವಿಸ್ತಾರವಾದ ಸರೋವರದ ದಂಡೆಯ ಮೇಲೆ ನೂರ ಇಪ್ಪತ್ತು ಕೊಠಡಿಗಳಿರುವ ಅರಮನೆಗೆ ಗುಲಾಬಿ ಬಣ್ಣ ಬಳಸಿದ್ದರಿಂದ, ಜಯಪುರದ (ರಾಜಸ್ಥಾನ) 'ಚಂದ್ರಮಹಲ' ಅರಮನೆಯನ್ನು ನೆನಪಿಗೆ ತರುವಂತಿದೆ. ಭಾರತ ಸ್ವತಂತ್ರವಾದ ನಂತರ, ಎಲ್ಲ ರಾಜಮಹಾರಾಜರಂತೆ, ರೇವಾದ ರಾಜನು ತನ್ನ ಸಂಸ್ಥಾನವನ್ನು ಮಧ್ಯಪ್ರದೇಶದಲ್ಲಿ ವಿಲೀನವಾಗಿಸಿದ ನಂತರ ತಾನು ಗೋವಿಂದಗಡದ ಉತ್ತರಕ್ಕೆ ಇಪ್ಪತ್ತು ಕಿಲೋಮೀಟರ್ ದೂರ ಇರುವ ರೇವಾ ನಗರದಲ್ಲಿ ಇರಲಾರಂಭಿಸಿದ. ರಾಜ್ಯದ ಆಡಳಿತದ ಜವಾಬ್ದಾರಿ ತಪ್ಪಿದ ಬಳಿಕ ತನ್ನ ತನು-ಮನ-ಧನಗಳನ್ನು ವ್ಯಾಘ್ರ ಸಂತತಿಗೆ ಮೀಸಲಿಟ್ಟ. ಒಂದೆರಡು ಬಿಳಿ ಹುಲಿಗಳನ್ನು ಸಜೀವವಾಗಿ ಬಂಧಿಸಬೇಕೆಂದು ಕನಸು ಕಟ್ಟಿದ. ಅಂತೆಯೇ ಕ್ರೂರ ಪ್ರಾಣಿಗಳನ್ನು ಬಂಧಿಸುವುದರಲ್ಲಿ ವಿಶ್ವಖ್ಯಾತಿ ಪಡೆದಿದ್ದ ಜೋಸೆಫ್ ಡೆಲಮೊಂಟ್ ಎಂಬಾತ ವಿವಿಧ ಬಲೆಗಳೊಂದಿಗೆ ಕಾಡು-ಮೇಡುಗಳಲ್ಲಿ ಒಂದು ತಿಂಗಳು ಅಲೆದರೂ ಯಶಸ್ವಿಯಾಗದೇ ಹಿಂದಿರುಗಬೇಕಾಯಿತು. ಅವುಗಳ ಛಾಯಾಚಿತ್ರಗಳನ್ನಾದರೂ ತೆಗೆಯೋಣವೆಂದು ಹೆಸರುವಾಸಿ ಛಾಯಾಚಿತ್ರಕಾರ ಜೆರಿ ಕೆರಟೋನ್ ಹಗಲು ರಾತ್ರಿ ಕಾಡುಗಳಲ್ಲಿ ಕಳೆದರೂ

ಹುಲಿರಾಯನು, ದರ್ಶನಭಾಗ್ಯ–ದಯಪಾಲಿಸಲೇ ಇಲ್ಲ! ಕಾಡಿನಲ್ಲಿ ಸಕಲ ಪ್ರಾಣಿಗಳ ಕಣ್ಣಿಗೂ ಮಣ್ಣೆರಚಿ ರಾಜ್ಯವಾಳುವ ಹುಲಿರಾಯ ಮಾನವನಿಗೆ ಅಷ್ಟೊಂದು ಸುಲಭದಲ್ಲಿ ಶರಣಾಗತನಾಗುವನೇ?

ಜೀವಂತ ಬಿಳಿ ಹುಲಿಯೊಂದು ತನ್ನ ಅಂಕಿತದಲ್ಲಿ ಇರಲೇಬೇಕೆಂಬ ಉತ್ಕಂಠೆ ಮಹಾರಾಜನನ್ನು ಕಾಡಹತ್ತಿತು. ಅಂತೆಯೇ ಅವುಗಳ ಇರವು ವರದಿ ಮಾಡಿದವರಿಗೆ ಪಾರಿತೋಷಕವನ್ನು ಘೋಷಿಸಿದ. ಕಗ್ಗಾಡೊಂದರಲ್ಲಿ ಕಂದುಪಟ್ಟೆಯ ತಾಯಿ ಹುಲಿ ಮೂರು ಕಂದು, ಒಂದು ಬಿಳಿ ಗಂಡು ಮರಿಯೊಂದಿಗೆ ವಾಸವಾಗಿದ್ದ ಸಮಾಚಾರ ಮುಟ್ಟಿದಾಗ ಮಹಾರಾಜನಿಗೆ ರೋಮಾಂಚನವಾಯಿತು. ಈ ಅಪೂರ್ವ ಅವಕಾಶ ಹುಸಿ ಹೋಗಗೊಡಬಾರದು, ಎಂದು 900 ಜನರ ಒಂದು ಮಹಾ ಪಡೆಯನ್ನೇ ಕಟ್ಟಿದ. ಕಾಡಾನೆಗಳನ್ನು ಖೆಡ್ಡಾದಲ್ಲಿ ಹಿಡಿಯುವಂತೆ ಈ ಪಡೆಯವರು ಕೋಲು, ಬರ್ಜಿ, ಕಹಳೆ, ಜಾಗಟೆಗಳೊಂದಿಗೆ ಹೊಯ್ಲು ಹಾಕುತ್ತ ಕಾಡನ್ನು ಸುತ್ತುವರೆದರು. ಇಷ್ಟೊಂದು ಕೋಲಾಹಲ ಮಾಡಿದರೂ ತಾಯಿ, ಮರಿಗಳನ್ನು ಅನಾಥರನ್ನಾಗಿಸಿ ಪಲಾಯನ ಮಾಡಲು ಒಪ್ಪದಿದ್ದರಿಂದ, ವಿಪರೀತ ಹೊಗೆ ಹರಡಿ ಹುಲಿಯ ಪರಿವಾರ ಚೆಲ್ಲಾಪಿಲ್ಲಿಯಾಗಿ ಚದುರಿ ಹೋಗುವಂತೆ ಮಾಡಿದರು. ಇಷ್ಟಾದರೂ ತಾಯಿ ಹುಲಿಯಿಂದ ಆಕ್ರಮಣದ ಸಾಧ್ಯತೆ ಇದ್ದೇ ಇದ್ದುದರಿಂದ, ತಾಯಿಯನ್ನೂ ಕಂದು ಮರಿಗಳನ್ನೂ ಗುಂಡಿಕ್ಕಿ ಕೊಂದರು. ಪಾಪ ಅನಾಥವಾದ ಬಿಳಿಯ ಹುಲಿಮರಿ ಕೊನೆಗೂ ಮಹಾರಾಜರ ಸೊತ್ತಾಯಿತು. 1951ರಲ್ಲಿ ಮೊದಲ ಬಾರಿಗೆ ಶ್ವೇತವ್ಯಾಘ್ರವೊಂದು ಬಂಧನಕ್ಕೊಳಗಾದ ವಿಚಾರ ವಿಶ್ವದಲ್ಲಿ ಹರಡಿತು.

ಹಲವಾರು ಸುಂದರಿಯರನ್ನು ಕಂಡು ಕೆಲವರನ್ನಾದರೂ ತನ್ನವರನ್ನಾಗಿಸಿಕೊಂಡ ಮಹಾರಾಜ, ಪುಟ್ಟ ಬಿಳಿ ಹುಲಿಮರಿಯ ರೂಪ ಲಾವಣ್ಯಕ್ಕೆ ಪ್ರಥಮ ದರ್ಶನದಲ್ಲೇ ಮರುಳಾದ. ಕೆನೆ ಬಿಳಿಯ ಮೈಗೂದಲ ಮೇಲೆ ನಾಶಿ ಪುಡಿ ಬಣ್ಣದ ಪಟ್ಟೆಗಳು, ಸುಂದರ ಹೆಂಗಳೆಯರಿಗೆ ಇರಬಹುದಾಗಿದ್ದ ತಿಳಿ ನೀಲಿ ಕಣ್ಣುಗಳು. ಯಾವ ಹಲ್ಲು ಪುಡಿ ಬಳಸದಿದ್ದರೂ ಜೋಡಿಸಿದ ಮುತ್ತಿನಂಥ ದಂತಪಂಕ್ತಿ. ಎಂಥ ಕೆಚ್ಚೆದೆ ಶಿಕಾರಿಯನ್ನೂ ನಡುಗಿಸಬಲ್ಲ ಇಜ್ಜೋಡಿ ಶೂಲದ ಹಲ್ಲುಗಳು. ಬಣ್ಣ ಲೇಪಿಸದಿದ್ದರೂ ಅಂದವಾದ ಕೆಂದುಟಿಗಳು. ಮೂಗಿನ ಸೊಳ್ಳೆಗಳಿಗೂ ಅದೇ ಕೆಂಬಣ್ಣ, ಒಮ್ಮೆ ನೋಡಿದರೆ ಮತ್ತೆ ನೋಡಬೇಕೆನ್ನಿಸುವ ಸಹಜ ಸೌಂದರ್ಯ. ಅಂತೆಯೇ ಮಹಾರಾಜ ಅದಕ್ಕೆ 'ಮೋಹನ್' ಎಂದು ನಾಮಕರಣ ಮಾಡಿದ. ಅರಮನೆಯ ಪರಿಸರದಲ್ಲಿಯೇ ಮೋಹನನಿಗಾಗಿ ಸಕಲ ಸವಲತ್ತುಗಳಿರುವ ಸುಸಜ್ಜಿತ ವಾಸಸ್ಥಾನ ನಿರ್ಮಾಣವಾಯಿತು. ಎತ್ತರದ ಗೋಡೆಯ ಮೇಲೆ ನಿಂತು ಆಳದಲ್ಲಿದ್ದ ಮೋಹನನನ್ನು ಪ್ರೇಕ್ಷಕರು ನೋಡಿ ಮೆಚ್ಚಿಗೆ ಸೂಸುವಂತೆ ಆಯಿತು. ಆದರೆ ಮೋಹನನಿಗೆ ಇದಾವುದೂ ಬೇಕಿರಲಿಲ್ಲ. ತನ್ನವರನ್ನು ಕೊಂದು, ತನ್ನನ್ನು ಬಂಧಿಸಿದವರನ್ನು ಆತ ಕ್ಷಮಿಸಿರಲೂ ಇಲ್ಲ. ಅಂತೆಯೇ ಒಂದಿರುಳು ಹನ್ನೊಂದು ಅಡಿ ಎತ್ತರದ ಗೋಡೆ ಹತ್ತಿ ಮಾನವ ಕೋಟೆಗೆ ಧಿಕ್ಕಾರ ಸಾರುತ್ತ ನಾಗಾಲೋಟದಿಂದ ಕಾಡನ್ನು ಸೇರಿ ತಾನು ಸ್ವತಂತ್ರನೆಂದು ತೋರಿಸಿಕೊಂಡ.

ಮಹಾರಾಜನಿಗೆ ಪುತ್ರವಿಯೋಗದಷ್ಟು ದುಃಖವಾಯಿತು. ಕಟ್ಟಿದ ಕನಸುಗಳು ಕುಸಿದವು. ಅನ್ನ, ನಿದ್ರೆಗಳು ಬೇಡಾದವು. ವಿಳಂಬ ಮಾಡಿದರೆ ತಿರುಗಿ ಮೋಹನನನ್ನು ಪಡೆಯುವ ಭಾಗ್ಯ ತನ್ನದಾಗದು! ಎಂದು ಅರಿತು ಮತ್ತೆ ಜನರ ಸೈನ್ಯ ಸೇರಿಸಿದ. ಮೋಹನನು ಅಡಗಿಕೊಂಡ ಸ್ಥಳಕ್ಕೆ ಮುತ್ತಿಗೆ ಹಾಕಿದ. ಕಾಡಿನ ರೀತಿ–ನೀತಿಗಳಿಗೆ ಇನ್ನೂ ಪಳಗದ ಹುಲಿರಾಯ ಸಿಕ್ಕಿಹಾಕಿಕೊಂಡ. ತನ್ನನ್ನು ಅಗಲಿ ಕಾಡಿಗೆ ಹೋಗಲು ಮನಸ್ಸು ಹೇಗೆ ಬಂದಿತು? ಎಂದು ವಿಚಾರಿಸಿದಾಗ, ಮೋಹನ ಅರ್ಥವಾದವನಂತೆ ನಾಲಿಗೆ ಹೊರಚಾಚಿ ಸಿಂಬಳ ಒರಸಿಕೊಂಡ! ಅವನಿಗೆ ಒಂಟಿತನ ಬೇಸರವಾಗಿದೆ ಎಂಬುದನ್ನು ಮಹಾರಾಜ ತಕ್ಷಣ ಅರ್ಥಮಾಡಿಕೊಂಡು ಕಂದು ಪಟ್ಟೆಯ ಹುಲಿಕನ್ಯೆಯನ್ನು ಸಂಗಾತಿಯಾಗಿ ಪೂರೈಸಿದ. ಈ ಜೋಡಿ ನಾನಾವಿಧ ಆಟಗಳಲ್ಲಿ ತೊಡಗಿ ಬಾಲಕಚ್ಚುವುದು, ಒಂದನ್ನೊಂದು ಓಡಿಸುವುದು, ನೀರಾಟದಲ್ಲಿ ತೊಡಗುವುದು, ಮುಂತಾದ್ದನ್ನು ಮಾಡುವವು. ಬಿಸಿಲೇರಿದಂತೆ ಒಳಾವರಣದಲ್ಲಿ ವಿಶ್ರಾಂತಿಸುವವು. ಸಂಜೆ ಕಾವಲುಗಾರನು ಪೂರೈಸಿದ ಮಾಂಸದ ಊಟ ಪೂರೈಸಿ ರಾತ್ರಿಯಿಡೀ ಜಾಗರಣೆ ಮಾಡುವವು. ನಡುರಾತ್ರಿಯಲ್ಲಿ ಅವುಗಳ ಗರ್ಜನೆಗೆ ಬೆಚ್ಚಿಬೀಳುವವರೂ ಇದ್ದರು.

ಸಂದೇಹ

ಎರಡು ವರ್ಷ ತುಂಬುವದರೊಳಗೆ ಪುಟ್ಟ ಹುಲಿರಾಯ ಮೋಹನ, ಗಂಡುಗಲಿಯಾಗಿ ಬೆಳೆದ. ಮೂರಡಿ ಎತ್ತರ, ಎಂಟು ಅಡಿ ಉದ್ದ, ಇನ್ನೂರು ಪೌಂಡು ಭಾರದ ಹುಲಿಯನ್ನು ಕಂಡು ಬೆಚ್ಚದವರು ಯಾರು? ಒಮ್ಮೊಮ್ಮೆ ಗರ್ಜಿಸಿ ಮೂರು ಇಂಚು ಉದ್ದದ ಶೂಲದ ಹಲ್ಲುಗಳನ್ನು ಪ್ರದರ್ಶಿಸಿದಾಗ, ಹೆಂಗಳೆಯರು, ಮಕ್ಕಳು, ಪಲಾಯನ ಮಾಡಿಬಿಡುತ್ತಿದ್ದರು. ಐದು ವರ್ಷ ತುಂಬುವುದರೊಳಗೆ, ಮೋಹನನು ಪ್ರೌಢಾವಸ್ಥೆ ತಲುಪಿ, ಜೊತೆಗಾತಿಯನ್ನು ಕೂಡಿದ. ಇದರ ಫಲವಾಗಿ 1955ರಲ್ಲಿ ಹುಟ್ಟಿದ ಮೂರು ಮರಿಗಳು ಕಂದು ಬಣ್ಣತಾಳಿದ್ದವು. ಮಹಾರಾಜರಿಗೆ ಮೋಹನನ ಮೈಬಣ್ಣದ ಬಗ್ಗೆ ಸಂದೇಹ ಮೂಡಲಾರಂಭಿಸಿತು. ಅಲ್ಲದೇ ಅನೇಕರು ಅದು ಬಣ್ಣದ ಕಣಗಳ ಕೊರತೆಯಿಂದ ಉಂಟಾದ ಮೈಬಣ್ಣವಾದ್ದರಿಂದ, ಆನುವಂಶಿಕವಲ್ಲ ಎನ್ನ ಹತ್ತಿದರು. ಅಂಥ 'ಅಲಬಿನೋಸ್' ಜೋಡಿ ಮರಿಗಳು ಕೂಚ್ ಬಿಹಾರದ ಅರಣ್ಯದಲ್ಲಿ ದೊರೆತಿದ್ದವು. ಅವುಗಳ ಮತ್ತು ಮೋಹನನ ಮೈ ಬಣ್ಣಕ್ಕೆ ಅಜಗಜಾಂತರ. ಅವುಗಳು ಶುಭ್ರ ಬಿಳಿ, ಕಣ್ಣು ನೀಲಿಯಾಗಿರದೇ ಗುಲಾಬಿ ಬಣ್ಣದವು. ಎಲ್ಲದಕ್ಕೂ ಹೆಚ್ಚಾಗಿ ಬಿಸಿಲಿನ ತಾಪ ಅವಕ್ಕೆ ಸಹಿಸಲು ಆಗುತ್ತಿರಲಿಲ್ಲ. ಮಾನವರಲ್ಲೂ ಆಗೊಮ್ಮೆ ಈಗೊಮ್ಮೆ ಬಣ್ಣದ ಕಣರಹಿತ, ಶುಭ್ರ ಶ್ವೇತವರ್ಣೀಯ ಮಕ್ಕಳು ಹುಟ್ಟುತ್ತವೆ. ಆದರೆ ಅಂಥ ಮಕ್ಕಳನ್ನು ಗೌರವರ್ಣದವರೆಂದು ಯಾರೂ ಪರಿಗಣಿಸುವದಿಲ್ಲ. ಮೋಹನನು ಇಂಥ ಗುಂಪಿಗೆ ಸೇರಿದವನಂತೂ ಅಲ್ಲವೇ ಅಲ್ಲ.

ಮೋಹನನ ಮೈಬಣ್ಣದ ರಹಸ್ಯ ಕಂಡುಹಿಡಿಯಲು ಮಹಾರಾಜನು ಪಣತೊಟ್ಟ. ಮೋಹನನ ಮಗಳೇ ನಾಲ್ಕು ವರ್ಷಕ್ಕೆ ಮೈನೆರೆತಾಗ ಮೋಹನನಿಗೆ ಸಂಗಾತಿಯಾಗುವ















ಏರ್ಪಾಡು ಮಾಡಿದ. ಇದರ ಪರಿಣಾಮವಾಗಿ 1958ರಲ್ಲಿ ಹುಟ್ಟಿದ ನಾಲ್ಕು ಬಿಳಿ ಮರಿಗಳಿಂದಾಗಿ ವಿಶ್ವವೇ ಅಚ್ಚರಿ ಪಡುವಂತೆ ಆಯಿತು. ದೇಶವಿದೇಶಗಳಿಂದ ಪಂಡಿತ ಪಾಮರರು ಮೋಹನನ ಸಂಸಾರದ ದರ್ಶನ ಲಾಭಕ್ಕಾಗಿ ಬರಲಾರಂಭಿಸಿದ್ದರಿಂದ ಗೋವಿಂದಗಢ ಒಂದು ಯಾತ್ರಾ ಸ್ಥಳವೇ ಆಯಿತು. 1960ರಲ್ಲಿ ಮೋಹನನು ಇನ್ನೊಮ್ಮೆ ತಂದೆಯಾದಾಗ, ಎರಡು ಶ್ವೇತ ಗಂಡು ಮತ್ತು ಕಂದು ಮರಿ ಆತನ ಸಂಸಾರಕ್ಕೆ ಸೇರ್ಪಡೆಯಾದವು. ಹೀಗೆ ಮಹಾರಾಜ ತಂದೆ–ಮಗಳ ಮದುವೆಯಿಂದ ಬಿಳಿದೊಗಲು ಅನುವಂಶಿಕ ಎಂದು ಸಿದ್ಧಪಡಿಸಿದಂತಾಯಿತು. ತಂದೆ, ತಾಯಿಗಳಲ್ಲಿ, ಗುಪ್ತವಾಗಿರುವ ಗುಣಧರ್ಮಗಳು, ಅವು ಒಂದಾದಾಗ ಬರುವ ಈ ಅನುವಂಶಿಕ ರೀತಿ, ವಿಜ್ಞಾನಿಗಳಿಗೆ ಹೊಸತೇನಲ್ಲ. ಮಾನವರಲ್ಲೂ ಅಂತರ್ ಗೋತ್ರದ ನಿಕಟ ಸಂಪರ್ಕದಿಂದ ಹಿಮೊಫೆಲಿಯ, ಬಣ್ಣಗುರುಡು, ಬುದ್ಧಿಮಾಂದ್ಯ ಮೊದಲಾದ ದೋಷಗಳು ಅನುವಂಶೀಯುವಾಗುವದು ಸಾಮಾನ್ಯ.

ಕಂದು ಬಿಳಿ ಮೈಬಣ್ಣಗಳು ಅನುವಂಶಿಕವಾಗಿ ಪ್ರಕಟವಾಗುವ ಸೂತ್ರಗಳು ಅತ್ಯಂತ ಕುತೂಹಲಕಾರಿ. ಪ್ರತಿಯೊಂದು ಮರಿ, ಒಂದರ್ಧ ತಂದೆಯಿಂದ, ಉಳಿದರ್ಧ ತಾಯಿಯಿಂದ ಅನುವಂಶಿಕ ಗುಣಗಳನ್ನು ಪಡೆದೇ ಜನ್ಮವೆತ್ತುತ್ತದೆ. ಕಂದು ಬಣ್ಣದ ಗಂಡು–ಹೆಣ್ಣು ಕೂಡಿದಾಗ ಮರಿಗಳೆಲ್ಲ ಕಂದು ಬಣ್ಣ ತಳೆದಿರುತ್ತವೆ. (ಆಕೃತಿ: 1). ಅದರಂತೆ ಶ್ವೇತ ಗಂಡು–ಹೆಣ್ಣಿಗೆ ಶ್ವೇತ ಮರಿಗಳೇ ಲಭಿಸುತ್ತವೆ (ಆಕೃತಿ: 2). ಕಂದು ಮತ್ತು ಶ್ವೇತವರ್ಣದ ಹುಲಿಗಳು ಕೂಡಿದಾಗ ಹುಟ್ಟುವ ಮರಿಗಳೆಲ್ಲ ಕಂದು ಬಣ್ಣದವಾದರೂ ಅವುಗಳ ಜನನೇಂದ್ರಿಯಗಳಲ್ಲಿ ಶ್ವೇತವರ್ಣದ ಅನುವಂಶಿಕ ಗುಣಗಳು ಗುಪ್ತವಾಗಿರುತ್ತವೆ (ಆಕೃತಿ: 3). ತಂದೆ, ತಾಯಿ, ಮರಿಗಳಲ್ಲಿ ಹುಟ್ಟಾ ಬರಬಹುದಾಗಿದ್ದ ಕಂದು ಬಣ್ಣ ಕಪ್ಪು ಮತ್ತು ಶ್ವೇತ ವರ್ಣವನ್ನು ಬಿಳಿ ವರ್ತುಲದಿಂದ ಚಿತ್ರಗಳಲ್ಲಿ ತೋರಿಸಲಾಗಿದೆ. ಎರಡೂ ವರ್ತುಲಗಳು ಬಿಳಿ ಇದ್ದರೆ ಮಾತ್ರ ಮರಿಗೆ ಶ್ವೇತವರ್ಣ ಬರಲು ಸಾಧ್ಯ. ಮೋಹನನ ಪ್ರಥಮ ತಳಿಯ ಸಂತಾನ ತಮ್ಮಲ್ಲಿಯೇ ಕೂಡಿದರೆ, ಕೇವಲ ಒಂದು ಬಿಳಿ ಮತ್ತು ಮೂರು ಕಂದು ಮರಿಗಳು ಹುಟ್ಟಲು ಸಾಧ್ಯವಿತ್ತು. (ಆಕೃತಿ: 4). ಆದರೆ ಮಹಾರಾಜ, ಮೋಹನನು ತನ್ನ ಮಗಳನ್ನೇ ಕೂಡುವಂತೆ ಮಾಡಿದ್ದರಿಂದ ಬಿಳಿಬಣ್ಣದ ಮರಿಗಳು ಅಧಿಕ ಪ್ರಮಾಣದಲ್ಲಿ ಹುಟ್ಟಬರಲು ಸಾಧ್ಯವಾಯಿತು (ಆಕೃತಿ: 5).

ನಿಸರ್ಗದಲ್ಲಿ ಎರಡು ಬಿಳೀ ಬಣ್ಣದ ಇಲ್ಲವೇ ಶ್ವೇತ ಗುಣಗಳನ್ನು ಗುಪ್ತವಾಗಿ ಹೊತ್ತ ಹುಲಿಗಳ ಕೂಡುವಿಕೆಯು ಸಾಧ್ಯತೆ ಅತಿ ವಿರಳವಾದ್ದರಿಂದ ಹುಟ್ಟುವ ಬಹುಸಂಖ್ಯಾತ ಮರಿಗಳು ಕಂದು ಬಣ್ಣದವೇ ಆಗಿರುತ್ತವೆ. ಸರ್ವಸಾಧಾರಣವಾಗಿ ಹುಲಿರಾಯ ತನ್ನ ಮಗಳನ್ನು ವರಿಸುವುದಿಲ್ಲ. ತಾಯಿ ಹುಲಿ ಸದಾಕಾಲ ತನ್ನ ಮರಿಗಳನ್ನು ಕಾಯ್ದುಕೊಂಡಿರುವುದೂ ಇದಕ್ಕೆ ಒಂದು ಕಾರಣ. ಆದರೆ ಬಂಧನದಲ್ಲಿದ್ದಾಗ ಈ ಕಾನೂನನ್ನು ಅವು ಉಲ್ಲಂಘಿಸಬಲ್ಲವು. ಇಂಥ 'ಸಗೋತ್ರ' ವಿವಾಹದಿಂದ ಉತ್ಪನ್ನವಾಗುವ ತಳಿಗಳು ತೀರ ದುರ್ಬಲವಾಗುವುವು. ಇದರಂತೆ






5



ನಿಸರ್ಗದಲ್ಲಿ ಹುಲಿ ಮತ್ತು ಸಿಂಹಗಳು ಕೂಡುವುದಿಲ್ಲ. ಆದರೆ ಕಲಕತ್ತಾ ಮೃಗಾಲಯದಲ್ಲಿ ಅವು ಒಂದಾಗುವಂತೆ ಯೋಜಿಸಿ 'ಸಿಂಹುಲಿ'ಯನ್ನು ಹುಟ್ಟಿಸಲಾಯಿತು. ಮೊದಲ ಇಂಥ ಮರಿಗೆ 'ರುದ್ರಾಣಿ' ಎಂದು ನಾಮಕರಣ ಮಾಡಲಾಯಿತು. ಈ ತಂತ್ರವನ್ನು ಬಳಸಿ ಹಲವು ಮೃಗಾಲಯಗಳು ತಮಗಿಷ್ಟವಾದ ಪಶು-ಪಕ್ಷಿಗಳ ಸಂತಾನವನ್ನು ಹೆಚ್ಚಿಸಿಕೊಳ್ಳುತ್ತವೆ.

1962ರಲ್ಲಿ ಶ್ವೇತ ಹುಲಿಗಳಿಗಾಗಿ ಜಗತ್ತಿನ ಮೂಲೆ ಮೂಲೆಯಿಂದ ಬೇಡಿಕೆ ಬರಲಾರಂಭಿಸಿತು. ಬುಡಾಪೆಸ್ಟ್ (ಹಂಗೇರಿ) ಪ್ರಾಣಿ-ಸಂಗ್ರಹಾಲಯ 40,000 ರೂಪಾಯಿ ಕೊಟ್ಟು ಒಂದು ಮರಿಯನ್ನು ಖರೀದಿಸಲು ಮುಂದೆ ಬಂದಿತು. ಉತ್ತರ ಅಮೆರಿಕೆಯ ಮೃಗಾಲಯವೊಂದು ಹೆಚ್ಚಿನ ಮೊತ್ತ ಸಲ್ಲಿಸಿತು. ವಾಷಿಂಗ್ಟನ್ನಿನ ಸ್ಮಿತ್ ಸೋನಿಯನ್ ಸಂಸ್ಥೆ 10,000 ಡಾಲರಿಗೆ ಒಂದು ಬಿಳಿ ಮರಿ ಕೊಳ್ಳಲು ಮಹಾರಾಜನೊಂದಿಗೆ ಒಡಂಬಡಿಕೆ ಮಾಡಿಕೊಂಡಿತು. ಇದಕ್ಕಾಗಿಯೇ ಭಾರತಕ್ಕೆ ಆಗಮಿಸಿದ ಉಚ್ಚ ಅಧಿಕಾರಿಗಳು ಮೋಹನನ ಶ್ವೇತ ಕುಮಾರಿಯ ರೂಪಕ್ಕೆ ಮನಸೋತುಹೋದರು. ಮಹಾರಾಜರು ಅವಳನ್ನು 'ಮೋಹಿನಿ' ಎಂದು ಕರೆದರೆ, ಭಾರತೀಯ ಹೆಸರುಗಳಿಗೆ ನಾಲಿಗೆ ಹೊರಳದ ಅಮೆರಿಕನ್ನರು ಅದೇ ಅರ್ಥದ 'ಎನ್‌ಚಾಂಟ್ರೆಸ್' ಎಂದು ಸಂಬೋಧಿಸಿದರು. ಇವಳನ್ನು ಅಮೆರಿಕೆಗೆ ಸಾಗಿಸುವುದಕ್ಕಾಗಿಯೇ ಒಂದು ಪಂಜರ ನಿರ್ಮಾಣ ಮಾಡಿ, ಮಾಂಸದ ಆಮಿಷದಿಂದ ಬಂಧಿಸಿ, ಟ್ರಕ್ ಒಂದರಲ್ಲಿ ದಿಲ್ಲಿಗೆ ಸಾಗಿಸಿದರು. ವಿಮಾನದಲ್ಲಿ ನ್ಯೂಯಾರ್ಕಿಗೆ ಕರೆದೊಯ್ದು ವಾಷಿಂಗ್‌ಟನ್ನಿಗೆ ರವಾನಿಸಿದರು. ಅಧ್ಯಕ್ಷ ಐಸೆನ್ ಹಾವರರು ಅವಳನ್ನು ತಮ್ಮ ದೇಶದ ಮಕ್ಕಳಿಗೆ ಕೊಡುಗೆಯಾಗಿ ನೀಡಿದರು. ವಾಷಿಂಗ್ಟನ್ನಿನಲ್ಲಿ ಶ್ವೇತಭವನದಂತೆ ಶ್ವೇತ ವ್ಯಾಘ್ರವೂ ಒಂದು ಆಕರ್ಷಣೆಯಾಯಿತು.

ಹೊನ್ನಿನ ಹೊಳೆ

ಬಿಳಿ ಹುಲಿಯ ವಂಶದ ಅಭಿವೃದ್ಧಿಯಲ್ಲಿ ಹೊನ್ನಿನ ಹೊಳೆ ಹರಿಯುತ್ತದೆ ಎಂದು ಅರಿತ ಭಾರತ ಸರಕಾರ ಮಹಾರಾಜನೊಡನೆ ಒಂದು ಒಡಂಬಡಿಕೆ ಮಾಡಿಕೊಂಡಿತು. ಇದರ ಮೇರೆಗೆ ಅವರು ದಿಲ್ಲಿ ಮೃಗಾಲಯಕ್ಕೆ ಸಂತಾನೋತ್ಪತ್ತಿಗಾಗಿಯೇ ಎಂದು ಜೋಡಿ ಮರಿಗಳನ್ನು ಕೊಡಬೇಕು. ಇವುಗಳಿಂದ ಪ್ರಾಪ್ತಿಯಾದ ಪ್ರಪ್ರಥಮ ಹೆಣ್ಣು ಮರಿಯನ್ನು ಮಹಾರಾಜನಿಗೆ ಮೀಸಲಿಡಬೇಕು. ನಂತರದವನ್ನು ಸಮಪಾಲು ಮಾಡಿಕೊಳ್ಳಬೇಕು. ಮಹಾರಾಜರು ಮರಿಗಳನ್ನು ಅಂತರಾಷ್ಟ್ರೀಯ ಮೃಗಾಲಯಗಳಿಗೆ ಮಾರಿಕೊಳ್ಳಬಾರದು. ಅಂತೆಯೇ ಮೋಹನನ ಮೊದಲ ಬಿಳಿ ತಳಿಯ "ರಾಜಾ-ರಾಣಿಯರು" ದಿಲ್ಲಿ ಮೃಗಾಲಯ ಸೇರಿ ಜೋಡಿ ಶ್ವೇತ ಮರಿಗಳನ್ನು ಈದವು. ಆದರೆ ವ್ಯಾಘ್ರ ಸಮಾಜದಲ್ಲಿ ಗೌರವರ್ಣಕ್ಕೆ ಹೆಚ್ಚಿನ ಮಾನ್ಯತೆ ಇಲ್ಲವೆಂದು ತೋರುತ್ತದೆ. ತಾಯಿ ಈ ಮರಿಗಳನ್ನು ಅಲಕ್ಷಿಸಲಾರಂಭಿಸಿತು. ಪುಣ್ಯಕ್ಕೆ ಇನ್ನೊಂದು ತಾಯಿ ಹುಲಿ, ತನ್ನ ಮರಿಗಳೊಂದಿಗೆ ರಾಣಿಯ ಮರಿಗಳಿಗೂ ಹಾಲೂಡಿ ಬೆಳೆಸಲಾರಂಭಿಸಿತು. ದಿಲ್ಲಿಯ ಮೃಗಾಲಯದಲ್ಲಿದ್ದಂತೆ ವಿಶ್ವದ ವಿವಿಧ

ಪ್ರಾಣಿ ಸಂಗ್ರಹಾಲಯಗಳಲ್ಲಿ ಬಿಳಿ ಹುಲಿಮರಿಗಳು ಜನ್ಮ ತಾಳಲಾರಂಭಿಸಿದವು. ಅಮೆರಿಕಾದ ಸಿನ್‌ಸಿನಾಟಿ ಮೃಗಾಲಯದಲ್ಲಿ ಮೂರು ಹುಟ್ಟಿದವು. ಇಂದು ಜಗತ್ತಿನ ವಿವಿಧ ಮೃಗಾಲಯಗಳಲ್ಲಿ ನಲವತ್ತು ಬಿಳಿ ಹುಲಿಗಳು ಇರಬೇಕೆಂದು ಅಂದಾಜು ಮಾಡಲಾಗಿದೆ.

ಅಕ್ಟೋಬರ್ 1984ರಲ್ಲಿ ನಮ್ಮ ಮೈಸೂರು ಮೃಗಾಲಯದಲ್ಲಿಯೂ ಒಂದು ಹೆಣ್ಣು ಬಿಳಿ ಹುಲಿಮರಿ ಜನ್ಮ ತಾಳಿತು. ಇದರ ತಂದೆ-ತಾಯಿ ಇಬ್ಬರೂ ಕಂದು ಪಟ್ಟೆಯವಾಗಿದ್ದರೂ ತಮ್ಮ ಜನನೇಂದ್ರಿಯದಲ್ಲಿ ಶ್ವೇತವರ್ಣಕ್ಕಾಗಿ ಅನುವಂಶಿಕ ಗುಣಗಳನ್ನು ಹೊತ್ತಿದ್ದವು. ಎಂದು ಬೇರೆ ಹೇಳಬೇಕಾಗಿಲ್ಲ. (ಆಕೃತಿ: 4) ಈ ಮರಿ "ಪ್ರಿಯದರ್ಶಿನಿ" ಎಲ್ಲರ ಕಣ್ಣುಗೊಂಬೆಯಾಗಿ ಬೆಳೆಯಲಾರಂಭಿಸಿದಳು. ಈಗ ಅವಳು ಶರೀರ ಸಾಮರ್ಥ್ಯದಲ್ಲಿ ತಾಯಿಯಷ್ಟೇ ಬಲಿಷ್ಠವಾಗಿ ಕಂಡರೂ ಬುದ್ಧಿಯಲ್ಲಿ ಇನ್ನೂ ಶಿಶು ಎಳೆ ಮಗುವಿನಂತೆ ವರ್ತಿಸುತ್ತಾಳೆ. ದಿನವಿಡೀ ತುಂಟಾಟ, ಕಪಿ ಚೇಷ್ಟೆಗಳಲ್ಲಿ ತೊಡಗಿ ಪ್ರೇಕ್ಷಕರಿಗೆ ಮನರಂಜನೆ ನೀಡುತ್ತಾಳೆ. ಮೈಸೂರಿಗೆ ಹೋದಾಗ ಅವಳನ್ನು ಕಾಣಲು ಮರೆಯದಿರಿ.*

*ಪ್ರಿಯದರ್ಶಿನಿ 28.3.1990 ರಂದು ತಾನು ಜನ್ಮವೆತ್ತಿದ ಮೃಗಾಲಯದಲ್ಲೇ Septicaemia ಕಾಯಿಲೆಯಿಂದ ಮೃತಪಟ್ಟಳು.

15. ಬೆಳ್ಳಕ್ಕಿಗಳು ಎಲ್ಲಿಗೆ ಪಯಣ? ಎಲ್ಲಿ ನೆಲೆ?

ನಮ್ಮೂರಿನ ಹಿಂದಿನ ಬೆಟ್ಟವೇರಿ ಕುಳಿತಾಗ, ಸನಿಹದಲ್ಲಿ ಹರಿಯುವ ಶರಾವತಿಯ ಪ್ರವಾಹವನ್ನು ಹಿಂಬಾಲಿಸಿ ಹೊರಟ ಬೆಳ್ಳಕ್ಕಿ ಸಾಲುಗಳು ಮೋಡಗಳಂತೆ ಕಾಣುತ್ತಿರುತ್ತವೆ. ಸೂರ್ಯೋದಯದೊಡನೆ ಅವುಗಳ ಹಾರಾಟ ಪ್ರಾರಂಭ. ಮೊದಲು ಒಂಟಿ. ನಂತರ ಜೋಡಿಯಾಗಿ ಅನಂತರ ಅವುಗಳ ಸಂಖ್ಯೆಯು ಏರುತ್ತ ಮೂವತ್ತರವರೆಗೂ ಹೋಗುತ್ತದೆ. ಅನಂತರ ಹಿಂಡುಗಳು ಕುಗ್ಗುತ್ತ ಕೊನೆಯಲ್ಲಿ ಒಂದೆರಡು ಹೊರಟಿರುತ್ತವೆ. ನೀರಿನಿಂದ ಕೇವಲ ಒಂದು ಗೇಣು ಮೇಲಿನಿಂದ ಹಾರುವವದರಿಂದ ಎಷ್ಟೋ ಸಲ ಅವುಗಳ ರೆಕ್ಕೆಯ ತುದಿ, ನೀರನ್ನು ಸ್ಪರ್ಶಿಸುವುದೂ ಉಂಟು. ತೆಂಗಿನ ಮರಗಳ ನೆರಳಿನಲ್ಲಿ, ಎಳೆ ಬಿಸಿಲು ಬಿದ್ದಿರುವಾಗ, ಅವು ತಮ್ಮ ಪಡಿನೆಳಲು ನೋಡುತ್ತ ತಂಡತಂಡವಾಗಿ ಹಾರುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಮುಂಜಾವಿನಲ್ಲಿ ಅವು ಪೂರ್ವದಿಕ್ಕಿಗೆ ಹಾರಿದರೆ, ಸುರ್ಯಾಸ್ತದ ನಂತರ ಸರಿಯಾಗಿ ವಿರುದ್ಧ ದಿಕ್ಕಿಗೆ ಶಿಸ್ತಿನಿಂದ ಹಾರುವವು. ಅವು ಎಲ್ಲಿಂದ ಬರುತ್ತವೆ? ಎಲ್ಲಿಗೆ ಹೋಗುತ್ತವೆ? ಎಂದು ಸ್ಥಳೀಯರಿಗಾರಿಗೂ ತಿಳಿಯದು. ಶುಭ್ರ ಬಿಳಿಯಾಗಿರುವವು, ಆದ್ದರಿಂದ ಅವು ಬೆಳ್ಳಕ್ಕಿ. ಇದಿಷ್ಟು ಬಿಟ್ಟರೆ, ಬೇರೇನೂ ಯಾರೂ ಅರಿಯರು.

ಅವೆಲ್ಲ ಇರುಳನ್ನು ಎಲ್ಲಿ ಕಳೆಯುತ್ತಿರಬಹುದು? ಎಂದು ಹುಡುಕುತ್ತ ಹೊರಟಾಗ ಸಣ್ಣದೊಂದು ದ್ವೀಪ ಗುಟ್ಟನ್ನು ಹೊರಗೆಡಹಿತು. 'ಮೋಟೆ' ಎಂಬುದು ಅದರ ಹೆಸರು. ಹೆಚ್ಚಾಗಿ ಕ್ರಿಶ್ಚಿಯನ್ನರೇ ವಾಸಿಸುವುದರಿಂದ, ಸಣ್ಣ ಚರ್ಚೊಂದು ಅಲ್ಲಿದೆ. ಅದನ್ನು ಬಿಟ್ಟರೆ ಮಿಕ್ಕವೆಲ್ಲ ಚಿಕ್ಕಚಿಕ್ಕ ಗುಡಿಸಲುಗಳೇ. ಶಾಂತವಾದ ಪರಿಸರ, ಸುತ್ತೆಲ್ಲ ನೀರಿನ ಸಂರಕ್ಷಣೆ ಇದ್ದುದರಿಂದ, ತೆಂಗಿನ ಗರಿಗಳ ಮೇಲೆ ರಾತ್ರಿಯೆಲ್ಲ ಈ ಹಕ್ಕಿಗಳು ವಿರಮಿಸುತ್ತವೆ. ದೂರದ ಪ್ರವಾಸ ಮುಗಿಸಿ ಬಂದರೂ, ಅವುಗಳಿಗೆ ದಣಿವೆಂಬುದು ಇಲ್ಲ. ಎತ್ತರದ ಮರಕ್ಕಾಗಿ ಕಚ್ಚಾಟ–ಚೀರಾಟ ಇದ್ದೇ ಇದೆ. ಒಮ್ಮೆಲೇ ನಡುರಾತ್ರಿಯಲ್ಲಿಯೂ ಕೆಟ್ಟ ಕನಸು ಕಂಡಂತೆ, ಅಲ್ಲಿಯೇ ಸುತ್ತಮುತ್ತ ಹಾರಿ, ನಿದ್ರೆಯನ್ನು ಮುಂದುವರಿಸುವವು. ಸ್ವಲ್ಪವಾದರೂ ಗದ್ದಲ, ಗಲಾಟೆಗಳಾದರೆ, ಅವು ಹೌಹಾರುವವು. ಒಮ್ಮೆ ಹಬ್ಬದ 'ಸಾಯಬೀಣ' (ಯೇಸುವಿನ ತಾಯಿ ಮೇರಿ) ವಿಗ್ರಹ ಮೋಟೆಯ ಸಾಹುಕಾರರ ಮನೆಗೆ ಆಗಮಿಸಿದ್ದರಿಂದ ವಾದ್ಯ ಮೇಳ, ಗರ್ನಾಲುಗಳ ಸ್ವಾಗತ ಕೋರಲಾಯಿತು. ಇದರಿಂದ ಕಂಗಾಲಾದ ಬೆಳ್ಳಕ್ಕಿಗಳು ಆ ತಾಣವನ್ನೇ ಬಿಟ್ಟು ಶರಾವತಿ ಬಲದಂಡೆಯ

'ತಾರಿವಾಗಿಲಿಗೆ' ಬಂದು ವಾಸಿಸಹತ್ತಿದವು. ಈ ಹೊಸ ಜಾಗದಲ್ಲಿ ನೆಮ್ಮದಿ ಸಿಗದಂತಾಯಿತು. ಎರಡು ವಾರಗಳ ನಂತರ ತಮ್ಮ ಹಿಂದಿನ ಆಶ್ರಯವೇ ಸುರಕ್ಷಿತ ಸ್ಥಳವೆಂದು ಮನವರಿಕೆಯಾಗಿ ಅಲ್ಲಿಗೇ ಹಿಂದಿರುಗಿದವು.

ಎಲ್ಲಿರುತ್ತವೆ?

ಅವುಗಳು ದಿನಪಿಡೀ ಎಲ್ಲಿರುತ್ತವೆ? ಎಂದು ಅರಿಯುವುದು ಅಷ್ಟೊಂದು ಸುಲಭವಾಗಿರಲಿಲ್ಲ. ಒಮ್ಮೆ ವೊಲಕೋಡಿನಲ್ಲಿ ಬತ್ತದ ಗದ್ದೆಗಳನ್ನು ದಾಟಿ ಹೋಗುತ್ತಿರುವಾಗ, ಪ್ರತಿ ಹೊಲದಲ್ಲಿಯೂ ಬಿಳಿ ನೂಲನ್ನು ಚಕ್ರವ್ಯೂಹದಂತೆ ಗೋಲಾಕಾರವಾಗಿ ಹೆಣೆದು ನಿಲ್ಲಿಸಿದ್ದು ಗೋಚರಿಸಿತು. ಹಾಗೆ ಮಾಡಿದ ಉದ್ದೇಶ ವಿಚಾರಿಸಿದಾಗ, ಬಡರೈತನು, "ಹಾಳಾದ ಬೆಳ್ಳಕ್ಕಿ ಬತ್ತದ ತೆನೆಗಳನ್ನು ಹಾಳು ಮಾಡಿ ಹಾಕುತ್ತಾ" ಎಂದ. ಕಾಳುಗಳನ್ನು ತಿನ್ನುತ್ತಿರಬೇಕು ಎಂದುಕೊಂಡೆ. ರೈತನಿಗೆ ಅವು ಒಂದೆರಡು ತೆನೆ ಕಾಳು ತಿಂದರೆ ಆಕ್ಷೇಪವಿಲ್ಲವಂತೆ. ಆದರೆ ಭತ್ತಕ್ಕಾಗುವ ಕೀಟಗಳ ಬೇಟೆಯಾಡಲು ಅವು ಬಂದು ಕೂಡ್ರುತ್ತವಾದ್ದರಿಂದ ಕಣಸಗಳೆಲ್ಲಾ ನೀರಿನ ಪಾಲಾಗಿ ಕೊಳೆತು ಹೋಗುವವಂತೆ. ಈ ರೀತಿ ನೂಲು ಪೋಣಿಸಿದರೆ, ತಾನು ಸಿಕ್ಕಿ ಹಾಕಿಕೊಳ್ಳುವ ಭಯವಿರುವದರಿಂದ ಅತ್ತ ಸುಳಿಯುವದೇ ಇಲ್ಲವಂತೆ. ಇದು ಕೀಟಭಕ್ಷಕ 'ಗೋಬಕ' ಇರಬಹುದೆಂಬ ಅನುಮಾನ ಬಂದಿತು. ಹೈಗುಂದಕ್ಕೆ ಹೋದಾಗ ಅದು ಖಚಿತವಾಯಿತು. ಬತ್ತದ ಕೊಯ್ಲು ಮುಗಿಸಿದ ಗದ್ದೆಗಳಲ್ಲಿ ದನಕರುಗಳನ್ನು ಮೇಯಲು ಬಿಟ್ಟಿದ್ದರು. ಅವುಗಳ ಚಲನವಲನಗಳಿಂದ ಮೇಲಕ್ಕೇಳುವ ಹುಳ ಹುಪ್ಪಡಿಗಳ ಬೇಟೆಯಾಡಲು ದಂಡಿನ ಹಿಂದೆ, ಹಿಂದೆ ಈ ಬೆಳ್ಳಕ್ಕಿಗಳು ಹೊರಟಿದ್ದವು. ಉಪ್ಪೋಣಿ ಹಳ್ಳಿಯಲ್ಲಿ ಕೊಯ್ಲಾದ ಕಬ್ಬಿನ ಗದ್ದೆಗಳಿಗೆ ಬೆಂಕಿಯಿಟ್ಟಾಗ, ಜ್ವಾಲೆಗೆ ಮೇಲೇಳುವ ಕೀಟಗಳನ್ನು ಭಕ್ಷಿಸುವದಕ್ಕಾಗಿ ಈ ಹಕ್ಕಿಗಳ ತಂಡ ಹಾಜರಾದುದನ್ನು ನೋಡಿ ವಿಸ್ಮಯವಾಯಿತು. ಶರಾವತಿ ನದಿಗುಂಟ ಇರುವ ಎಲ್ಲ ಹಳ್ಳಿಗಳಲ್ಲಿಯೂ ಈ ಬಕಗಳು ಭೇಟಿ ಕೊಡುವದನ್ನು ಕಾಲಾಂತರದಲ್ಲಿ ನೋಡುವಂತಾಯಿತು.

ದನಕರುಗಳನ್ನಷ್ಟೇ ಅಲ್ಲದೇ ಕಾಡುಮೃಗಗಳನ್ನೂ ಬೆಳ್ಳಕ್ಕಿಗಳು ಸದಾ ಹಿಂಬಾಲಿಸುತ್ತಿರುತ್ತವೆ. ಬಂಡೀಪುರದಲ್ಲಿ ಜಿಗರೆ ಹಿಂಡಿನೊಂದಿಗಿದ್ದರೆ, ನಾಗರ ಹೊಳೆಯಲ್ಲಿ ಕಾಡಾನೆಗಳ ಒಡನಾಟ ಮಾಡುತ್ತವೆ. ಶಿರೋಭಾಗದಲ್ಲಿ ಆರೂಢವಾದಾಗ ಸೊಂಡಿಲಿನ ಭಯ. ಹಿಂಭಾಗದಲ್ಲಿ ಕುಳಿತರೆ ಸದಾ ಕಾಲ ಝಾಡಿಸುತ್ತಿರುವ ಬಾಲದ ಭಯ. ಆದ್ದರಿಂದ ನಟ್ಟ ನಡುವೆ ಬೆನ್ನಿನ ಮೇಲೆ ಕುಳಿತು ಜಂಬೂಸವಾರಿ ಮಾಡುತ್ತಿರುವ ದೃಶ್ಯ ಅತ್ಯಂತ ಕುತೂಹಲಕಾರಿ. ಎಷ್ಟೋಬಾರಿ ಗಜರಾಜನ ಕಿವಿ, ಗುದದ್ವಾರಗಳಿಂದಲೂ ಕೀಟಗಳನ್ನು ಮೆತ್ತಗೆ ಆರಿಸಿ ಭಕ್ಷಿಸುತ್ತಿರುವದರಿಂದ ಅವಕ್ಕೆ ಎಷ್ಟೋ ನೆಮ್ಮದಿ ಅನಿಸುತ್ತಿರಬೇಕು. ಕಾಡಾನೆ, ಗಾಯ ಮಾಡಿಕೊಂಡಾಗ ಕೀವು ಆಗಿ ಅದರಲ್ಲಿ ಹುಳು ಬೀಳುವುದು ತೀರ ಸಾಮಾನ್ಯ. ಅಂಥ ದಿನಗಳಲ್ಲಿ ಬೆಳ್ಳಕ್ಕಿ ಒಂದೊಂದಾಗಿ ಹುಳ ಆರಿಸಿ ಭಕ್ಷಿಸುವಾಗ ಗಜರಾಜನು ಕೊಡುವ ಸಹಕಾರ ಅಪೂರ್ವವಾದದ್ದು. ಮೂರುನಾಲ್ಕು ಟನ್ ಭಾರದ ದೊಡ್ಡಮೃಗಗಳೂ ಈ ಬೆಳ್ಳಕ್ಕಿಯ ಸುಖಕರ ಸಹವಾಸವನ್ನು



ಕೋರುತ್ತವೆ. ಮಾನವನು ಈ ಮುಂಗೋಪಿ ಮೃಗಕ್ಕೆ ದೂರದಿಂದಲೇ ನಮಸ್ಕಾರ ಅನ್ನುವಷ್ಟು ಹೆದರಿದರೆ ಈ ಪುಟ್ಟ ಹಕ್ಕಿ ಅದರ ಶಿರೋಭಾಗದಲ್ಲಿಯೇ ಕುಳಿತು ಕಾಡೆಲ್ಲಾ ಪುಕ್ಕಟೆಯಾಗಿ ಸವಾರಿ ಮಾಡುತ್ತಿರುತ್ತದೆ! ಎಲ್ಲಿಯಾದರೂ ಕೀಟ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಕಂಡರೆ ಕೂಡಲೇ ನೆಲಕ್ಕೆ ಜಿಗಿದು ಒಂದೊಂದಾಗಿ ಉದರಕ್ಕೆ ಕಳಿಸಿ ಪುನಃ ತನ್ನ ಭೀಮಕಾಯ ಸ್ನೇಹಿತನ ಸವಾರಿ ಕೈಕೊಳ್ಳುತ್ತದೆ.

ಒಂದೂವರೆ ಅಡಿ ನಿಲುವಿನ ಈ ಹಕ್ಕಿಯ ತೂಕ ಒಂದು ಕಿಲೋ ಗ್ರಾಮಿನಷ್ಟು ಮಾತ್ರ. ಹಿಮದಂತೆ ಬಿಳಿಯ ಮೈಬಣ್ಣ ಮತ್ತು ಹಗುರವಾದ ಅಂಗಾಂಗಗಳಿಂದ ಬ್ಯಾಲೆ ನೃತ್ಯಶಾಲೆಯಂತೆ ಭಾಸವಾಗುತ್ತದೆ. ತಿಳಿ ಹಳದಿ ಚುಂಚು, ಕಾಲು, ಪಾದಗಳು ಒಂದೇ ಬಣ್ಣದವು. ಇದೇ ಜಾತಿಗೆ ಸೇರಿದ ಬೇರೆ ಹಕ್ಕಿಗಳಲ್ಲಿ ಕಾಲಿನ ಬಣ್ಣ ಮತ್ತು ಪಾದದ ಬಣ್ಣಗಳು ಬೇರೆ ಇರುತ್ತವೆ. ಪ್ರೌಢಾವಸ್ಥೆ ತಲುಪಿ ಬೆಳ್ಳಕ್ಕಿಗಳ ಕಾಲು ಕಪ್ಪಗೆ ಇದ್ದರೆ, ನಂತರ ಅವು ಹಳದಿ ವರ್ಣಕ್ಕೆ ಬದಲಾಗುತ್ತವೆ. ಸಂತೋನೋತ್ಪತ್ತಿ ಕಾಲದಲ್ಲಿ ಶಿರ, ಎದೆ ಮತ್ತು ಹಿಂಭಾಗದಲ್ಲಿದ್ದ ಗರಿಗಳು ತಿಳಿನಾರಿಪುಡಿ ಬಣ್ಣಕ್ಕೆ ಬದಲಾಗುತ್ತವೆ. ಚುಂಚು ಕೆಂಪು ಬಣ್ಣ ತಳೆಯುತ್ತದೆ. ಕಣ್ಣು ಮತ್ತು ಕಾಲುಗಳು ಹಳದಿ ಮಿಶ್ರಿತ ಗುಲಾಬಿ ವರ್ಣ ತಾಳುತ್ತವೆ. ಅಂತೆಯೇ ವಿವಿಧ ಋತುಗಳಲ್ಲಿಯ ಈ ಪಕ್ಷಿಯ ಮೈ ಬಣ್ಣದಿಂದಾಗಿ ಇವು ಬೇರೆ ಬೇರೆ ಹಕ್ಕಿಗಳೆಂದು ಭಾವಿಸುವುದು ಸಾಧ್ಯವಿದೆ. ಕಾಮಬಾಧೆಯಿಂದ ಮುಕ್ತಿ ಪಡೆದ ನಂತರ ಇವುಗಳ ಕಣ್ಣು, ಕಾಲು, ಚುಂಚು, ಶಿರ, ಎದೆ, ಹಿಂಭಾಗಗಳ ಬಣ್ಣ ಒಂದೊಂದೇ ಮಾಯವಾಗಿ, ತಿರುಗಿ ಹೆಸರಿಗೆ ತಕ್ಕಂತೆ ಬೆಳ್ಳಕ್ಕಿಯಾಗಿ ಮಾರ್ಪಾಡಾಗುತ್ತವೆ.



ಮದುಮಗನ ಪೋಷಾಕು ಧರಿಸಿದ ಗಂಡಿನ ರೀತಿ–ನೀತಿಗಳು ಬದಲಾಗಿಬಿಡುತ್ತವೆ. ಜಾರುವ ಎತ್ತರದ ತೆಂಗಿನ ಗರಿಗಳನ್ನು ತ್ಯಜಿಸಿ, ಜವಳು ಭೂಮಿಯಲ್ಲಿರುವ ಅಲ್ಲವೇ ಕೆಸರಿನಿಂದ ಸುತ್ತುವರಿದ ಕಿರುಮರದಲ್ಲಿ ತನ್ನ ಭಾವಿ ಸಂಸಾರಕ್ಕಾಗಿ ಒಂದು ಸ್ಥಳವನ್ನು ಕಾಯ್ದಿರಿಸಿಕೊಳ್ಳುತ್ತವೆ. ಬೇರೆ ಗಂಡುಗಳು ಹತ್ತಿರ ಸುಳಿದರೂ, ಗರಿಗಳನ್ನು ಕೆದರಿ, ಕೊಕ್ಕಿನಿಂದ ತಿವಿದು, ಓಡಿಸಿದ ಹೊರತು ಅದಕ್ಕೆ ನೆಮ್ಮದಿಯಿಲ್ಲ. ಹೆಣ್ಣು ಹಕ್ಕಿಗಳ ತಂಡ ಬರುತ್ತಿದ್ದಂತೆ, ಮದುಮಗನು ತನ್ನ ಗರಿಗಳನ್ನು ಕೊಕ್ಕಿನಿಂದ ಸರಿಯಾಗಿ ಹರಡಿಕೊಂಡು ಸೆಟೆದು ನಿಂತು ಕೇಕೆ ಹಾಕಿ ಕಾಮದ ಕರೆ ನೀಡುವನು. ಈ ಕರೆಗೆ ಕಿವಿಗೊಟ್ಟು ವರನನ್ನು ಒಪ್ಪಿಕೊಂಡು ಜೋಡಿಯಾಗಿ ಬಂದವಳ ಸಂಪೂರ್ಣ ಸಂರಕ್ಷಣೆ ಗಂಡಿನದು. ನೆರೆಹೊರೆಯವರು ಸ್ವಲ್ಪವಾದರೂ ಕಣ್ಣು ಹಾಯಿಸಿದರೆ ಸಾಕು, ಅವರನ್ನು ಗದರಿಸಿಕೊಂಡು, "ನನ್ನ ಜಾಡಿಗೆ ನೀನು ಬರಬ್ಯಾ" ಎಂದು ಬುದ್ಧಿ ಕಲಿಸಿಯೇ ಹಿಂದಿರುಗುವದು. ಗಂಡು–ಹೆಣ್ಣು ಮೈಗಂಟಿಕೊಂಡು ಬೆಚ್ಚಗೆ ಕುಳಿತಿರುತ್ತವೆ. ಆಗೊಮ್ಮೆ ಈಗೊಮ್ಮೆ ಚುಂಚಿನಿಂದ ಮುತ್ತಿಡುತ್ತವೆ. ಇಲ್ಲವೇ ಗೋಣಿನಿಂದ ಬಿಗಿದಪ್ಪುತ್ತವೆ. ಒಂದೆರಡು ದಿನ ಹೀಗೆಯೇ ಕಳೆದು ನಂತರ ಕೂಡುತ್ತವೆ. ಅಲ್ಲಿಂದ ಗೃಹನಿರ್ಮಾಣ ಕಾರ್ಯ ಪ್ರಾರಂಭ.

ಕಸ–ಕಡ್ಡಿಗಳ ಗೂಡು

ಬೆಳ್ಳಕ್ಕಿಗೆ ಬಂಗಲೆ, ಮಹಲುಗಳಲ್ಲಿ ವಿಶ್ವಾಸವಿಲ್ಲ. ಅಂತೆಯೇ ನದಿಯ ಅಕ್ಕ–ಪಕ್ಕಗಳಲ್ಲಿ ಸುಲಭವಾಗಿ ಸಿಗುವ ಹುಲ್ಲು ಕಸ–ಕಡ್ಡಿಗಳಿಂದಲೇ ತೀರ ಸುಲಭವಾದ ಗೂಡನ್ನು ಕಟ್ಟುವದು. ಕಾಡು ಇಲ್ಲವೇ ಬಯಲು ಪ್ರದೇಶಗಳಲ್ಲಿ ಒಣ ರೆಂಬೆಗಳನ್ನೇ ಇದಕ್ಕಾಗಿ ಬಳಸುವದು. ಇವು ಸಂಘ ಜೀವಿಗಳಾದ್ದರಿಂದ ಒಂದೇ ಮರದಲ್ಲಿ ನೂರಾರು ಹಕ್ಕಿಗಳು ಗೂಡು ಕಟ್ಟುವವು. ಕೆಲವೊಮ್ಮೆ ಎರಡು ಗೂಡುಗಳ ನಡುವೆ ಒಂದು ಅಂಗುಲವೂ ಸ್ಥಳವಿರುವುದಿಲ್ಲ. ಆದರೆ ಒಂದು ಹಕ್ಕಿ ಇನ್ನೊಂದರ ಗೂಡಿನಲ್ಲಿ ತಪ್ಪಿ ಕೂಡಾ ಹೆಜ್ಜೆ ಇಟ್ಟರೆ ಕುಸ್ತಿ, ಕಾದಾಟಗಳಿಗೆ ಆಹ್ವಾನ ನೀಡಿದಂತೆಯೇ. ಅಂತೆಯೇ ಗೂಡಿನೊಳಗೆ, ಹೊರಕ್ಕೆ ಹಾರಿ ಹೋಗುವಾಗಲೂ, ಮೊದಲೇ ಗೊತ್ತುಪಡಿಸಿ, ಕಾಲ್ಪನಿಕ ಮಾರ್ಗವನ್ನೇ ಅನುಸರಿಸಬೇಕು. ವೈರಿ ರಾಜ್ಯಗಳ ವಾಯುಪಡೆಗಳಂತೆ ಕಟ್ಟುನಿಟ್ಟನ್ನು ಅವು ಪಾಲಿಸಬೇಕಾಗುತ್ತದೆ. ಗೂಡಿನ ಕೆಲಸ ಮುಗಿದ ನಂತರ, ಪಕ್ಷಿಯ ಪ್ರಸೂತಿ, ರಾಹುಕಾಲ, ಕೇತುಕಾಲ ಎಂಬ ಗೊಡವೆಗೆ ಹೋಗದೇ ಪ್ರತಿ ನಿಮಿಷವೂ ಶುಭ ಮುಹೂರ್ತವೆಂದು ಪರಿಗಣಿಸುತ್ತದೆ. ಹೆಣ್ಣು ಬೆಳ್ಳಕ್ಕಿ ನಾಲ್ಕರಿಂದ ಐದು ತಿಳಿ ನೀಲಿ ಮೊಟ್ಟೆಗಳನ್ನು ಇಡುತ್ತದೆ. ಸರದಿಯಂತೆ ಒಂದು ಹಕ್ಕಿ ಕಾವಲು ಇರುತ್ತದೆ. ಇಂಥ ದಿನಗಳಲ್ಲಿ ಆಹಾರ ಶೋಧನೆಗಾಗಿ, ದೂರದ ಊರಿಗೆ ಪ್ರಯಾಣ ಬೆಳೆಸದೇ ಸನಿಹದಲ್ಲಿ ಹುಳ, ಹುಪ್ಪಟೆಗಳನ್ನು ಹಿಡಿಯುತ್ತದೆ. ಅವು ಸಿಗದಿದ್ದರೆ ಮುಟ್ಟೆ ಮೀನು, ಕಪ್ಪೆ ಮರಿಗಳ ಶಿಕಾರಿ ನಡೆಸುವದು.

ಎರಡು ಮೂರು ವಾರಗಳ ನಂತರ ಹೊರಬಂದ ಮರಿಗಳನ್ನು ಕಾಣಬಹುದು. ಅಸಹ್ಯವಾದ ಉದ್ದ ಚುಂಚು, ದೊಡ್ಡ ಕಣ್ಣು, ಮೈ ತುಂಬ ಮುಳ್ಳುಗಳನ್ನು ಹೋಲುವ ಬೂದು ಬಣ್ಣದ ಗರಿಗಳು. ಆಹಾರಕ್ಕಾಗಿ ತಂದೆ–ತಾಯಿಗಳನ್ನು ಪೀಡಿಸುವದು ಅವುಗಳ

ಜೀವನದ ಏಕಮೇವ ಉದ್ದೇಶವೆಂಬಂತೆ ವರ್ತಿಸುವವು. ಪಾಲಕರಂತೂ ಕೀಟಗಳನ್ನು ಕಲಹಾಕಿ. ಮರಿಗಳಿಗೆ ಹೊಟ್ಟೆ ತುಂಬಿಸುವುದರಲ್ಲಿ ಸುಸ್ತು ಹೊಡೆಯುವವು. ಅರೆ ಜೀರ್ಣಿಸಿದ ಕೀಟ ಆಹಾರದ ಗುಟುಕು ಕೊಡುವಾಗ ಈ ಹಿಂದೆ ಯಾವ ಮರಿಗೆ ಕೊಡಲಾಗಿತ್ತು ಎಂದು ಅರಿಯದಾದಾಗ, ಪ್ರತಿ ಮರಿಯ ಗಂಟಲಲ್ಲಿ ಆಹಾರವಿದೆಯೇ ಎಂದು ತಾಯಿ ತನ್ನ ಚುಂಚು ಹಾಕಿ ಪರೀಕ್ಷಿಸುವದು. ಅಪಾದರೋ ಬಕಾಸುರನಂತೆ ತಿಂದು ದೈತ್ಯನಂತೆ ಬೆಳೆಯುವವು. ರೆಕ್ಕೆಗಳು ಸ್ವಲ್ಪ ಬಲಿತವೆಂದರೆ ಗೂಡುಬಿಟ್ಟು ಬೇರೆ ಬೇರೆ ರೆಂಬೆಗಳಿಗೆ ತತ್ತಪತ್ತರ ಕಾಲುನಡಿಗೆಯಿಂದ ಹೋಗಿ. ಆಹಾರ ಹೊತ್ತು ತರುವ ಪಾಲಕರಿಗಾಗಿ ಕಾದು ಕೂಡ್ರುವವು. ಎಷ್ಟೋ ಸಲ ಇಂಥ ಮರಿಗಳು ಉರುಳಿ ನೆಲಕ್ಕೋ ನೀರಿಗೋ ಬಿದ್ದು ಸಾಯುವದೂ ಉಂಟು. ಹಾರಲು ಕಲಿಯುವ ಮಕ್ಕಳನ್ನು ತಾಯಿಯ ವಶಕ್ಕೆ ಬಿಟ್ಟು ಗಂಡು ಬೇರೊಬ್ಬಳೊಂದಿಗೆ ಹೊಸ ಸಂಸಾರ ಹೂಡುವುದೂ ಉಂಟು. ಇಂಥ ಪ್ರಸಂಗಗಳಲ್ಲಿ ಹೆಣ್ಣು ಹಕ್ಕಿನ ನ್ಯಾಯಕ್ಕಾಗಿ ಹೊಡೆದಾಡಲು ಹೋಗದೇ ತನ್ನ ಪಾಡಿಗೆ ತಾನು ಇದ್ದು ಬಿಡುತ್ತದೆ.

ಈ ಹಕ್ಕಿ ಪ್ರಪಂಚ ಬೇರೆಲ್ಲ ರಾಷ್ಟ್ರಗಳಲ್ಲಿ ಇದ್ದರೂ ಅಮೆರಿಕಾದಲ್ಲಿ ಇರಲಿಲ್ಲ. ಅಂತೆಯೇ ಆ ರಾಷ್ಟ್ರದ ಪಕ್ಷಿ ತಜ್ಞರು ಅವುಗಳ ಅಭ್ಯಾಸಕ್ಕಾಗಿ ಸ್ಪೇನಿಗೋ, ಪೋರ್ತುಗಾಲಕ್ಕೋ ಹೋಗುವುದು ವಾಡಿಕೆಯಾಗಿತ್ತು. ಒಮ್ಮೆ ಹೀಗೆ ನಾಲ್ಕು ಸಾವಿರ ಎಂಟು ನೂರು ಕಿಲೋಮೀಟರ್ ದೂರ ಹೋಗಿ, ಅಪಾರ ವೇಳೆ, ಹಣ ಖರ್ಚು ಮಾಡಿ, ಸ್ವದೇಶಕ್ಕೆ ಹಿಂದಿರುಗಿದಾಗ, ಈ ಬೆಳ್ಳಕ್ಕಿ ಅವರ ದೇಶಕ್ಕೆ ಬಂದು ತಳವೂರಿತು! ಇವುಗಳು ಮಾನವನು ತಂದು ಬಿಟ್ಟಿದ್ದವಾಗಿರದೇ ತಮ್ಮ ರೆಕ್ಕೆಯ ಬಲದಿಂದ ಅನುಕೂಲ ಗಾಳಿ ಬೀಸುತ್ತಿದ್ದಾಗ, ಅಟ್ಲಾಂಟಿಕ್ ಮಹಾಸಾಗರ ದಾಟಿ, ಆಫ್ರಿಕಾ ಖಂಡದಿಂದ, ದಕ್ಷಿಣ ಅಮೆರಿಕ ತಲುಪಿರಬೇಕು. ಅಲ್ಲಿಂದ ತಮ್ಮ ಸಂತಾನಾಭಿವೃದ್ಧಿ ಆದಂತೆ ಉತ್ತರ ಅಮೆರಿಕೆಗೂ ಹೋಗಿರಬೇಕು. ಅಂತೂ ಕ್ರಿ.ಶ. 1952ರಲ್ಲಿ ಈ ಬೆಳ್ಳಕ್ಕಿ ಉತ್ತರ ಅಮೆರಿಕೆಯಲ್ಲಿ ಕಂಡಾಗ ಅಲ್ಲಿಯ ಪಕ್ಷಿ-ಪ್ರೇಮಿಗಳ ಸಂತೋಷಕ್ಕೆ ಕೊನೆಮೊದಲಿರಲಿಲ್ಲ. ಬಸ್ಸು, ರೈಲು, ವಿಮಾನಗಳಲ್ಲಿ ಬಂದು, ಠಾಣ್ಯ ಹಾಕಿ, ದೂರದರ್ಶಕದಲ್ಲಿ ದರ್ಶನಲಾಭ ಪಡೆದು, ಕ್ಯಾಮರಾದಿಂದ ಕ್ಲಿಕ್ಕಿಸಿ ಆನಂದಿಸಿದರು. ಎರಡೇ ದಶಕಗಳಲ್ಲಿ ಈ ಹಕ್ಕಿಗಳು ಆ ಖಂಡವನ್ನೆಲ್ಲ ತಮ್ಮದನ್ನಾಗಿ ಮಾಡಿಕೊಂಡಿವೆ., ಇದರಿಂದಾಗಿ ದನಕರುಗಳಿಲ್ಲದ ಧ್ರುವಪ್ರದೇಶ ಒಂದು ಬಿಟ್ಟರೆ ಇವು ವಿಶ್ವವ್ಯಾಪಿಯಾಗಿಬಿಟ್ಟಿವೆ.

ಉಳಿದ ಬೆಳ್ಳಕ್ಕಿಗಳಿಂದ 'ಗೋಬಕ'ಗಳನ್ನು ಪ್ರತ್ಯೇಕಿಸುವದು ತೊಂದರೆದಾಯಕವಾಗಿರುವಂತೆ ಅವನ್ನು ಪ್ರತ್ಯೇಕ ಹೆಸರಿನಿಂದ ಗುರುತಿಸುವದೂ ಅಷ್ಟೇ ಬಿಗುವಾದ ಕೆಲಸ. ಜನಸಾಮಾನ್ಯರು ಬೆಳ್ಳಕ್ಕಿ ಎಂದರೆ, ಹಕ್ಕಿಗಳ ಬಗ್ಗೆ ಜ್ಞಾನವಿದ್ದವರು, 'ಹಳದಿ ಚುಂಚಿನ ಬೆಳ್ಳಕ್ಕಿ' ಎಂದು ಗುರುತಿಸುತ್ತಾರೆ. ಇದು ಸದಾಕಾಲ ದನಕರುಗಳ ಒಡನಾಟ ಮಾಡುವುದರಿಂದ ಅಮೆರಿಕನ್ನರು 'ಹಸು-ಬೆಳ್ಳಕ್ಕಿ' ಗೋ-ಬಕ (ಕೆಟ್ಲ್-ಇಗ್ರೆಟ್) ಎಂದು ಕರೆಯುತ್ತಾರೆ. ಅದೇ ಯೂರೋಪಿಯನ್ನರು ಅದರ ಸಂತಾನೋತ್ಪತ್ತಿ ಕಾಲದ ವರ್ಣ ವಿನ್ಯಾಸದನ್ನು ಆಧರಿಸಿ 'ಅರಿಶಿನ, ಕೊಕ್ಕಿನ ಕಬ್ಬಾರೆ' (ಬಫ್ ಬೀಕ್ಡ್











ಹೆರಾನ್) ಎಂದು ಗುರುತಿಸುತ್ತಾರೆ. ಇದು ಇರುಳು ಕಬ್ಬಾರೆಯ ಹತ್ತಿರದ ಸಂಬಂಧಿ. ವಿಜ್ಞಾನಿಗಳು ಈ ಹಕ್ಕಿಯನ್ನು ಬುಬುಲುಕಸ್ ಐಬಿಸ್-ಕೊರೆಮಂಡಲಾ ಎಂದು ಅಂತರಾಷ್ಟ್ರೀಯ ನಾಮಕರಣ ಮಾಡಿದ್ದಾರೆ. ಯೂರೋಪಿನಲ್ಲಿ ಕಾಣಸಿಗುವ ಬೆಳ್ಳಕ್ಕಿ ಭಾರತದಕ್ಕಿಂತ ಸ್ವಲ್ಪ ಬೇರೆಯಾಗಿದೆ.

ಕೀಟ ಭಕ್ಷಕ

ಕೃಷಿ ಧ್ವಂಸಕ ಕೀಟಗಳನ್ನು ನಿಯಂತ್ರಿಸುವುದರಲ್ಲಿ ಈ ಹಕ್ಕಿಗಳದ್ದು ಎತ್ತಿದ ಕೈ. ಚಿಟ್ಟೆ, ಗೆದ್ದಿಲು, ದುಂಬಿ, ಜೀರುಂಡೆ, ಮಿಡತೆ, ಸಸ್ಯ ತಗಣೆಗಳನ್ನೆಲ್ಲ ಇವು ಭಕ್ಷಿಸುತ್ತವೆ. ದಿನ ಒಂದರಲ್ಲಿಯೇ ನೂರರಿಂದ ಇನ್ನೂರು ಸಣ್ಣ ದೊಡ್ಡ ಕೀಟಗಳನ್ನು ಹಕ್ಕಿಯೊಂದು ಭಕ್ಷಿಸಬಲ್ಲದು. ಬೆಳೆಯುವ ಮರಿಯೊಂದು ಇದರ ಎರಡು ಪಟ್ಟು ಭಕ್ಷಿಸಬಲ್ಲದು. ಈ ಪಕ್ಷಿಗಳು ಒಂದು ತಿಂಗಳ ಅನ್ನ ಸತ್ಯಾಗ್ರಹ ಹೂಡಿದರೆ ಮಾನವನಿಗೆ ಆಗುವ ಹಾನಿ ದಶಕೋಟಿ ರೂಪಾಯಿಗಳಲ್ಲಿ ಎಣಿಸುವಷ್ಟು! ಅನಾದಿಕಾಲದಿಂದಲೂ ಬೆಳ್ಳಕ್ಕಿಗಳು ಮಾನವನಿಗೆ ಬಿಟ್ಟಿ ಸೇವೆ ಒದಗಿಸುತ್ತ ಬಂದಿವೆ. ಇಷ್ಟಾದರೂ ಮಾನವನಂಥ ಕೃತಘ್ನ ಪ್ರಾಣಿ ಇನ್ನಿರಲಾರದು. ಸ್ಪೇನ-ಪೋರ್ತುಗಾಲುಗಳಲ್ಲಿ ಬೆಳ್ಳಕ್ಕಿಗಳು ಇಡುವ ಮೊಟ್ಟೆಗಳನ್ನು ಕದ್ದೊಯ್ಯುವವರಿದ್ದಾರೆ. ಹೀಗಾದಾಗ ಅವುಗಳ ಬವಣೆ ಹೇಳತೀರದು. ಹೆಣ್ಣು ಇನ್ನೊಂದು ಮೊಟ್ಟೆ ಇಟ್ಟು ದಂಪತಿಗಳು ಅನ್ನ ನೀರು ಬಿಟ್ಟು ಕಾವಲು ಇಟ್ಟು ಒಂದೇ ಮರಿಯ ಸಂಗೋಪನ ಮಾಡಿ ಬೆಳೆಸುತ್ತವೆ. ಹೀಗಾಗಿ ಆ ದೇಶಗಳಲ್ಲಿ ಈ ಹಕ್ಕಿ ಮೊಟ್ಟೆಯಿಡುವ ಕಾಲದಲ್ಲಿ ಕಾವಲುಗಾರರನ್ನು ನೇಮಿಸುತ್ತಾರೆ. ಅಮೆರಿಕನ್ನರಿಗೆ ಇಲ್ಲದ ಷೋಕಿ ಜಾಸ್ತಿ. ಗಂಡು-ಹೆಣ್ಣುಗಳ ಹ್ಯಾಟುಗಳಿಗೆ ಬೆಳ್ಳಕ್ಕಿಗಳ ವಿಶೀಷ್ಟವಾದ ಗರಿಗಳನ್ನು ಜೋಡಿಸಿ ಅಲಂಕರಿಸುವರು. ಈ ಗರಿಗಳು ಬೆಲೆಯುಳ್ಳವಾದ್ದರಿಂದ, ಕೊಲೆಗಡಕರ ಕೈಗೆ ಸಿಕ್ಕು ಹಿಮ ಬಣ್ಣದ ಬೆಳ್ಳಕ್ಕಿಗಳು ನಶಿಸಿ ಹೋಗುವ ಸ್ಥಿತಿಯೂ ಉತ್ಪನ್ನವಾಯಿತು. ಪಕ್ಷಿ ಪ್ರೇಮಿಗಳು, ಖಗ-ವಿಜ್ಞಾನಿಗಳು ಸರಕಾರದ ಮೇಲೆ ಒತ್ತಾಯ ಹೇರಿ ಅವುಗಳು ಸಂರಕ್ಷಿತ ಜೀವಿ, ಎಂದು ಕಾನೂನು ಮಾಡಿದರು. ಇದರಿಂದ ಅವು ತಿರುಗಿ ತಮ್ಮ ಸಂತಾನೋತ್ಪತ್ತಿಯಿಂದ ಮಾನವನ ಸಂಗಾತಿಯಾಗಿ ಬಾಳುವಂತಾಗಿದೆ. ಸುದೈವದಿಂದ ನಮ್ಮಲ್ಲಿ ಅವುಗಳ ಮೊಟ್ಟೆಗಳಿಗಾಗಿ, ಪುಕ್ಕಕ್ಕಾಗಿ ದುರಾಸೆಪಡುವವರು ಇನ್ನೂ ಇಲ್ಲ. ಮಾಂಸಕ್ಕಾಗಿ ಕೊಲ್ಲುವವರು ಕೆಲವರು ಇದ್ದರೂ ನೆರೆಹೊರೆಯುವರು ಬೆಳ್ಳಕ್ಕಿಗಳ ಕೊಲೆಯನ್ನು ತೀವ್ರವಾಗಿ ವಿರೋಧಿಸುವದರಿಂದ, ಅವು ಇನ್ನೂ ಈ ದೇಶದಲ್ಲಿ ಮಾನವನ ಸೇವೆ ಮಾಡುತ್ತ ಸುಖಿಯಾಗಿ ಬಾಳುತ್ತಿವೆ.

16. ಕಾಗೆಯ ಕಾಯಕ

ಬೇಡದ ಅತಿಥಿ ಬರುವ ಮುನ್ಸೂಚನೆ ಕೊಡುವ ಕಾಗೆ, ಮಾನವನ ಸ್ಥಾಯೀ ಅತಿಥಿಯಾಗಿ ಬದುಕಲು ಒಪ್ಪಲೇ ಇಲ್ಲ. ಆದರೆ ತನ್ನ ಆಡಳಿತಕ್ಕೆ ಒಳಗಾದ ಕ್ಷೇತ್ರದಲ್ಲಿ ನಡೆಯುವ ಸಕಲ ಚಟುವಟಿಕೆಗಳ ಆಳವಾದ ಅಭ್ಯಾಸವನ್ನು ಅದು ಮಾಡಿಕೊಂಡಿರುತ್ತದೆ. ಸೂರ್ಯನೊಂದಿಗೆ ಸ್ಪರ್ಧಿಸಿ ಎಚ್ಚರಗೊಂಡ ಕಾಕ ರಾಜ ತನ್ನ ವೇಳಾಪತ್ರಿಕೆಯ ಪ್ರಕಾರ ಹತ್ತಾರು ಕುಟುಂಬಗಳಿಂದ ತನ್ನ ನಾಶ್ತಾ ಸಂಪಾದಿಸುತ್ತಾನೆ. ಅತಿಯಾಗಿ ಹಸಿದಿದ್ದರೆ ಶಾಸ್ತ್ರಿಗಳ ಮನೆಯ ಮುಂದೆ, ರಸ್ತೆಯ ಮೂಲೆಯಲ್ಲಿ ಹರಡಿದ ತಂಗಳನ್ನಕ್ಕೆ ಬಾಯಿ ಹಾಕುತ್ತಾನೆ. ಅಷ್ಟರಲ್ಲಿ ಪಾಟೀಲರ ಭಕ್ರಿಯ ತುಣುಕು ಸಿಗಬಹುದೆಂದೆನಿಸಿದಾಗ ಅಲ್ಲಿ ಧಾವಿಸುತ್ತಾನೆ. ಗೌಡರ ರಾಗಿ ಮುದ್ದೆಗೆ ಅಷ್ಟಾಗಿ ಇಷ್ಟಪಡದ್ದರಿಂದ ಅಲ್ಲಿಯ ತನಕ ಹಾರಿಹೋಗಿ ದಿಕ್ಕು ಬದಲಿಸಿ, ಫರ್ನಾಂಡೀಸರಲ್ಲಿಯ ಟೋಸ್ಟ್‌ಗಾಗಿ ಓಡುತ್ತಾನೆ. ಶಾನುಭೋಗರ ಮನೆಯ ಪೂರಿಯ ತುಣುಕು ಅತಿ ಇಷ್ಟವಾದರೂ, ಅದನ್ನು ದೊರಕಿಸುವುದು ಕಷ್ಟ. ಮೊಮ್ಮಕ್ಕಳು ಮುಂಬಯಿಯಿಂದ ಬಂದು ಇಳಿದಾಗ ಮಾತ್ರ ಈ ಅಪರೂಪದ ಖಾದ್ಯ. ಪಂಡಿತರ ಇಡ್ಲಿ, ರೈತರ ಉಪ್ಪಿಟ್ಟು, ಕಾರ್ಮಿಕರ ಚುರಮುರಿಗಳಿಗೂ ಸ್ವಾಗತವುಂಟು.

ಜಾನಕಿ, ಭವಾನಿ, ಸಿದ್ದಮ್ಮ, ಭಾಗೀರತಿಯರೆಲ್ಲ ಮುಂದಗಮನೆಯರಾಗಿ ಹೊರಗೆಲಸಕ್ಕೆ ಹೊರಡುವುದನ್ನೇ ನಿರೀಕ್ಷಿಸುತ್ತ ಕಾಗೆ, ದೂರದಲ್ಲಿದ್ದು, ಪ್ರಾರಂಭವಾದ ಕಾರ್ಯಕಲಾಪಗಳನ್ನು ವೀಕ್ಷಿಸುತ್ತಿರುತ್ತದೆ. ಯಜಮಾನಿ, ಮೊದಲಿಗೆ ಅಡಿಗೆಪಾತ್ರೆ ಬೆಳಗಿಕೊಡೆಂದು ದಬಾಯಿಸಿದಾಗ, ಉಳಿದ ಆಹಾರದ ಕಣಗಳನ್ನು ಪಾತ್ರೆಗಳಿಂದಲೇ ಆರಿಸಹೋದಾಗ, ಕೆಲಸಗಾತಿ, ಒಡತಿ ಮೇಲಿನ ಸಿಟ್ಟನ್ನು 'ಇದರ ಮನೆ ಹಾಳಾಗ' ಎಂದು ಕಲ್ಲಿನೇಟಿನಿಂದ ಕಾಗೆಯ ಮೇಲೆ ತೀರಿಸಿಕೊಳ್ಳಲು ಯತ್ನಿಸಿದರೆ, ಅದು ಕಾಲಿಗೆ ಬುದ್ಧಿ ಹೇಳಬೇಕು. ಮುಸುರೆಯನ್ನು ತೆಂಗಿನ ಮರದ ಅಡಿಯಲ್ಲಿ ಸುರಿದಾಗ, ಅದನ್ನು, ಕಾಗೆ, ಇನ್ನಿತರ ಬಂಧುಗಳೊಡನೆ ಪಾಲುಗೊಳ್ಳಬೇಕಾಗಿದ್ದರಿಂದ, ಹೊಟ್ಟೆಗೆ ಸೇರುವುದು ತೀರ ಕಡಿಮೆ. ಬರೇ ಶಾಕಾಹಾರಿಯಂತೆ ಬಾಳುವದು ತಮ್ಮ ಜಾತಿಗೆ ಕಳಂಕ ತರುವ ಮಾತಲ್ಲವೇ? ಆದ್ದರಿಂದ ರಾತ್ರೆ ಹೊರದೀಪಕ್ಕೆ ಮುತ್ತಿಕೊಂಡ ಕೀಟಗಳನ್ನು ಬೆಳಗಿನ ನಸುಗತ್ತಲಲ್ಲಿ ಹೊಟ್ಟೆಗೆ ಸೇರಿಸುವುದು. ಇರುವೆ, ಗೆದ್ದಲರಾಣಿ, ಇರುಳಜಿಟ್ಟೆಗಳನ್ನು ಸ್ವಾಹಾಮಾಡುವುದು. ತಿಂಡಿಗೆ ಆಸೆಪಟ್ಟು ಬೋನಿಗೆ ಸಿಕ್ಕಬಿದ್ದ ಇಲಿ-ಹೆಗ್ಗಣಗಳು ಸತ್ತು ರಸ್ತೆಗೆ ಬಿದ್ದಾಗ ಕಾಗೆ ಪ್ರಾಮಾಣಿಕತೆಯಿಂದ ಅವಕ್ಕೆ ಮೋಕ್ಷ ತೋರಿಸುವುದು. ಸತ್ತ ಮಂಡೂಕ ರಾಜನ ಅವಶೇಷಗಳಲ್ಲಿ ತನ್ನ ಪಾಲನ್ನು ಪಡೆಯುವುದು. ಅಲ್ಲಿಂದ

ಮುಂದೆ ಮೀನು-ಮಟನ್ ಮಾರ್ಕೆಟ್‌ನತ್ತ ಹಾರುವುದು. ಅಲ್ಲಿ ಚೆಲ್ಲಿದ ಕಣ್ಣು-ಕರುಳುಗಳ ತಿರಸ್ಕೃತ ಭಾಗಗಳು ತನಗಿರಲಿ! ಎಂದು ಕಚ್ಚಿಕೊಂಡೇ ಹಾರುವುದು. ಟೊಂಗೆಯೊಂದರ ಮೇಲೆ ಪ್ರತಿಷ್ಠಾಪಿತವಾಗಿ ಮನದಣಿ ತಿಂದು, ಕೊಕ್ಕನ್ನು ಮರದ ತೊಗಟೆಗೆ ತಿಕ್ಕಿ ಶುಚಿ ಮಾಡಿತೆಂದರೆ ನಾಶ್ತಾ ಕೆಲಸ ಮುಗಿದಂತೆ. ಕಾಲಂಗುಲ ಹೊಟ್ಟೆ ಹೊರಕೊಳ್ಳಲು ಕಾಗೆ ಇಷ್ಟೊಂದು ಕಷ್ಟಪಡಬೇಕೇ? ಎಂದು ವಿಸ್ಮಯ ಪಡುವವರು ತಾಳ್ಮೆಯಿಂದ ಅವುಗಳ ಚಟುವಟಿಕೆಗಳನ್ನು ಅವಲೋಕಿಸಬೇಕು.

ಸೂರ್ಯ ನೆತ್ತಿಗೇರಿ ಬರುವವರೆಗೂ ಕಾಗೆ ತನ್ನ ಚಟುವಟಿಕೆಗಳತ್ತ ಲಕ್ಷ್ಯ ಹಾಕಲಾರಂಭಿಸುವುದು. ಗಟ್ಟಿ ಆಹಾರ ಹೊಟ್ಟೆ ಸೇರಿದಾಗ ಬಾಯಾರಿಕೆ. ಹತ್ತಿರದ ಮಡುವಿನ ಕೊಳಚೆ ನೀರನ್ನು ಕುಡಿಯಲೋ ಬೇಡವೋ ಎಂದು ಅನುಮಾನ ಪಡುತ್ತಿರುವಾಗ ಯಾರೋ ಪುಣ್ಯಾತ್ಮ ಸಾರ್ವಜನಿಕ ನಲ್ಲಿಯನ್ನು ತೆರೆದಿಟ್ಟು ಹೋಗಿದ್ದಾನೆ. ಇಲ್ಲಿಯೇ ಬಂದುಬಿಡು! ಎಂದು ಸಂಗಡಿಗನೊಬ್ಬ ಕೂಗಿ ಹೇಳಿದ್ದರಿಂದ ನಲ್ಲಿಯ ಮೇಲೆ ಪಾಟವಾಗಿ ಕುಳಿತು, ಗೋಣು ತಿರುವಿ, ಚುಂಚನ್ನು ಅಗಲಮಾಡಿ ತೊಟಕುತ್ತಿದ್ದ ಹನಿನೀರು ಬಾಯಲ್ಲಿ ಬೀಳುವಂತೆ ಎಚ್ಚರಿಕೆ ವಹಿಸಿತು. ನೀರಡಿಕೆ ನೀಗಿಸಿಕೊಂಡು ಯಾರಿಗೋ ಕೃತಜ್ಞತೆ ಸೂಚಿಸುವಂತೆ ಕರ್! ಕರ್‌ರ್! ಕರ್‌ರ್! ಎಂದು ಒದರಿ ಹಾರಿತು. ದೂರದ ಮಾವಿನಮರದತ್ತ ವೇಗವಾಗಿ ಹೋಗುತ್ತಿದ್ದಂತೆ ಹತ್ತಿರದ ಹಲಸಿನ ಮರದ ಪೊದೆಯಲ್ಲಿ ತನ್ನ ಕರಿ ಗೆಳತಿ ಒಂಟಿಯಾಗಿ ಕುಳಿತಿರುವುದು ಕಂಡಿತು. ವೇಗವನ್ನು ಕಡಿಮೆಮಾಡಿ ನಡು ಆಗಸದಲ್ಲಿ ಒಮ್ಮೆ ಪಲ್ಟಿಹಾಕಿ, ದಿಕ್ಕು ಬದಲಿಸಿ, ಆಕೆಯ ಪಕ್ಕದಲ್ಲಿ ಕುಳಿತು, ಮೆಲುಭಾಷೆ ಪ್ರಾರಂಭಿಸಿತು. "ಇಂದು ಕಿರಾಣಿ ಅಂಗಡಿ ಶೆಟ್ಟರು, ಭಾರಿ ಹೆಗ್ಗಣವೊಂದನ್ನು ನಮಗಾಗಿ ಹಿಡಿದಿಟ್ಟಿದ್ದರು. ಅದಕ್ಕೆ ಅರೆಜೀವವಿದ್ದಾಗಲೇ ಮೃಷ್ಟಾನ್ನ ಭೋಜನವಾಯಿತು. ಎಷ್ಟು ಹೊತ್ತು ಕಂಠ ಶೋಷ ಮಾಡಿದರೂ ನಿನ್ನ ಪತ್ತೆಯೇ ಇಲ್ಲ. ನಿನ್ನೆ ಅಯ್ಯಂಗಾರ್ ಮದುವೆ ಪುಳಿಯೋಗರೆ ಅಜೀರ್ಣವಾಯಿತೇ?" ಎಂದು ಚುಚ್ಚಿ ನುಡಿಯಿತು. ಆದರೆ ಅವಳು ಈ ಮಾತಿಗೆ ಯಾವ ಪ್ರತಿಕ್ರಿಯೆಯನ್ನೂ ತೋರಿಸದೆ ತನ್ನ ಗರಿಬಿಚ್ಚಿ ಅದರಲ್ಲಿ ಸಿಕ್ಕಿಕೊಂಡ ಕಸಕಡ್ಡಿ, ಹೇನುಗಳನ್ನು ಹೆಕ್ಕಲಾರಂಭಿಸಿದಳು. ಸುಮ್ಮನೆ ಟಿಕೆ ವೇಳೆ ಹಾಳುಮಾಡುವುದೆಂದು ಗಂಡು ಕಾಗೆ ಬಹಳ ದಿನಗಳಿಂದ ಅಲಕ್ಷಿಸಿದ ತನ್ನ ಶರೀರ ಸ್ವಚ್ಛತೆಯಲ್ಲಿ ಲಕ್ಷ್ಯ ಹಾಕಿತು. ಅವನ ತತ್ತರ ವತ್ತರ ಭಂಗಿಗಳನ್ನು ನೋಡಲಾಗದೇ ಹೆಣ್ಣು ಕಾಗೆ ತಾನೇ ಸರಿದು ಒಂದೊಂದೇ ಹೇನು ಹೆಕ್ಕಿ ನುಂಗಲಾರಂಭಿಸಿತು. ಈ ಸ್ತ್ರೀ ಸೇವೆಯಿಂದ ಕಾಕರಾಜ ಸುಖಪಡುತ್ತಿದ್ದಾಗ, ಕಾಗಮ್ಮ "ಏನೋ! ಮೀಯದೇ ಎಷ್ಟು ಯುಗವಾಯಿತೋ? ಮೈಯೆಲ್ಲ ನಾರುತ್ತಿದೆ. ವಿಪುಲವಾದ ನೀರು, ವಿರಾಮಗಳಿರುವಾಗ ಸ್ನಾನಮಾಡದವನು ಹೆಣ್ಣಿನ ಸ್ನೇಹ ಬಯಸಬಾರದು" ಎಂದು ಅರೆ ಮುನಿಸಿನಿಂದ ದೂರ ಸರಿದು ಕುಳಿತಿತು. ನಿರುಪಾಯನಾಗಿ ಕಾಗಪ್ಪ ಮಡುವಿಗೆ ಧಾವಿಸಿತು.

ದಂಡೆಯಲ್ಲಿ ಕುಳಿತು ಒಂದು ನಿಮಿಷ ಈ ಚಳಿಯಲ್ಲಿ ತಣ್ಣೀರಿನ ಸ್ನಾನ ಮಾಡಬಹುದೇ? ಎಂದು ಶಂಕಿಸಿತು. ಕಾದಲಿಳಿಂದ ಛೀಮಾರಿ ಹಾಕಿಸಿಕೊಳ್ಳುವುದಕ್ಕಿಂತ ಮೈಚಳಿ ಬಿಡುವುದು ಮೇಲೆಂಬ ತೀರ್ಮಾನಕ್ಕೆ ಬಂದು, "ನೋಡ್ತೀ ನಾನು ಸ್ನಾನಕ್ಕೆ

ಇಳಿದಿದ್ದೀನಿ. ನೀವೆಲ್ಲ ಸಾಕ್ಷಿ ಇದ್ದೀರಿss" ಎಂದು ಖರ್ ಖರ್ss ಗಂಡು ಧ್ವನಿಯಲ್ಲಿ ಘೋಷಿಸಿ ನೀರಿಗೆ ಧುಮುಕಿತು. ಕಾಕರಾಜ ಇಷ್ಟೆಲ್ಲ ಸಾಹಸ ತೋರಿಸಿದ ನಂತರ ತಾನೇಕೆ ಹಿಂದೆ ಬೀಳಬೇಕು ಎಂದು ಕರಿಯಣ್ಣ, ಕಪಟಣ್ಣ, ಕಗ್ಗಪ್ಪ, ಕಾಡಿಗ್ಗಣ್ಣ, ಕರಿಮೊಗ, ಕಾಳಪ್ಪನವರೆಲ್ಲ ಸ್ನಾನಕ್ಕೆ ಇಳಿದರು. ಸೊಂಟಮಟ್ಟ ನೀರಿನಲ್ಲಿ ಶಿರ, ರೆಕ್ಕೆ, ಹಿಂಗರಿಗಳನ್ನು ಪಸರಿಸಿ, ಅಲೆಗಳನ್ನು ಎಬ್ಬಿಸಿ, ಕೊಕ್ಕಿನಿಂದ ಇದ್ದುಬದ್ದ ಕೊಳೆಯನ್ನು ಹೊರಗೆಡವಿ, ಒಂದೊಂದಾಗಿ ದಡಕ್ಕೆ ಹಿಂದಿರುಗಿದವು. ಹಸಿರು ಹುಲ್ಲು ಹಾಸಿಗೆ ಮೇಲೆ ಬಿಸಿಲನ್ನು ಕಾಯಿಸುತ್ತ ಮೈ ಕುಲುಕುತ್ತ ಕುಳಿತಾಗ, ಹೊಸ ಚೈತನ್ಯ ಬಂದಂತಾಗಿ, ಆಹಾರ ಶೋಧಕ್ಕೆ ಹೊರಟವು. ಕಾಕರಾಜ ಆ ಬೇವಿನ ಟೊಂಗೆಯೊಂದರ ಮೇಲೆ ವಿರಾಮವಾಗಿ ಕುಳಿತು ಕಾ ಖರ್! ಕಾಖರ್, ಎಂದು ಹೊಸ ರಾಗ ಪ್ರಾರಂಭಿಸುವುದರಲ್ಲಿ ಇದ್ದಾಗ, ಕೊಂಚ ನೀರು ಚುಂಚಿನ ಅಡಿಯ ಬಿಲದಂತಿದ್ದ ಮೂಗ ಹೊಳ್ಳೆಗಳಲ್ಲಿ ಸೇರಿದ್ದರಿಂದ ಚುಂಚನ್ನು ತೊಗಟೆಗೆ ನೇವರಿಸಿ, ನೀರನ್ನು ಹೊರಹಾಕಲು ಪ್ರಾರಂಭಿಸಿತು. ಮನೆಯ ಯಜಮಾನಿ, "ಕಾಗೆ ಅಕ್ಕಿ ತೊಳೀತಿದೆ, ಯಾರೋ ಅತಿಥಿಗಳು ಬರುವಂತಿದೆ," ಎಂದು ಗೊಣಗುತ್ತ ಯಾರಿರಬಹುದು ಎಂದು ಮೈಮರೆತಳು. 'ಹಸಿದಿದ್ದೇನೆ, ಏನಾದರೂ ಇದ್ದು ಬಿದ್ದದ್ದು ನೀಡಬಾರದೇ' ಎಂದು ಕಾಕರಾಜ ಕಾಹಾss ಕಾಹಾss ಎಂದು ಕಿರುಚಿಕೊಂಡಾಗ, "ನಮ್ಮಣ್ಣ ಬರುವುದಾದರೆ ಹಾರಿ ಹೋಗು ಕಾಗೆ," ಎಂದು ಹೊರಬಂದಳು. ಬರಿಗೈಯಿಂದ ಬಂದವಳಿಂದ ತನಗೇನು ಆಗಬೇಕಾಗಿದೆ,? ಎಂದು ಕಾಗೆ ಹಾರಿದಾಗ, ಅಣ್ಣ ಬರುವುದು ಖಂಡಿತವೆಂದರಿತ ಮನೆಯೊಡತಿ ಇನ್ನಷ್ಟು ತಿನ್ನಲಿಕ್ಕಿಡಲು ಒಳಗೋಡಿದಳು.

ಅಪಶುಕುನ

ಎದುರು ಮನೆಯ ಸಂಪಿಗೆ ಟೊಂಗೆಯಲ್ಲಿ ಅವಿತ ಕಾಗೆ ಕಾಕಕ್, ಕಾಕಕ್ ಎಂದು ದೈನ್ಯತೆಯಿಂದ ಕೂಗಿದಾಗ ಧಾರ್ಮಿಕಳೊಬ್ಬಳಿಗೆ ಅಪಶಕುನ. 'ಅದಕ್ಕೊಂದು ಕಲ್ಲು ಹೊಡೆಯೋ" ಎಂದು ಆಳಿಗೆ ಆಜ್ಞೆಯಿತ್ತಳು. ಈ ಜಗತ್ತಿನಲ್ಲಿ ನಿಯತ್ತಿಗೆ, ದಾನಧರ್ಮಕ್ಕೆ ಬೆಲೆಯಿಲ್ಲವೆಂದು ಕಾಗೆ ಹೊರಟೇಹೋಯಿತು. ದಾರಿಯಲ್ಲಿ ಹಪ್ಪಳ ಸಂಡಿಗೆಗಳ ರಾಶಿಯನ್ನೇ ಬಿಸಿಲಲ್ಲಿ ಒಣಹಾಕಿದ್ದನ್ನು ನೋಡಿತು. ತನ್ನ ಆಪ್ತಬಂಧು ಬಳಗದವರನ್ನೆಲ್ಲ ಕೂಗಿ ಕರೆಯಿತು. ಮೂರು ನಾಲ್ಕು ಕಾಗೆಗಳು, ಕಾಯಲು ಕುಳಿತ ಮಗುವಿನ ಲಕ್ಷ್ಯವನ್ನು ಒಂದು ಕಡೆಗೆ ಎಳೆದರೆ, ಇನ್ನೊಂದು ಕಡೆಯಿಂದ ಕಾಗೆಯೊಂದು ಹಪ್ಪಳ ಕಚ್ಚಿಕೊಂಡು ಗಗನಕ್ಕೆ ಹಾರಿತು. ತಮ್ಮ ಯುಕ್ತಿ ಫಲಿಸಿತೆಂದು ಉಳಿದವು ಹಿರಿಯ ಕಾಗೆಯನ್ನು ಸೇರಿಕೊಂಡವು. ಹಪ್ಪಳದ ಪಾಲಿಗಾಗಿ ಪರದಾಟ, ಬಡಿದಾಟ ಪ್ರಾರಂಭವಾದವು. ರೆಂಬೆಯೊಂದರ ಮೇಲೆ ಕುಳಿತು, ಪಂಜಿನಲ್ಲಿ ಹಿಡಿದು ಹಪ್ಪಳ ಕುಕ್ಕಿ ತಿನ್ನುವಾಗ, ಇನ್ನೊಂದು ಕಾಗೆ ತನ್ನ ಪಾಲು ಪಡೆಯಲೆತ್ನಿಸಿತು. ಕಾದಾಟ ಪ್ರಾರಂಭವಾಗಿ, ಹಪ್ಪಳ ನೆಲಕ್ಕುರುಳಿತು. ಇದಕ್ಕಾಗಿ ಒಂದನ್ನೊಂದು ದೂಷಿಸುತ್ತ ಹಾರಿದವೇ ವಿನಾ ಬಿದ್ದ ಹಪ್ಪಳ ಹೆಕ್ಕಲು ಹೋಗಲಿಲ್ಲ. ಸ್ವಸ್ಥಾನಕ್ಕೆ ಹಾರಿಹೋಗುತ್ತಿದ್ದಂತೆ, ಬಲೆಹಾಸಿ ಅದರೊಳಗೆ ಮೀನು ಒಣ ಹಾಕಿದ್ದು ಕಾಕದೃಷ್ಟಿಗೆ ಗೋಚರಿಸಿತು. ಇಂದಾದರೂ ಹೊಟ್ಟೆ ಬಿರಿಯುವಷ್ಟು ಮಾಂಸಾಹಾರವಾಗಲೆಂದು ಸಂಗಡಿಗರಿಗೆ ತಿಳಿಸುವ ಗೋಜಿಗೆ









ಹೋಗದೆ ಭೂಮಿಗಿಳಿಯಿತು. ಚುಂಚು ಬಲೆಯೊಳಗೆ ಹೋದರೂ ಮೀನು ಹೊರಗೆ ಬಾರದು. ಬಲೆಯನ್ನೇ ಎತ್ತ ಹೋದರೆ ಶಕ್ತಿ ಸಾಲದು. ಕೊನೆಗೆ ಬೇರೆ ದಾರಿ ಕಾಣದೇ, ಇಲ್ಲಿ ಅಪರೂಪದ ಆಹಾರವಿದೆ ಬರ್ರೋ ಕಾ.! ಕಾ! ಎಂದು ಗಂಟಲು ಬಿರಿಯುವಂತೆ ಕಿರಿಚಿಕೊಂಡಿತು. ಒಂದು ಎರಡು ಹತ್ತು ಇಪ್ಪತ್ತು ಸಹಸ್ರ ಕಾಗೆಗಳು ಇಳಿದವು.

ಸಕಲ ಕಾಗೆಗಳೂ ಶಕ್ತಿ ಹಾಕಿ ಎಳೆದರೂ ಬಲೆಬಾರದು. ನಾಲ್ಕು ಮೊಳೆಗಳನ್ನು ಹೊಡೆದು ನೆಲದಲ್ಲಿ ಹೂತ ಬಲೆ ಮುದಿಕಾಗೆಯ ಲಕ್ಷಕ್ಕೆ ಬಂದು ಅದು ತನ್ನ ಜಾಣಾಕ್ಷತನದಿಂದಾಗಿ ಕೊಕ್ಕಿನಿಂದ ಬಲೆಯ ದಾರ ಎಳೆದು ಮೊಳೆಯಿಂದ ಜಾರಿಸಿಬಿಟ್ಟಿತು. ಬಲೆ ಸರಿಸಿ, ಆಹಾರಕ್ಕೆ ಬಾಯಿಹಾಕಬೇಕು ಎನ್ನುವಷ್ಟರಲ್ಲಿ ಈ ಅವಕಾಶಕ್ಕಾಗಿ ಹೊಂಚುಹಾಕಿ ಕುಳಿತ ಹದ್ದೊಂದು ಗರುಡನಂತೆ ಹಾರಿಬಂದು ಪಂಜಿನಲ್ಲಿ ದೊಡ್ಡ ಮೀನೊಂದನ್ನು ಭದ್ರವಾಗಿ ಹಿಡಿದು ಕಣ್ಮರೆಯಾಯಿತು. ಉಳಿದ ಮೀನುಗಳನ್ನು ತಿಂದು ತೇಗಲು ಅವಕಾಶವಿದ್ದರೂ, ಹದ್ದಿನ ಈ ಮೋಸದ ತಂತ್ರದಿಂದ ರೊಚ್ಚಿಗೆದ್ದ ಕಾಗೆಗಳ ತಂಡ ಅದನ್ನು ಬೆನ್ನಟ್ಟಿಕೊಂಡು ಹೊರಟಿತು. ಒಂಟಿ ಹದ್ದು, ಗಗನ ಮಂಡಲದಲ್ಲಿ ಮೇಲೆ ಕೆಳಗೆ ಹಾರುವಾಗ, ಕಾಗೆಗಳೆಲ್ಲ ಅದನ್ನು ಬೆನ್ನಟ್ಟಿಕೊಂಡು ಹೋಗುವುದನ್ನು ವೀಕ್ಷಿಸುವುದೇ ಒಂದು ಅನುಭವ. ಜೀವದಾಸೆಯಿಂದ ವೇಗವಾಗಿ ಓಡಿ, ಕಾಗೆ ಎಲ್ಲಿಯೂ ಕಾಣದಾದಾಗ, ಸದ್ಯ ತನ್ನ ಬಡಜೀವ ಬದುಕಿಕೊಂಡಿತು ಎಂದುಕೊಳ್ಳುವಷ್ಟರಲ್ಲಿ ಎಲ್ಲಿಂದಲೋ ಹಾರಿಬಂದ ಕಾಗೆ ಕ್ಷಣಾರ್ಧದಲ್ಲಿ ಕುತ್ತಿಗೆಯ ಗರಿಗಳನ್ನೇ ಕೊಕ್ಕಿನಿಂದ ಜೋರಾಗಿ ಎಳೆದುಬಿಡುವುದು. ನೋವನ್ನು ತಾಳಲಾರದೇ ಹದ್ದು ಜೋರಾಗಿ ಕಿರುಚುವುದು. ಇಷ್ಟಾದರೂ ಪಂಜಿನಲ್ಲಿ ಹಿಡಿದ ಮೀನನ್ನು ಬಿಡುವುದಿಲ್ಲ. ವೈರಿಯ ಸುತ್ತ ಹಾರಿ ಹಾರಿ, ಬೇಸತ್ತ ಕಾಗೆಗಳ ತಂಡ ಒಂದೆಡೆ ಅವಿತುಕೊಳ್ಳುತ್ತವೆ. ಇನ್ನು ಭಯವಿಲ್ಲ! ಎಂದು ಹದ್ದು ತೀರ ಎತ್ತರದಲ್ಲಿ ಕುಳಿತು ಮತ್ಸ್ಯ ಭೋಜನ ಪ್ರಾರಂಭಿಸಿದೊಡನೆ ಎಡಕ್ಕೆ, ಬಲಕ್ಕೆ ನಾಲ್ಕು ಕಾಗೆಗಳು ಕುಳಿತು ಮೀನನ್ನು ಕಸಿದುಕೊಳ್ಳುವ ಯತ್ನ ಪ್ರಾರಂಭಿಸುತ್ತವೆ. ಸಾಲದ್ದಕ್ಕೆ ಇನ್ನೆರಡು ಹಾರಾಡುತ್ತಲೇ ಹದ್ದಿನಮೇಲೆ ಆಕ್ರಮಣ ನಡೆಸುತ್ತವೆ. ಕಾಗೆ ತೀರ ಹತ್ತಿರ ಬಂದಾಗ ಹದ್ದು ಹರಿತವಾದ ಕೊಕ್ಕಿನಿಂದ ಚುಚ್ಚುವಂತೆ ಗದರಿಸುತ್ತಲೇ ಇದ್ದರೂ ದಾಳಿಗಾರರು ಕಾಳಗದ ಕಣಬಿಟ್ಟು ಓಡುವ ಲಕ್ಷಣ ತೋರಿಸುವ ಬದಲಾಗಿ ಹದ್ದಿಗೆ ಚಿತ್ರಹಿಂಸೆ ಕೊಟ್ಟು ಮೀನನ್ನು ಕಸಿದುಕೊಳ್ಳುವ ಯತ್ನ ಮುಂದುವರಿಸುತ್ತವೆ. ಕೊನೆಗೊಮ್ಮೆ ಹದ್ದು, ಈ ಕೀಟಲೆಯಿಂದ ಬೇಸತ್ತು ಮೀನನ್ನು ಮರದಲ್ಲಿಯೇ ಬಿಟ್ಟು ಪಲಾಯನ ಮಾಡುತ್ತದೆ. ಕಾಗೆಗಳು ಅದನ್ನು ತವರಿಸಿಕೊಂಡು ಹೋಗುತ್ತವೆಯೇ ಹೊರತು ಅದು ಬಿಟ್ಟು ಹೋದ ಮೀನನ್ನು ತಿನ್ನುವುದಿಲ್ಲ.

ವಿವಿಧ ಪ್ರಭೇದಗಳು

ಜಗತ್ತಿನ ನಾಲ್ದೆಸೆಗಳಲ್ಲಿಯೂ ಹರಡಿಕೊಂಡ ಕಾಗೆಗಳು 'ಕಾರ್ವಿಡೀ' ಕುಟುಂಬಕ್ಕೆ ಸೇರಿದವು. ಕೆಲ ಮಹಾಸಾಗರದಲ್ಲಿಯ ನಡುಗಡ್ಡೆಗಳನ್ನು ಬಿಟ್ಟರೆ, ಉಳಿದೆಲ್ಲ ಕಡೆ ವಸಾಹತು ಮಾಡಿವೆ. ಒಂದು ಕಾಲದಲ್ಲಿ ವಿಪರೀತ ಚಳಿ ಮತ್ತು ಹಿಮಾಚ್ಛಾದಿತ ಸ್ಥಳಗಳಿಂದ ಬೆಚ್ಚಗಿನ ಸ್ಥಳಗಳಿಗೆ ವಲಸೆ ಹೋಗುತ್ತಿದ್ದವು. ಆದರೆ ಇಂದು ಹೆಚ್ಚು ಕಡಿಮೆ ವಿಷಮ ವಾತಾವರಣಕ್ಕೂ ಹೊಂದಿಕೊಂಡಿವೆ. ಕಾಕಕೋಟಿಯನ್ನು ಮೂವತ್ತೆರಡು

ಪ್ರಭೇದಗಳಲ್ಲಿ ವಿಂಗಡಿಸಬಹುದು. ನಮ್ಮೊಂದಿಗೆ ಊರಲ್ಲಿಯೇ ಜೀವಿಸುವ ಕಾಗೆ ಕಾರ್ವಸ್ ಸ್ಪ್ಲೆಂಡನ್ಸ್; ಊರಿನಿಂದ ದೂರದ ಕಾಡಿನಲ್ಲಿ ವಾಸಮಾಡುವಂತಹ ಕಾಗೆ ಕಾರ್ವಸ್ ಮ್ಯಾಕ್ರೊರಿಂ ಕೋಸ್. ಊರಿನದು ಕಾಡಿಗೆಯಷ್ಟು ಕಪ್ಪಿದ್ದರೂ ಶಿರಭಾಗದಲ್ಲಿ ಮಾತ್ರ ಬಿಳಿಮಿಶ್ರಿತ ಕಪ್ಪು ಅಥವಾ ಬೂದುಬಣ್ಣ ಹೊಂದಿರುತ್ತದೆ. ಕಾಡುಕಾಗೆ ಸಮನಾಗಿ ಕಪ್ಪಿದ್ದೂ ಊರಿನದಕ್ಕಿಂತ ದೊಡ್ಡದಾಗಿರುತ್ತದೆ. ಊರಿನದು ಹೆಣ್ಣೆಂದೂ, ಕಾಡಿನದು ಗಂಡೆಂದೂ ಸಾಮಾನ್ಯ ಜನ ತಪ್ಪಾಗಿ ತಿಳಿಯುತ್ತಾರೆ. ತಜ್ಞರು ಮಾತ್ರ ಗಂಡು ಹೆಣ್ಣುಗಳನ್ನು ದೂರದಿಂದ ಗುರುತಿಸಬಲ್ಲರು. ಯೂರೋಪ್ ಮತ್ತು ಅಮೆರಿಕಗಳಲ್ಲಿರುವ ಪ್ರಭೇದಗಳು ಬೇರೆ ಬೇರೆ.

ಕಾಣಲು ಹೆಗ್ಗಣದಷ್ಟು ದೊಡ್ಡದಿದ್ದರೂ, ಗರಿ, ಪುಕ್ಕಗಳಿಂದ ಆವರಿಸಿದ ದೇಹಭಾಗ ತೀರ ಚಿಕ್ಕದು. ಬಹುದೊಡ್ಡ ಕಾಗೆ ಕೂಡ ಒಂದು ಕಿಲೋಗ್ರಾಂಗಿಂತ ಕಡಿಮೆಯೇ ಇರುತ್ತದೆ. ಕೊಕ್ಕಿನ ಮೇಲಿರುವ ಮೂಗಿನ ಹೊಳ್ಳೆಗಳು ರೋಮಗಳಿಂದ ಆವರಿಸಲ್ಪಟ್ಟಿರುತ್ತವೆ. ತೆಳುವಾದ ಎಲುಬಿನಿಂದ ಕೂಡಿದ ಸೀಳು ನಾಲಿಗೆ; ಕಣ್ಣುಗಳು ಅತ್ಯಂತ ತೀಕ್ಷ್ಣ. ವೈರಿಗಳಿಂದ ಗಂಡಾಂತರದಿಂದ ರಕ್ಷಿಸಿಕೊಳ್ಳಲು ಸದಾಕಾಲ ಸುತ್ತಲೂ ಕಣ್ಣು ಓಡಿಸುತ್ತಲೇ ಇರುವುದರಿಂದ ಕಾಗೆಗೆ ಒಂಟಿ ಕಣ್ಣು. ಅದನ್ನೇ ಅತ್ತಿತ್ತ ಓಡಿಸುತ್ತಿರುತ್ತದೆ ಎಂಬ ಪ್ರತೀತಿ. ದೇಹದ ಅಳತೆಗೆ ಮೀರಿದ ಅದರ ಚುಂಚು ಶಕ್ತಿಯುತವಾಗಿದ್ದು ಎಂತಹ ಗಟ್ಟಿ ಬೀಜವನ್ನು ಬೇಕಾದರೂ ಒಡೆಯಬಲ್ಲದು. ಮಣ್ಣಲ್ಲಿರುವ ಹುಳು ಹುಪ್ಪಡಿಗಳಿಗಾಗಿ ಅದು ಸಸಿಗಳನ್ನು ಕಿತ್ತು ಮೇಲೆತ್ತುವುದು ತೀರ ಸಾಮಾನ್ಯ. ಹದ್ದು, ಹಂಸಗಳಂತೆ ಕಾಗೆ ಸತತವಾಗಿ ಬಹುದೂರ ಹಾರುವುದು ವಿರಳ. ಕಿರಿದಾದ ಅಂತರವನ್ನು ವೇಗವಾಗಿ ಹಾರಬಲ್ಲದು. ಹದ್ದಿನಂತೆ ಹವೆಯಲ್ಲಿ ತೇಲುವ ಬದಲಾಗಿ ಸತತವಾಗಿ ರೆಕ್ಕೆ ಬಡಿಯುತ್ತಲೇ ಮುಂದುವರಿಯುವುದು. ನಡುದಾರಿಯಲ್ಲಿ ಗಂಡಾಂತರ ಬಂದರೆ ಚಾಣಾಕ್ಷತನದಿಂದ ತಪ್ಪಿಸಿಕೊಳ್ಳುವುದು.

ಜನ್ಮಸಿದ್ಧ ಹಕ್ಕು

ರಾತ್ರಿ ವಿಶ್ರಾಂತಿಗಾಗಿ ಮರಗಳ ಆಶ್ರಯ ಪಡೆಯುವುದು ಕಾಗೆಗಳ ಜನ್ಮಸಿದ್ಧ ಹಕ್ಕು. ಊರ ಕಾಗೆಗಳು ಆಹಾರ ಸಂಪಾದಿಸುವ ತಾಣದಿಂದ ದೂರದಲ್ಲಿ ಹಾರಿ ಹೋದರೆ ಕಾಡುಕಾಗೆಗಳು ಊರ ಹೊರತನಕ ಬರುವುವು. ವೃಕ್ಷಗಳ ಮೇಲೆ ತಮ್ಮ ಪ್ರತಿಷ್ಠೆಗೆ ಅನುಗುಣವಾಗಿ ವಿರಮಿಸಲು ಸ್ಥಾನ ದೊರಕಿಸುವುದಕ್ಕಾಗಿ ಚೀರಾಟ-ಕೂಗಾಟಗಳು ಪ್ರಾರಂಭವಾಗಿಬಿಡುವುವು. ಪರಿಸ್ಥಿತಿ ವಿಕೋಪಕ್ಕೆ ಹೋದಾಗ, ಅಲ್ಲಿರುವ ಇಡೀ ತಂಡವೇ ಸುತ್ತ ಮುತ್ತಲಿನ ಪ್ರದೇಶದಲ್ಲಿ ನಾಲ್ಕಾರು ಪ್ರದಕ್ಷಿಣೆ ಹಾಕುವುದು. ಒಬ್ಬಿಬ್ಬ ಸದಸ್ಯರು ತೀರ ಉದ್ಧಟತನದಿಂದ ವರ್ತಿಸಿದರೆ ಆಗ ನ್ಯಾಯ ವಿಚಾರಣೆ ನಡೆಯುವುದು. ಎತ್ತರದ ಮರದಲ್ಲಿಯಾಗಲಿ, ಹುಲ್ಲಿನ ಬಯಲಿನಲ್ಲಿಯಾಗಲಿ ಸಭೆಕೂಡುವುದು. ಸಭೆಗೆ ಸಂಖ್ಯೆ ಸಾಲದಾದರೆ, ನಾಲ್ಕೂ ದಿಕ್ಕಿನಲ್ಲಿ ಕೂಗಿ ಇನ್ನಷ್ಟು ಹಿರಿಯರನ್ನು ಆಮಂತ್ರಿಸಲಾಗುತ್ತದೆ. ತಪ್ಪಿತಸ್ಥ ಕಾಗೆ ಬಂದಿಷ್ಟೂ ಮಿಸುಕಾಡದೆ ತಲೆ ತಗ್ಗಿಸಿಕೊಂಡೇ ಕುಳಿತಿರುತ್ತದೆ. ಕಾವ್ ಕರ್, ಕಾವ್ ಕರ್, ಎಂದು ಆರೋಪಗಳನ್ನು ನಿವಾರಿಸಿಕೊಂಡಾದ ಮೇಲೆ ಶಿಕ್ಷೆ. ಆ ಕಾಗೆಯ ತಲೆ ಕುಕ್ಕಿಯೋ, ಗರಿಗಳನ್ನು ಎಳೆದೋ,

ಇಲ್ಲವೆ ಅದನ್ನು ಮರದಿಂದ ಕೆಳಕ್ಕೆ ತಳ್ಳಿಯೋ ಸಮಸ್ಯೆ ಬಗೆಹರಿದಾಗಲೇ ಎಲ್ಲವುಗಳಿಗೆ ನೆಮ್ಮದಿ. ಅವುಗಳ ನಿದ್ರಾಸ್ಥಾನದ ಕೆಳಗೆ ಮಲಮೂತ್ರದ ಮಿಶ್ರಣ ಸಂಚಯವಾಗುವುದು ತೀರ ಸಾಮಾನ್ಯ. ಕಾಗೆಗಳ ರಾಜ್ಯದಲ್ಲಿ ಕಾಲಿಡುತ್ತಿದ್ದೇವೆ ಎಂಬ ಲಕ್ಷ್ಯವಿಲ್ಲದೆ ಅತಿಕ್ರಮಣ ಮಾಡುವವರ ಬಟ್ಟೆಗಳನ್ನು ಹೊಲಸು ಮಾಡುವ ಅಧಿಕಾರ ಮಾತ್ರ ಅವುಗಳಿಗೆ ದೈವದತ್ತವಾಗಿ ಬಂದಿದೆ! ಅರೆನಿದ್ರೆಯಲ್ಲಿ ಕಂಠವನ್ನು ಸಡಲಿಸಿಕೊಳ್ಳುವುದು, ರೆಕ್ಕೆ ಕೆದರಿಕೊಳ್ಳುವುದು ಸಾಮಾನ್ಯ. ಕೆಲವಂತೂ ನಿದ್ರೆಯಲ್ಲಿ ಮಾತನಾಡಿಕೊಳ್ಳುವುದು; ಒಂದು ಸುತ್ತು ಹಾರಿಬಂದು ನಿದ್ರೆಯನ್ನು ಮುಂದುವರಿಸುವುವು.

ಪಾರಿವಾಳಗಳ ನಿರಂತರ ಪ್ರಣಯದಲ್ಲಾಗಲಿ, ಗುಬ್ಬಚ್ಚಿಗಳ ಮುಕ್ತ ಕಾಮದಲ್ಲಾಗಲಿ ಈ ಹಕ್ಕಿಗೆ ವಿಶ್ವಾಸವಿಲ್ಲ. ಪ್ರೇಮಿಗಳಿಗೆ ಬಿಡುವಾದಾಗ ಪೊದೆಗಳ ಮರೆಯಲ್ಲಿಯೋ ಇಲ್ಲವೇ ಜನಸಂಚಾರವಿಲ್ಲದಲ್ಲಿಯೋ ಮೈಗಂಟಿ ಕುಳಿತುಕೊಂಡು ಸರಸ ಸಲ್ಲಾಪ ಪ್ರಾರಂಭಿಸುತ್ತವೆ. ನಲ್ಲ ಕಣ್ಣುಮುಚ್ಚಿ ಕುಳಿತಾಗ, ನಲ್ಲೆ ಅದರ ಕೊರಳನ್ನು ನೇವರಿಸುವುದು. ಗರಿಗಳಿಂದ ಹೇನು ಹೆಕ್ಕುವುದು. ಪುಕ್ಕಗಳನ್ನು ಮೃದುವಾಗಿ ಹಿಡಿದೆಳೆಯುವುದು. ಗಂಡು ಆಗೊಮ್ಮೆ, ಈಗೊಮ್ಮೆ ಕಣ್ಣು ತೆರೆದು ನಲ್ಲೆಯನ್ನು ಅಭಿಮಾನದಿಂದ ನೋಡುತ್ತ ತಿರುಗಿ ನಿದ್ರಾವಶವಾದಂತೆ ನಟಿಸುವುದು. ಗಂಟೆ ಗಟ್ಟಲೆ ಅವು ಇಂಥ ಚಟುವಟಿಕೆಗಳಲ್ಲಿ ಮೈಮರೆಯುವುದುಂಟು. ಪ್ರೇಮಕ್ಕೆ ಋತುಮಾನಗಳ ಬಂಧನವಿಲ್ಲದಿದ್ದರೂ ಕಾಮಮಾತ್ರ ಬೇಸಿಗೆಯಲ್ಲಿಯೇ ನಡೆಯುವಂಥದು. ಕಾಮಜ್ವರದಿಂದ ಬಳಲುವ ದಂಪತಿಗಳು ಅತ್ಯಂತ ಗುಪ್ತಸ್ಥಳಕ್ಕೆ ಧಾವಿಸಿ ಸಂತಾನೋತ್ಪತ್ತಿಯ ಚಟುವಟಿಕೆಯಲ್ಲಿ ಮೈಮರೆಯುವುವು. ಕಾಗೆಗಳು ಒಂದಾಗುವುದನ್ನು ಕಾಣಬೇಕಾದರೆ ಅದಕ್ಕಾಗಿ ಹೊಂಚು ಹಾಕಿ ಕಾದು ಕೂಡದೇ ಬೇರೆ ವಿಧಿಯಿಲ್ಲ.

ಕಾರ್ಯೋನ್ಮುಖತೆ

ತಾನು ತಂದೆಂiರಾಗಲಿರುವೆನೆಂದು ಅರಿತೊಡನೆ ಕಾಕರಾಜ ಕಾರ್ಯೋನ್ಮುಖನಾಗುತ್ತಾನೆ. ಕೋಗಿಲೆಗಳಂತೆ ಮನೆಯೊಂದನ್ನು ಕಟ್ಟಿಕೊಂಡು ಇರುವುದರಲ್ಲಿ ವಿಶ್ವಾಸವಿಡದ ಕಾಗೆ, ಈಗ ಗೂಡಿನ ನಿರ್ಮಾಣ ಕಾರ್ಯದಲ್ಲಿ ತೊಡಗುವುದು. ಸುತ್ತಮುತ್ತಲೂ ಹರಡಿಕೊಂಡಿರುವ ಒಣಕಡ್ಡಿಗಳನ್ನು ಸಂಗ್ರಹಿಸಿ, ರೆಂಬೆಗೆ ಟಿಸಿಲು ಒಡೆಯುವಲ್ಲಿ ಅವನ್ನು ಜೋಡಿಸಲಾರಂಭಿಸುವುದು. ತನ್ನ ಆಜನ್ಮ ವೈರಿಯಾದ ಹದ್ದಿಗೆ ಕಾಣದಂತೆ ಮುನ್ನೆಚ್ಚರಿಕೆ ವಹಿಸುವುದಲ್ಲದೆ ಆ ತಾಣದ ಬಳಿ ಅಲ್ಲಿ ಇಲ್ಲಿ ಕುಳಿತು, ಬೇರೆ ಯಾರೂ ಹಿಂಬಾಲಿಸುತ್ತಿಲ್ಲವೆಂದು ಖಚಿತಪಡಿಸಿಕೊಂಡು ಬಾಯಲ್ಲಿದ್ದ ಕಡ್ಡಿಯನ್ನು ಗೂಡಿಗೆ ಸೇರಿಸುವುದು. ಗೃಹನಿರ್ಮಾಣಕ್ಕೆ ಬೇಕಾಗುವ ತಾಂತ್ರಿಕ ಜ್ಞಾನವಾಗಲೀ ಅಂದ ಚೆಂದದ ಕಲ್ಪನೆಯಾಗಲೀ ಕಾಗೆಗೆ ಇಲ್ಲದ್ದರಿಂದ ಕೆಲವೊಮ್ಮೆ ಕಷ್ಟಪಟ್ಟು ಸಂಗ್ರಹಿಸಿದ ಕಡ್ಡಿಗಳು ನೆಲಕ್ಕೆ ಉರುಳುವವು. ಜಾರಿದುದನ್ನು ತಿರುಗಿ ತರುವ ಗೋಜಿಗೆ ಹೋಗದೆ, ಇನ್ನಷ್ಟು ರೆಂಬೆಗಳನ್ನು ಮರಗಳಿಂದಲೇ ಮುರಿದು ತರುವುದು. ಅನಿರೀಕ್ಷಿತ ಮಳೆ ಗಾಳಿಗಳಿಂದ ಗೂಡೇ ನೆಲಕ್ಕೆ ಉರುಳುವ ಪ್ರಸಂಗಗಳು ಬರುತ್ತವೆ. ಮರಗಳು ಭರದಿಂದ ಕಣ್ಮರೆಯಾಗುವ ಈ ದಿನಗಳಲ್ಲಿ ನಗರವಾಸಿ ಕಾಗೆಗಳು, ದೀಪಸ್ತಂಭ, ದೂರವಾಣಿಯ ಕಂಬ, ರೈಲ್ವೆಸೂಚಕಗಳನ್ನು ತಮ್ಮ ಗೂಡುಗಳಿಂದ

ಅಲಂಕರಿಸುವವು. ಮುಂಬಯಿಯಲ್ಲಿ ಕೆಲಕಾಲದಿಂದ ತೆರೆಯದ ಚಶ್ಮಾ ಅಂಗಡಿಯೊಂದರ ಕಿರಿದಾದ ಕಿಡಕಿಯೊಳಗಿನಿಂದ ಒಳಗೆ ನುಗ್ಗಿ ಕೇವಲ ಚಶ್ಮಾದ ಫ್ರೇಮುಗಳಿಂದಲೇ ಗೂಡುಕಟ್ಟಿದ ಘಟನೆ ವರದಿಯಾಗಿದೆ.

ಸಂತಾನೋತ್ಪತ್ತಿ ಚಟುವಟಿಕೆಗಳ ಮೇಲೆ ಉಷ್ಣತೆ ಮತ್ತು ಆರ್ದ್ರತೆಗೆ ನಿಯಂತ್ರಣ ವಿಪರೀತ. ಕರಾವಳಿ ಪ್ರದೇಶದಲ್ಲಿ ಏಪ್ರಿಲ್-ಮೇ ತಿಂಗಳುಗಳಲ್ಲಿ ಗೂಡು ಕಟ್ಟಲಾರಂಭಿಸಿದರೆ, ಬಯಲು ಪ್ರದೇಶದಲ್ಲಿ ಮೇ-ಜೂನ್ ತಿಂಗಳಲ್ಲಿ ಈ ಚಟುವಟಿಕೆಗಳು ಕಾಣಸಿಗುವವು. ಶೀತಪ್ರದೇಶದಲ್ಲಿ ಇನ್ನೂ ವಿಳಂಬವಾಗುವದು. ಗಂಡು ಗೂಡು ಕಟ್ಟುವ ಕೆಲಸ ಮುಗಿಸಿದಾಗ ಹೆಣ್ಣು ರಾಣಿಯಂತೆ ಹಾರಿಬಂದು, ನಾಲ್ಕೈದು ನೀಲಿಮಿಶ್ರಿತ, ಕಂದು ಚುಕ್ಕೆಗಳಿರುವ ಮೊಟ್ಟೆಗಳನ್ನು ಇಡುತ್ತದೆ. ಪ್ರಸೂತಿಯ ಮಡಿವಂತಿಕೆಯಲ್ಲಿ ಕಾಕವರ್ಗಕ್ಕೆ ನಂಬಿಕೆಯಿಲ್ಲದ್ದರಿಂದ ಸರದಿಯಂತೆ ಗಂಡು-ಹೆಣ್ಣು ಆಹಾರದ ಅನ್ವೇಷಣೆಯಲ್ಲಿ ಮತ್ತು ಕಾವು ಕೊಡುವುದರಲ್ಲಿ ಪಾಲುಗೊಳ್ಳುವವು. ಸೋಮಾರಿತನವೇ ಮೈವೆತ್ತ ಕೋಗಿಲೆ, ಇದೇ ಅವಕಾಶಕ್ಕಾಗಿ ಕಾದುಕೊಂಡಿರುತ್ತದೆ. ಗಂಡು ಕೋಗಿಲೆ, ಕಾಗೆಯ ಗೂಡಿನ ತೀರ ಸನಿಹಕ್ಕೆ ನುಸುಳಿಕೊಂಡು ಕೂS ಹೂS ಹೂS ಎಂದು ಚೀರಿಡುತ್ತದೆ. ತನ್ನ ಮೊಟ್ಟೆಗಳಿಗೆಲ್ಲಿ ಗಂಡಾಂತರ ಬಂದಿತೋ ಎಂದು ಕಾವು ಕೊಡುತ್ತಿದ್ದ ಕಾಗೆ ಅದನ್ನು ಬೆನ್ನಟ್ಟಿಕೊಂಡು ಓಡುತ್ತದೆ. ಅಷ್ಟರಲ್ಲಿ ಹೆಣ್ಣುಕೋಗಿಲೆ ಒಂದೆರಡು ಮೊಟ್ಟೆಗಳನ್ನು ಕಾಗೆಯ ಗೂಡಿಗೆ ಸೇರಿಸಿ, ತನ್ನ ಕರ್ತವ್ಯಪಾಲನೆಯಿಂದ ಜಾರಿಕೊಂಡು ಬಿಡುತ್ತದೆ. ತನ್ನ ಗೂಡಿನತ್ತ ಸುಳಿದಾಡುತ್ತಿರುವ ಗಂಡು ಕೋಗಿಲೆಯನ್ನು ಓಡಿಸಿ ಜಂಬದಿಂದ ಹಿಂದಿರುಗಿದ ಕಾಗೆಗೆ ತನ್ನ ಮೊಟ್ಟೆಗಳ ಸಂಖ್ಯೆಯಲ್ಲಿ ಹೆಚ್ಚಳವಾದದ್ದು ಲಕ್ಷಕ್ಕೆ ಬರುವದೇ ಇಲ್ಲ. ಅವುಗಳ ಸಮಾಜದಲ್ಲಿ ಉತ್ತಮ ಗಣಿತ ಶಿಕ್ಷಕನ ಕೊರತೆ ಇದ್ದಂತಿದೆ! ಎಂಥ ಪ್ರಸಂಗದಲ್ಲಿಯೂ ಜಾಣತನ ಚಾಣಾಕ್ಷತನದಿಂದ ವರ್ತಿಸುವ ಕಾಗೆ, ಕೋಗಿಲೆಯಿಂದ ಹೇಗೆ ಮೋಸ ಹೋಗುತ್ತದೆ ಎಂಬುದೇ ಆಶ್ಚರ್ಯದ ಮಾತು! ಬಹುಶಃ ಕಾಗೆಯ ಪೆದ್ದುತನ ಲಕ್ಷಿಸಿಯೇ ನರಿಯಣ್ಣ, ಕಾಕರಾಜನನ್ನು ಹೊಗಳಿ ಹಾಡಹಚ್ಚಿ ಮಾಂಸದ ತುಂಡಿನಿಂದ ವಂಚಿತನನ್ನಾಗಿಸಿದ ಘಟನೆಯ ಕವಿತೆ ಹುಟ್ಟಿಕೊಂಡಿರಬೇಕು!

ಪರಪುಟ್ಟ ಕೋಗಿಲೆ

ಮೊಟ್ಟೆಗಳಿಂದ ಮರಿಗಳು ಹೊರಗೆ ಬಂದ ಮೇಲಷ್ಟೆ ಕಾಗೆಗೆ ತಾನು ಮೋಸಹೋದದ್ದು ಅರಿವಾಗುತ್ತದೆ. ಕೂಡಲೇ ಕೋಗಿಲೆ ಮರಿಯನ್ನು ಗೂಡಿನಿಂದ ಓಡಿಸಿಬಿಡುತ್ತದೆ. ಹಸಿದಾಗೆಲ್ಲ ಕಾಗಮರಿಗಳು ಬಡಕಲು ಧ್ವನಿಯಿಂದ ಚೀರಿಟ್ಟಾಗ, ಅವುಗಳಿಗೆ ತಂದೆ-ತಾಯಿಗಳು ಹುಳ-ಹುಪ್ಪಡಿಗಳ ಗುಟುಕು ಕೊಡುತ್ತವೆ. ಆಸೆಯ ಮರಿಗಳು ಇನ್ನಷ್ಟು ಆಹಾರಕ್ಕಾಗಿ ಗೋಗರೆಯುವವು. ಸ್ವಲ್ಪ ರೆಕ್ಕೆ ಬಲಿತು ಹಾರುವಂತಾದಾಗ ಸ್ಪರ್ಧೆಯಿಂದ ಗೂಡಿನ ಹೊರಗೆ ಓಡಿ, ಹೆಚ್ಚಿನ ಗುಟುಕಿಗೆ ಪಾಲಕರನ್ನು ಪೀಡಿಸಲಾರಂಭಿಸುವವು. ಹಿಂಭಾಗದ ಗರಿಗಳನ್ನು ಬೀಸಣಿಕೆಯಂತೆ ಬೀಸುತ್ತ, ಕೋರಿಕೆಯ ಕಣ್ಣುಗಳಿಂದ ಚುಂಚನ್ನು ನಸುತೆರೆದಾಗ, ಕಾಗೆಗೂ ಚೆಲುವಿದೆ ಎಂದು ಅನ್ನಿಸುತ್ತದೆ. ಬಲಿತಮರಿ, ಸರ್ವ ವಿಧದಲ್ಲಿ ತಂದೆ-ತಾಯಿಗಳನ್ನು ಹೋಲುವದರಿಂದ ಅದನ್ನು ಬೇರ್ಪಡಿಸುವದು ಕಷ್ಟ. ಆದರೆ ಮರಿಗಳ ಬಳಬಾಯಿಯ ಚರ್ಮ ಎಳೆತನದಲ್ಲಿ

ಕೆಂಪಾಗಿದ್ದು, ಅದು ಪ್ರೌಢಾವಸ್ಥೆಯಲ್ಲಿಯೇ ಕಪ್ಪುಬಣ್ಣಕ್ಕೆ ಪರಿವರ್ತನೆ ಹೊಂದುವದು. ಈ ಅಂಶವನ್ನು ಗಮನಿಸಿ ಮರಿಗಳನ್ನು ವಿಂಗಡಿಸಬಹುದು. ಕೆಲಬಾರಿ ಶ್ವೇತವರ್ಣದ ಮರಿಗಳೂ (ಅಲ್‌ಬಿನೋ) ಹುಟ್ಟುವುದುಂಟು. ಅಂಥವನ್ನು ಮೃಗಾಲಯದವರು ಗಮನಿಸಿ ತಂದು ಸಾಕಿ ಸಲಹದಿದ್ದರೆ, ಕಾಗೆಗಳು, ತಮ್ಮ ಕುಟುಂಬಕ್ಕೆ ಸೇರಿದವಲ್ಲವೆಂದು, ಅವನ್ನು ಕುಕ್ಕಿ ಕೊಲ್ಲುವುದು ಖಂಡಿತ.

ಕಾಗೆಗಳಿಗೆ ವೈಕುಂಠ-ಕೈಲಾಸಗಳೊಡನೆಯಾಗಲಿ, ಯಮಧರ್ಮರಾಯನೊಡನಾಗಲಿ, ನೇರಸಂಪರ್ಕ ಇದೆ! ಎಂದು ನಂಬಲು ಯಾವ ವೈಜ್ಞಾನಿಕ ಆಧಾರಗಳೂ ಇಲ್ಲ. ಮೃತನ ನೆನಪಿಗೆ ವೈಕುಂಠಸಮಾರಾಧನೆ, ವಾರ್ಷಿಕ ತಿಥಿಗಳನ್ನು ಏರ್ಪಡಿಸಿದಾಗ, ಗದ್ದಲದಿಂದಾಗಿ ಕಾಗೆಗಳ ಬಳಗ ಬೆದರಿಕೊಳ್ಳುತ್ತವೆ. ಧಾರಾಳವಾಗಿ ಪಿಂಡದ ರೂಪದಲ್ಲಿ ಅನ್ನ, ಇತರ ಸಿಹಿ ಪದಾರ್ಥಗಳನ್ನು ತಮ್ಮ ಪರಿವಾರಕ್ಕೆ ಕೊಡಹೋದಾಗ, ಅಪರೂಪದ ಈ ಔದಾರ್ಯವನ್ನು ಅರ್ಥಮಾಡಿಕೊಳ್ಳುವುದು ಕಾಗೆಗೆ ಕಷ್ಟಕ್ಕಿಟ್ಟುಕೊಳ್ಳುತ್ತದೆ. ಪ್ರತಿದಿನವೂ ಕಷ್ಟಪಟ್ಟು, ದೋಸಮಾಡಿ ಸಂಪಾದಿಸಬೇಕಾಗಿದ್ದ ಆಹಾರವನ್ನು ಇಂದು ಮಾನವನೇ ತಾನಾಗಿ ಆಮಂತ್ರಿಸಿ ರಾಶಿ ರಾಶಿಯಾಗಿ ಕೊಡಮಾಡಿದ್ದರಿಂದ ಏನೋ ಸಂಚು ಇರಬೇಕೆಂಬ ಸಂಶಯ ಅವುಗಳಿಗೆ. ಅದ್ದರಿಂದ ಹತ್ತಿರದಲ್ಲಿ ಸುಳಿಯುವದೇ ಇಲ್ಲ. ಈ ನಡವಳಿಕೆಯನ್ನು ಅಪಾರ್ಥ ಮಾಡಿಕೊಂಡ ಮಾನವ, ಮೃತನ ಸಕಲ ಇಷ್ಟಾರ್ಥಗಳನ್ನೂ ಪೂರೈಸುವದಾಗಿ ಅಂಗಲಾಚಿ ಬೇಡಿಕೊಳ್ಳುತ್ತಾನೆ. ಇದೇ ಸಮಯದಲ್ಲಿ ಹಸಿವು ತಾಳಲಾರದೇ ಎದುರಿಗಿದ್ದ ಅನ್ನಭಂಡಾರ ಬಿಡಲಾರದೇ ಕಸಿವಿಸಿಯಿಂದ ಕಾಗೆ, ಬಳಗವನ್ನು ಕೂಗಿಕರೆದು ಬಾಯಿ ಹಾಕಿಯೇ ಬಿಡುತ್ತವೆ. ಮೃಷ್ಟಾನ್ನ ಭೋಜನ ಸೇವಿಸಿದ ಕಾಗೆಗಳು ಮೃತನ ಆತ್ಮಕ್ಕೆ ಆತನ ಆತ್ಮೀಯರ ಆತಿಥ್ಯಕೊಂಡೊಯ್ಯಲು ಕೈಲಾಸಕ್ಕೋ, ವೈಕುಂಠಕ್ಕೋ ಹೋಗಿ ಬರುತ್ತವೆಂದು ತಿಳಿಯುವದು ಮಾನವನ ಭ್ರಾಂತಿ. ಬಹುಶಃ ಹಿಂದಿನ ಹಿರಿಯರು ಊರ ಕೊಳಚೆಯನ್ನೆಲ್ಲ ತನ್ನದೇ ವಿಧದಲ್ಲಿ ಸ್ವಚ್ಛಗೊಳಿಸುವ, ಸತ್ತ ಪ್ರಾಣಿಗಳನ್ನು ಬಳಗದೊಡನೆ ಸೇರಿ ಮುಗಿಸಿ, ಹವೆಯನ್ನು ಅನಾರೋಗ್ಯತೆಯಿಂದ ರಕ್ಷಿಸುವ ಈ ನೈಸರ್ಗಿಕ ಝಾಡಮಾಲಿಗಳ ವರ್ಗವನ್ನು ವರ್ಷಕ್ಕೆ ಒಮ್ಮೆಯಾದರೂ ನೆನೆದು ಕೃತಜ್ಞತೆಯ ಕೂಳನ್ನಿಡಲು ಕಾಕಪಿಂಡದ ಏರ್ಪಾಡು ಮಾಡಿರಬೇಕು.

ಆಪಾದನೆಗಳು

ಕಾಕಸಮಾಜದ ಮೇಲಿನ ಆಪಾದನೆಗಳು ಅಪಾರ. ಹಣ್ಣಿನ ತೋಟಗಾರನ ಗೋಳಾದರೋ, "ಪ್ರತಿದಿನ ಹೊಟ್ಟೆ ಬಿರಿಯುವಷ್ಟು ಹಣ್ಣು ತಿಂದುಹೋದರೆ ನನ್ನ ಆಕ್ಷೇಪಣೆ ಇಲ್ಲ. ಹಲಸು, ಮಾವು, ಸೇಬು, ಪಪಾಯಿ (ಪರಂಗಿ) ಮುಂತಾದ ಹಣ್ಣುಗಳನ್ನು, ಇನ್ನೂ ಕಾಯಿಯಿರುವಾಗಲೇ ಕುಕ್ಕಿ ಕುಕ್ಕಿ ಚೆನ್ನಾಗಿಲ್ಲವೆಂದು ಅರ್ಧ ಭಾಗವನ್ನು ನೆಲಕ್ಕುರುಳಿಸಿ ಉಳಿದದ್ದನ್ನು ಗಿಡಕ್ಕೆ ಹಾಗೇ ನೇತುಬಿಟ್ಟು ಹಾರಿಹೋಗುವವು. ತಿನ್ನುವುದು ಒಂದು ಗ್ರಾಂ.... ಕೆಡಿಸುವುದು ಕಿಲೋಗ್ರಾಂ" ಎಂದು ಕೃಷಿಕನ ಆರೋಪ ಬೇರೆ. "ಎಣ್ಣೆಗಾಗಿ ತೆಂಗಿನಕಾಯಿ ಒಣ ಹಾಕಿರಲಿ, ಬೀಜಕ್ಕಾಗಿ ಗೋಡಂಬಿ ಇಟ್ಟಿರಲಿ ಕಚ್ಚಿಕೊಂಡು ಪಲಾಯನ ಮಾಡಿದವೇ! ಮರದ ಮೇಲೆ ಕುಳಿತು ತಿನ್ನಲೆತ್ನಿಸಿ ಗಟ್ಟಿ, ಚೆನ್ನಾಗಿಲ್ಲ ಎಂದು ಮುಖಕ್ಕೆ ಗಂಟುಹಾಕಿ ಬಿಸಾಕಿದವೇ." ಪಕ್ಷಿ ಧಾಮದ

ಅಧಿಕಾರಿಗಳಿಗಂತೂ ಕಾಗೆ ಸಿಂಹಸ್ವಪ್ನ. ಟಿಬೇಟ್, ಸೈಬೀರಿಯಗಳಿಂದ ವಲಸೆಬರುವ ಅಪರೂಪದ ಹಕ್ಕಿಗಳು ವಾಸಸ್ಥಾನಕ್ಕಾಗಿ ಮರಗಳನ್ನು ಹುಡುಕುತ್ತಿದ್ದಂತೆ ಕಾಗೆಗಳು ಅವಕ್ಕೆ ಇಲ್ಲದ ಕಿರುಕುಳ ಕೊಡುತ್ತವೆ. ಅವು ಗೂಡು ಕಟ್ಟಿದ ಮೇಲೂ, ಮೊಟ್ಟೆಗಳನ್ನು ಕದಿಯುವದು, ಒಡೆದು ಹಾಕುವದು, ಅವುಗಳ ಮರಿಗಳನ್ನು ತಿನ್ನುವುದು ಇತ್ಯಾದಿ. ಆದ್ದರಿಂದ ಕಾಗೆಗಳು ಪ್ರಬಲವಾಗಿರುವ ಕಾಡಿನಲ್ಲಿ ಇನ್ನಿತರ ಪಕ್ಷಿಗಳು ವಸಾಹತು ಮಾಡಲು ಬೇಜಾರುಪಟ್ಟುಕೊಳ್ಳುತ್ತವೆ. ದನ ಕಾಯುವವರಿಗೂ ಕಾಗೆಯ ಉಪದ್ರವ ತಪ್ಪಿದ್ದಲ್ಲ. "ಮೇಯುತ್ತಿರುವ ದನಕರುಗಳ ಗುದದ್ವಾರ, ಕಣ್ಣು ಕಿವಿಗಳನ್ನು ಕುಕ್ಕುವವಲ್ಲದೇ, ಎಲ್ಲಾವರೂ ಕಾಣಿಸಿಕೊಂಡ ಕಿರಿಗಾಯಗಳನ್ನು ಕುಕ್ಕಿ ಹಿರಿದನ್ನಾಗಿ ಮಾಡಿ ಗಾಸಿಗೊಳಿಸುತ್ತವೆ" ಎನ್ನುತ್ತಾರೆ. ತಾಯಂದಿರಂತೂ ಕಾಗೆಗೆ ಶಾಪ ಹಾಕಿದಷ್ಟೂ ಕಡಿಮೆಯೇ! ಶಾಲೆಗೆ ಹೊರಟ ಮಕ್ಕಳಿಗೆ ಕಟ್ಟಿ ಕೊಟ್ಟ ತಿಂಡಿಪೊಟ್ಟಣ ಕಸಿದುಕೊಂಡು ಹಾರುವುದು, ತಿಂದು ಇಟ್ಟ ಪುಟ್ಟ ಪ್ಲೇಟು, ಚಮಚಗಳನ್ನು ಒಯ್ದು ಎತ್ತೆತ್ತಲ್ಲೋ ಹಾರಿ ಚೆಲ್ಲಿಬಿಡುವದು, ಎಷ್ಟೋಸಲ ಕುಡಿದು ಇಟ್ಟ ಚಹಾದ ಕಪ್ಪು ಬಸಿಗಳನ್ನು ನೆಲಕ್ಕುರುಳಿಸಿ ಒಡೆದೇ ಇಡುವದು. ಎಲ್ಲವುಗಳಿಗಿಂತ ಹೆಚ್ಚಾಗಿ ಉಪಯೋಗಿಸಿ ಗುಟ್ಟಾಗಿ ಎಸೆದ ಸ್ಯಾನಿಟರಿ ನೆಪ್‌ಕಿನ್‌ಗಳನ್ನು ಚರಂಡಿಯಿಂದ ಎತ್ತಿ ಬಿಡಿಸಿ ರಸ್ತೆಯ ತುಂಬ ಹರವಿ ಹಾಕಿ ಅಕ್ಕಪಕ್ಕದವರನ್ನು ದಾರಿಹೋಕರೆಲ್ಲ ಶಪಿಸುವಂತೆ ಮಾಡುವದು, ಕಾಗೆಗೆ ಪ್ರಿಯವಾದ ಕ್ರಿಯೆಗಳು.

ಕಲಕತ್ತೆಯಲ್ಲಿ ಕಾಗೆಗಳದೇ ಸಾಮ್ರಾಜ್ಯ. ಬಂಗಾಲಿಗಳಿಗೆಲ್ಲ ತಿಂಡಿತೀರ್ಥ ಸೇವಿಸಿ ರಸ್ತೆಯ ಪಕ್ಕದಲ್ಲೆ ದೊನ್ನೆ, ಮಣ್ಣಿನ ಕುಡಿಕೆಗಳನ್ನು ಒಗೆಯುವ ಅಭ್ಯಾಸ. ಇವಕ್ಕೆಲ್ಲ ತಾನೇ ಬಾಧ್ಯಸ್ಥನೆಂಬ ದೃಢವಾದ ನಂಬಿಕೆಯಿಂದ ಇತರ ಪಶುಪಕ್ಷಿಗಳನ್ನು ಹತ್ತಿರ ಸುಳಿಯ ಬಿಡುವುದಿಲ್ಲ ಕಾಗೆ. ಅರಬರನ್ನೆಲ್ಲ ಸದೆಬಡೆದ ಯಹೂದಿಯರೂ ಕಾಗೆಗಳ ಕಿರುಕುಳದಿಂದ ಬೇಸತ್ತಿದ್ದಾರೆ ಎಂದು ನಂಬುವುದು ಕಷ್ಟ. ಮನೆಗೆ ಹಾಕಿದ ಗಾಜುಗಳನ್ನು ಒಡೆದು, ಮನೆಯನ್ನು ಪ್ರವೇಶಿಸಿ, ತಿಂಡಿ-ತಿನಿಸುಗಳನ್ನು ಮೆದ್ದು, ಉಳಿದವನ್ನು ಹಾಳು ಮಾಡಿಬಿಡುತ್ತವೆ. ಅಷ್ಟೇ ಅಲ್ಲ, ಮನೆಯಲ್ಲಿದ್ದ ಮಕ್ಕಳು ಮುದುಕರ ಮೇಲೆ ಹಲ್ಲೆ ಮಾಡಿಬಿಡುತ್ತವೆ. ಇಂಥ ಭಯೋತ್ಪಾದಕ ಕಾಗೆಗಳನ್ನು ಹೇಗೆ ನಿಯಂತ್ರಿಸುವುದೆಂದು ಅಲ್ಲಿಯ ವಿಜ್ಞಾನಿಗಳು ತಲೆಕೆರೆದುಕೊಳ್ಳುವಂತೆ ಆಗಿದೆ. ನಮ್ಮ ಹಳ್ಳಿಗರು ಕರಿಬಟ್ಟೆ ಸುಟ್ಟ ತೆಂಗಿನಕಾಯಿ ಸಿಪ್ಪೆ, ಇಲ್ಲವೇ ಸತ್ತಕಾಗೆಯನ್ನು ತೂಗಹಾಕಿದರೆ ಕಾಗೆಗಳ ಉಪಟಳ ಕಡಿಮೆಯಾಗುತ್ತದೆ ಎನ್ನುತ್ತಾರೆ. ಅದರ ಜೊತೆಗೆ, ಬೆತ್ತ, ಕೋಲು, ಲಾಠಿಗಳನ್ನು ಇಟ್ಟರೆ ಇನ್ನೂ ಉತ್ತಮವಂತೆ. ನಗರಗಳಲ್ಲಿ ಕಿಡಕಿ, ಬಾಗಿಲುಗಳಿಗೆ ಪರದೆ, ಜಾಳಿಗಳನ್ನು ಬಿಗಿದು ತಾವು ಪಂಜರಗಳಲ್ಲಿ ವಾಸಿಸುತ್ತ ಕಾಗೆಗಳಿಂದ ಸಂರಕ್ಷಣೆ ಪಡೆಯುತ್ತಾರೆ, ನಾಗರಿಕರು. ಇನ್ನೂ ಕೆಲವರು, ಕೀಟನಾಶಕ ಮಿಶ್ರಿತ ಆಹಾರದಿಂದ ಅವುಗಳ ವಂಶವನ್ನೇ ನಿರ್ನಾಮ ಮಾಡಲು ಯತ್ನಿಸುತ್ತಾರೆ. ಆದರೆ ಕಾಗೆಗಳು ಉಪಯುಕ್ತ ಸಹಜೀವಿಗಳು, ನಮ್ಮಷ್ಟೇ ಅವಕ್ಕೂ ಜಗತ್ತಿನಲ್ಲಿ ಬಾಳಿ ಬದುಕುವ ಅಧಿಕಾರ ಇದೆ ಎಂದು ಅರಿತು, ಅವಕ್ಕೆ ಅನುವು ಮಾಡಿಕೊಡುವದು ಕ್ಷೇಮಕಾರಿ.

17. ಮೀನು ತೋಟ ಬೆಳೆಸಿ

ಎಲ್ಲ ಕಡೆಯಲ್ಲಿಯೂ ಆಹಾರಕ್ಕಾಗಿ ಹಾಹಾಕಾರ. ಬೆಲೆ ಏರಿಕೆಗಾಗಿ ಪ್ರತಿಭಟನೆ, ಕಾಳಸಂತೆಯ ವ್ಯಾಪಾರಿ, ಹಸಿರು ಕ್ರಾಂತಿ ಘೋಷಿಸಿದ ಸರಕಾರಕ್ಕೆ ಬೈಗಳು ನಾಲ್ಕೂ ದಿಕ್ಕಿನಿಂದ ಕೇಳಿ ಬರುತ್ತಿವೆ. ಕಾಲು ಶತಮಾನದವರೆಗೆ ಬಡತನ, ಆಹಾರ ಕೊರತೆ. ನಿರುದ್ಯೋಗ ನೀಗಿಸುವ ಸಲುವಾಗಿ ಪಂಚವಾರ್ಷಿಕ ಯೋಜನೆಯನ್ನು ಕೈಕೊಂಡು ಕೇವಲ ಒಂದು ಮಳೆಗಾಲ ಸರಿಯಾಗದಿದ್ದರೆ ಜೀವನದ ಎಲ್ಲ ಅವಶ್ಯಕ ವಸ್ತುಗಳ ಕೊರತೆ ಆಗುವಂತಾದರೆ ನಾವೆಂತಹ ಯೋಜನೆಗಳನ್ನು ಕೈಕೊಂಡಿದ್ದೇವೆ? ಎಂದು ಯೋಚಿಸಬೇಕು. ಅತೀ ವೃಷ್ಟಿ, ಅನಾವೃಷ್ಟಿ, ವೇದಕಾಲದಿಂದಲೂ ನಮ್ಮೊಂದಿಗೆ ಇರುವಾಗ ಯೋಜನಾ ತಜ್ಞರು ಈ ಮಾತನ್ನು ಏಕೆ ಲಕ್ಷಕ್ಕೆ ತೆಗೆದುಕೊಂಡಿಲ್ಲ? ಎಂಬುದು ಆಶ್ಚರ್ಯದ ಮಾತು. ಬಹುಶಃ ಆ ನಾಲ್ಕು ಐದು ವರ್ಷ ಸರಿಯಾಗಿ ಮಳೆ ಬಿದ್ದದ್ದರಿಂದ ಒಳ್ಳೆ ಬೆಳೆ, ಹೆಚ್ಚಿನ ವಿದ್ಯುತ್ ಉತ್ಪಾದನೆಯಿಂದ ದೇಶದ ಅಭಿವೃದ್ಧಿಯಾದಾಗ ನಮ್ಮ ನಾಯಕರು ತಾವು ಕೃಷಿರಂಗದಲ್ಲಿ ಹಣದ ಹೊಳೆ ಹರಿಸಿ ಕೃಷಿ ಕಾಲೇಜು, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಕೃಷಿ ಪಂಡಿತರನ್ನು ಉತ್ಪಾದಿಸಿದ್ದರಿಂದ 'ಹಸಿರು-ಕ್ರಾಂತಿ' ಎಂದು ಭ್ರಾಂತಿ ಪಟ್ಟಿರಬೇಕು. ಕೃಷಿ ಪದವಿಗಾಗಿ ಓದಿ, ಸಾಹೇಬರ ನೌಕರಿಗಾಗಿ ಬಡಿದಾಡುವವರು ಹೆಚ್ಚಿನ ಆಹಾರ ಧಾನ್ಯಗಳನ್ನು ಹೇಗೆ ಬೆಳೆಸಿಯಾರು? ಈ ಲೇಖನ ಬರೆದು ಮೂರು ದಶಕಗಳಾಗಿವೆ. ಪರಿಸ್ಥಿತಿ ಇನ್ನೂ ಹದಗೆಟ್ಟಿದೆ!

ಹೆಚ್ಚು ಆಹಾರ ಬೆಳೆಸುವ ಯತ್ನದ ಜೊತೆಗೆ ಶತಮಾನಗಳಿಂದ ನಾವು ಅನುಸರಿಸುತ್ತಾ ಬಂದ ನಾಲಿಗೆಯ ರುಚಿಯು, ಆದರೆ ದೇಹಕ್ಕೆ ಸಮತೋಲನ ಆಹಾರ ಸಿಗದ ದೂಷಿತ ಆಹಾರ ಅಭ್ಯಾಸಗಳನ್ನು ಬದಲಿಸಬೇಕಾಗಿತ್ತು. ಶೇಕಡಾ ತೊಂಬತ್ತು ಭಾರತೀಯರ ಊಟ ಮುಕ್ಕಾಲು ಪಾಲು ಅಕ್ಕಿ, ಗೋದಿ, ಜೋಳ, ರಾಗಿ, ಬಾಜ್ರಾಗಳಂತಹ ಧಾನ್ಯಗಳಿಂದಲೇ ಕೂಡಿರುತ್ತವೆ. ಅದೇ ಪಾಶ್ಚಿಮಾತ್ಯರು ತಮ್ಮ ಊಟದ ಒಂದು ಹತ್ತಾಂಶವನ್ನು ಧಾನ್ಯ ಆಹಾರ ಸೇವಿಸಿ ಉಳಿದವನ್ನು, ಮೀನು, ಮಾಂಸ, ಹಸಿ ತರಕಾರಿಗಳನ್ನು ಸೇವಿಸುವುದರಿಂದ ದೇಹದ ಬೇಡಿಕೆ ಪೂರೈಸಲ್ಪಡುತ್ತದೆ. ಬಹು ಸಂಖ್ಯಾತ ಭಾರತೀಯರು ಪ್ರೋಟೀನಿನ ಕೊರತೆಯಿಂದ ಬಳಲುತ್ತಿದ್ದಾರೆ, ಎಂದು ವಿಶ್ವಸಂಸ್ಥೆ ಕಂಡು ಹಿಡಿದಿದೆ. ಕಾಳು ಕಡಿಗಳ ಬೆಲೆ ಗಗನಕ್ಕೆ ಏರುತ್ತಿರುವ ಕಾಲದಲ್ಲಿ ಹಾಲು ಹೈನ, ಮೊಟ್ಟೆ, ಮಾಂಸ, ಮೀನುಗಳನ್ನು, ಕಡಿಮೆ ಬೆಲೆಗೆ ಸಿಗುವಂತೆ ಮಾಡಿದ್ದರೆ ಜನತೆ ಇವುಗಳನ್ನು ಖಂಡಿತವಾಗಿ ರೂಢಿ ಮಾಡಿಕೊಳ್ಳುತ್ತಿತ್ತು. ಸಸ್ಯ ಪ್ರೋಟೀನ್‌ಗಳಿಗಿಂತ ಪ್ರಾಣಿ ಪ್ರೋಟೀನುಗಳನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬಹುದು

ಮತ್ತು ಮತ್ಸ್ಯ ಪ್ರೋಟಿನ್‌ಗಳಷ್ಟು ಸುಲಭ ಬೆಲೆಗೆ ಬೇರಾವ ಪ್ರೋಟಿನ್‌ಗಳನ್ನೂ ಉತ್ಪಾದಿಸಲು ಬರುವಂತಿಲ್ಲ. ಅಂತೆಯೇ ಅಮೇರಿಕನ್ ಕೃಷಿಗಾರರು, ಮತ್ಸ್ಯ ಉದ್ದಿಮೆಯನ್ನು ಲಾಭದಾಯಕ ಮಾಡಿಕೊಂಡಿದ್ದಾರೆ. ಬುಲ್‌ಡೋಜರುಗಳಿಂದ ಹೊಂಡ ಒಂದನ್ನು ನಿರ್ಮಿಸಿ, ನಲ್ಲಿಯ ನೀರಿನಿಂದ ಅವನ್ನು ತುಂಬಿಸಿ, ಅದರಲ್ಲಿ ಮಾರ್ಜಾಲ ಮೀನಿನ (Cat Fish) ಮರಿಗಳನ್ನು ಸಾಕಿ ಅವನ್ನು ಸೋಯಾಬೀನ್ಸ್‌ಗಳ ಪ್ರೋಟಿನ ಮೇಲೆ ಬೆಳೆಸುತ್ತಾರೆ. ಬೆಳೆದ ಮೀನಿನ ಶಿಕಾರಿ ಮಾಡಿದಾಗ ಕಡಿಮೆ ಬೆಲೆಯಲ್ಲಿ ಸಸ್ಯ ಪ್ರೋಟಿನುಗಳನ್ನು, ಮತ್ಸ್ಯ ಪ್ರೋಟಿನ್‌ಗಳನ್ನಾಗಿ ಪರಿವರ್ತಿಸಿದ ಗೆಲವು ಅವನಿಗೆ. ಇದರಿಂದ ಅವನು ಕೈತುಂಬ ಸಂಪಾದಿಸುತ್ತಾನೆ. ನಾವಿನ್ನೂ ಅಮೇರಿಕನ್ ಕೃಷಿಗಾರರಂತೆ ಮಾಡುವ ಸ್ಥಿತಿಯಲ್ಲಿ ಇಲ್ಲದಿದ್ದರೂ ದೈವದತ್ತವಾಗಿ ನಮ್ಮಲ್ಲಿ ಇದ್ದ ಮಡು, ಹೊಂಡ, ಕೆರೆ, ಬಾವಿ, ಸರೋವರಗಳನ್ನು ಮೀನು ಬೆಳೆಸುವದಕ್ಕಾಗಿ ಬಳಸಿಕೊಳ್ಳಬಹುದು.

ಜನಸಾಮಾನ್ಯರಲ್ಲಿ ಮೀನಿನ ಬಗ್ಗೆ ಅಜ್ಞಾನ, ಜಿಗುಪ್ಸೆ ಅತೀ ಹೆಚ್ಚು. ನೀರಿನೊಳಗಿನ ಎಲ್ಲ ಹೊಲಸನ್ನು ತಿಂದು ದುರ್ವಾಸನೆ ಹೊರಸೂಸುತ್ತಿರುವ ಪ್ರಾಣಿ ಎಂದರೆ ಮತ್ಸ್ಯ ಎಂಬುದು ಅವರ ಭ್ರಮೆ. ಪತ್ನಿಗೆ, ಮಗಳಿಗೆ, ಮೀನಾಕ್ಷಿ ಎಂಬ ಹೆಸರಿಟ್ಟರೂ ಅಂತಹ ಸುಂದರ ಕಣ್ಣು ಉಳ್ಳ ಪ್ರಾಣಿಗಳನ್ನು ನೀರಿನಲ್ಲಿಯೇ ಕಂಡು ಮೋಹಿಸುವವರು ತೀರ ಕಡಿಮೆ! ಅಗರ್ಭ ಶ್ರೀಮಂತರಲ್ಲಿ ಹಣ ಸುರಿದು ಗಾಜಿನ ನೀರಿನ ಕೊಳವೆಗಳಲ್ಲಿ ಸುವರ್ಣ ಮೀನು ಸಾಕುವದು ಇತ್ತಲಾಗಿ ಬೆಳೆದು ಬಂದ ಹವ್ಯಾಸವಾದರೂ ಅದರಲ್ಲಿ ಪ್ರಾಣಿ ದಯೆಗಿಂತ ಆಧುನಿಕರೆಂದು ತೋರಿಸಿಕೊಳ್ಳುವ ಹಂಬಲವೇ ಹೆಚ್ಚು. ಮಾಂಸಾಹಾರಿಗಳು ನಾಲಗೆಯ ಚಪಲಕ್ಕಾಗಿ ಹಣಸುರಿದು ಮೀನುಗಳನ್ನು ಕೊಂಡು ತಿಂದರೆ ಇತರರು, ಸಮುದ್ರ ದಂಡೆಯಲ್ಲಿ, ಪೇಟೆಯಲ್ಲಿ ಮೂಗನ್ನು ಘಾಸಿ ಮಾಡುವ ನಾತದೊಡನೆ ನೊಣಗಳ ಜಾತ್ರೆಯನ್ನು ಸ್ವಾಗತಿಸಿದ, ವೀರ ಸ್ವರ್ಗ ಸೇರಿ ಒಂದೆರಡು ದಿವಸ ಸಂದು ಹೋದ ಶವಗಳೇ ಮೀನೆಂದು ತಿಳಿದವರು. ಕಾರವಾರ, ಹೊನ್ನಾವರ, ಮಲ್ಪೆಗಳಲ್ಲಿಯ ಮತ್ಸ್ಯ ಬಂದರಕ್ಕೆ ಭೇಟಿಕೊಟ್ಟು ಅಲ್ಲಿಯ ದುರ್ನಾತದಿಂದ ಮೂಗು ತುಂಬಿಕೊಂಡವರು, ಮೀನ ಹೆಸರಿಗೇ ವಾಂತಿ ಮಾಡಿಕೊಳ್ಳಬಹುದು. ಇಂತಹ ಸ್ಥಿತಿಗೆ ಮೀನುಗಾರರು, ವ್ಯಾಪಾರಿಗಳು ಕಾರಣ. ಬಲೆಯಲ್ಲಿ ಎಲ್ಲ ತರದ ಮೀನುಗಳೂ ಸಿಕ್ಕಿಕೊಳ್ಳುವದರಿಂದ ಕಿಸೆ ತುಂಬ ಕಾಸು ಬರುವುದನ್ನು ಆರಿಸಿ ಉಳಿದವನ್ನು ಗೊಬ್ಬರ ಮಾಡಲು ಒಣಗಿಸುವರು. ಇಲ್ಲವೇ ಅಲ್ಲಿಯೇ ತಿರುಗುವ ನಾಯಿ, ಹದ್ದುಗಳಿಗಾಗಿ ಬಿಟ್ಟು ಬಿಡುವರು. ಮತ್ಸ್ಯದ ನಿಜ ತಾಣವಾದ ಆಳವಿಲ್ಲದ ನೀರಿನಲ್ಲಿ ತನ್ನ ರೆಕ್ಕೆಗಳಿಂದ ಹುಟ್ಟು ಹಾಕುತ್ತಾ ರೆಪ್ಪೆ ಇಲ್ಲದ ಕಣ್ಣುಗಳಿಂದ ಪರಿಸರ ನೋಡುತ್ತಾ, ಸತತವಾಗಿ ಬಾಯಿಂದ ನೀರನ್ನು ತೆಗೆದು ಕಿವಿಯಿಂದ ಹೊರಗೆ ಬಿಡುವಾಗ ನೋಡಬೇಕು. ಇಲ್ಲವೇ ಅದೀಗ ನೀರಿನಿಂದ ಹೊರತಂದ ಹೊಳೆ ಹೊಳೆಯುವ ಮೈ ಬಣ್ಣದ, ಹೆಚ್ಚಿನ ಪ್ರಾಣವಾಯು ಜೀರ್ಣಿಸಿಕೊಳ್ಳದೇ ಇರುವ ಮೀನು ಕೈಯಲ್ಲಿ ಹಿಡಿದಾಗ ಸುಮಂಗಲೆಯ ಸ್ಪರ್ಶ ಸುಖ ಸಿಗುತ್ತದೆ. ನೀವು ಮಹಾನಗರ ಜೀವನಕ್ಕೆ ಮಾರಿ ಹೋದವರಾದರೆ ಅಲ್ಲಿಯ ಭವ್ಯ ಅಂಗಡಿಗಳ ಗಾಜಿನ ಕಪಾಟಿನಲ್ಲಿ ಹುಡಿ ಬರ್ಫದ ಮೇಲೆ ಚಿರ ಕಾಂತಿ ಪಡೆಯುವ ಮತ್ಸ್ಯಕ್ಕೆ ಹೂ ಅಲಂಕಾರ ಮಾಡಿಟ್ಟಾಗಲೂ ಚಲನಚಿತ್ರ ಪ್ರಪಂಚದ ಕೃತಕ ಸುಂದರಿಯಂತೆ ಕಣ್ಣಿಗೆ ಹಬ್ಬ ಮಾಡಬಹುದು.

ಸಸ್ಯಾಹಾರಿಗಳು ಮೊಟ್ಟೆಗಳನ್ನು ತಿನ್ನಲು ಒಪ್ಪಬಹುದು. ಮಾಂಸದ ರುಚಿಯನ್ನು ನೋಡಬಹುದು. ಆದರೆ ಮತ್ಸ್ಯಾಹಾರ ಮಾತ್ರ ಸರ್ವಥಾ ಸಾಧ್ಯವಿಲ್ಲ ಎಂದು ತಮ್ಮ ಕೊನೆಯ ನಿರ್ಣಯ ಕೊಟ್ಟು ಬಿಡುತ್ತಾರೆ. ಇಂತಹ ಊಹೆಗೆ ಅವರಿಗಿದ್ದ ತಪ್ಪು ಕಲ್ಪನೆಯೇ ಕಾರಣ. ಮುಳ್ಳು ಬೇರ್ಪಡಿಸಿದ ಮತ್ಸ್ಯದಿಂದ ಪಕೋಡಾ, ಬಜಿ, ಪ್ಯಾಟಿಸ್ ಮುಂತಾದ ತಿನಸು ಮಾಡಿ ಬಡಿಸಿದರೆ ಎಂತಹ ಸಸ್ಯಾಹಾರಿಗೂ, ಒಂದಿಷ್ಟೂ ಸಂಶಯ ಬರಲಿಕ್ಕಿಲ್ಲ. ಮೀನು ಸಾರು ಹಾಕಿದ ಬೇಳೆ ಅತೀ ರುಚಿ ಎಂದು ಅರಿಯದ ಸಸ್ಯಾಹಾರಿಗಳು, ಅದೇ ಹೋಟೆಲಿಗೆ ಹೋಗುವ ವಾಡಿಕೆ ಬೆಳೆಸಿಕೊಂಡಿದ್ದರಂತೆ. ಹಿಂದುಗಳಿಗೆ ಮತ್ಸ್ಯಾಹಾರ ತ್ಯಾಜ್ಯ ಎಂಬುದರಲ್ಲಿ ಹುರುಳಿಲ್ಲ. ಹಳಬರು, ಧರ್ಮಿಷ್ಠರು, ಸಮಾಜದ ಕಟ್ಟುನಿಟ್ಟುಗಳಿಗೆ ಕಟ್ಟುಬಿದ್ದು ಪರಿಸರದವರು ಏನೆಂದಾರು? ಎಂದು ಇಂತಹ ಸಾಹಸಕ್ಕೆ ಹೋಗಿರಲಿಕ್ಕಿಲ್ಲ. ಆದರೆ ಇಂದಿನ ನವಜನಾಂಗಕ್ಕೆ, ಮನೆಯಲ್ಲಿ ಅಲ್ಲವಾದರೆ, ಕದ್ದಾದರೂ ತಿಂದಾಗಲೇ ನೆಮ್ಮದಿ. ಆದರೆ ದುರ್ದೈವದಿಂದ ಮತ್ಸ್ಯಾಹಾರ ಭೋಗದ ವಸ್ತು! ಎಂಬಂತೆ ಹಣ ಸುಲಿವ ಮಾರ್ಗವಾಗಿದೆಯೇ ವಿನಃ ಅದು ನಿತ್ಯ ಬಳಕೆಯ ಸಾಮಗ್ರಿ, ಎಂಬ ಕಲ್ಪನೆ ಇಂದೂ ನಮ್ಮಲ್ಲಿ ಬೆಳೆದು ಬಂದಿಲ್ಲ.

ಕಡಲಿನ ಗರ್ಭದಲ್ಲಿಯ ಆಳ ಮೀನುಗಾರಿಕೆಯ ಸಾಧ್ಯತೆಯ ಬಗ್ಗೆ ಪಾಶ್ಚಿಮಾತ್ಯ ವಿಜ್ಞಾನಿಗಳು ಅರಬೀ ಸಮುದ್ರ ಮತ್ತು ಹಿಂದೂ ಮಹಾಸಾಗರದಲ್ಲಿ ಹೇರಳವಾದ ಮತ್ಸ್ಯ ಸಂಪತ್ತಿದೆ ಎಂದೂ ಅಭಿಪ್ರಾಯ ಪಟ್ಟಿದ್ದಾರೆ. ಇಷ್ಟಾದರೂ, ಅನ್ನ, ಭಕ್ರಿ, ರೊಟ್ಟಿ, ರಾಗಿ ಮುದ್ದೆಯಂತೆ ಮತ್ಸ್ಯವೂ ಒಂದು ಆಹಾರವಾಗದೇ ಅದು ಉಪ್ಪಿನಕಾಯಿ, ಹಪ್ಪಳ, ಚಟ್ನಿ, ಗೊಜ್ಜಿನ ವರ್ಗಕ್ಕೆ ಸೇರಿಕೊಂಡಿದೆ. ಮೀನುಭಕ್ಷಕ ಭಾರತೀಯರು ಅಲ್ಪಸಂಖ್ಯಾತರು, ಅದೂ ಅವರ ಊಟದ ಒಂದು ಹತ್ತಾಂಶಕ್ಕಿಂತ ಕಡಿಮೆ ಭಾಗ ಮೀನಿರುತ್ತದೆ, ಎಂಬುದನ್ನು ಲಕ್ಷ್ಯದಲ್ಲಿಡಬೇಕು. ಶತಮಾನಗಳಿಂದ ಬೆಳೆದು ಬಂದ ಜನತೆಯ ಆಹಾರ ಅಭ್ಯಾಸಗಳು ಸುಲಭವಾಗಿ ಬದಲಾಗುವುದಿಲ್ಲ ನಿಜ. ಆದರೆ ಸರಕಾರ, ಸಮಾಜದ ಜನಹಿತದ ದೃಷ್ಟಿಯಿಂದ ಈ ಬದಲಾವಣೆಯನ್ನು ತರಲು ತನು ಮನ ಧನದಿಂದ ಯತ್ನಿಸಿದ್ದಾರೆ. ಸ್ವಾತಂತ್ರ್ಯದ ಕಾಲು ಶತಮಾನದಲ್ಲಿ ಎಷ್ಟು ಸುಧಾರಣೆಯಾಗುತ್ತಿತ್ತೋ ಏನೋ. ಜನತೆಯ ಅಭಿರುಚಿಯನ್ನೇ ಜಾಹಿರಾತಿನಿಂದ ಬದಲು ಮಾಡಲು ಅಮೇರಿಕನ್ ವ್ಯಾಪಾರಿಗಳು, ನಿಸ್ಸೀಮರು. ಅನ್ನವಿರಲಿ ವಿಲಾಸಿ ಸಾಮಗ್ರಿಗಳಿರಲಿ ಇಲ್ಲವೇ ಬೇರೇನಾದರೂ ಇರಲಿ, ಅವುಗಳನ್ನು ಕಡಿಮೆ ಬೆಲೆಗೆ ಪರೀಕ್ಷೆಗಾಗಿ ಕೊಟ್ಟು, ವೃತ್ತಪತ್ರ, ರೇಡಿಯೋ, ಟೆಲಿವಿಜನ್‌ಗಳಲ್ಲಿ ಜಾಹೀರಾತು ಮಾಡಿದಾಗ ಜನ ಅದರಲ್ಲಿ ಆಸಕ್ತಿ ತೋರಿಸಲು ಪ್ರಾರಂಭಿಸುತ್ತಾರೆ. ಹುಳುಕು ಕಟ್ಟಿಗೆಗೆ ಉತ್ತಮ ಕಟ್ಟಿಗೆಗಿಂತ ಹೆಚ್ಚು ಬೆಲೆ ಬರುವಂತೆ ಮಾಡಿದ್ದು ಅಮೇರಿಕನ್ ಮಾರವಾಡಿಗಳ ವ್ಯವಹಾರ ಕುಶಲತೆ ಎತ್ತಿ ತೋರಿಸುತ್ತದೆ. ಅರಣ್ಯದಲ್ಲಿ ಮರಗಳಿಗೆ ತೊಗಟೆ ಕೀಟಗಳು ದಾಳಿಮಾಡಿ ಅವುಗಳಲ್ಲಿ ಕಂದು-ಬಣ್ಣದ ತೂತುಗಳನ್ನು ನಿರ್ಮಾಣಿಸುವದು ಪ್ರತಿ ಕಟ್ಟಿಗೆಯ ಬಳಕೆದಾರನ ಅನುಭವದ ಮಾತು. ಒಳ್ಳೆ ಇಮಾರತಿ ಕಟ್ಟಿಗೆ 'ಎ' ಗ್ರೇಡ್ ಎಂದು ಮಾರಿದರೆ ಅದೇ ಜಾತಿಗೆ ಸೇರಿದ ಹುಳುಕು ಕಟ್ಟಿಗೆ 'ಬಿ' ಇಲ್ಲವೇ 'ಡಿ' ಗ್ರೇಡ್ ಎಂದು ಅಗ್ಗದ ದರದಲ್ಲಿ ಕೊಡಬೇಕಾಗುತ್ತಿತ್ತು. ಕೊರಡು ವ್ಯಾಪಾರಿಗಳೆಲ್ಲ ವಿಚಾರ ವಿನಿಮಯ ಮಾಡಿ, ಹೆಸರಾಂತ ತೈಲ ಚಿತ್ರಕ್ಕೆ ಫ್ರೇಮು ಹಾಕಲು, ಟೇಬಲ ಖುರ್ಚಿಗಳನ್ನು

ಹುಳುಕು ಕಟ್ಟಿಗೆಯಿಂದ ಮಾಡಿ, ಪ್ರದರ್ಶಿಸಿ, ಇಂತಹ ಕಟ್ಟಿಗೆಯಿಂದ ಚಿತ್ರದ, ಮನೆಯ ಆಕರ್ಷಣೆ ಹೆಚ್ಚುತ್ತದೆ! ಎಂದು ಪ್ರಚಾರ ಮಾಡಿದರು. ಜನತೆ ಈ ಪ್ರಚಾರಕ್ಕೆ ಮಾರುಹೋಗಿ ಹುಳುಕು ಕಟ್ಟಿಗೆಗೆ ಬೇಡಿಕೆ ಹೆಚ್ಚಾದಾಗ ಕೃತಕವಾಗಿ ಹುಳುಕು ಕಟ್ಟಿಗೆ ಮಾಡಿ ಹೆಚ್ಚು ಲಾಭಮಾಡಿಕೊಳ್ಳುವ ಪ್ರಸಂಗಗಳೂ ಬಂದಿವೆಯಂತೆ! ಇಂತಹ ಧೋರಣೆ ನಮ್ಮ ಸರಕಾರ ಅನುಸರಿಸಿದರೆ ಇಂದು ಅನ್ನಕ್ಕಾಗಿ ಬಡಿದಾಡುವ ಬದಲಾಗಿ ಅರ್ಧ ಊಟವನ್ನು ಮೀನಿನಿಂದಲೇ ತುಂಬಿಸಿಕೊಳ್ಳುತ್ತಿದ್ದೆವೋ ಏನೋ. ಮುಂಬಯಿಯಲ್ಲಿ ಅಕ್ಕಿ ಐದು ರೂಪಾಯಿಗೆ ಮಾರಿದರೆ ಮಂಗಳೂರಿನಲ್ಲಿ ಮೂರಕ್ಕೆ ಮಾರಲಾಗುತ್ತದೆಯಂತೆ. ಸರಕಾರದ ಗೋದಾಮುಗಳಲ್ಲಿ ಅನ್ನದ ಸಂಗ್ರಹವಿರುವಾಗಲೇ ಕಾಳು–ಕಡಿಗಳ ಬೆಲೆ ಸ್ವಲ್ಪ ಏರಿಸಿ ಪ್ರೋಟೀನ್‌ಭರಿತ ಮೀನು ಅಗ್ಗದರದಲ್ಲಿ ಸಿಗುವಂತೆ ಮಾಡಬಹುದಾಗಿತ್ತು. ಪ್ರಜೆಗಳಿಗೆ ಅಭಿರುಚಿ ಬೆಳೆಯುವಂತೆ ಮಾಡುವ ಮತ್ತು ಅಡಿಗೆಯ ವಿಧಾನಗಳನ್ನು ಕಲಿಸಲು ಅಲ್ಲಲ್ಲಿ ಮತ್ಸ್ಯಾಹಾರ ಕೇಂದ್ರ ತೆಗೆದರೆ ಜನರು ಯತ್ನಿಸಿ ನೋಡುತ್ತಿದ್ದರು. ಮೀನೆಂದರೆ ನಾರುವ ಮಾಂಸ, ಮುಳ್ಳಿನ ರಾಶಿಯಲ್ಲ! ಎಂದು ಅರಿತು ಜನರು ಅದನ್ನೂ ಒಂದು ಸಮತೋಲನ ಆಹಾರವೆಂದು ಒಪ್ಪುತ್ತಿದ್ದರೋ ಏನೋ! ನಮ್ಮವರು ಹೊಸತನವನ್ನು ಒಪ್ಪುತ್ತಿಲ್ಲ ಎಂಬ ಮಾತಿನಲ್ಲಿ ಹುರುಳಿಲ್ಲ. ಶತಮಾನಗಳಲ್ಲಿ ಅಕ್ಕಿಯನ್ನೇ ಉಣ್ಣುತ್ತ ಬಂದ ಬಂಗಾಲಿಗಳಿಗೆ ರೇಶನ್ ಕಾಲದಲ್ಲಿ ಬಲಾತ್ಕಾರವಾಗಿ ಗೋದಿಯನ್ನು ಕೊಟ್ಟರು. ಇಂದು ಅವರು ಗೋದಿಯ ರೊಟ್ಟಿ, ಚಪಾತಿ, ಬ್ರೆಡ್‌ಗಳನ್ನು ಧಾರಾಳವಾಗಿ ತಿನ್ನುತ್ತಾರಲ್ಲದೇ ಗೋದಿಯನ್ನು ಬೆಳೆಸುತ್ತಾರೆ. ಅವರ ಗೋದಿ ಪಂಜಾಬದ ಗೋದಿಗಿಂತ ಯಾವ ರೀತಿಯೂ ಕೀಳಾಗಿಲ್ಲ. ಇದರಂತೆ ನಮ್ಮ ಕೃಷಿಕರು ಆಧುನಿಕತೆ





ಒಪ್ಪುವುದಿಲ್ಲವೆಂದು ತಜ್ಞರು ದೃಢವಾಗಿ ನಂಬಿದ್ದರೂ, ಕೃತಕಗೊಬ್ಬರ, ಕೀಟನಾಶಕ, ಹಾಯ್‌ಬ್ರಿಡ್ ಬೀಜ, ಟ್ರಾಕ್ಟರ್‌ಗಳನ್ನು ಬಳಸಿ ತಮ್ಮ ಗಳಿಕೆಯನ್ನು ಹೆಚ್ಚಿಸಿಕೊಂಡಿಲ್ಲವೇ? ಮತ್ಸ್ಯ ಬೆಳೆಸುವುದರಿಂದ ಕೈತುಂಬ ಸಂಪಾದಿಸಿ ಬರಗಾಲದ ದಿನಗಳಲ್ಲಿಯೂ ಹೊಟ್ಟೆ ತುಂಬ ಊಟ. ಮಿತಖರ್ಚಿನಲ್ಲಿ ದೇಹಕ್ಕೆ ಅತ್ಯವಶ್ಯಕವಾದ ಪ್ರೋಟೀನ್ ಸಿಗುವಂತೆ ಮಾಡಿದರೆ ಭಾರತಿಯರೂ ಮುಂದುವರಿದ ರಾಷ್ಟ್ರಗಳಂತೆ ತನ್ನ ಆಹಾರ ಸಮಸ್ಯೆ ಬಿಡಿಸುವುದರಲ್ಲಿ ಯಶಸ್ವಿಯಾದಾರು!

ಕಡಲಿನ ಮೀನುಗಾರಿಕೆಗೆ ಹೆಚ್ಚಿನ ನಿಪುಣತೆ, ಯಾಂತ್ರಿಕ ನಾವೆ, ಬಲೆಗಳೆಲ್ಲ ಬೇಕಾದ್ದರಿಂದ ಅದೊಂದು ವ್ಯವಸಾಯವಾಗಿಬಿಟ್ಟಿದೆ. ನಮ್ಮ ಹಿತ್ತಲಲ್ಲಿ ಇರುವ ಯಾವದೇ ನೀರಿನ ಸಂಚಯನವನ್ನು ಮೀನಿನ ತೋಟವನ್ನಾಗಿ ಬೆಳೆಸುವದು ಸರ್ವ ರೀತಿಯಿಂದಲೂ ಲಾಭಕರ. ಭಾರತದಲ್ಲಿ ಸಿಹಿನೀರಿನ (Fresh Water) ಮೀನುಗಾರಿಕೆಗೆ ಪ್ರಾಧಾನ್ಯತೆ ಕೊಡಬೇಕೆಂದು ನಿಶ್ಚಯಿಸಿ ಥೈಲಂಡ್ ಮತ್ತು ಶ್ರೀಲಂಕಾದಿಂದ ಮರಿಮೀನು ಆಮದು ಮಾಡಿ ಉದಕಮಂಡಲದಲ್ಲಿ ಅದರ ವಿಸ್ತರಣಾ ಕೇಂದ್ರ ತೆರೆಯಲಾಯಿತು. ಅಲ್ಲಿ ಅವು ಯಶಸ್ವಿಯಾಗಿ ಬೆಳೆಯಹತ್ತಿದ ನಂತರ ಬಯಲು ಪ್ರದೇಶದಲ್ಲಿಯೂ ಬೆಳೆಸಿದರು. ಪಶ್ಚಿಮ ಬಂಗಾಲದಲ್ಲಿ ಅವರು ಖಾಸಗಿಯಾಗಿ ಮರಿಮೀನು ಬೆಳೆಸಿ ಜನರಿಗೆ ಮಾರುವದರಲ್ಲಿ ನಿಪುಣರು. ಬ್ಯಾರಕಪುರದಲ್ಲಿ ಸರಕಾರಿ ತರಬೇತಿ ಕೇಂದ್ರವೂ ಇದೆ. ರಾಜಸ್ಥಾನದಲ್ಲಿ ಕೃತಕ ಸರೋವರಗಳಲ್ಲಿ ಮೀನು ಬೆಳೆಸಿ ದಿಲ್ಲಿ, ಪಶ್ಚಿಮ ಬಂಗಾಲಕ್ಕೆ ಮಾರುತ್ತಾರೆ. ಹಲವಾರು ಜಾತಿಯ ಮೀನು ಬೆಳೆಸಬಹುದಾದರೂ ಅವುಗಳ ಆಹಾರ, ಬೆಳವಣಿಗೆ, ರುಚಿ ಬೇಕಾಗುವ ಅವಧಿ, ಮತ್ತು ಬೆಲೆ ಲಕ್ಷದಲ್ಲಿ ಇಟ್ಟು, ಕಟ್ಲಾ (Catla), ರುಹು (Ruhu) ಮತ್ತು ಮ್ರಿಗೆಲ Mrigala ಲಾಭಕರ ಎಂದು ಪರಿಗಣಿಸಲಾಗಿದೆ.

ಮ್ರಿಗೆಲ ಮಡುವಿನ ತಳದಲ್ಲಿ, ರುಹು ಮಧ್ಯದ ನೀರಿನಲ್ಲಿ, ಕಟ್ಲಾ ಆಳವಿರದ ನೀರಿನಲ್ಲಿ ಜೀವಿಸುವುದರಿಂದ ಶೇಕಡಾ 40, 30, 30 ರಂತೆ ಒಂದೇ ಕೆರೆಯಲ್ಲಿ ಸ್ಪರ್ಧೆಯಿಲ್ಲದೇ ಬೆಳೆಸಬಹುದು. ಮೊದಲನೇ ವರ್ಷದಲ್ಲಿಯೇ ರುಹು ಮತ್ತು ಮ್ರಿಗೆಲ 12–14 ಇಂಚು ಬೆಳೆದರೆ ಕಟ್ಲಾ 15–20 ಇಂಚು ಬೆಳೆಯುತ್ತದೆ.

ಮತ್ಸ್ಯ ತಿನ್ನುವವರು, ತಿನ್ನದೇ ಇರುವವರು, ವ್ಯಾಪಾರಿ ಬುದ್ಧಿ ಇರುವವರು, ಎಲ್ಲರೂ ಕೂಡಾ ಮೀನು ತೋಟ ಬೆಳೆಸಬಹುದು. ಕುಡಿಯದವರು ಸೆರೆ ಅಂಗಡಿ ನಡೆಸುವರೆ ತಿನ್ನದವರು ಮೀನು ಏಕೆ ಸಾಕಬಾರದು? ಮೊದಲು ಹಿತ್ತಲ ತೋಟದಲ್ಲಿ ಇರುವ ನೀರಿನ ಸಂಚಯವನ್ನು ಪರೀಕ್ಷಿಸಬೇಕು. ಮಳೆಯ ನೀರು ತುಂಬಿ ಬೇಸಿಗೆಯಲ್ಲಿ ಬಣಗುವ ಹೊಂಡ ಈ ಕೆಲಸಕ್ಕೆ ನಿರುಪಯೋಗವೆಂದು ಬೇರೆ ಹೇಳಬೇಕಾಗಿಲ್ಲ. ಉದ್ದ, ಅಗಲ ಆಳವನ್ನು ನಿರ್ಧರಿಸಿದ ನಂತರ ನೀರಿನ ಪಿ.ಎಚ್. (pH) ಸುಮಾರು ಎಂಟರಷ್ಟು ಇದ್ದಿರಬೇಕು. ಅದಕ್ಕೂ ಕಡಿಮೆ ಇದ್ದರೆ, ಅಂದರೆ ನೀರು ಆಮ್ಲದಾಯಕವಾಗಿದ್ದರೆ ಮೀನು ತೋಟಕ್ಕೆ ಅಷ್ಟೊಂದು ಲಾಭದಾಯಕವಲ್ಲ, ಎಂದು ತಿಳಿಯಬೇಕು. ಹೆಚ್ಚಿದ್ದರೆ ಅದಕ್ಕೆ ಕೆಂಮಣ್ಣು ಸೇರಿಸಿದರೆ ಪಿ.ಎಚ್. ಇಳಿದು ಬಿಡುವದು. ನೀರಿನಲ್ಲಿ ಮರಿ ಮೀನು ಭಕ್ಷಿಸುವ ಜಲಕೀಟ, ಬೇರೆ ಮೀನು ಜಾತಿಯಿದೆಯೇ? ಎಂದು ತಜ್ಞರಿಂದ ಪರೀಕ್ಷಿಸಿಕೊಳ್ಳಬೇಕು. ಬೆಳೆಯುವ ಮರಿಗೆ ಆಹಾರವಾಗಿರುವ ತೇಲು ಜೀವಿಗಳು (Plankton) ಸಾಕಷ್ಟು ಪ್ರಮಾಣದಲ್ಲಿ ಇವೆ, ಎಂದರೆ ಯಾವ ಆತಂಕವೂ ಇಲ್ಲದೇ ಮೀನು ತೋಟ ಪ್ರಾರಂಭಿಸಬಹುದು. ಒಂದೆರಡು ಮಳೆ ಬಿದ್ದ ನಂತರ ಈ ಕೆಲಸ ಪ್ರಾರಂಭಿಸುವದು ಒಳಿತು. ಮತ್ಸ್ಯಖಾತೆಯವರು ಮರಿ ಮೀನನ್ನು ತೀರ ಅಲ್ಪ ಬೆಲೆಗೆ ಪೂರೈಸುವರು. ಬೇಗ ಲಾಭ ಪಡೆಯಬೇಕೆಂದಿರುವವರು ಐದು



ರೂಪಾಯಿಗೆ ನೂರರಂತೆ ಮಾರುವ 4–5 ಇಂಚು ಉದ್ದದ ಮರಿಯನ್ನು ಬಳಸಬಹುದು. 6–8 ಅಡಿ ಆಳವಿದ್ದು ಒಂದು ಎಕರೆ ಕ್ಷೇತ್ರಫಲವಿರುವ ಮಡುವಿನಲ್ಲಿ ಎರಡು ಸಾವಿರ ಮರಿ ಮೀನುಗಳನ್ನು ಬಿಡಬಹುದು. ಇದಕ್ಕೂ ಹೆಚ್ಚು ಬೆಳೆಸಬೇಕೆಂದಿರುವವರು ಒಂದೂವರೆ ಟನ್ ಸಗಣಿಯನ್ನು ಮೂರು ಹಂತದಲ್ಲಿ ಗೊಬ್ಬರವಾಗಿ ಮಡುವಿಗೆ ಹರವಬೇಕು. ಮೊದಲನೇ ವರ್ಷ ಶೇಕಡಾ 25ರಷ್ಟು ಮೀನುಗಳನ್ನು ಹಿಡಿದರೆ ಖರ್ಚು ಮಾಡಿದ ಹಣವೂ ಹಿಂತಿರುಗಿ ಬರುವುದಲ್ಲದೇ ಉಳಿದ ಮೀನು ಬೇಗ ಬೆಳೆಯಲು ಆಸ್ಪದ ಕೊಟ್ಟಂತಾಗುವುದು. ತೋಟ ಬೆಳೆಯಿಸಿದ ಮೂರನೇ ವರ್ಷ ಪ್ರತಿಯೊಂದು ಮೀನು 5–6 ಕೆ.ಜಿ ತೂಗುವದರಿಂದ ಕಿಸೆತುಂಬ ಹಣ ಗಳಿಸಬಹುದು. ಮೀನುಗಾರರನ್ನು ಕರೆತಂದು, ಮೀನು ಹಿಡಿಸಿ ಮಾರಿಸಬಹುದು. ಇಲ್ಲವೇ ಗುತ್ತಿಗೆಗೆ ಕೊಟ್ಟುಬಿಡಬಹುದು. ಕಾಯಿಪಲ್ಯದ ತೋಟದಂತೆ ಇದನ್ನು ನಿತ್ಯ ಬಳಕೆಗೆ ಬೇಕಾಗುವ ಮತ್ಸ್ಯ ಪೂರೈಕೆಗೆ ಬಳಸಬಹುದು. ಇಲ್ಲವೇ ಪಾಶ್ಚಿಮಾತ್ಯರಂತೆ ವಿನೋದಕ್ಕಾಗಿಯೇ ಮೀನು ಹಿಡಿಯುತ್ತಾ ಜಗವನ್ನು ಮರೆಯುವದಕ್ಕೂ ಉಪಯೋಗಿಸಬಹುದು. ಬಂಗಾಲದಲ್ಲಿ ಈ ಜಾತಿಯ ಮೀನುಗಳು ಎಂಟು ಹತ್ತು ರೂಪಾಯಿಗೆ ಕಿಲೋದಂತೆ ಮಾರಾಟವಾದರೂ ನಮ್ಮಲ್ಲಿ ಇನ್ನೂ 3–4 ರೂಪಾಯಿಗಿಂತ ಹೆಚ್ಚಿಗೆ ಬೆಲೆ ತರುತ್ತಿಲ್ಲ. ಮೂರನೇ ವರ್ಷದ ಅಂತ್ಯದೊಳಗಾಗಿ ಕೇವಲ ಶೇಕಡಾ ಐವತ್ತರಷ್ಟು ಬರುವವು. ಪ್ರತಿ ತಿಂಗಳೂ ಒಂದು ಸಾವಿರ ಮೀನುಗಳು ಸಹಜವಾಗಿ ಐದು ಸಾವಿರ ಕಿಲೋ ತೂಗುವವು. ಕಿಲೋಕ್ಕೆ ಒಂದೇ ಒಂದು ರೂಪಾಯಿಯಂತೆ ಮಾರಿದೆವೆಂದು ತಿಳಿದರೂ ಮೂರು ವರ್ಷದಲ್ಲಿ ಹೆಚ್ಚಿನ ಬಂಡವಾಳ, ಶ್ರಮ ಇಲ್ಲದೇ ಐದು ಸಾವಿರ ರೂಪಾಯಿ ಲಾಭವಾದಂತಾಗಲಿಲ್ಲವೇ? ಈ ದರದಲ್ಲಿ ಬೇರ್ಯಾವ ಅನ್ನಸಾಮಗ್ರಿಗಳು ನಮ್ಮಲ್ಲಿ ಸಿಗುವಂತಿವೆ? ಇದು ಬರೇ ಅಕ್ಕಿಯಂತೆ ಹೊಟ್ಟೆ ತುಂಬುವ ಧಾನ್ಯವಾಗಿರದೇ ಪ್ರೋಟೀನ್ ಆಹಾರವಾಗಿದೆ. ನಿಮ್ಮ ಕಿಸೆಗಳನ್ನು ತುಂಬಿಕೊಳ್ಳುವುದರ ಜೊತೆಗೆ ಸಮಾಜ ಸೇವೆ ಮಾಡಿದಂತಾಗುತ್ತದೆ. ಪ್ರತಿ ಭಾರತೀಯ ಶೇಕಡಾ ಇಪ್ಪತ್ತೈದರಿಂದ ಮೂವತ್ತರಷ್ಟು ಮತ್ಸ್ಯವನ್ನು ಪ್ರತಿ ಊಟದಲ್ಲೂ ಸೇವಿಸಿದರೆ ನಾವು ಆಹಾರ ಧಾನ್ಯಗಳ ರಫ್ತು ಮಾಡಬಹುದಾಗಿದೆ. ಈ ಕೆಲಸವನ್ನು ಪ್ರಾರಂಭಿಸಬೇಕೋ ಏನೋ! ನಿರುದ್ಯೋಗಿ ಸುಶಿಕ್ಷಿತರು ಇದನ್ನು ಕೈಕೊಂಡರೆ ತಾವು ಸುಖವಾಗಿರುವದಲ್ಲದೇ ಇತರರಿಗೂ ಉದ್ಯೋಗ ನಿರ್ಮಿಸಿ ಕೊಡಬಹುದು. ಪಶ್ಚಿಮ ಬಂಗಾಲದವರು ಬಾಂಗ್ಲಾದೇಶದಿಂದ ಮೀನು ತರಿಸುತ್ತಿರುವಾಗ ನಾವೇ ಆ ಮೀನನ್ನು ಬೆಳಸಿ ಸ್ವಾವಲಂಬಿಗಳೇಕೆ ಆಗಬಾರದು?



18. ಕಣ್ಮರೆಯಾಗುತ್ತಿರುವ ಕಾಡಾನೆಗಳು

ಸರ್ಕಸ್ಸುಗಳಲ್ಲಿ ಆನೆ ಮಾಡುವ ಕಸರತ್ತುಗಳನ್ನು ಬಾಲಕನಾಗಿ ನೋಡುತ್ತಿದ್ದಂತೆ ಕಾಡಿನಲ್ಲಿ ಆನೆಗಳು ಹೇಗೆ ಜೀವಿಸುತ್ತಿರಬಹುದೆಂಬ ಕುತೂಹಲ ಕೆರಳಿತ್ತು. ಆದರೆ ನಾಡಾನೆಗಳನ್ನೇ ಕಾಣುವುದು ಅಪರೂಪವಾದ ದಿನಗಳಲ್ಲಿ ಕಾಡಾನೆಗಳನ್ನು ನೋಡುವುದು ಹೇಗೆ? ಒಮ್ಮೆ ಗೇರಸಪ್ಪಾ (ಉತ್ತರ ಕನ್ನಡ)ದ ಹಾಳುಬಿದ್ದ, ನಗರ ಬಸ್ತಿ ಕೇರಿ ನೋಡಲು ಶರಾವತಿ ನದಿ ದಾಟಿ ಹೋದಾಗ ಸರಕಾರದ ವತಿಯಿಂದ ನೇಮಕಗೊಂಡ ಕಾವಲುಗಾರ, "ರಾಯರೇ ನೋಡುವುದನ್ನು ಬೇಗ ಮುಗಿಸಿ! ಕತ್ತಲಾಯಿತೆಂದರೆ ಇಲ್ಲಿ ಕಾಡಾನೆಗಳ ಹಿಂಡು ಬೆನ್ನಟ್ಟಿಕೊಂಡು ಬರುತ್ತದೆ" ಎಂದು ಎಚ್ಚರಿಸಿದ. "ಓ ಕಾಡಾನೆಗಳೇ! ಇಲ್ಲಿಯ ಎತ್ತರದ ಮರವೇರಿ, ಇಲ್ಲವೇ ಚತುರ್ಮುಖ ಬಸ್ತಿಯಲ್ಲಿ ಅಡಗಿ ರಾತ್ರಿಯೆಲ್ಲ ಜಾಗರಣೆ ಮಾಡಿ, ಕಾಡಾನೆ ನೋಡುತ್ತೇನೆ" ಎಂದು ದೃಢಸಂಕಲ್ಪದಿಂದ ಹೇಳಿದಾಗ ಅವನಿಗೆ ದಿಗಿಲಾಯಿತು. ಮೊದಲಿಗೆ ಇಲ್ಲಿ ಬಂದವರ ಸಂರಕ್ಷಣೆ ತನ್ನ ಜವಾಬ್ದಾರಿಯಾದ್ದರಿಂದ ಯಾರನ್ನೂ ಇಲ್ಲಿ ಇರಗೊಡುವುದಿಲ್ಲವೆಂದು ವಾದಿಸಲು ಯತ್ನಿಸಿದ. ಆದರೆ ಒಂದೇ ಸಮನೆ ಪ್ರಶ್ನಿಸಲಾರಂಭಿಸಿದಾಗ, ತಾನೆಂದೂ ಕಾಡಾನೆಗಳನ್ನು ಕಂಡಿಲ್ಲವೆಂದೂ ಬೇಗ ಮನೆ ತಲುಪಲು, ಈ ಕಾಡಿನಿಂದ ಹೊರ ಬೀಳಲು ತಾನು ಹೂಡುತ್ತಿದ್ದ ಉಪಾಯವೆಂದೂ ಒಪ್ಪಿಕೊಂಡ. ಕಾಣಲಾರದ ಗೇರಸಪ್ಪಾ ಕಾಡಾನೆಗಳು ಮೇಣದಂತೆ ಕರಗಿ ಮಾಯವಾದವು.

ಬೆಂಗಳೂರು ನಗರದ ಹೊರ ವಲಯದಲ್ಲಿರುವ ಬನ್ನೇರುಘಟ್ಟ ಮಾರ್ಗವಾಗಿ ಹೊರಟಾಗ, ಅದೇ ಹೊರಹಾಕಿದ ಆನೆ ಲದ್ದಿ ಕಂಡಿತು. ಬಂಧಿತ ಸಿಂಹಗಳನ್ನು ನೋಡುವುದಕ್ಕಿಂತ ಕಾಡಾನೆಗಳನ್ನು ನೋಡುವ ತವಕ ಹೆಚ್ಚಾಗಿದ್ದರಿಂದ ಅವುಗಳ ಜಾಡು ಹಿಡಿದು, ಮುಂದುವರಿಯುವಂತೆ ಆಯಿತು. ಅತಿ ದೂರದ ಕಾಡಿನಲ್ಲಿ ಗಂಡು-ಹೆಣ್ಣು ಏಕಚಿತ್ತದಿಂದ ಪರ್ಣಭಕ್ಷಣದಲ್ಲಿ ಮೈಮರೆತದ್ದು ಗೋಚರಿಸಿತು. ಕಳ್ಳ ಹೆಜ್ಜೆ ಹಾಕುತ್ತ, ಪೊದೆಯಲ್ಲಿ ಅಡಗುತ್ತ, ಬೇಟೆಗೆ ಹೊರಟ ಚಿರತೆಯಂತೆ ನಡೆಯುತ್ತ ಮುಂದುವರಿದರೂ, ಅವು ಇತ್ತ ಗಮನವೀಯದೆ ಚರ್ವಣವನ್ನು ನಡೆಸಿದ್ದವು. ಆದರೆ ಎದುರಿಗೆ ಆಳವಾದ ಕಂದಕ ಕಂಡಿತು. ಮುಂದುವರಿಯುವುದು ಸಾಧ್ಯವಿರಲಿಲ್ಲ. ಇನ್ನೊಮ್ಮೆ ತೆಪ್ಪ ಕಾಡಿನ (ತಮಿಳುನಾಡು) ಮಾರ್ಗವಾಗಿ ಹೊರಟಾಗ, ರಸ್ತೆಯಿಂದ ಎರಡೇ ಹರದಾರಿ ದೂರದಲ್ಲಿ ಒಂಟಿ ಸಲಗವೊಂದು ಮರಕ್ಕೆ ಮೈ ಉಜ್ಜಿಕೊಂಡು 'ಹಾಯಸ್' ಅನಿಸಿಕೊಳ್ಳುವದರಲ್ಲಿ ತೊಡಗಿತ್ತು. ಇಂದಾದರೂ ಕಾಡಾನೆಯ ಛಾಯಾಗ್ರಹಣವನ್ನು ಹತ್ತಿರದಿಂದ ಮಾಡಬಹುದೆಂದು ಸಂಗಡಿಗರೊಂದಿಗೆ ಅತಿ

ಜಾಗರೂಕತೆಯಿಂದ ಮುಂದುವರಿಯುತ್ತಿದ್ದಂತೆ, ಏನೋ ನೆನಪಾದ ಹಾಗೆ ಒಮ್ಮೆಲೆ ತಿರುಗಿ ಸಲಗ ಬೆನ್ನಟ್ಟಿಕೊಂಡು ಬಂದಿತು. ಅಂದು ಹಾಕಿದ ನಾಗಾಲೋಟ, ಆಟದ ಮೈದಾನಿನಲ್ಲಾದರೆ ಪ್ರಥಮ ಬಹುಮಾನ ತರುತ್ತಿತ್ತು. ಮುನ್ನುಗ್ಗುತ್ತಿದ್ದ ಸಲಗ ಅನಿರೀಕ್ಷಿತವಾಗಿ ಅರೆ ಪ್ರದಕ್ಷಿಣೆ ಹಾಕಿ ವಿರುದ್ಧ ದಿಕ್ಕಿನಲ್ಲಿ ಧಾವಿಸಲಾರಂಭಿಸಿದ್ದರಿಂದ ಈ ಘಟನೆ ವಿವರಿಸಲು ಬದುಕಿರುವಂತಾಯಿತು!

ಕಲ್ಲಕೆರೆ (ಕೊಡಗು)ಯ ಸುತ್ತಮುತ್ತಲಿನ ದಟ್ಟ ಕಾಡಿನಲ್ಲಿ ಕಾಡಾನೆಗಳನ್ನು ಸುಲಭವಾಗಿ ಕಾಣಬಹುದು, ಎಂದು ಯಾರೋ ಸೂಚಿಸಿದರು. ಛಾಯಾಗ್ರಹಣಕ್ಕಾಗಿ ಕ್ಯಾಮರಾಗಳೊಡನೆ ಸುಸಜ್ಜಿತವಾಗಿ ಗಂಟೆಗಟ್ಟಲೆ ಕಾದು ಕುಳಿತರೂ ಅವುಗಳ ಲದ್ದಿಯ ಹೊರತು ಬೇರೇನೂ ಕಾಣುವ ಭಾಗ್ಯ ಸಿಗಲೇ ಇಲ್ಲ. ಇನ್ನೊಮ್ಮೆ ಬಂಡಿಪುರ (ಮೈಸೂರು ಜಿಲ್ಲೆ) ಕಾಡಿನಲ್ಲಿ ಅರಣ್ಯಾಧಿಕಾರಿಗಳೊಂದಿಗೆ ಅಲೆಯುತ್ತಿದ್ದಾಗ, ಅವರು ಮೆಲು ದನಿಯಲ್ಲಿ "ಅದೋ, ನೋಡಿ ಕಾಡಾನೆ!" ಎಂದು ಪಿಸುಗುಟ್ಟಿ ತಾವು ಕೆಮೆರಾ ಕ್ಲಿಕ್ಕಿಸುವದರಲ್ಲಿ ಮೈಮರೆತರು. "ಕಾಡಾನೆಯೆನಿಸಿಕೊಳ್ಳಲು ಇದು ತೀರ ಬಡಕಲು" ಎಂದು ಅನುಮಾನ ವ್ಯಕ್ತ ಪಡಿಸಿದಾಗ "ಬೇಸಿಗೆಯಲ್ಲಿ ಆಹಾರ, ನೀರಿನ ಅಭಾವದಿಂದ ಇರಬೇಕು" ಎಂದು ಚುಟುಕಾಗಿ ಉತ್ತರಿಸಿದರು. "ಕಾಡಾನೆ ಕೊರಳಿಗೆ ಗಂಟೆ ಕಟ್ಟುವ ಕೆಲಸ ಯಾರು ಮಾಡುತ್ತಾರೆ?" ಎಂದು ಕೇಳಿದಾಗ, ಪೆಚ್ಚಾಗಿ ಕಣ್ಣಲ್ಲಿ ಕಣ್ಣಿಟ್ಟು ನೋಡಿ, "ಅರೇ! ಇವಳು ನಮ್ಮ ಶಾಂತಿ" ಎಂದು ಬಳಿಗೆ ಹೋಗಿ ನೇವರಿಸಿದರು. ಎಲ್ಲೋ ಹೋಗಿದ್ದ ಮಾವುತ ಶಾಂತಿಯನ್ನು ಸಾಹೇಬರೊಟ್ಟಿಗೆ ನೋಡಿದಾಗ ಹೌಹಾರಿದ. "ಎಲ್ಲಿ ಹಾಳಾಗಿ ಹೋಗಿದ್ದ!" ಎಂದು ಕೇಳಿದ್ದಕ್ಕೇ "ಇದೊಂದ್ಸಲ ಕ್ಷಮ್ಸಿ ಸಾರ್, ಇನ್ನೆಂದೂ ಹೀಗೆ ಮಾಡೋದಿಲ್ಲ" ಎಂದು ಕಾಲಿಗೆ ಬಿದ್ದ. ಸದ್ಯ ತಾನು ಕಾಡಾನೆಯೆಂದು ಮೋಸ ಹೋದದ್ದು ಮಾವುತನಿಗೆ ಗೊತ್ತಾಗಲಿಲ್ಲವಲ್ಲ ಎಂದು ಅಧಿಕಾರಿಗಳು ನೆಮ್ಮದಿಯಿಂದ ಮುಂದುವರಿದರು!

ಬಂಡಿಪುರ, ನಾಗರಹೊಳೆಗಳ ಸಂರಕ್ಷಿತ ಕಾಡುಗಳಲ್ಲಿ ನಿರ್ಮಿಸಿದ 'ಮಚಾನ'ಗಳಲ್ಲಿ ಕಾದು ಕುಳಿತು ಕಾಡಾನೆಗಳನ್ನು ಅಭ್ಯಸಿಸಬಹುದು. ಆದರೆ ಇದಕ್ಕೆ ತುಂಬ ತಾಳ್ಮೆ, ಸಮಯಬೇಕು. ಒಂದೆರಡು ದಿನಗಳಲ್ಲಿ ಒಂದಾನೆಯೂ ಕಾಣಿಸದೇ ಇರಬಹುದು. ಇಲ್ಲವೇ ಅರೆಗಳಿಗೆಯಲ್ಲಿ ಆನೆಯ ತಂಡವೇ ಪ್ರತ್ಯಕ್ಷವಾಗಬಹುದು. ಒಮ್ಮೆ ಹೀಗೆ ಕುಳಿತಾಗ ಇನ್ನೊಂದು ಒಂಟಿ ಸಲಗ ಕಾಣುವಂತಾಯಿತು. ಯಾವುದೋ ಕಾದಾಟದಲ್ಲಿ ಒಂದು ಕೋರೆ ಹಲ್ಲನ್ನೇ ಕಳೆದುಕೊಂಡಿತ್ತು. ಹೀಗಾಗಿ ಆಹಾರ ದೊರಕಿಸುವದಕ್ಕಾಗಿ, ಸೇವಿಸುವದಕ್ಕಾಗಿ ಅದು ಹೆಚ್ಚಿನ ಶ್ರಮ ಪಡಬೇಕಾಗುತ್ತಿತ್ತು. ಸಹ ಪ್ರವಾಸಿಗಳಿಗೆ ಅದು ಕಾಡಾನೆಯಂತೆ ಅನಿಸಲೇ ಇಲ್ಲವಂತೆ! ಬಹು ಸಂಖ್ಯಾತ ಪ್ರವಾಸಿಗಳಿಗೆ ತಾಳ್ಮೆ ಇರುವುದೇ ಇಲ್ಲ. ಪ್ರಾಣಿ ಸಂಗ್ರಹಾಲಯದಂತೆ ಇಲ್ಲಿಯೂ ಏಕಕಾಲಕ್ಕೆ ಎಲ್ಲ ಕಾಡು ಪ್ರಾಣಿಗಳು ತಮ್ಮ ಮುಂದೆ ಪ್ರತ್ಯಕ್ಷವಾಗಬೇಕೆಂದು ಬಯುಸುತ್ತಾರೆ. ಬೆಂಗಳೂರಿನ ಧನಿಕ ಗೃಹಿಣಿಯೋರ್ವಳು, "ಇಲ್ಲಿ ಬರೇ ಜಿಗರೆಗಳಿವೆಯೇ ಹೊರತು ಒಂದೂ ಆನೆ, ಹುಲಿ ಕಾಣಿಸುವದೇ ಇಲ್ಲ" ಎಂದು ದೂರಿಕೊಂಡಳು. ನಂತರ "ಕಾಡಾನೆಗಳೊಂದಿಗೆ ನಿಂತು ಛಾಯಾಚಿತ್ರ ತೆಗೆಸಿಕೊಳ್ಳಬೇಕೆಂದು ಬಹಳ ಹಿಂದಿನ ಕನಸು. ಆ ದಿನಗಳಲ್ಲಿ









ಸಾಬು ಸಾಹಸದ ಕಥೆಗಳನ್ನು ಓದುತ್ತಿದ್ದೆ. ಆನೆಗಳಿಗೆ ತೆಂಗಿನಕಾಯಿಯೆಂದರೆ ಇಷ್ಟವಂತೆ. ಕಾಲಿನಿಂದ ಒಸುಕಿ ಒಡೆದು, ಸೊಂಡಿಲಿನಿಂದ ಬಾಯಿಗೆ ಸೇರಿಸಿ ಜಗಿದು, ಕೋಡುಬಳೆಯಂತೆ ತಿನ್ನುತ್ತವೆ ಎಂದು ಕೇಳಿದ್ದೆ. ಒಂದು ತೆಂಗಿನಕಾಯಿ ನಾನು ಕೊಟ್ಟರೆ, ಛಾಯಾಗ್ರಹಣಕ್ಕೆ ಬಿಡಬಹುದೇ?" ಎಂದು ಕೇಳಿದಳು! "ಕಾಡಾನೆ, ಅದರಲ್ಲೂ ಒಂಟಿ ಸಲಗ, ತೆಂಗಿನಕಾಯಿ ಕೊಡ ಹೋದವರ ತಲೆಯನ್ನೇ ಮೊದಲು ಜಜ್ಜಿ, ಬಜ್ಜಿ ಮಾಡಿ ಬಿಡುತ್ತದೆ. ಅದೇ ಸರ್ಕಸ್ ಆನೆಗೆ ಹಣ್ಣು, ಕಾಯಿ, ದಕ್ಷಿಣೆ ಒಪ್ಪಿಸಿದರೆ, ಅದು ಬೇಕಾದ 'ಪೋಸ್' ಕೊಡಬಲ್ಲದು. ಅಷ್ಟೇ ಅಲ್ಲ ಕ್ಯಾಬರೆ ನೃತ್ಯವನ್ನೂ ಮಾಡಬಲ್ಲದು" ಎಂದಾಗಲೂ ಅವಳಿಗೆ ಜ್ಞಾನೋದಯವಾದಂತೆ ತೋರಲಿಲ್ಲ!

ಅರ್ಧ ಶತಮಾನದ ಹಿಂದೆ ಅಸ್ಸಾಮ, ಪಶ್ಚಿಮ ಬಂಗಾಲ, ಉತ್ತರಪ್ರದೇಶ, ಒರಿಸ್ಸ, ತಮಿಳುನಾಡು, ಕೇರಳ, ಕರ್ನಾಟಕಗಳಲ್ಲಿ ಆನೆಗಳ ದಂಡುಗಳು ನಿರ್ಭೀತಿಯಿಂದ ಅಲೆಯುತ್ತಿದ್ದವು. ಆದರೆ ಮಾನವನ ಸಂತಾನ ಒಂದೇ ಸಮನೆ ಕಾಡನ್ನು ನಾಡಾಗಿ ಪರಿವರ್ತಿಸಲಾರಂಭಿಸಿದ್ದರಿಂದ ಅವುಗಳ ಸಂಖ್ಯೆ ತೀವ್ರಗತಿಯಿಂದ ಕಡಿಮೆಯಾಗುತ್ತಿದೆ. ಪಶ್ಚಿಮ ಬಂಗಾಲದಲ್ಲಿ ಅವು ಕಣ್ಮರೆಯಾಗಿವೆ. ಒರಿಸ್ಸಾ, ಉತ್ತರ ಪ್ರದೇಶಗಳಲ್ಲಿ ಕ್ಷೀಣಿಸಿವೆ. ಕಾಡಾನೆಗಳಿಗೆ ಸದ್ಯ ಕನ್ನಡ ನಾಡೇ ವಾಸಿ. ಆದರೆ ಋತುಮಾನಕ್ಕನುಸಾರವಾಗಿ, ಅವು ತಮಿಳುನಾಡು, ಕೇರಳದ ಕಾಡುಗಳಲ್ಲಿಯೂ ಅಲೆಯುವದರಿಂದ, ಒಂದು ಆನೆ, ಮೂರು ರಾಜ್ಯಗಳಲ್ಲಿ 'ಮೂರು' ಎಂದು ಗಣಿಕೆಯಾಗುತ್ತದೆ! ಮೊನ್ನೆ ಮೊನ್ನೆ ನಮ್ಮ ಒಂದು ಆನೆ ತಂಡ ಆಕಸ್ಮಿಕವಾಗಿ ಆಂಧ್ರ ಪ್ರದೇಶದಲ್ಲಿ ಪ್ರವೇಶಿಸಿತು. ಅಲ್ಲಿ ಹೊಕ್ಕ ಆನೆಗಳಿಗೆ ತಮ್ಮ ತಪ್ಪು ಅರಿವಾಗಿ ತಿರುಗಿ ತಾಯ್ನಾಡಿನತ್ತ ಮುಖ ತಿರುಗಿಸಿದಾಗ, ತಿರುಗಿ ಹೋಗದಂತೆ ಅಲ್ಲಿ ತಡೆ ಹಾಕಿದ್ದರು. ಅವು ನಾಡು ಸೇರಿ ಹಾವಳಿ ಮಾಡದೇ ಇನ್ನೇನು ತಾನೆ ಮಾಡ್ಯಾವು?

ಆನೆಗಳ ಕಿರಿಯ ಹಿಂಡಿನಲ್ಲಿ ಐವರು ಸದಸ್ಯರಿದ್ದರೆ ಹಿರಿಯದರಲ್ಲಿ ಐವತ್ತು ಇರಬಹುದು. ಸರ್ವಸಾಧಾರಣವಾಗಿ ಗಂಡು, ಹೆಣ್ಣು, ಮರಿಗಳು ಸಮ ಪ್ರಮಾಣದಲ್ಲಿ ಇರುವವು. ಯಾವುದೇ ತಾಣದಲ್ಲಿ ಹಿಂಡು ಮೂರು–ನಾಲ್ಕು ದಿನಗಳಿಗಿಂತ ಹೆಚ್ಚು ದಿನ ವಾಸ್ತವ್ಯಹೂಡುವುದೇ ಇಲ್ಲ. ಪಯಣದಲ್ಲಿ ಹೆಣ್ಣಾನೆಗಳೇ ಹಿರಿತನ ವಹಿಸಿಕೊಂಡು ಎಲ್ಲಕ್ಕೂ ಮುಂದೆ ಇರುತ್ತವೆ. ವೈರಿಗಳು ಹಿಂದಿನಿಂದ ಆಕ್ರಮಣ ನಡೆಸಬಹುದೆಂಬ ಭಯ ಸದಾಕಾಲವೂ ಇರುವದರಿಂದ ಗಂಡಾನೆಗಳು ಎಲ್ಲಕ್ಕೂ ಹಿಂದೆ ಇರುವವು. ಮರಿಗಳನ್ನು ಮಧ್ಯದಲ್ಲಿ ಇರಿಸುವ ಮುನ್ನೆಚ್ಚರಿಕೆ ವಹಿಸಲಾಗುತ್ತದೆ. ಗಂಡಾಂತರ ಕಾಲದಲ್ಲಿ ಗಂಡಾನೆಗಳು ಸೊಂಡಿಲನ್ನು ಮೇಲೆತ್ತಿ ವೈರಿಯಿರುವ ದಿಕ್ಕಿನಲ್ಲಿ ಧಾವಿಸುವವು. ಕಾಡಿನಲ್ಲಿ ಶಕ್ತಿ ಶಾಲಿಯಾದ ಹುಲಿ ತಾನಾಗಿ ಎಂದೂ ಆನೆಗಳನ್ನು ಎದುರು ಹಾಕಿಕೊಳ್ಳುವುದೇ ಇಲ್ಲ. ಆದರೆ ಹಾದಿ ತಪ್ಪಿದ ಒಂಟಿಸಲಗ ಹುಲಿರಾಯನ ಕ್ಷೇತ್ರದಲ್ಲಿ ಕಾಲಿಟ್ಟಾಗ ಇಲ್ಲವೇ ಮರಿಗಳ ಸುರಕ್ಷಿತತೆಗೆ ಆನೆಗಳಿಂದ ಆತಂಕ ಬರಬಹುದೆನಿಸಿದಾಗ, ಅವುಗಳ ಮೇಲೆ ಹುಲಿ ಎರಗುವದು. ಎಷ್ಟೋ ಸಲ ಹೆಣ್ಣು ಹುಲಿ, ಗಂಡಿನ ನೆರವಿಗೆ ಧಾವಿಸುವದು. ಆಗ ಘನಘೋರ ಕಾಳಗ ನಡೆದು ಅವುಗಳ ಗರ್ಜನೆ, ಘೀಳಿಡುವಿಕೆಯಿಂದಾಗಿ ಕಾಡೆಲ್ಲ ನಡುಗುವದು. ಇಂಥ ಸಂದರ್ಭಗಳಲ್ಲಿ ಯಾರೊಬ್ಬರು

ಜಯಶಾಲಿಯಾಗುವದು ತೀರ ಕಡಿಮೆ. ಎರಡೂ ಬಣದವರು ನಿರ್ನಾಮವಾಗಿ ಹೋಗುವ ಸಾಧ್ಯತೆಯೇ ಹೆಚ್ಚು. ಒಮ್ಮೆ ಕಲ್ಲಹಳ್ಳಿಯಲ್ಲಿ ಆನೆ ಮರಿಯೊಂದು ತಂಡದಿಂದ ತಪ್ಪಿಸಿಕೊಂಡು ಒಂಟಿಯಾಗಿ ಅಲೆಯುತ್ತಿದ್ದಾಗ, ಹುಲಿರಾಯ ಎರಗಿ ನಾಶ್ತಾ ಮಾಡಿ, ಎಲುಬು, ಚಿಗುರು ಕೋರೆಹಲ್ಲುಗಳನ್ನು ಅರಣ್ಯಾಧಿಕಾರಿಗಳಿಗೆ ಬಿಟ್ಟು ಹೋಗಿದ್ದ!

ಆನೆಗಳು ಕಟ್ಟಾ ಶಾಕಾಹಾರಿಗಳಾದರೂ ಹುಲ್ಲು ತಿನ್ನುವುದಿಲ್ಲ. ಸೊಪ್ಪಿನ ಭೋಜನಕ್ಕೆ ಅವು ಅತ್ತಿಮರಗಳನ್ನು ಅರಿಸುವವು. ಸೊಪ್ಪನ್ನು ಸವಿದು ಟೊಂಗೆಗಳನ್ನು ಜಗಿದು, ತೊಗಟೆಯನ್ನು ಜಾಮೂನಿನಂತೆ ತಿಂದು ತೇಗುವವು. ದೊಡ್ಡ ದೊಡ್ಡ ಮರಗಳನ್ನು ನೆಲಕ್ಕೆ ಉರುಳಿಸಿ, ಸಕಲ ಕುಟುಂಬ, ಆಹಾರ ಸೇವನೆಯಲ್ಲಿ ತೊಡಗುವುದು ವಾಡಿಕೆ. ಮರಿಗಳೆಲ್ಲ ಹೂಂಕರಿಸುತ್ತ ಊಟ ಮಾಡುವುದರಿಂದ ಶಾಲೆ-ಹಾಸ್ಟೆಲಿನಲ್ಲಿ ಊಟದ ಸಮಯದಲ್ಲಿ ಆಗುವ ಗಲಾಟೆ ನೆನಪಿಗೆ ಬರುತ್ತದೆ. ಟಿಸಿಲುಗಳು ದೊಡ್ಡವಾಗಿದ್ದರೆ, ಮುಂಗಾಲಿನಿಂದ ಅದುಮಿ ಹಿಡಿದು, ಸೊಂಡಿಲಿನಿಂದ ಮುರಿದು, ಬಾಯಿಗೆ ವರ್ಗಾಯಿಸಿ, ಮೆಲುಕಾಡಿಸಿ ಹೊಟ್ಟೆಗೆ ಸೇರಿಸುವವು. ಈ ವೇಳೆಯಲ್ಲಿ ಬೇರಾವ ಪ್ರಾಣಿಗಳೂ ತಮ್ಮತ್ತ ಅಲೆಯಬಾರದೆಂದು ದೊಡ್ಡ ಮರಗಳನ್ನೂ ಅಡ್ಡವಾಗಿ ಉರುಳಿಸುವುದು ತೀರಾ ಸಾಮಾನ್ಯ. ದಿನದ ಹೆಚ್ಚಿನ ಸಮಯವನ್ನು ಅವು ಆಹಾರ ಸೇವಿಸುವದರಲ್ಲಿ ಕಳೆಯುವುದರಿಂದ, ಒಂದು ಆನೆ, ದಿನವೊಂದಕ್ಕೆ ಆರುನೂರು ಕಿಲೋಗ್ರಾಮಿನಷ್ಟು ಆಹಾರ ಸೇವಿಸುತ್ತಿರಬೇಕೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಅಧಿಕ ಪಾಲು ಜೀರ್ಣವಾಗದೇ ಲದ್ದಿಯ ರೂಪದಲ್ಲಿ ಕಾಲ ಕಾಲಕ್ಕೆ ಹೊರಹಾಕುತ್ತಲೇ ಇರುತ್ತದೆಯಾದ್ದರಿಂದ ಅವರ ಓಡಾಟದ ಮಾರ್ಗವನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಅವುಗಳ ಲದ್ದಿಗೆ ವಿಶೇಷ ವಾಸನೆ ಇರುತ್ತದೆ. ಅದರ ಮೇಲಿಂದ ಯಾವ ಮರ-ಗಿಡಗಳ ಆಹಾರ ಸೇವಿಸಿತ್ತು? ಎಂದು ಸುಲಭವಾಗಿ ಹೇಳಬಹುದು. ಕಾಡಿನ ಸುತ್ತಮುತ್ತಲಿನ ಹಳ್ಳಿಗರು, ಈ ಲದ್ದಿ ಸಂಗ್ರಹಿಸಿ ಉರುವಲಿಗೆ ಬಳಸುತ್ತಾರೆ. ಅದರಲ್ಲಿ ಕಡ್ಡಿ, ಕಸ, ದೇಟುಗಳೇ ಹೇರಳವಾಗಿರುವದರಿಂದ ಚೆನ್ನಾಗಿ ಉರಿಯುವ ಇಂಧನವಿದು.

ಕಾಡಾನೆಗಳು ಕಳಲೆ(ಎಳೆಬಿದಿರು)ಗಾಗಿ ಸದಾಕಾಲ ಹಂಬಲಿಸುತ್ತಿರುತ್ತವೆ. ಆದ್ದರಿಂದ ಕಾಗದ ತಯಾರಿಕೆಗಾಗಿ ಬೆಳೆಸುವ ಬಿದಿರನ್ನು ಆನೆ ಬಾಯಿಂದ ಸಂರಕ್ಷಿಸುವುದು ಮಹಾಕಷ್ಟದ ಕೆಲಸ. ಅವು ಭಕ್ಷಿಸುವುದಕ್ಕಿಂತ ಹಾಳುಗೆಡಹುವುದೇ ಹೆಚ್ಚು. ಕಬ್ಬು ಅಂತೂ ಕಾಡಾನೆಗಳಿಗೆ ಮಿಠಾಯಿ ಇದ್ದ ಹಾಗೆ. ಹಳ್ಳಿಗರು ಬೆಳೆಸಿದ ಕಬ್ಬು ಸ್ವಾಹಾ ಮಾಡುವುದಕ್ಕಾಗಿ ಐವತ್ತು ಅರವತ್ತು ಕಿಲೋ ಮೀಟರ ದೂರದ ದಾರಿ ಸವೆಸಿದ ಉದಾಹರಣೆಗಳಿವೆ. ಒಮ್ಮೆ ಕಬ್ಬಿನ ಹೊಲದಲ್ಲಿ ಆನೆ ಹೊಕ್ಕವೆಂದರೆ, ಅದನ್ನು ಪೂರ್ಣ ನೆಲಸಮ ಮಾಡಿದ ಹೊರತು ಅಲ್ಲಿಂದ ಹೊರಡುವದೇ ಇಲ್ಲ. ಹಗಲಿನಲ್ಲಿ ಹತ್ತಿರದ ಕಾಡಿನಲ್ಲಿ ಅಡಗಿದ್ದು ರಾತ್ರಿಯಲ್ಲಿ ಇಕ್ಷುಭಕ್ಷಣ ನಡೆಸುವವು. ಕಾಡಿನಲ್ಲಿ ಅವು ಬೇರುಬಿಟ್ಟ ಸ್ಥಳದಿಂದ ಕಂಬಿ ಕೀಳದಿದ್ದರೆ ಅವಕ್ಕೆ ಕಬ್ಬಿನ 'ಲಂಚ' ನೀಡಲಾಗುತ್ತದೆ. ರಾಷ್ಟ್ರಪತಿ, ಪ್ರಧಾನಿ, ವಿದೇಶೀಯ ಗಣ್ಯರು ಕಾಡಾನೆಗಳ ವೀಕ್ಷಣೆಗೆ ಬಂದಾಗ ಅವಕ್ಕೆ ಟನ್ ಗಟ್ಟಲೆ ತಿನ್ನಲು ಕೊಟ್ಟು ಒಂದೇ ಸ್ಥಳದಲ್ಲಿರುವಂತೆ ಮಾಡಲಾಗುತ್ತದೆ.

ನೀರೆಂದರೆ ಅವಕ್ಕೆ ಪಂಚಪ್ರಾಣ. ಮುಂಜಾನೆ, ಸಂಜೆ, ಹೊಳೆಗೊ ಮಡುವಿಗೋ ಧಾವಿಸಿ ನೀರಡಿಕೆ ನೀಗಿಸಿಕೊಳ್ಳುವವು. ವಿಪುಲ ನೀರನ್ನು ಕಂಡಾಗ ಜಲಕ್ರೀಡೆಯಲ್ಲಿ ತೊಡಗುವವು. ಸೊಂಡಿಲ ತುಂಬಾ ನೀರೆತ್ತಿ ಕಾರಂಜಿಯಂತೆ ಬೆನ್ನ ಮೇಲೆ ಪುಟಿಸಿಕೊಳ್ಳುವವು. ಆಳವಿಲ್ಲದಲ್ಲಿ ಎಮ್ಮೆಗಳಂತೆ ಹೊರಳಾಡುವವು. ಆಳವಿದ್ದಲ್ಲಿ ಸೊಂಡಿಲನ್ನು ತೇಲಿಬಿಟ್ಟು ನೀರಿನಲ್ಲಿ ಮುಳುಗಿ ಸುಖಪಡುವವು. ಮೈಗೆಲ್ಲ ಕೆಸರು ಬಳಿದುಕೊಳ್ಳುವದೆಂದರೆ ಅವುಗಳಿಗೆ ಮೋಜಿನ ವಿಷಯ. ಅನಾವೃಷ್ಟಿಯ ಕಾಲದಲ್ಲಿ ನೀರಿನ ಸಂಚಯದ ಶೋಧದಲ್ಲಿ ನೂರಾರು ಕಿಲೋಮೀಟರ್ ದೂರ ಹೋಗುವವು. ನೆಲದಡಿಯಲ್ಲಿರುವ ನೀರಿನ ಸೆಲೆ ಪತ್ತೆಹಚ್ಚಿ ಮೂರು-ನಾಲ್ಕು ಅಡಿ ಆಳದ ಕುಣಿ ತೋಡಿ, ಬಾಯಾರಿಕೆಯನ್ನು ಹೋಗಲಾಡಿಸಿಕೊಳ್ಳುವವು. ಇದರಂತೆ ಅವುಗಳಿಗೆ ಉಪ್ಪು ಅತ್ಯವಶ್ಯ. ಉಪ್ಪಿನ ಅಂಶ ಹೆಚ್ಚಿದಲ್ಲಿ ಹೊಂಡತೋಡಿ, ಮಣ್ಣನ್ನು ಬತ್ತಾಸಿನಂತೆ ನೆಕ್ಕುವವು. ಒಮ್ಮೆ ಅವುಗಳು ಬೀಡುಬಿಟ್ಟ ಕಾಡಿನ ಹತ್ತಿರದ ಗುಡಿಸಲಿನಲ್ಲಿ ಉಪ್ಪಿನ ಚೀಲಗಳನ್ನು ಸಂಗ್ರಹಿಸಲಾಗಿದೆ ಎಂದು ಹೇಗೋ ಪತ್ತೆ ಹಚ್ಚಿದವು. ಆ ಗುಡಿಸಲ ಗೋಡೆಗಳನ್ನು ಕೆಡವಿ, ಚೀಲಗಳನ್ನು ಒಡೆದು, ಒಂದೂ ಉಪ್ಪಿನ ಹರಳು ಉಳಿಯದಂತೆ ಭಕ್ಷಿಸಿದವಂತೆ!

ಸುಮಾರು ನಾಲ್ಕು ಟನ್ ಭಾರದ ಗಂಡಾನೆ ಒಂಬತ್ತು ಅಡಿ ಎತ್ತರವಿದ್ದರೆ, ಹೆಣ್ಣಾನೆ ಒಂದು ಅಡಿ ಕಡಿಮೆ ಎತ್ತರವಿದ್ದು ತೂಕದಲ್ಲೂ ಕಡಿಮೆ ಇರುತ್ತದೆ. ಅಂದರೆ ಮಾನವನಿಗಿಂತ ಅರವತ್ತು ಪಟ್ಟು ಹೆಚ್ಚು ಭಾರ ಇರುತ್ತವೆ. ಆದರೆ ಅವುಗಳ ಮಿದುಳಿನ ಭಾರ, ಮಾನವನದಕ್ಕಿಂತ ಕೇವಲ ಐದು ಪಟ್ಟು ಭಾರವಿರುತ್ತದೆ. ಗಂಡಾನೆಗಳ ಕೋರೆ ಹಲ್ಲುಗಳು ಆರರಿಂದ ಎಂಟು ಅಡಿ ಉದ್ದವಿದ್ದರೆ, ಹೆಣ್ಣಾನೆಯದು ಒಂದಡಿಗಿಂತಲೂ ಕಿರಿದಾಗಿರುತ್ತದೆ. ಸುಮಾರು ಹದಿನೈದು ವರ್ಷಕ್ಕೆ ಪ್ರೌಢಾವಸ್ಥೆಗೆ ಕಾಲಿಡುವ ಆನೆಗಳು ಇಪ್ಪತ್ತೈದು ವರ್ಷಕ್ಕೆ ದೃಢಕಾಯವಾಗಿ ಬೆಳೆಯುತ್ತವೆ. ಎಂಬತ್ತು ವರ್ಷಕ್ಕೆ ಆನೆಗಳಿಗೆ ವೃದ್ಧಾಪ್ಯ ಬರುತ್ತದೆ. ಎರಡು ದಶಕ ದಾಟಿದ ಗಂಡಾನೆಗಳಿಗೆ ವಸಂತ ಋತುವಿನಲ್ಲಿ ಮದವೇರಿದಾಗ, ಕಪೋಲಗಳಿಂದ ಹೆಣ್ಣಾನೆಗಳನ್ನು ಆಕರ್ಷಿಸುವ ತೀವ್ರ ವಾಸನೆಯ ಎಣ್ಣೆಯಂತಹ ದ್ರವ ಹೊರಹೊಮ್ಮುತ್ತದೆ. ಆಗ ಅವುಗಳಿಗೆ ಹೆಣ್ಣಿನ ಶೋಧದಲ್ಲಿ ಸ್ವತಂತ್ರವಾಗಿ ಅಲೆಯುವುದು ಸೇರುತ್ತದೆ. ಅಂಥ ಮದೋನ್ಮತ್ತ ಆನೆಗಳು ಎಂಥ ಎಡರು-ತೊಡರುಗಳನ್ನೂ ಲೆಕ್ಕಿಸದೆ, ಮುನ್ನುಗ್ಗುತ್ತವೆ. ಆಸಕ್ತಿ ತೋರಿಸಿದ ಹೆಣ್ಣಾನೆಯೊಂದಿಗೆ ಸರಸ-ಸಲ್ಲಾಪ ಕೂಟಗಳನ್ನು ಶೀಘ್ರದಲ್ಲಿ ಪೂರೈಸಿಕೊಂಡು ಬಿಡುತ್ತವೆ. ಸುಮಾರು ಎರಡು ವರ್ಷಗಳ ಸುದೀರ್ಘ ಗರ್ಭಧಾರಣೆಯ ನಂತರ, ಮೂರಡಿ ಎತ್ತರದ ಇನ್ನೂರು ಪೌಂಡು ಭಾರದ ಮರಿ ಧರೆಗೆ ಇಳಿದು ಬರುತ್ತದೆ. ಅಪರೂಪಕ್ಕೆ ಅವಳಿ ಮರಿಗಳು ಹುಟ್ಟುವವು. ಕುಟುಂಬ ಯೋಜನೆ ಕಲಿಸದಿದ್ದರೂ ಮುಂದಿನ ಐದು ವರ್ಷ ಅವು ಗರ್ಭಧರಿಸಲು ನಿರಾಕರಿಸಿ ಬಿಡುತ್ತವೆ. ಸೆಪ್ಟಂಬರದಿಂದ ನವೆಂಬರದಲ್ಲಿ ನಡೆಯುವ ಹೆರಿಗೆಗೆ ಇನ್ನಿತರ ಹೆಣ್ಣಾನೆಗಳು ಸೂಲಗಿತ್ತಿ, ದಾಯಿಗಳಾಗಿ ನಿಂತರೆ, ಗಂಡಾನೆಗಳು ಕಾವಲುಗಾರರಂತೆ ನಿಂತಿರುತ್ತವೆ.

ಬೆಳೆಯುತ್ತಿರುವ ಮರಿಗಳ ಲಾಲನೆ-ಪಾಲನೆಯ ಬಗ್ಗೆ ಇಡೀ ತಂಡವೇ ಆಸಕ್ತಿ ವಹಿಸುತ್ತದೆ. ಸದಾ ಕಾಲವೂ ಅವು ತಮ್ಮ ಕಣ್ಣ ಮುಂದೆಯೇ ಆಡಿಕೊಂಡಿರಬೇಕು.

ಆರೇಳು ತಿಂಗಳು ಮೊಲೆಯುಣಿಸುತ್ತವೆ. ನಂತರ ಎಳೆ ಚಿಗುರು, ಸೊಪ್ಪು ಮುರಿದು ಮರಿಗಳಿಗೆ ತಿನ್ನಲು ಕೊಡುತ್ತವೆ. ಸೊಂಡಿಲಿನಲ್ಲಿ ನೀರು ತುಂಬಿಕೊಂಡು ಸ್ನಾನ ಮಾಡಿಸುತ್ತವೆ. ಧೂಳು ತುಂಬಿಕೊಂಡು ಬಂದ ಮರಿಗಳಿಗೆ ಗಾಳಿಯೂದಿ ಝಾಡಿಸುತ್ತವೆ. ಮರಿಗಳು ಕಾಣದಾದರೆ ಶಂಖನಾದ ಮಾಡಿ ಕರೆಯುತ್ತವೆ. ಗಂಡಾನೆಗಳು ಘೀಳಿಡುತ್ತ ಹುಡುಕಲಾರಂಭಿಸುತ್ತವೆ. ಅಂತೆಯೇ ಮರಿಗಳಿದ್ದ ತಂಡವು, ಆಕ್ರಮಣ ನಡೆಸುವುದು ಹೆಚ್ಚು. ಇಷ್ಟಾದರೂ ಮರಿಗಳು ಸದಾಕಾಲ ಮರ್ಕಟ ಚೇಷ್ಟೆಯಲ್ಲಿಯೇ ಮೈಮರೆತಿರುತ್ತವೆ. ಪ್ರಯಾಣದಲ್ಲಿದ್ದಾಗ ಹಿಂದು ಬಿಟ್ಟು ಇನ್ನೆಲ್ಲೋ ಹೊರಟಿರುತ್ತವೆ. ಅವುಗಳನ್ನು ಕರೆತಂದು ತಿರುಗಿ ಮೇಳದಲ್ಲಿ ಸೇರಿಸಬೇಕಾದರೆ ಪಾಲಕರಿಗೆ ತಲೆ ಚಿಟ್ಟಿಡಿದು ಹೋಗುತ್ತದೆ. ಇಷ್ಟಾದರೂ ಕಾಡಿನಲ್ಲಿ ದುಡಿಯುವ ಸಾಕಾನೆಗಳೊಂದಿಗೆ ಮರಿಗಳು ಬಂದು ಸೇರಿಕೊಳ್ಳುವದೂ ಉಂಟು. ಅಂಥ ಪ್ರಸಂಗಗಳಲ್ಲಿ ಸಾಕು ತಾಯಿ ಹಿಂದೆ ಮುಂದೆ ನೋಡದೆ ಅವುಗಳಿಗೆ ತಮ್ಮ ಮರಿಗಳೊಂದಿಗೇ ಮೊಲೆಯುಣಿಸುವವು. ಕಾಡಾನೆಗಳೂ ತಬ್ಬಲಿ ಮರಿಗಳಿಗೆ ತಮ್ಮ ಮರಿಗಳಂತೆಯೇ ಹಾಲೂಡಿಸುವವು.

ತಾವು ಸುರಕ್ಷಿತರು! ಎಂಬ ಭಾವನೆಯಿದ್ದಾಗ ಕಾಡಾನೆಗಳು ಗೋವುಗಳಷ್ಟು ಸಭ್ಯವಾಗಿರುತ್ತವೆ. ಕಿರಿದಾದ ಕಣ್ಣುಗಳಿಂದಾಗಿ ಅವುಗಳಿಗೆ ಬಲು ದೂರದ ವಸ್ತುಗಳು ಸ್ಪುಟವಾಗಿ ಕಾಣವು. ಕಿವಿಗಳು ಭವ್ಯಾಕಾರವಾಗಿದ್ದರೂ ಅವುಗಳ ಗ್ರಹಣ ಶಕ್ತಿ ತೀರ ಅಲ್ಲ. ಆದರೆ ತಮ್ಮ ಸೊಂಡಿಲಿನಿಂದ ಎಂತಹ ವಾಸನೆಯನ್ನೂ ಅದು ಗುರುತಿಸುವುದು. ಹುಲಿರಾಯ ಎಷ್ಟೇ ದೂರವಿರಲಿ, ಎಲ್ಲಿಯೇ ಅಡಗಿಕೊಂಡಿರಲಿ, ಮೈವಾಸನೆಯಿಂದಲೇ ಪತ್ತೆ ಹಚ್ಚುವದು. ಆದರೆ ಪ್ರತಿಕೂಲವಾಗಿ ಗಾಳಿ ಬೀಸಿದಾಗ ಮಾತ್ರ ಇದು ಸಾಧ್ಯವಾಗದು. ಅಂತೆಯೇ ನಡಿಗೆಯಲ್ಲಿ ಹೊರಟ ಮಾನವನನ್ನು ಗುರುತಿಸಿದಷ್ಟು ಶೀಘ್ರವಾಗಿ ಹೊಗೆ ಕಾರುತ್ತಿರುವ ವಾಹನಗಳಲ್ಲಿ ಬಂದವರನ್ನು ಅರಿಯಲಾಗುವದಿಲ್ಲ. ಹಿಂದೆ ಹೇಳಿದ ತೆಪ್ಪ ಕಾಡಿನ ಸಲಗ, ನಮ್ಮ ಮೇಲೆ ಆಕ್ರಮಣ ನಡೆಸದೆ ಪಲಾಯನ ಮಾಡಲು ಕಾರಣ ಅನಂತರ ಅರಿಯುವಂತಾಯಿತು. ಗುಂಪು ಜೀವನದ ಜಂಜಾಟ ಸೇರದ ಪ್ರಾಯದ ಗಂಡು ಸ್ವೇಚ್ಛಾಚಾರಿಯಾಗ ಬಯಸಿ ಒಂಟಿ ಸಲಗವಾಗುತ್ತದೆ. ಆದರೆ ಹಿಂಡಿನೊಡನೆ ಇದ್ದಾಗಿನ ಸಂರಕ್ಷಣೆ ಅದಕ್ಕೆ ಇಲ್ಲವಾಗುವದರಿಂದ ಅದು ಎಲ್ಲವನ್ನೂ ಸಂಶಯದ ಕಣ್ಣುಗಳಿಂದಲೇ ಅಳೆಯುತ್ತಿರುತ್ತದೆ. ತನ್ನ ರಾಜ್ಯದಲ್ಲಿ ಅತಿಕ್ರಮಣ ಮಾಡಿದ ನಮ್ಮನ್ನು ಬೆನ್ನಟ್ಟಿಕೊಂಡು ಬಂದಿತು. ಆದರೆ ಜೀವದಾಸೆಗೆ ಓಡಿದ ಸಂಗಡಿಗ ಕರವಸ್ತ್ರವನ್ನು ಕಾಡಿನಲ್ಲಿ ಕಳೆದುಕೊಂಡಿದ್ದ. ಅದರಿಂದ ಹೊಮ್ಮಿದ ಮನುಷ್ಯನ ವಾಸನೆಯಿಂದ ಒಂದೆ ಮಾನವನೊಬ್ಬ ಬರುತ್ತಿದ್ದಾನೆಂದು ಭಾವಿಸಿ ಸಲಗ ಬಂದ ದಾರಿಯಲ್ಲಿ ತಿರುಗಿ ಓಡಿದ್ದರಿಂದ ನಾವು ಬದುಕಿಕೊಳ್ಳುವಂತಾಯಿತು.

ಸದಾ ಕಾಲವೂ ಕಾಡಿನಲ್ಲಿ ಅಲೆಯುವವನ್ನು ಮೈ ವಾಸನೆಯಿಂದಲೇ ಗುರುತಿಸುವ ಜಾಣ್ಮೆ ಅವಕ್ಕಿದೆ. ಅಂಥವರನ್ನು ಅವು ಗಣನೆಗೆ ತಂದುಕೊಳ್ಳುವುದೇ ಇಲ್ಲ. ಹೀಗಾಗಿ ಕಾಡಿನಲ್ಲಿ ವಾಸಿಸುವವರಿಗೆ ಅವುಗಳನ್ನು ತೀರ ಹತ್ತಿರದಿಂದ ಅಭ್ಯಸಿಸುವ ಸಾಧ್ಯತೆ ಇದೆ. ಅದೇ ನಗರದ ಪ್ರವಾಸಿಗನನ್ನು ನಲವತ್ತು ಕಿಲೋಮೀಟರ್ ವೇಗದಲ್ಲಿ ಬೆನ್ನಟ್ಟಿಕೊಂಡು ಬರುವವು. ಈ ವೇಗದಲ್ಲಿ ಐವತ್ತು ಮೀಟರಿಗಿಂತ ಹೆಚ್ಚು ಓಡಿದರೆ

ಅವಕ್ಕೆ ಏದುಸಿರು ಕಾಣಿಸಿಕೊಳ್ಳುವುದು. ಎಂತಹ ಕಷ್ಟ ಕಾಲದಲ್ಲಿಯೂ ಅವು ಮೃದು ನೆಲದಲ್ಲಿ ಓಡುವದೇ ಇಲ್ಲ. ಮಣ್ಣಿನಲ್ಲಿ ಸಿಕ್ಕಿ ಹಾಕಿಕೊಳ್ಳುವ ಭಯ ಅವಕ್ಕಿರುತ್ತದೆ. ಕಾಡಿನಲ್ಲಿ ಅಲೆಯುವ ಆನೆಗಳ ವೇಗ ಎಂಟು ಕಿಲೋ ಮೀಟರಿನಷ್ಟು. ಆದ್ದರಿಂದ ಒಂಟಿಸಲಗವನ್ನು ಎದುರು ಹಾಕಿಕೊಂಡವನು ಅದಕ್ಕೂ ವೇಗವಾಗಿ ಓಡಬೇಕು. ಇಲ್ಲವೇ ಹುಡಿ ಮಣ್ಣು, ಕೆಸರುಗಳಲ್ಲಿ ಓಡಬೇಕು. ಎಷ್ಟೋ ಪ್ರವಾಸಿಗಳು ಕಾಡಿನ ಈ ಕಾನೂನನ್ನು ಪಾಲಿಸದಿದ್ದುದರಿಂದ ಆನೆಗಳ ಕಾಲಡಿಯಲ್ಲಿ ವೀರ ಸ್ವರ್ಗವನ್ನು ಸೇರಬೇಕಾಗುತ್ತದೆ.

ಆನೆಗಳು ಮಧ್ಯರಾತ್ರಿ ಕಳೆದ ನಂತರ ಒಂದೆರಡು ತಾಸು ನಿದ್ರಿಸುತ್ತವೆ, ಹೆಚ್ಚು ದಣಿವಾದ ದಿನಗಳಲ್ಲಿ ನಡುಹಗಲಿನಲ್ಲಿಯೇ ಸ್ವಲ್ಪ ಕಾಲ ಸುಖನಿದ್ರೆಯಲ್ಲಿರುವುದುಂಟು. ಬುದ್ಧಿ ಚಾತುರ್ಯದಲ್ಲಿ ಕಾಡು ಪ್ರಾಣಿಗಳಲ್ಲಿ ಅವುಗಳಿಗೆ ವಿಶಿಷ್ಟ ಸ್ಥಾನ. ಕಾಡಿನ ಹೊರವಲಯದಲ್ಲಿನ ರೈತರ ಹೊಲಗಳಲ್ಲಿ ಅವು ಹೋಗದಂತೆ ಆಳವಾದ ಗುಂಡಿ ತೋಡಿ ಗುಡ್ಡೆ ಮಣ್ಣನ್ನು ಹಾಗೇ ಬಿಟ್ಟಾಗ, ಆನೆಗಳು ಆ ಮಣ್ಣಿನಿಂದಲೇ ಗುಂಡಿಯನ್ನು ಮುಚ್ಚಿ ಪುನಃ ಹೊಲಗಳಿಗೆ ಹೋಗಿ ಮೆದ್ದ ಪ್ರಸಂಗಗಳುಂಟು! ತಮ್ಮ ಕಾಯಿಲೆಗಳಿಗೆ ತಾವೇ ಚಿಕಿತ್ಸೆ ಮಾಡಿಕೊಳ್ಳುವ ಜಾಣ್ಮೆ ಅವಕ್ಕಿದೆ. ಹೊಟ್ಟೆ ಝಾಡಿಸಿದರೆ ಒಂದು ದಿನ ಉಪವಾಸ ಮಾಡುವವು. ಹೊಟ್ಟೆ ಬಾಧೆಗೆ ಆಹಾರದಲ್ಲಿ ಬದಲಾವಣೆ ಮಾಡಿಕೊಳ್ಳುವವು. ಕೈ-ಕಾಲುಗಳಲ್ಲಿ ನೀರು ತುಂಬಿಕೊಂಡರೆ, ಮಳೆ-ಗಾಳಿಯಿಂದ ರಕ್ಷಣೆ ಪಡೆದು ಏಕಾಂತದಲ್ಲಿ ಸಂಪೂರ್ಣ ವಿಶ್ರಾಂತಿ ಪಡಯುವವು. ಮೈಗೆ ಗಾಯವಾದರೆ ಹುಡಿಮಣ್ಣು ಸಿಂಪಡಿಸಿಕೊಳ್ಳುವವು. ಗುಣಪಡಿಸಲಾರದ ಕಾಯಿಲೆಯಿದ್ದರೆ ಆಜನ್ಮ ಉಪವಾಸ ಕೈಕೊಂಡು ವೀರ ಸ್ವರ್ಗ ಸೇರುವವು.

ಗಂಡಾನೆಯು ಕೋರೆ ಹಲ್ಲೊಂದು ನೂರಾ ಐವತ್ತರಿಂದ ಇನ್ನೂರು ಪೌಂಡು ಭಾರವಿರುತ್ತದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಪೌಂಡು ಹಸ್ತಿದಂತ ಸಹಸ್ರಾರು ರೂಪಾಯಿ ಬೆಲೆ ಬಾಳುವಾಗ ಆನೆಯ ಕೋರೆಗಳು ಎಷ್ಟು ಬೆಲೆ ಬಾಳುವವೆಂಬ ಕಲ್ಪನೆ ಬರುವದು. ಅಂತೆಯೇ ಕೇರಳದ ಕೋರೆಗಳ್ಳರು ಕರ್ನಾಟಕದಲ್ಲಿ ಹಾವಳಿ ನಡೆಸಿದ್ದಾರೆ. ಅವರು ಸ್ಥಳೀಯ ಕಾಡು ನಿವಾಸಿಗಳ ಸಹಾಯದಿಂದ ನಮ್ಮ ಕಾಡುಗಳನ್ನು ಆಳವಾಗಿ ಅಭ್ಯಸಿಸಿದ್ದಾರೆ. ಮೊತ್ತ ಮೊದಲು ಗುಪ್ತಚರ ಕಿರುತಂಡ, ಕಾಡಿನಲ್ಲಿ ನುಸುಳಿಕೊಂಡು, ಎಲ್ಲವೂ ಸುರಕ್ಷಿತವಾಗಿದೆ ಎಂದು ಖಚಿತಪಡಿಸಿಕೊಳ್ಳುತ್ತದೆ ನಂತರ 30-40 ಜನರ ತಂಡ ಬಳಸು ದಾರಿಯಿಂದ ಕಾಡಿನಲ್ಲಿ ಅಲೆಯಲಾರಂಭಿಸುತ್ತದೆ. ಕಾಡಿನ ಕಾಲುದಾರಿಗೆ 'ಜಾಟಾಮಾರ ದಾರಿ' ಎಂಬ ಹೆಸರಿದೆ. ತಮ್ಮೊಂದಿಗೆ ಅನ್ನ-ನೀರು ಔಷಧ ಮತ್ತಿತರ ಅತ್ಯಾಧುನಿಕ ಆಯುಧಗಳನ್ನು ತಂದಿರುತ್ತಾರೆ. ತಮ್ಮ ಸುರಕ್ಷತೆಯ ಬಗ್ಗೆ ಸ್ವಲ್ಪವಾದರೂ ಅನುಮಾನ ಬಂದರೆ ಗೆರಿಲ್ಲಾಗಳಂತೆ ಕ್ಷಣಾರ್ಧದಲ್ಲಿ ಕಣ್ಮರೆಯಾಗಿ ಬಿಡುತ್ತಾರೆ. ಇಲ್ಲವೆ ಕಾಲಿಗೆ ಬುದ್ಧಿ ಹೇಳುತ್ತಾರೆ.

ಈ ಕಾಡುಗಳ್ಳರು ದೂರದರ್ಶಕ ಜೋಡಿಸಿದ ಪ್ರಭಾವಶಾಲಿ ಬಂದೂಕ ಬಳಸಿ, ಕ್ಷಣಾರ್ಧದಲ್ಲಿ ಅತ್ಯಂತ ಬಲಿಷ್ಟವಾದ ಗಂಡಾನೆಯನ್ನು ನೆಲಕ್ಕುರುಳಿಸಿ ಬಿಡುವರು. ರಸಾಯನಗಳನ್ನು ಬಳಸಿ, ಮಿಂಚಿನ ವೇಗದಲ್ಲಿ ಕೋರೆಗಳನ್ನು ವಶಪಡಿಸಿಕೊಂಡು



ಪಲಾಯನ ಮಾಡುವರು. ದಕ್ಷ ಅರಣ್ಯಾಧಿಕಾರಿಗಳು ತಮ್ಮ ಜಾಲವನ್ನು ಹರಪಿ ಅವರನ್ನು ಬಂಧಿಸಿದರೆ ಅವರಿಗೆ ದೊರಕುವ ಮಾಮೂಲು ಉತ್ತರ ಏನೆಂದರೆ "ಅಲ್ಲಿ ಇಲ್ಲವೆ ಥೋಮಸ್? ಅವನು ಈ ಕೆಲಸವನ್ನು ನನಗೆ ಒಪ್ಪಿಸಿದ. ಇದಕ್ಕೂ ಹೆಚ್ಚು ನಾನೇನೂ ಅರಿಯೆ. ನಾನು ಮಾಡಿದ್ದು ಸರಿಯಲ್ಲವೆನಿಸಿದರೆ ಏನು ಬೇಕೋ ಮಾಡಿ". ಕೇರಳದ ಧನಿಕರು ಇದನ್ನು ಮಾಡಿಸುತ್ತಾರೆ. ಎಂಬುದರಲ್ಲಿ ಸಂಶಯವೇ ಇಲ್ಲ. ಅವರು ತಮ್ಮ ದಲ್ಲಾಳಿಗಳು ಗಾಯಾಳಾದರೆ ಕೇರಳದಲ್ಲಿ ಔಷಧೋಪಚಾರ ಮಾಡಿಸುತ್ತಾರೆ. ಸಿಕ್ಕಿ ಹಾಕಿಕೊಂಡರೆ ಕೋರ್ಟು ಕಚೇರಿಗಳಿಗೆ ಅಲೆದಾಡಿ ಬಂಧಮುಕ್ತ ಮಾಡಿಸುವ ಸಂಪೂರ್ಣ ಜವಾಬ್ದಾರಿ ಹೊರುತ್ತಾರೆ. ಲಕ್ಷಗಟ್ಟಲೆ ರೂಪಾಯಿ ಬೆಲೆ ಬಾಳುವ ಕೋರೆ ಹಲ್ಲನ್ನು, ಆನೆ ಕೊಂದು ತಂದವರಿಗೆ ಗಿಟ್ಟುವುದು ಕೇವಲ ಎರಡುನೂರು ರೂಪಾಯಿ ಮಾತ್ರ! ಕರ್ನಾಟಕದ ಅರಣ್ಯಾಧಿಕಾರಿಗಳು ಎಲ್ಲ ರೀತಿಯ ಅಪಾಯಗಳನ್ನೂ ಎದುರಿಸಿ ಈ ಕಳ್ಳರನ್ನು ಬಂಧಿಸಿದರೆ, ಪಂಚನಾಮೆ ಮಾಡಿ ನಮ್ಮ ಪೋಲೀಸರಿಗೆ ಅವರನ್ನು ಒಪ್ಪಿಸಬೇಕು. ನಂತರ ಅವರು ಕೇರಳದ ಪೋಲೀಸರೊಡನೆ ಸಂಪರ್ಕ ಬೆಳೆಸಿ, ಮೊಕದ್ದಮೆ ಹೂಡಬೇಕು. ಇದೆಲ್ಲಕ್ಕೂ ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ಹೀಗಾಗಿ ಶಿಕ್ಷೆಗೆ ಗುರಿಯಾಗುವವರಿಗಿಂತ, ಪಾರಾಗುವವರೇ ಅಧಿಕ ಜನರಾದ್ದರಿಂದ ಅವರು ಅತ್ಯಂತ ಲಾಭದಾಯಕವಾದ ಈ ವೃತ್ತಿಗೇ ಅಂಟಿಕೊಳ್ಳುತ್ತಾರೆ.

ಈ ಕಾರಣಗಳಿಂದಾಗಿ ಗಂಡಾನೆಗಳ ಸಂಖ್ಯೆ ಕ್ಷೀಣಿಸುತ್ತ ನಡೆದಿದೆ. ಹೀಗಾಗಿ ಬೆದೆಗೆ ಬಂದ ಹೆಣ್ಣಾನೆಗಳ ಬವಣೆ ಹೇಳತೀರದು. ಅವು ಅತ್ತು ಕರೆದು ಗಂಡಾನೆಗಳನ್ನು ಆಮಂತ್ರಿಸುತ್ತವೆ. ಅತಿ ಕಾಮ ಪೀಡಿತವಾದಾಗ ತಾವೇ ವರನನ್ನು ಹುಡುಕಿಕೊಂಡು ಕಾಡಿನಿಂದ ಕಾಡಿಗೆ ಅಲೆಯುತ್ತವೆ. ತಾಯಿಯಾಗುವ ಅವುಗಳ ಹಂಬಲ ಪೂರೈಕೆಯಾಗದ ಕಳವಳ, ಕಪಟ ಮಾನವನಿಗೆ ಹೇಗೆ ಅರ್ಥವಾಗಬೇಕು? ಆನೆಗಳಿಗೇ ಸೀಮಿತವಾಗಿ ಇರಬೇಕಾದ ಕಾಡಿನ ರಾಜ್ಯವನ್ನು ಮಾನವನು, ಕ್ರೌರ್ಯ, ಮೋಸಗಳಿಂದ ತನ್ನದನ್ನಾಗಿ ಮಾಡಿಕೊಂಡು ಅದರಿಂದ ಸಕಲ ಲಾಭವನ್ನೂ ಪಡೆಯುತ್ತಾನೆ. ಎಂದಾದರೊಮ್ಮೆ ಕಾಡಾನೆಗಳು ತಮ್ಮದೇ ಆಗಿದ್ದ ಭೂಮಿಗೆ ಕಾಲಿಟ್ಟು ವಿಹರಿಸಿದರೆ ಶಂಖನಾದ ಮಾಡಿ, ಸರಕಾರದಿಂದ ಎಲ್ಲ ಬಗೆಯ ಸಹಾಯವನ್ನೂ ಪಡೆಯುತ್ತಾನೆ. ಆದರೆ ಕಾಡಾನೆಗಳಿಗೆ ಅವನು ಮಾಡುತ್ತಿರುವ ಅನ್ಯಾಯಗಳ ಬಗ್ಗೆ ವಿಚಾರಣೆ ಮಾಡುವಂತಹ ಕೋರ್ಟು, ಕಚೇರಿ, ಮಾನವನ ಸಾಮ್ರಾಜ್ಯದಲ್ಲಿ ಒಂದಾದರೂ ಇದೆಯೇ?

ಪಶು-ಪಕ್ಷಿ ಪ್ರಪಂಚ
























ನಮ್ಮ ಪಕ್ಷಿಗಳು

ಹೆಜ್ಜಾರ್ಲೆ	Grey Pelican	Pelecanus philippensis
ನೀರ್ಕಾಗೆ	Littele cormorant	Phalacrocorax niger
ಹಾವಕ್ಕಿ	Darter, snake Bird	Anhinga rufa
ಚಮಚಕೊಕ್ಕು	Spoonbill	Platalea leucorodia
ಕೊಕ್ರೆ ಬೆಳ್ಳಕ್ಕಿ (ಸಣ್ಣ ಬೆಳ್ಳಕ್ಕಿ)	Little Egret	Egretta garzetta
ಜಾನು ಬೆಳ್ಳಕ್ಕಿ	Cattle egret	Bubulcus ibis
ಬೂದುಬಕ	Grey heron	Ardea cinerea
ಜೌಗುಹಕ್ಕಿ	Little Green Bittern	Butorides striatus
ಛತ್ರಕ್ಕಿ (ಕೊಳದ ಬಕ)	Paddy Bird, Pond Heron	Ardeola grayii
ನಿಶಾಬಕ (ರಾತ್ರಿ ಬಕ)	Night Heron	Nycticorax nycticorax
ಬಿಳಿಕತ್ತಿನ ಕೊಕ್ಕರೆ	White necked stork	Ciconia episcopus
ಬಿಳಿ ಕೊಕ್ಕರೆ	White Stork	Ciconia ciconia
ಕರಿ ಐಬಿಸ್	Black Ibis	Pseudibis papillosa
ಬಿಳಿ ಐಬಿಸ್	White Ibis	Threskiornis aethiopica
ಕರಿಕತ್ತಿನ ಕೊಕ್ಕರೆ	Black necked Stork	Ephippiorhynohus asiaticus
ರಂಗುಕೊಕ್ಕರೆ (ಬಣ್ಣದ ಕೊಕ್ಕರೆ)	Painted Stork	Mycteria leucocephala
ತೆರೆಕೊಕ್ಕು (ಕೊಕ್ಕರೆ)	Openbill Stork	Anastomus oscitans
ನೀಲಪಕ್ಷ (ಗಾರ್ಗನಿ)	Bluewinged Teal	Anas querquedula
ಸೂಜಿಬಾಲ (ಬಾತು)	Pin tall	Anas acuta
ಶಿರಾರೇಖೆ (ಗೆರೆತಲೆ ಹಂಸ)	Bar headed Goose	Anser indicus
ಗುಬುಟು ಬಾತು	Comb Duck	Sarkidiornis melanotos
ಚುಕ್ಕೆ ಬಾತು	Spot bill, grey Duck	Anas poecilorhyncha
ಜಲಚತುರೆ (ಗುಳುಮುಳುಕ)	Little Grebe, Babchick	Podiceps ruficollis
ಕೆಂಬಾತು (ಚಕೋವ)	Brahminy Duck	Tadorna ferruginea

ನೀರು ಬಾತು	Common Teal	Anas crecca
ಕಪ್ಪು ರಣಹದ್ದು	Black vulture	Sarcogyps calvus
ಬಿಳಿ ರಣಹದ್ದು	White Acavenger vulture	Neophron percnopterus
ಹದ್ದು	Common Kite	Milvus migrans
ಗರುಡ	Bramminy Kite	Haliastur indus
ಬಣ್ಣದ ಗೀಜಗ	Painted sandgrouse	Pterocles indicus
ಗೀಜಗ (ಟೀಟರ್)	Common Sandgrouse	Pterocles exustus
ಬಣ್ಣದ ಗೌಜಲಕ್ಕಿ	Painted Partridge	Francolinus pictus
ಗೌಜಲಕ್ಕಿ (ಕವುಜುಗ)	Grey Partridge	Francolinus podicerianus
ಜಾಬುಕೋಳಿ (ಚಿಟ್ಟುಗೋಳಿ)	Red Spur fowl	Galloperdix spadicea
ಕಾಡುಕೋಳಿ	Grey Jungle fowl	Gallus sonneratii
ನವಿಲು	Pea fowl, peacock & peahen	Pavo cristatus
ಕೃಷ್ಣಕಂಠ (ಕ್ರೌಂಚ)	Demoiselle Crane	Anthropoides virgo
ಬಸ್ಟರ್ಡ್ ಹಕ್ಕಿ (ಎರಲಡ್ಡು)	Great India Bustard	Choriotis nigriceps
ನೀರುಕೋಳಿ	White breasted Water hen	Amauromis phoenicurus
ಫಲಕಫಣಿ (ಚಿಪ್ಪುಗಾಲು ಪಕ್ಷಿ)	Coot	Fulica atra
ಬಣ್ಣ ಉಲ್ಲಂಗಿ	Painted Snipe	Rostratula benghalensis
ರುಧಿರ ಟಿಟ್ಟಿಭ	Redwattled Lapwing	Vanellus indicus
ಪೀತ ಟಿಟ್ಟಿಭ	Yellow-wattled Lapwing	Venellus malabaricus
ಸುವರ್ಣ ಫ್ಲೋವರ	Golden Plover	Pluvialis dominica
ಧನುಶ್ಚಂಚು (ಮೇಲ್ಕೊಕ್ಕು ಪಕ್ಷಿ)	Avocet	Recurvirostra avosetta
ಮೆಟ್ಟುಗೋಲು ಪಕ್ಷಿ	Blackwinged Stilt	Himantopus himantopus
ನೀಳಚಂಚು (ಕರ್ಲ್ಯೂ)	Curlew	Numenius arquata
ರುಧಿಪಾದಿ	Redshank	Tringa totanus
ಉಲ್ಲಂಗಿ (ಇಸ್ನಾಪು)	Common Snipe	Gallinago gallinago
ಕಂದುತಲೆ ಗಲ್	Brownheaded Gull	Larus brunnicephallus
ಟೆರ್ನ್	River Tern	Sterna aurantia
ಶಿಕ್ರ	Shikra	Accipiter badius
ನೀಲಿ ಪಾರಿವಾಳ	Blue Rock Pigeon	Columba livia
ಹಸಿರು ಪಾರಿವಾಳ	Green/Fruit Pigeon	Treron phoenicoptera
ಪಚ್ಚೆ ಕಪೋತ	Bronzewinged Dove	Chalcophaps indica

ಚುಕ್ಕೆ ಕಪೋತ	Spotted Dove	Stretopelia chinensis
ಗವಲ	Red Turtle Dove	Stretopelis tranquebarica
ಗಿಣಿ (ಗಿಳಿ)	Roseringed parakeet	Psittacula krameri
ಕೋಗಿಲೆ	Koel	Eudynamya scolopacea
ಕೆಂಬೂತ	Crow Pheasant	Centropus sinensis
ಶಿಖಾವೇಗಿ	Crested Tree Swift	Hemiprocne longipennis
ಶೃಂಗಚಂಚು (ಕೋಡುಕೊಕ್ಕು)	Malabar Pied Hornbill	Anthracoceros coronatus
ಮಾಸಲು ಗೂಬೆ	Barn Owl	Tyto alba
ಕೋಡುಗೂಬೆ	Indian Great Horned owl	Bubo bubo
ಚಿಪಕ (ನತ್ತಿಂಗ)	Common Indian Nightjar	Caprimulgus asiaticus
ಗೃಹವೇಗಿ	House Swift	Apus affinis
ಹೂಪೋ (ಚಂದ್ರ ಮುಕುಟ)	Hoopoe	Upupa apops
ನೀಲಕಾಂತಿ	Roller	Coracias benghalensis
ಪತ್ರಂಗ (ಗುಂಗುರು ಪಂಚ, ಕಳ್ಳಪೀರ)	Green Bee-eater	Merops orientalis
ಕರಿತಲೆ ಮೀಂಚುಳ್ಳಿ	Blackcapped Kingfisher	Halcyon Pileata
ರಾಜಮತ್ಸಿ (ಬಿಳಿ ಎದೆ ಮೀಂಚುಳ್ಳಿ)	Whiter breasted	Halcyon smyrnesis
ಸುವರ್ಣಕುಟುಕ	Goldenbacked Woodpeaker	Dinopium benghalense
ವರಕುಟುಕ	Yellowfronted pied "	picoides mahrattensis
ನವರಂಗ	Indian pitta	Pitta brachyura
ಪೀತದಾಸರಿ (ಸಿಪಿಲಿ, ಬಾಲಬಡಕ)	Yellow wagtail	Motacilla flava
ಭಾರದ್ವಾಜ (ಬಾನಾಡಿ ಹಾಡುಹಕ್ಕಿ)	Indian Small Skylark	Alauda gulgula
ಬಾನಕ್ಕಿ	Common Swallow	Hirundo rustica
ಕಲಿಂಗ	Common Wood-shrike	Tephrodomis pondicerianus
ಕರೀ ಭುಜಂಗ	Black Drongo	Dicrurus adsimilis
ತುಂತುಬಾಲ (ತುಂತುಬಲದ ಭುಜಂಗ)	Racquet-tailed Drongo	Dircurus paradiseus
ಸುವರ್ಣಪಕ್ಷಿ	Golden Oriole	Oriolus oriolus
ಗೊರವಂಕ	Indian Myna	Acridotheres tristis
ಬೆಟ್ಟಗೊರವಂಕ	Hill Myna	Gracula religiosa
ಕಾಗೆ	House Crow	Corvus splendens
ಕರಿ ಕಾಗೆ (ಕಾಡು ಕಾಗೆ)	Jungle Crow	Corvus macrorhynchos
ಮಟಪಕ್ಷಿ	Tree pie	Dendrocitta vagabunda

ಬೂದುಗುಬ್ಬಿ	Grey Tit	Parus major
ಚಿತ್ರಪಕ್ಷಿ	Scarlet Miniver	Pericrocotus flammeus
ಕೆಂಪುಕಪಾಳ (ಕೆಂಪುಕಪಾಳದ ಬುಲಬುಲ)	Redwhiskered	Pycnonotus jocosus
ಜೀರಪಕ್ಷಿ	Rufousbellied Babbler	Dumetis hyperythra
ನೀಲಿರಾಜ ಪಕ್ಷಿ	Blue Flycatcher	Muscicapa tickelliae
ರಾಜಹಕ್ಕಿ (ನೊಣಹಿಡುಕ)	Paradise Flycatcher	Terpsiphone paradisi
ಸಿಂಪಿಗ (ಚಟ್ಟಿಗನ ಹಕ್ಕಿ)	Tailor Bird	Orthotomus sutorius
ರಾಬಿನ್	Indian Robin	Saxicoloides fulicata
ಶ್ವೇತಕಂಠ (ಹಾಡುಹಕ್ಕಿ)	Whitethroated Thrush	Zoothere citrina cynotus
ಪಿಕಳಾರ (ಬಿಳಿಹುಬ್ಬಿನ ಬುಲ್‌ಬುಲ್)	Whitebrowed Bulbul	Pycnonotus luteolus
ಪೀತಗಂಗ್ರ	Yellowcheeked Tit	Parus xanthogenys
ಬದನಿಕೆ ಹಕ್ಕಿ (ಹೂಕುಕ್ಕಿ)	Mistletoe Bird	Dicaeum erythrorhynchos
ಮಕರಂದಚಮ (ಕೆನ್ನೀಲಿ ಸೂರಕ್ಕಿ)	Purple Sunbird	Nectarinia asiatica
ಶ್ವೇತನೇತ್ರಿ	White eye	Zosterops palpebrosa
ನೇಕಾರ ಪಕ್ಷಿ	Baya Weaver Bird	Ploceus philippinus
ಬಿಳಿಕಂಠದ ಮುನಿಯ	Whitethroated Munia	Lonchura malabarica
ಕೆಂಪುತುಟಿಯ	Rosefinch	Carpodacus erythrinus
ಗುಬ್ಬಚ್ಚಿ (ಗುಬ್ಬಿ)	House Sparrow	passer domesticus
ಕಾಡು ಗುಬ್ಬಚ್ಚಿ (ಕಾಡು ಗುಬ್ಬಿ)	Yellowthroated sparrow	Petronia xanthocollis
ಕಲ್ಲುಜಾನಕ್ಕಿ (ಕವಲುತೊರೆ)	Indian Cliff Swallow	Hirundo fluvicola
ಬಿಳಿಬಾತು	Cotton Teal	Nettapus coromandelianus
ಎಬ್ಬುಗಾರ (ಷೊವೆಲರ್)	Shoveller	Anas clypeata
ಕೆನ್ನೀಲಿ ನೀರುಕೋಳಿ (ನಾಮದ ಕೋಳಿ)	Purple moorhen	Prophyrio porphyrio
ಕಟಪಟ್ಟೆ ಪ್ಲೋವರ	Little Ringed Plover	Charadrius dubius
ಬಿಳಿಬೆನ್ನು ರಣಹದ್ದು	White backed Vulture	Gyps bengalensis
ಶಿಖಾಗೃಧ್ರ (ಜುಟ್ಟಿನ ಹದ್ದು)	Crested Hawk-eagle	Spizaetus cirrhatus
ಮುಕುಟಧಾರಿ ಹದ್ದು	Crested Serpent Eagle	Spilornis cheela
ಸರ್ಪಭೇದಿ	Short-toed Eagle	Circaetus gallicus
ಡೇಗೆ	Kestrel	Falco tinnunculus

ಜಕಾನ	Pheasant-tailed Jacana	Hydrophasianus chirugus
ಚೌಕಬಾಲದ ಟೆರ್ನ್	Indian Whiskered Tern	Chlidonias hybrida
ಮರಸಿಳ್ಳೆ (ಮರಳುಪೀಪಿ)	Spotted sandpiper	Tringa glareola
ಕಿರು ಮೀಂಚುಳ್ಳಿ	Small Blue Kingfisher	Alcedo atthis
ಕೆಂಪೆದೆ ಬಾರ್ಬಿಟಿ	Coppersmith	Megalaima heamacephala
ಗುಬ್ಬಿಗಿಣಿ (ಲೋರಿಕೀಟ್)	Lorikeet	Loriculus vernalis
ನೀಲಿಗಿಣಿ	Bluewinged Parakeet	Psittacula columboides
ಟ್ರೋಗಾನ್	Southern Trogon	Harpactes fasciatus
ಬೂದು ಕೋಡುಕೊಕ್ಕು	Common Grey Hronbill	Tockus birostris
ಚುಕ್ಕೆಗೂಬೆ	Collared Scops Owl	Otus bakkamoena
ಕಪಿಲ ಕಲಿಂಗ	Baybackd Shrike	Lanius vittatus
ಕಾಡು ಗೊರವಂಕ	Jungle Myna	Acridotheres fuscus
ಮೊದೆಲಾವಕ್ಕಿ (ಮುರಲಿ ಹಕ್ಕಿ)	Jungle Buse Quail	Perdicula asiatica
ಗೆರೆಬಾನಕ್ಕಿ (ಕೆಂಪುಪೃಷ್ಠದ ಬಾನಕ್ಕಿ)	Striated Swallow	Hirundo daurica
ಕಿರುಚಿತ್ರ	Small Minivet	Pericrocotus cinnamomeus
ಮಧುರಕಂಠ (ಅಯೋರ)	Iora	Aegithina tiphia
ಕೆಂಪುದ್ವಾರದ ಬುಲ್‌ಬುಲ್	Redvented Bulbul	Pycnonotus cafer
ಎಲೆಹಕ್ಕಿ (ಎಲೆಯಕ್ಕಿ)	Goldfronted Chloropsis	Chloropsis aurifrons
ಹರಟೆ ಮಲ್ಲ	Jungle Babbler	Turdoides staiatus
ಬೂದು ಉಲಿಯಕ್ಕಿ	Ashy Wren Warbler	Prinia socialis
ಸುವ್ವೀ (ಮಡಿವಾಳ)	Magpie Robin	Copsychus saularis
ಶ್ಯಾಮ	Shama	Copsychus malabaricus
ಕಲ್ಲುಪ್ಲೋವರ	Great Stone Plover	Esacus magnirostris
ಬೂದುದಾಸರಿ	Grey Wagtail	Motacilla cinerea
ಕರಿಬಿಳಿ ದಾಸರಿ	Large Pied Wagtail	Motacilla maderapatensis
ಖಗರತ್ನ (ಸೂರಕ್ಕಿ)	Purplerumped Sunbird	Nectarinia zeylanica
ಬಿಳಿಬೆನ್ನಿನ ಮುನಿಯ	Whitebacked Munia	Lonchura striata
ಕೆಂಪು ಮುನಿಯ	Red Munia, Waxbill	Estrilda amandava
ಚುಕ್ಕುಕ್ಕಿ (ಚುಕ್ಕೆ ಮುನಿಯ)	Spotted Munia	Lonchura punctulata
ಗಂಧರ್ವ ಪಕ್ಷಿ	Fairy Bluebird	Irena puella


ಪ್ರಗತಿಯ ಹಾದಿಯಲ್ಲಿ

1. ಮಲೆಯ ಸಂತ	– ಬಿಳುಮನೆ ರಾಮದಾಸ್	2006	ರೂ. 180
2. ದೇವರುಗಳ ರಾಜ್ಯವಲ್ಲಿ	– ಬೊಳುವಾರು ಮಹಮದ್ ಕುಂಞಿ	2006	ರೂ. 80
3. ನಾತಿಚರಾಮಿ	– ಎಂ.ಎ. ಇಂದಿರ	2006	ರೂ. 45
4. ಭಾವ ಬಂಧನ	– ಎಂ.ಎ. ಇಂದಿರ	2006	ರೂ. 50
5. ಸುಪ್ತ ಸಾಗರ	– ಎಂ.ಎ. ಇಂದಿರ	2006	ರೂ. 70
6. ತಮ್ಮ ತೊಟ್ಟಿಲುಗಳ ತಾವೇ ಜೀಕಿ...	– ಎಸ್.ಸಿ. ಮಹೇಶ್	2006	ರೂ. 80
7. ಒಂದು ಕೈಫಿಯತ್	–ಚಂದ್ರಕಾಂತ ಕುಸನೂರ	2007	ರೂ. 075
8. ಜೇಲಿಮ್ಯಾಲಿನ ಹೂವು	–ಡಾ. ನಿಜಲಿಂಗಪ್ಪ ಮಟ್ಟಿಹಾಳ	2007	ರೂ. 80
9. ತಲ್ಲಣದ ಆ ಕ್ಷಣ	– ಕಂನಾಡಿಗಾ ನಾರಾಯಣ	2007	ರೂ. 60
10. ಕಾಲನೌಕೆ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 50
11. ಬೆನ್‌ಹರ್	– ಡಾ. ಕೆ. ಪುಟ್ಟಸ್ವಾಮಿ	2007	ರೂ. 60
12. ಮಾತಾಹರಿ	– ಡಾ. ಜೆ. ಬಾಲಕೃಷ್ಣ	2007	ರೂ. 25
13. ಪುಟ್ಟರಾಜಕುಮಾರ	– ಡಾ. ಜೆ. ಬಾಲಕೃಷ್ಣ	2007	ರೂ. 40
14. ಮೊಕಾಷಿಯೋನ ರಸಿಕತೆಗಳು	– ಡಾ. ಜೆ. ಬಾಲಕೃಷ್ಣ	2007	ರೂ. 45
15. ಮಾಯಾ ಮನುಷ್ಯ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 90
16. ಭೂ ಮಧ್ಯಕ್ಕೆ ಒಂದು ಪಯಣ	– ಡಾ. ಕೆ. ಪುಟ್ಟಸ್ವಾಮಿ	2007	ರೂ. 80
17. Sociology for pre law students	- Adinarayanappa	2007	Rs.125
18. ಕುವೆಂಪು ಸಾಹಿತ್ಯ ದರ್ಶನ	– ಡಿ.ಎಸ್. ನಾಗಭೂಷಣ	2007	ರೂ. 50
19. ಇಳೆಯ ಬೆಳಗು	– ಪ್ರೊ. ಬಿ.ಎ. ಶ್ರೀಧರ	2007	ರೂ. 175
20. ಪಲ್ಲಟ ಪರ್ವ	– ಪ್ರೊ. ಬಿ.ಎ. ಶ್ರೀಧರ	2007	ರೂ. 200
21. ಗೀತಾಂಜಲಿ	– ನವೀನ್ ಹಳೆಮನೆ	2007	ರೂ. 100
22. ಸಾಹಿತ್ಯ ಸಂಭ್ರಮ	– ಸಂ. ಎಂ. ಬೈರೇಗೌಡ	2007	ರೂ. 100
23. ಬಹುಜನ ಚಿಂತನ	– ಡಾ. ಕುಂಸಿ ಉಮೇಶ್	2007	ರೂ. 60
25. ತರುಣಿ ಮಾ (ಹಿಂದಿ)	– ಪಿಂಟು ನಂಗಾವತ್	2008	ರೂ. 40
26. ದೇವರುಗಳ ರಾಜ್ಯದಲ್ಲಿ	– ಬೊಳುವಾರು ಮ. ಕುಂಞಿ	2008	ರೂ. 80

27.	ಉತ್ಪಾತ	– ಡಾ. ಲಕ್ಷ್ಮಣಕೌಂಟೆ	2008	ರೂ. 110
28.	ಕಣ್ಣ ಕಣಿವೆ	– ರೇಣುಕಾ ನಿಡಗುಂದಿ	2008	ರೂ. 50
29.	80 ದಿನಗಳಲ್ಲಿ ಭೂ ಪ್ರದಕ್ಷಿಣೆ	– ಡಾ. ಕೆ. ಪುಟ್ಟಸ್ವಾಮಿ	2008	ರೂ. 120
30.	ಮಾಳಸುತ್ತಿನ ಮೂಲಿಕೆ ವೈದ್ಯ	– ಡಾ. ಸ.ನಾ.ಭಟ್	2008	ರೂ. 125
31.	ಕನ್ನಡ ಸಾಹಿತ್ಯ–ಸಂಸ್ಕೃತಿ:....	– ಡಾ. ಡೊಮಿನಿಕ್	2008	ರೂ. 150
32.	ಡೊಂಕು ಬಾಲದ ನಾಯಕರು	– ಡಾ.ಎಲ್. ಬಸವರಾಜು	2008	ರೂ. 100
33.	ಯುಗ ಪುರುಷ	– ಡಾ. ಲಕ್ಷ್ಮಣ ಕೌಂಟೆ	2008	ರೂ. 250
34.	ಹಿಂದಣ ಹೆಜ್ಜೆಯನರಿಯದೆ	– ಡಾ. ಕುಮಾರ ಚಲ್ಯ	2008	ರೂ.250
35.	ನಾನು ಅವನಲ್ಲ... ಅವಳು...	– ಕನ್ನಡಕ್ಕೆ: ಡಾ. ತಮಿಳ್ ಸೆಲ್ವಿ	2008	ರೂ. 150
36.	ಹುಚ್ಚು ದಾಳಿಂಬೆ ಗಿಡ	–ಡಾ. ವಿಜಯಾ ಗುತ್ತಲಾ, ಡಾ. ಪಿ.ಪಿ.ಸಾಜಿ	2008	ರೂ. 70
37.	ಪದ್ಯದ ಮರ	– ಕೃಷ್ಣಮೂರ್ತಿ ಬಿಳಿಗೆರೆ	2008	ರೂ. 75
38.	ಜೋಳಿಗೆಯಲ್ಲೊಂದು ಅಗುಳು	– ಕೃಷ್ಣ ರಾಯಚೂರ್	2008	ರೂ. 80
39.	ನದಿಯ ತೀರದ ನಡಿಗೆ	– ಡಾ. ರಂಗನಾಥ ಕಂಟನಕುಂಟೆ	2008	ರೂ. 50
40.	ಅಸ್ತಿತ್ವ	– ಎಚ್.ಆರ್. ಶಿವಕುಮಾರ್	2008	ರೂ. 045
41.	ಯಕ್ಷರಂಗ	– ರವಿ ರಾ. ಅಂಚನ್	2009	ರೂ. 80
42.	ಅರಿವೆಂಬ ಮಾಯೆ	– ರವಿ ರಾ. ಅಂಚನ್	2009	ರೂ. 150
43.	ಮಳೆ ಕೋಗಿಲೆ	(ಸಂ)–ಡಾ.ಎಂ. ಬೈರೇಗೌಡ	2009	ರೂ. 150
44.	ಮಲೆಯ ಪ್ರಬಂಧಗಳು	–ಬಿಳುಮನೆ ರಾಮದಾಸ್	2009	ರೂ. 100
45.	ನೀರದೀವಿಗೆ,	– ಡಾ. ಕೆ.ವೈ. ನಾರಾಯಣಸ್ವಾಮಿ	2009	ರೂ. 150
46.	ಮಹಿಳೆ: ಅಸ್ತಿತ್ವದ ಸಂಕಥನ	– ಡಾ. ಕವಿತಾ ರೈ	2009	ರೂ. 250
47.	ಶಿಷ್ಯಗಾಥೆ	– ಶ್ರೀಧರ ಕೋಟೆಕಾರ್	2009	ರೂ. 200
48.	The Ballad of Sikhs	- Sridhar Kotekar	2009	Rs.250
49.	ರಾಗೌ ಕಾವ್ಯ ವಿಮರ್ಶೆ	– ಸಂ. ಡಾ. ಬೆಳ್ಳೂರು ವೆಂಕಟಪ್ಪ	2009	ರೂ. 100
50.	ಕವನ ಕೂಡಲಸಂಗಮ	– ಡಾ. ಎಲ್. ಬಸವರಾಜು	2009	ರೂ. 350
51.	ಬೆಳಕು–ಬೆರಗು	– ಪ್ರೊ. ಲಿಂಗದೇವರು ಹಳೆಮನೆ	2009	ರೂ. 100
52.	ಯಮುನ ಕೋಣವು...	– ಪ್ರೊ. ಎಸ್. ತಮ್ಮಾಜಿರಾವ್ ನಂಗ್ಲಿ	2009	ರೂ. 100
53.	ಡಾರ್ವಿನ್ ಕಂಡ ಗಲಪಗಾಸ್ ದ್ವೀಪ	– ಟಿ.ಆರ್. ಅನಂತರಾಮು	2009	ರೂ. 40
54.	ಭಕ್ತಿಪಂಥದಲ್ಲಿ ಸ.ಕಾ. ಬೇರುಗಳು.	– ಡಾ. ಎಚ್.ಎಂ. ಮರುಳಸಿದ್ಧಯ್ಯ	2009	ರೂ. 125
55.	ದೂರದರ್ಶಕ ಕಂಡ ವಿಶ್ವರೂಪ	– ಟಿ.ಆರ್. ಅನಂತರಾಮು	2009	ರೂ. 150
56.	ಪ್ರಕ್ಷುಬ್ಧ ಕಣಿವೆ	– ನ. ರಮೇಶ್, ವಿ.ಎಸ್. ಶ್ರೀಧರ	2009	ರೂ. 150
57.	ಪೂರ್ವ ಪಶ್ಚಿಮ ಅಪೂರ್ವರು	– ಪುಸ್ತಕಮನೆ ಹರಿಹರಪ್ರಿಯ	2009	ರೂ. 150
58.	ದೊಡ್ಡವರೆಲ್ಲ ಜಾಣರಲ್ಲಾ...!	–ಸ್ನೇಹಪ್ರಿಯ ನಾಗರಾಜ್	2009	ರೂ. 125

59. ಬಾಧೆಯ ವೃಕ್ಷದಲ್ಲಿ ಬೋಧಿಯ ಪರಿಮಳ –ಜಂಬಣ್ಣ ಅಮರಚಿಂತ 2009 ರೂ. 100
60. ಟ್ರ್ಯಾಕುಗಳ ಮೇಲೆ ಹುಣ್ಣಿಮೆ –ಬಿ.ಎನ್. ಮಲ್ಲೇಶ್ 2009 ರೂ. 45
61. ಬ್ರೇಕಿಂಗ್ ನ್ಯೂಸ್ –ಬಿ.ಎನ್. ಮಲ್ಲೇಶ್ 2009 ರೂ. 200
62. ಪಳಯನ್ನರು ಮತ್ತು ದ್ರೌಪದಿ –ವೇಣುಗೋಪಾಲ 2010 ರೂ. 150
63. ಅಲ್ಲಮನು ಮೈಮೇಲೆ ಬಂದಾಗ... – ಡಾ. ಎಲ್. ಬಸವರಾಜು 2010 ರೂ. 150
64. ಮೇವರಿಕ್ ಫಾರೆಸ್ಟರ್ – ಎಚ್.ಎ. ಪುರುಷೋತ್ತಮರಾವ್ 2010 ರೂ. 150
65. ಮಕ್ಕಳ ಆರೋಗ್ಯ –ಡಾ. ಪಿ.ಎಸ್. ಶಂಕರ್ 2010 ರೂ. 250
66. ಆರೋಗ್ಯ ಪಥದಲ್ಲಿ ಮುನ್ನಡೆ –ಡಾ. ಪಿ.ಎಸ್. ಶಂಕರ್ 2010 ರೂ. 100
67. ಚಿತ್ರಗುಪ್ತ ಚಂಪೂ – ಡಾ. ಎಲ್. ಬಸವರಾಜು 2010 ರೂ. 100
68. ಪಾಶ್ಚಾತ್ಯ ಚಿಂತಕರ ದೃಷ್ಟಿಯಲ್ಲಿ ಭಾ. ಸಮಾಜ–ಡಾ. ಎಚ್.ಎಂ.ಎಂ. 2010 ರೂ. 100
69. Objective Plant Nemotology -B. Manjunath 2010 Rs. 150
70. ಚರಿತ್ರೆಯ ಐಸಿರಿ –ಡಾ. ಕೆ. ಸಾವಿತ್ರಿ 2010 ರೂ. 150
71. ಅನಾವರಣ –ಬಿಳುಮನೆ ರಾಮದಾಸ್ 2010 ರೂ. 225
72. ದಿಗ್ಭ್ರಾಂತ ಸಮಾಜಕ್ಕೆ .... ಸಂ.1 – ಎಚ್.ಎಂ.ಎಂ. 2010 ರೂ. 450
73. ದಿಗ್ಭ್ರಾಂತ ಸಮಾಜಕ್ಕೆ .... ಸಂ.2 – ಎಚ್.ಎಂ.ಎಂ. 2010 ರೂ. 450
74. Tv Tolls for Teens -Dr. Rnld. Anil Fernandiz 2010 Rs.. 250
75. ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ–ಡಾ. ಆರ್. ಚಲಪತಿ 2010 ರೂ. 150
76. Computer Aplication in Business -Suresh Palimat 2010 Rs. 150
77. Computer Business Aplication -Suresh Palimat 2010 Rs. 150
78. ಕಥಾಕಥನ – ಡಾ. ಎಲ್. ಹನುಮಂತಯ್ಯ 2010 ರೂ. 125
79. ಲೋಹಿಯಾವಾದಿ ಡಾ.ಎಂ.ನಾಗಪ್ಪ –ಡಾ. ಎನ್.ಡಿ. ತಿಪ್ಪೇಸ್ವಾಮಿ 2010 ರೂ. 300
80. ಮಣ್ಣ ಬಳೆನಾದ –ಡಾ. ಸಿ.ಎಸ್. ದ್ವಾರಕಾನಾಥ್ 2010 ರೂ. 150
81. ಹೆಣ್ಣುತನ ಎಂಬ ಕಣ್ಕಟ್ಟು – ಎಚ್.ಎಸ್. ಶ್ರೀಮತಿ 2010 ರೂ. 300
82. ಜಾಹೀರಾತುಗಳಲ್ಲಿ ಮಹಿಳಾ ಪ್ರಾತಿನಿಧೀಕರಣ–ಡಾ. ಕಲಾವತಿ ಬಿ.ಜಿ 2010 ರೂ. 250
83. ಹೆಣ್ಣುಬರೆಹದ ಒಳಬಂಡಾಯ –ಎಚ್.ಎಸ್. ಶ್ರೀಮತಿ 2010 ರೂ. 125
84. Maverick Forester -Vijayaraghavan 2010 Rs. 150
85. ಬ್ಲಾಗಿಲನು ತೆರೆದು – ಬಿ.ಎ. ವಿವೇಕ ರೈ 2011 ರೂ. 80
86. ತುಳಿಯುವ ಕಾಲಿಗೆ ಬಿದ್ದೀರ –ಡಾ. ಎಲ್. ಬಸವರಾಜು 2011 ರೂ. 50
87. ಅಳಿದುಳಿದವರು –ಬೋಲ ಚಿತ್ತರಂಜನದಾಸ್ ಶೆಟ್ಟಿ 2011 ರೂ. 250
88. ಸಂಸ್ಕೃತಿ ವಿನ್ಯಾಸ – ಪ್ರೊ. ಶಿವರಾಮಯ್ಯ 2011 ರೂ. 200
89. ಕಾಮರಸಾಯನ –ರಾಹು 2011 ರೂ. 450
90. SOUTH INDIA: An Expedition....- Dr. Srinivasa Havanur 2011 Rs. 550
91. ಕ್ಲಿಕ್ [ಅ]ಸ್ಥಿರ ಚಿತ್ರಗಳು –ಡಿ.ಜಿ. ಮಲ್ಲಿಕಾರ್ಜುನ 2011 ರೂ. 450

92. ಸಮಾಜಕಾರ್ಯದ ಕಣಸುಗಾರ ಎಚ್.ಎಂ.ಎಂ.	2011	ರೂ. 125
93. ಹಂಪೆಯ ಹರಿಹರ ಕಂಡರಿಸಿದ ಭಕ್ತಿ-ಜ್ಞಾನ-ವೈರಾಗ್ಯದ ನುಡಿ ಶಿಲ್ಪಗಳು -ಡಾ. ಎಲ್. ಬಸವರಾಜು	2011	ರೂ. 30
94. ಒಂದು ಬುಡಕಟ್ಟಿನ ಲೋಕದೃಷ್ಟಿ -ಹಿ.ಚಿ. ಬೋರಲಿಂಗಯ್ಯ	2011	ರೂ. 150
95. ಗೋಡೆಯ ಚಿತ್ರ -ಡಾ. ರಂಗನಾಥ ಕಂಟನಕುಂಟೆ	2011	ರೂ. 120
96. Infact... SHE -Dr. Kavitha K	2011	Rs. 300
97. ಕನ್ನಡ ಆಡು ನುಡಿಯ ಸೊಲ್ಲರಿಮೆ:1 ಕೆ.ವಿ. ನಾರಾಯಣ	2011	ರೂ. 50
98. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ-1 ಡಾ. ಎಚ್.ಎಸ್. ಶ್ರೀಮತಿ	2011	ರೂ. 300
100. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ-2 ಡಾ. ಎಚ್.ಎಸ್. ಶ್ರೀಮತಿ	2011	ರೂ. 250
101. ಪ್ರಾಚೀನ ಭಾರತದ ಚರಿತ್ರೆ -ಡಾ. ಎಚ್.ಎಸ್. ಶ್ರೀಮತಿ	2012	ರೂ. 150
102. ಆಧುನಿಕ ಭಾರತದಲ್ಲಿ ಮಹಿಳೆ -ಡಾ. ಎಚ್.ಎಸ್. ಶ್ರೀಮತಿ	2012	ರೂ. 260
103. ನಾನು ಅವನಲ್ಲ... ಅವಳು...! -ಡಾ. ತಮಿಳ್ ಸೆಲ್ವಿ	2012	ರೂ. 200
104. BUSINESS AND ACCOUNTING DICTIONARY-Nagaraju	2012	Rs.300
105. A Historical Discorse -Dr. H.B. Ramesh	2012	Rs. 200
106. ನಿಮ್ಮನೀಗೆ ಗುಡ್ಡದಯ್ಯ -ಎಂ.ಎನ್. ವೆಂಕಟೇಶ	2012	ರೂ. 150
107. ಸ್ತ್ರೀವಾದ: ತಾತ್ತ್ವಿಕತೆ - ಎಚ್.ಎಸ್. ಶ್ರೀಮತಿ	2012	ರೂ. 350
108. ಸ್ತ್ರೀವಾದ : ಆನ್ವಯಿಕತೆ -ಎಚ್.ಎಸ್. ಶ್ರೀಮತಿ	2012	ರೂ. 300
109. ಕುರ್ಚಿ -ಡಾ. ಆರ್. ಶಿವಪ್ಪ	2012	ರೂ. 50
110. ಪಶು-ಪಕ್ಷಿ ಪ್ರಪಂಚ -ಡಾ. ಕೃಷ್ಣಾನಂದ ಕಾಮತ್	2012	ರೂ. 125
111. ಕೀಟ ಜಗತ್ತು -ಡಾ. ಕೃಷ್ಣಾನಂದ ಕಾಮತ್	2012	ರೂ. 125
112. ಕಾವಿ ಕಲೆ -ಡಾ. ಕೃಷ್ಣಾನಂದ ಕಾಮತ್	2012	ರೂ. 100





ಪಶು ಪಕ್ಷಿ ಪ್ರಪಂಚ

ಡಾ. ಕೃಷ್ಣಾನಂದ ಕಾಮತ್ (1934–2002) ಕನ್ನಡ ನಾಡು ಕಂಡ ಅಪೂರ್ವ ಪ್ರತಿಭೆ. ಅಪ್ಪಟ ಮನುಷ್ಯರು. ಸಂಶೋಧಕರು, ಕಾಲುಗಳಿಗೆ ಚಕ್ರ ಕಟ್ಟಿಕೊಂಡುಸುತ್ತಿದ ಅಪರೂಪದ ಕ್ಷೇತ್ರಕಾರ್ಯಕರ್ತರು, ಸೃಜನಶೀಲ ಬರಹಗಾರರು, ಅಪೂರ್ವ ಕುಂಚ ಕಲಾವಿದರು, ಛಾಯಾಗ್ರಾಹಕರು, ಪ್ರಾಣಿ–ಪಕ್ಷಿಗಳ ತಜ್ಞರು, ಒಬ್ಬ ವಿಜ್ಞಾನಿ, ಪಾಕಪ್ರವೀಣರು... ಹೀಗೆ ಬಹು ಆಯಾಮಗಳಲ್ಲಿ ತಮ್ಮ ಜೀವಿತಾವಧಿಯನ್ನು ಸವೆಸಿದ ಅನರ್ಘ್ಯ ರತ್ನ. ಕಾಮತರ ಯಾವುದೇ ಬರವಣಿಗೆಯಲ್ಲೂ ಒಬ್ಬ ಸಂಶೋಧಕನಿರುತ್ತಾನೆ. ಬರಹದ ವಿಷಯ ವಸ್ತು ವಿಚಾರದಲ್ಲಿ ತರ್ಕಬದ್ಧವಾದ, ವೈಜ್ಞಾನಿಕ ದೃಷ್ಟಿಕೋನ ಎದ್ದು ಕಾಣುವ ಅಂಶ. ಲಘು ಹರಟೆಯ ಅವರ ಧಾಟಿ ಓದುಗಸ್ನೇಹಿಯಾಗಿರುತ್ತದೆ. ತುಂಬಾ ಗಹನವಾದ ವಿಚಾರಗಳನ್ನು ಸಾಮಾನ್ಯರಿಗೂ ಅರ್ಥವಾಗುವ ಹಾಗೆ ಸರಳ ನಿರೂಪಣೆಯನ್ನು ಕಾಣಬಹುದು. ಹಾಸ್ಯದ ಮೂಲಕವೇ ಗಂಭೀರ ವಿಚಾರಗಳನ್ನು ತಿಳಿಹೇಳುವ ಛಾತಿ ಕೃಷ್ಣಾನಂದ ಕಾಮತರ ಲೇಖನಿ, ಕುಂಚ, ಕ್ಯಾಮೆರಾಗಳಿಗೆ ಇತ್ತು ಎಂಬುದನ್ನು ಅವರನ್ನು ಓದಿಕೊಂಡ ಯಾರಿಗಾದರೂ ಅನಿಸದಿರದು. ಭಾರತದ ಆದಿವಾಸಿ ಬದುಕಿನ ಅನೇಕ ಮಜಲುಗಳನ್ನು ಕಣ್ಣಾರೆ ಕಂಡು ಕಾಮತರು ಬಿಡಿಸಿಟ್ಟಿದ್ದಾರೆ. ಕನ್ನಡ ನಾಡು ಇಂತಹ ಮಹನೀಯರನ್ನು ಪಡೆದು ನಿಜಕ್ಕೂ ಧನ್ಯವಾಗಿದೆ. ಅವರ ಕೃತಿಗಳ ಮರುಮುದ್ರಣದ ಮೂಲಕ ನಮ್ಮನ್ನು ನಾವು ಗೌರವಿಸಿಕೊಳ್ಳುತ್ತಿದ್ದೇವೆ.

ಡಾ. ಎಂ. ಬೈರೇಗೌಡ

ಪ್ರಗತಿ
ಗ್ರಾಫಿಕ್ಸ್
ಬೆಂಗಳೂರು

ISBN 93-81441-22-7
9789381441220

₹ 125/–

110